ಮಂಗಳವಾರ, ಡಿಸೆಂಬರ್ 31, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 362 | ಪುಟ 14
www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಜ್ಞಾಪಕ ಚಿತ್ರಶಾಲೆ
2024 ಉರುಳುವ ಮುನ್ನ ಒಂದು ಹೊರಳು ನೋಟ
ಪುಟ–6,7



ಆಳ–ಅಗಲ
2025: ನಿರೀಕ್ಷೆ ಹಲವು

ಬೆಳೆ ಹಾನಿ ತಪ್ಪಿಸುವ ಹವಾಮಾನ ಮುನ್ಸೂಚನಾ ಘಟಕ 5

ಸ್ಪೇಡೆಕ್ಸ್ ಯೋಜನೆ: ಯಶಸ್ವಿ ಉಡ್ಡಯನ 13

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
78,248	23,644	₹80,340 (ಬೆಂಗಳೂರು)	₹92,800 (ಬೆಂಗಳೂರು)	85.52

ಹೊಸ ವರ್ಷಕ್ಕೆ ಇದೋ ಹೊಸತು

ಹೊಸ ವರ್ಷ ಬರುತ್ತಿದೆ. ಅದರ ಜೊತೆಯಲ್ಲೇ ದಿನನಿತ್ಯದ ಜೀವನದ ಮೇಲೆ ಪ್ರಭಾವ ಬೀರುವ ಕೆಲವು ನಿಯಮಗಳಲ್ಲಿ ಒಂದಿಷ್ಟು ಬದಲಾವಣೆಗಳು ಜಾರಿಗೆ ಬರುತ್ತಿವೆ. ಹಾಗೆಯೇ, ಬೆಲೆಯೇರಿಕೆಯ ಬಿಸಿಯೂ ಸ್ವಲ್ಪಮಟ್ಟಿಗೆ ಚುರುಕು ಮುಟ್ಟಸಲಿದೆ. ಬಹುತೇಕ ಬದಲಾವಣೆಗಳು ಹಣಕಾಸಿನ ಲೋಕಕ್ಕೆ ಸಂಬಂಧಿಸಿದವು. ಕೆಲವು ಮಹತ್ವದ ಬದಲಾವಣೆಗಳ ಮೇಲೊಂದು ಪಕ್ಷಿನೋಟ ಇಲ್ಲಿದೆ.

ಯುಪಿಐ123 ಮೂಲಕ ಹೆಚ್ಚಿನ ಪಾವತಿ



1 ಫೀಚರ್ ಫೋನ್‌ಗಳಲ್ಲಿ ಯುಪಿಐ ಆಧಾರಿತ ಪಾವತಿ ವ್ಯವಸ್ಥೆಯನ್ನು ಬಳಕೆ ಮಾಡುವವರ ಅನುಕೂಲಕ್ಕಾಗಿ, ಪ್ರತಿ ವಹಿವಾಟಿನ ಗರಿಷ್ಠ ಮೊತ್ತ ₹5,000 ಇರುವುದನ್ನು ₹10 ಸಾವಿರಕ್ಕೆ ಹೆಚ್ಚಿಸಲಾಗುವುದು ಎಂದು ಆರ್‌ಬಿಐ ಹೇಳಿತ್ತು. ಈ ಸೌಲಭ್ಯವು 2025ರ ಜನವರಿ 1ಕ್ಕೆ ಮೊದಲು ಜಾರಿಗೆ ಬರಬೇಕು ಎಂದು ರಾಷ್ಟ್ರೀಯ ಪಾವತಿ ನಿಗಮವು (ಎನ್‌ಪಿಸಿಐ) ಸಲಹೆ ಸ್ವರೂಪದ ಸೂಚನೆ ನೀಡಿದೆ. ಇದು ಜಾರಿಯಾದಾಗ, ಫೀಚರ್ ಫೋನ್‌ನಲ್ಲಿ ಯುಪಿಐ ವ್ಯವಸ್ಥೆ ಬಳಕೆ ಮಾಡುವವರಿಗೆ ಹೆಚ್ಚಿನ ಮೊತ್ತ ಪಾವತಿಸಲು ಸಾಧ್ಯವಾಗಲಿದೆ.

ಆರ್‌ಟಿಜಿಎಸ್–ನೆಫ್ಟ್ ಬಳಕೆದಾರರಿಗೆ ಹೊಸ ಸೌಲಭ್ಯ



2 ಆನ್‌ಲೈನ್ ಮೂಲಕ ದೊಡ್ಡ ಮೊತ್ತದ ಹಣ ವರ್ಗಾವಣೆ ಮಾಡಲು ಬಳಸುವ ಆರ್‌ಟಿಜಿಎಸ್ ಹಾಗೂ ಎನ್‌ಇಎಫ್‌ಟಿ ಸೌಲಭ್ಯಕ್ಕೆ ಹೊಸದೊಂದು ಅನುಕೂಲವನ್ನು ಸೇರಿಸಲು ಆರ್‌ಬಿಐ ಸೂಚನೆ ನೀಡಿದೆ. ಈ ಸೌಲಭ್ಯ ಬಳಕೆ ಮಾಡುವಾಗ ಹಣ ಯಾರ ಖಾತೆಗೆ ವರ್ಗಾವಣೆ ಆಗುತ್ತದೆಯೋ ಅವರ ಖಾತೆ ಸಂಖ್ಯೆ, ಬ್ಯಾಂಕ್ ಶಾಖೆಯ ಐಎಫ್‌ಎಸ್‌ಸಿ ಕೋಡ್ ನಮೂದಿಸಬೇಕು. ಹೀಗೆ ನಮೂದಿಸಿದಾಗ ಖಾತೆದಾರರ ಹೆಸರನ್ನು ತೋರಿಸುವ ಸೌಲಭ್ಯ ನೀಡಬೇಕಿದ್ದು, ಇದು 2025ರ ಏಪ್ರಿಲ್ 1ಕ್ಕೆ ಮೊದಲು ಜಾರಿಗೆ ಬರಬೇಕು ಎಂದು ಆರ್‌ಬಿಐ ಹೇಳಿದೆ.

ಈ ರೀತಿಯಲ್ಲಿ ಹೆಸರು ತೋರಿಸುವ ವ್ಯವಸ್ಥೆಯು ಯುಪಿಐನಲ್ಲಿ ಈಗಾಗಲೇ ಇದೆ. ಆರ್‌ಟಿಜಿಎಸ್ ಹಾಗೂ ಎನ್‌ಇಎಫ್‌ಟಿಯಲ್ಲಿ ಇದು ಜಾರಿಗೆ ಬಂದಾಗ, ಬಳಕೆದಾರರಿಗೆ ಹಣ ವರ್ಗಾವಣೆ ಮಾಡುವಾಗ ಅಳುಕು ಇರುವುದಿಲ್ಲ. ಖಾತೆ ಸಂಖ್ಯೆ ತಪ್ಪಾಗಿ ಬೇರೊಬ್ಬರಿಗೆ ಹಣ ವರ್ಗಾವಣೆಯಾಗುವ ಸಾಧ್ಯತೆ ಕ್ಷೀಣಿಸುತ್ತದೆ ಎಂಬುದು ಆರ್‌ಬಿಐ ಲೆಕ್ಕಾಚಾರ.



ಕಾರುಗಳ ಬೆಲೆ ಏರಿಕೆ

3 ಹೊಸ ವರ್ಷಕ್ಕೂ ಬೆಲೆ ಏರಿಕೆಗೂ ನಂಟು ಒಂದಲ್ಲ ಒಂದು ಬಗೆಯಲ್ಲಿ ಇದ್ದೇ ಇರುತ್ತದೆ. ಹೊಸ ವರ್ಷದಲ್ಲಿ ಕಾರುಗಳ ಬೆಲೆಯನ್ನು ಹೆಚ್ಚಿಸುವುದಾಗಿ ಪ್ರಮುಖ ಕಾರು ತಯಾರಿಕಾ ಕಂಪನಿಗಳಾದ ಟಾಟಾ ಮೋಟರ್ಸ್, ಕಿಯಾ ಮೋಟರ್ಸ್, ಮಾರುತಿ ಸುಜುಕಿ, ಹುಂಡೈ, ಮಹೀಂದ್ರ ಆ್ಯಂಡ್ ಮಹೀಂದ್ರ, ಜೆಎಸ್‌ಡಬ್ಲ್ಯು ಎಂಜಿ ಮೋಟರ್, ಔಡಿ, ಬಿಎಂಡಬ್ಲ್ಯು ಹೇಳಿವೆ. ವಾಹನಗಳ ಬೆಲೆ ಏರಿಕೆ ಪ್ರಮಾಣವು ಶೇ 3ರವರೆಗೆ ಇರಲಿದೆ.

ಜಿಎಸ್‌ಟಿ ಬದಲಾವಣೆ

4 ಜಿಎಸ್‌ಟಿ ವ್ಯವಸ್ಥೆಯಲ್ಲಿ ಕೆಲವು ಪ್ರಮುಖ ಬದಲಾವಣೆಗಳು ಜಾರಿಗೆ ಬರಲಿವೆ. ಜಿಎಸ್‌ಟಿ ಪೋರ್ಟಲ್‌ನಲ್ಲಿ ಬಹು ಹಂತಗಳ ದೃಢೀಕರಣ ವ್ಯವಸ್ಥೆಯನ್ನು ಕಡ್ಡಾಯಗೊಳಿಸಲಾಗುತ್ತಿದೆ. ಸುರಕ್ಷತೆಯನ್ನು ಖಾತರಿಪಡಿಸಲು ಈ ಕ್ರಮ ಎಂಬುದಾಗಿ ಅಧಿಕಾರಿಗಳು ಹೇಳಿದ್ದಾರೆ. ಜಿಎಸ್‌ಟಿ ವ್ಯವಸ್ಥೆಗೆ ಒಳಪಡುವವರು ತಮ್ಮ ಮೊಬೈಲ್ ಸಂಖ್ಯೆಗಳನ್ನು ಅಪ್ಡೇಟ್ ಮಾಡಿಕೊಳ್ಳಬೇಕು ಎಂದು ವರದಿಗಳು ಹೇಳಿವೆ.

ಸಣ್ಣ ಉಳಿತಾಯದ ಬಡ್ಡಿ?



5 ಪಿಪಿಎಫ್, ಎನ್‌ಎಸ್‌ಸಿಯಂತಹ ಸಣ್ಣ ಉಳಿತಾಯ ಯೋಜನೆಗಳಲ್ಲಿ ತೊಡಗಿಸುವ ಹಣಕ್ಕೆ ನೀಡುವ ಬಡ್ಡಿಯ ಪ್ರಮಾಣವನ್ನು ಕೇಂದ್ರ ಸರ್ಕಾರವು ಪ್ರತಿ ಮೂರು ತಿಂಗಳಿಗೆ ಒಮ್ಮೆ (ಆರ್ಥಿಕ ತ್ರೈಮಾಸಿಕಕ್ಕೆ ಅನುಗುಣವಾಗಿ) ತೀರ್ಮಾನಿಸುತ್ತದೆ. ಜನವರಿ 1ರಿಂದ ಹೊಸ ವರ್ಷ ಮಾತ್ರವಲ್ಲದೆ, ಹೊಸ ಆರ್ಥಿಕ ತ್ರೈಮಾಸಿಕವೂ ಶುರುವಾಗುವ ಕಾರಣ, ಬಡ್ಡಿ ದರಗಳಲ್ಲಿ ಯಾವುದಾದರೂ ಬದಲಾವಣೆ ಇದೆಯೇ ಎಂಬುದನ್ನು ಕೇಂದ್ರವು ಡಿಸೆಂಬರ್ 31ರಂದು ಪ್ರಕಟಿಸಲಿದೆ. ಬಡ್ಡಿ ದರಗಳಲ್ಲಿ ಬದಲಾವಣೆ ಆದಲ್ಲಿ ಅದು ಜನವರಿ 1ರಿಂದ ಅನ್ವಯ ಆಗುವುದು ವಾಡಿಕೆ.

ಯಾವುದೇ ಬ್ಯಾಂಕ್‌ನಿಂದ ಇಪಿಎಸ್ ಪಿಂಚಣಿ

6 ಇಪಿಎಸ್ ಪಿಂಚಣಿ ಸೌಲಭ್ಯ ಪಡೆಯುತ್ತಿರುವವರಿಗೆ ಯಾವುದೇ ಬ್ಯಾಂಕ್‌ನಿಂದ, ಯಾವುದೇ ಶಾಖೆಯಿಂದ, ಭಾರತದ ಯಾವುದೇ ಕಡೆಯಿಂದ ಪಿಂಚಣಿ ಹಣ ಪಡೆಯುವ ಸೌಲಭ್ಯ ಕಲ್ಪಿಸುವ ಕೇಂದ್ರೀಕೃತ ಪಿಂಚಣಿ ಪಾವತಿ ವ್ಯವಸ್ಥೆಯ ಜಾರಿಗೆ ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆಯ ಕೇಂದ್ರ ಧರ್ಮದರ್ಶಿಗಳ ಮಂಡಳಿಯು ಈಗಾಗಲೇ ಒಪ್ಪಿಗೆ ನೀಡಿದೆ. ಹೊಸ ವ್ಯವಸ್ಥೆ ಜನವರಿಯಲ್ಲಿ ಜಾರಿಗೆ ಬರುವ ನಿರೀಕ್ಷೆ ಇದೆ.





ಭೂಮಿ ತಾಯಿ ಎಳ್ಳ ಅಮಾವಾಸ್ಯೆ ಅಂಗವಾಗಿ ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಇವಣಿ ಗ್ರಾಮದ ರೈತ ಮಲ್ಲಿಕಾರ್ಜುನ ಕಲಬುರಗಿ ಅವರು ಸೋಮವಾರ ಭೂಮಿ ತಾಯಿಗೆ ಪೂಜೆ ಸಲ್ಲಿಸುವ ಆಚರಣೆಯ ಭಾಗವಾಗಿ ಕುಟುಂಬದ ಸದಸ್ಯರೊಂದಿಗೆ ಜಮೀನಿನಲ್ಲಿ ಚರಗ ಚೆಲ್ಲಿದರು
ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಮೇಲ್ಮನವಿ ವಾದಕ್ಕೆ ವಕೀಲರ ನೇಮಕ

ದರ್ಶನ್ ಜಾಮೀನು

ಪ್ರಜಾವಾಣಿ ವಾರ್ತೆ



ದರ್ಶನ್

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಿಗೆ ಹೈಕೋರ್ಟ್ ನೀಡಿರುವ 'ನಿಯಮಿತ' (ರೆಗ್ಯುಲರ್) ಜಾಮೀನು ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಗೃಹ ಇಲಾಖೆ ನಗರ ಪೊಲೀಸರಿಗೆ ಅನುಮತಿ ನೀಡಿದೆ.

ಡಿ.13ರಂದು ಹೈಕೋರ್ಟ್ ಏಕಸದಸ್ಯ ಪೀಠ ದರ್ಶನ್, ಪವಿತ್ರಗೌಡ ಸೇರಿದಂತೆ ಏಳು ಆರೋಪಿಗಳಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು. ಈ ಜಾಮೀನು ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಅನುಮತಿ ಕೋರಿ ನಗರ ಪೊಲೀಸರು, ಗೃಹ ಇಲಾಖೆಗೆ ಕಳೆದ ವಾರ ಪತ್ರ ಬರೆದಿದ್ದರು. ಅನುಮತಿ ನೀಡಿ ಆದೇಶ ಸೋಮವಾರ ಹೊರಡಿಸಲಾಗಿದೆ.

ಸರ್ಕಾರದ ಪರವಾಗಿ ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಂಡಿಸಲು ಹಿರಿಯ ವಕೀಲ ಸಿದ್ದಾರ್ಥ್ ಲೂಥ್ರಾ ಅವರನ್ನು ನೇಮಿಸಲಾಗಿದೆ. ಅನಿಲ್ ಸಿ. ನಿಶಾನಿ ಹಾಗೂ ಹೈಕೋರ್ಟ್‌ನ ಪಬ್ಲಿಕ್ ಪ್ರಾಸಿಕ್ಯೂಟರ್ ಅವರಿಗೆ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಜವಾಬ್ದಾರಿ ನೀಡಿ ಆದೇಶಿಸಲಾಗಿದೆ.

ದರ್ಶನ್ ಅವರು ಬಳ್ಳಾರಿ ಜೈಲಿನಲ್ಲಿದ್ದಾಗ ಬೆನ್ನು ನೋವು ಕಾಣಿಸಿಕೊಂಡಿತ್ತು. ದರ್ಶನ್ ಪರ ವಕೀಲರು ವೈದ್ಯಕೀಯ ಚಿಕಿತ್ಸೆಗೆ ಮಧ್ಯಂತರ ಜಾಮೀನು ನೀಡುವಂತೆ ಕೋರಿ ಅರ್ಜಿ ಸಲ್ಲಿಸಿದ್ದರು. ಅರ್ಜಿ ಪುರಸ್ಕರಿಸಿದ್ದ ನ್ಯಾಯಾಲಯ ಚಿಕಿತ್ಸೆಗಾಗಿ ಮಧ್ಯಂತರ ಜಾಮೀನು ನೀಡಿತ್ತು. ಬಳ್ಳಾರಿ ಜೈಲಿನಿಂದ ದರ್ಶನ್ ಬಿಡುಗಡೆಯಾಗಿ ಕೆಂಗೇರಿಯ ಬಿಜಿಎಸ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಾಗಿದ್ದರು.

13ನೇ ಪುಟ ನೋಡಿ

ದೇಗುಲ ವಿವಾದ; ಯಥಾಸ್ಥಿತಿಗೆ ನಿರ್ಧಾರ

ದಕ್ಷಿಣ ಕೊಡಗಿನಲ್ಲಿ ಬಂದ್, ಪ್ರತಿಭಟನೆ, ರಸ್ತೆ ತಡೆ; ಜಿಲ್ಲಾಡಳಿತದಿಂದ ಶಾಂತಿ ಸಭೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ತಾಲ್ಲೂಕಿನ ಕಟ್ಟೆಮಾಡು ಮಹಾ ಮೃತ್ಯುಂಜಯ ದೇಗುಲದಲ್ಲಿ ವಸ್ತ್ರ ಸಂಹಿತೆಗೆ ಸಂಬಂಧಿಸಿ ಉಂಟಾಗಿದ್ದ ವಿವಾದವು ಸದ್ಯಕ್ಕೆ ತಿಳಿಯಾಗಿದೆ.

ಡಿ. 27ರಂದು ನಡೆದ ವಾರ್ಷಿಕೋತ್ಸವದ ವೇಳೆ ಕೊಡವರ ಸಾಂಪ್ರದಾಯಿಕ ದಿರಿಸನ್ನು ಧರಿಸಿದ ಪುರುಷರಿಗೆ ಕೆಲವರು ಅಡ್ಡಿಪಡಿಸಿದರು ಎಂಬ ಕಾರಣಕ್ಕೆ ಗಲಾಟೆ ಶುರುವಾಗಿತ್ತು. ನಂತರ ವಿವಾದದ ಸ್ವರೂಪ ಪಡೆದುಕೊಂಡಿತ್ತು.

ಜಿಲ್ಲಾಧಿಕಾರಿ ವೆಂಕಟ್ ರಾಜಾ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರು ಸೋಮವಾರ ಸಂಜೆ ನಗರದಲ್ಲಿ ದೇವಸ್ಥಾನದ ಆಡಳಿತ ಮಂಡಳಿ, ಕೊಡವ ಸಮಾಜ ಹಾಗೂ ಗೌಡ ಸಮಾಜದ ಮುಖಂಡರೊಂದಿಗೆ ಶಾಂತಿ ಸಭೆ ನಡೆಸಿ, ಒಂದು ವಾರ ಕಾಲ ಯಥಾಸ್ಥಿತಿ ಮುಂದುವರಿಸಲು ಸೂಚಿಸಿದರು. ಸಭೆಯ ನಂತರ ಮಾತನಾಡಿದ ಜಿಲ್ಲಾಧಿಕಾರಿ ವೆಂಕಟ್ ರಾಜಾ, 'ಎಲ್ಲರಿಗೂ ಸರಿಹೊಂದುವ ರೀತಿಯಲ್ಲಿ ಸೂಕ್ತ ತೀರ್ಮಾನಕ್ಕೆ ಬರಲು ದೇವಸ್ಥಾನದ ಆಡಳಿತ ಮಂಡಳಿಗೆ ಮುಂದಿನ ಸೋಮವಾರದವರೆಗೆ (ಜ. 6) ಕಾಲಾವಕಾಶ ನೀಡಲಾಗಿದೆ. ಅಲ್ಲಿಯವರೆಗೂ ಯಥಾಸ್ಥಿತಿ ಕಾಪಾಡಲು ಎಲ್ಲರೂ ಒಪ್ಪಿದ್ದಾರೆ' ಎಂದು ತಿಳಿಸಿದರು.

'ಸಾಮಾಜಿಕ ಮಾಧ್ಯಮಗಳಲ್ಲಿ ಸುಳ್ಳು ಸುದ್ದಿ ಹರಡುವವರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಎಚ್ಚರಿಕೆ ನೀಡಿದರು.

ದಕ್ಷಿಣ ಕೊಡಗಿನಲ್ಲಿ ಪ್ರತಿಭಟನೆ: ಘಟನೆಗೆ ಸಂಬಂಧಿಸಿ ದಕ್ಷಿಣ ಕೊಡಗಿನ ಪೊನ್ನಂಪೇಟೆ, ಗೋಣಿಕೊಪ್ಪಲು, ಹುದಿಕೇರಿ ಹಾಗೂ ಮಡಿಕೇರಿ ತಾಲ್ಲೂಕಿನ ನಾಪೋಕ್ಲು ವ್ಯಾಪ್ತಿಯಲ್ಲಿ ಸೋಮವಾರ ಪ್ರತಿಭಟನೆಗಳು ನಡೆದವು.



ಪೊನ್ನಂಪೇಟೆ ತಾಲ್ಲೂಕಿನ ಹುದಿಕೇರಿಯಲ್ಲಿ ವಿವಿಧ ಕೊಡವ ಸಂಘಟನೆಗಳ ಕಾರ್ಯಕರ್ತರು ಸೋಮವಾರ ರಸ್ತೆ ಮಧ್ಯೆ ಟೆಂಟ್ ಹಾಕಿ ಪ್ರತಿಭಟನೆ ನಡೆಸಿದರು

13ನೇ ಪುಟ ನೋಡಿ

ಪ್ರಿಯಾಂಕ್ ಪರ–ವಿರೋಧ ವಾಗ್ವಾದ

ಬೀದರ್ ಜಿಲ್ಲೆಯ ಭಾಲ್ಕಿಯ ಗುತ್ತಿಗೆದಾರ ಸಚಿನ್ ಪಾಂಚಾಳ ಆತ್ಮಹತ್ಯೆ ಪ್ರಕರಣದಲ್ಲಿ ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಆಗ್ರಹಿಸಿದ್ದರೆ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಸಚಿವರು ತಮ್ಮ ಸಹೋದ್ಯೋಗಿಯ ಬೆನ್ನಿಗೆ ನಿಂತಿದ್ದಾರೆ. ಆತ್ಮಹತ್ಯೆ ಪ್ರಕರಣ ರಾಜಕೀಯ ವಾಕ್ಸಮರಕ್ಕೆ ಕಾರಣವಾಗಿದೆ.

'ಅಪರಾಧಿಗಳ ಜತೆ ವಿಜಯೇಂದ್ರ ಫೋಟೊ'

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಅವರ ತಂದೆ ಬಿ.ಎಸ್. ಯಡಿಯೂರಪ್ಪ ಅವರು ಅಪರಾಧಿಗಳು, ರೌಡಿಗಳ ಜತೆ ಇರುವ ಫೋಟೊ ಬಿಡುಗಡೆ ಮಾಡಲಾ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಗುತ್ತಿಗೆದಾರರ ಆತ್ಮಹತ್ಯೆ ಪ್ರಕರಣದಲ್ಲಿ ಆರೋಪ ಹೊತ್ತಿರುವ ರಾಜು ಜತೆಗೆ ಮುಖ್ಯಮಂತ್ರಿ, ಪ್ರಿಯಾಂಕ್ ಖರ್ಗೆ ಇರುವ ಫೋಟೊಗಳನ್ನು ವಿಜಯೇಂದ್ರ ಅವರು ಬಿಡುಗಡೆ ಮಾಡಿದ್ದಾರೆ. ನನ್ನ ಬಳಿಯೂ ಅಂತಹ ಹಲವು ಫೋಟೊಗಳು ಇವೆ. ಮನೆಗೆ ಬಂದವರು, ಮದುವೆ ಕಾರ್ಯಕ್ರಮ ಸೇರಿದಂತೆ ಹಲವು ವೇದಿಕೆಗಳಲ್ಲಿ ಫೋಟೊ ತೆಗೆಸಿಕೊಳ್ಳುವುದು ಸಹಜ. ಫೋಟೊ ಇದ್ದ ಮಾತ್ರಕ್ಕೆ ಆರೋಪ ಹೊರಿಸಲು ಆಗದು. ಆರೋಪಿಗಳ ಜತೆ ಮಾತುಕತೆ, ವ್ಯವಹಾರಕ್ಕೆ ದಾಖಲೆ ಇದ್ದರೆ ಬಿಡುಗಡೆ ಮಾಡಲಿ' ಎಂದು ಸವಾಲು ಹಾಕಿದರು.

13ನೇ ಪುಟ ನೋಡಿ

'ಸಚಿನ್ ಆತ್ಮಹತ್ಯೆ ಸರ್ಕಾರಿ ಪ್ರಾಯೋಜಿತ'

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬೀದರ್‌ನ ಗುತ್ತಿಗೆದಾರ ಸಚಿನ್ ಪಾಂಚಾಳ ಆತ್ಮಹತ್ಯೆಯು ಸರ್ಕಾರಿ ಪ್ರಾಯೋಜಿತ ಆತ್ಮಹತ್ಯೆ. ಈ ಪ್ರಕರಣವನ್ನು ಕೂಡಲೇ ಸಿಬಿಐಗೆ ಒಪ್ಪಿಸಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹಿಸಿದರು.

ಸಚಿವ ಪ್ರಿಯಾಂಕ್ ಖರ್ಗೆ ತಮ್ಮ ಆಪ್ತ ರಾಜು ಕಪನೂರು ಜತೆ ಇರುವ ಚಿತ್ರಗಳನ್ನು ಸುದ್ದಿಗೋಷ್ಠಿಯಲ್ಲಿ ಬಿಡುಗಡೆ ಮಾಡಿ ಮಾತನಾಡಿದ ಅವರು, ರಾಜು ಕಪನೂರು ಬೆದರಿಕೆಯ ಕಾರಣಕ್ಕೆ ರೈಲಿಗೆ ತಲೆಕೊಟ್ಟು ಸಚಿನ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಾಂಗ್ರೆಸ್ ಅವಧಿಯಲ್ಲಿ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗುತ್ತಿವೆ. ಆತ್ಮಹತ್ಯೆ ಭಾಗ್ಯ ಕರುಣಿಸಿದ್ದಾರೆ ಎಂದರು. ಮರಣ ಪತ್ರ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದ ತಕ್ಷಣ ಸಚಿನ್ ಅವರ ಮನೆಯ ಹೆಣ್ಣು ಮಕ್ಕಳು ದೂರು ಕೊಡಲು ಪೊಲೀಸ್ ಠಾಣೆಗೆ ಹೋದಾಗ 12 ಗಂಟೆ ಪೊಲೀಸರು ಯಾವುದೇ ಕ್ರಮ ಕೈಗೊಳ್ಳಲಿಲ್ಲ' ಎಂದರು

13ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಹೊಸಹುಡ್ಯ, ಕೊಂಡರೆಡ್ಡಿಪಲ್ಲಿಯ 43 ರೈತರಿಗೆ ಆತಂಕ

ಜಮೀನು ಪಹಣಿಯಲ್ಲಿ 'ಕೆಐಎಡಿಬಿ' ಹೆಸರು!

ಪ್ರಜಾವಾಣಿ ವಾರ್ತೆ

ಬಾಗೇಪಲ್ಲಿ (ಚಿಕ್ಕಬಳ್ಳಾಪುರ): ತಾಲ್ಲೂಕಿನ ಹೊಸಹುಡ್ಯ ಹಾಗೂ ಕೊಂಡರೆಡ್ಡಿಪಲ್ಲಿ ಗ್ರಾಮಗಳ ಬಳಿಯ ರಾಷ್ಟ್ರೀಯ ಹೆದ್ದಾರಿಯ ಅಕ್ಕಪಕ್ಕದ ರೈತರ ಜಮೀನುಗಳ ಪಹಣಿಯಲ್ಲಿ ಏಕಾಏಕಿ 'ಕೆಐಎಡಿಬಿ' (ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ) ಹೆಸರು ನಮೂದಾಗಿದೆ.

ಡಿ.18ಕ್ಕೂ ಮೊದಲು ಪಹಣಿಗಳಲ್ಲಿ ರೈತರ ಹೆಸರು ಇತ್ತು. ಈಗ ಎರಡೂ ಗ್ರಾಮಗಳ 43 ರೈತರ ಜಮೀನುಗಳ ಪಹಣಿಗಳಲ್ಲಿ ಹೊಸದಾಗಿ ಕೆಐಎಡಿಬಿ ಹೆಸರು ಸೇರಿಕೊಂಡಿದೆ ಎನ್ನುತ್ತಾರೆ ಸಂತ್ರಸ್ತ ರೈತರು. ರೈತರಿಗೆ ಗೊತ್ತಿಲ್ಲದಂತೆ ಪಹಣಿಯಲ್ಲಿ ಕೆಐಎಡಿಬಿ ಹೆಸರು ಸೇರಿಸಲಾಗಿದೆ. ಕೂಡಲೇ ಕೆಐಎಡಿಬಿ ಹೆಸರು ತೆಗೆದು ಹಾಕಿ ರೈತರ ಹೆಸರು ಸೇರಿಸಬೇಕು ಎಂದು ತಹಶೀಲ್ದಾರ್ ಮನೀಷಾ ಎನ್. ಪತ್ರಿ ಅವರಿಗೆ ಸೋಮವಾರ ಮನವಿ ಸಲ್ಲಿಸಿದ್ದಾರೆ.

'ಜಮೀನು ಸ್ವಾಧೀನಕ್ಕೆ ಬಿಡುವುದಿಲ್ಲ. ಪಹಣಿಯಲ್ಲಿ ನಮ್ಮ ಹೆಸರಿನ ಬದಲು ಕೆಐಎಡಿಬಿ ಹೆಸರು ಸೇರಿರುವುದು ಈಚೆಗೆ ಗಮನಕ್ಕೆ ಬಂದಿದೆ. ಇದು ಆತಂಕಕ್ಕೆ ಕಾರಣವಾಗಿದೆ. ಪಹಣಿಯಲ್ಲಿ ಮೊದಲಿನಂತೆ ನಮ್ಮ ಹೆಸರು ಬರಬೇಕು. ಇಲ್ಲವಾದರೆ ತಾಲ್ಲೂಕು ಕಚೇರಿ ಮುಂದೆ ಅನಿರ್ದಿಷ್ಟಾವಧಿ ಹೋರಾಟ ಮಾಡುತ್ತೇವೆ' ಎಂದು ರೈತರಾದ ಹೇಮಚಂದ್ರ ಹಾಗೂ ಓಬನ್ನಗಾರಿಪಲ್ಲಿಯ ಭಾಗ್ಯಮ್ಮ ಹೇಳಿದರು.



ಬಾಗೇಪಲ್ಲಿ ತಾಲ್ಲೂಕಿನ ಹೊಡಹುಡ್ಯ, ಕೊಂಡರೆಡ್ಡಿಪಲ್ಲಿ ಗ್ರಾಮಗಳ ರೈತರ ಪಹಣಿಯಲ್ಲಿ ನಮೂದಾಗಿರುವ ಕೆಐಎಡಿಬಿ ಹೆಸರು ತೆಗೆಯುವಂತೆ ಮುಖಂಡರು ತಹಶೀಲ್ದಾರ್ ಮನೀಷಾ ಎನ್.ಪತ್ರಿ ಅವರಿಗೆ ಸೋಮವಾರ ಮನವಿ ಸಲ್ಲಿಸಿದರು

ಮತ್ತೆ ರೈತರ ಹೆಸರು: ತಹಶೀಲ್ದಾರ್

ರೈತರ ಜಮೀನು ಪಹಣಿಗಳಲ್ಲಿ ಕೆಐಎಡಿಬಿ ಹೆಸರು ನಮೂದು ಆಗಿರುವುದು ಗಮನಕ್ಕೆ ಬಂದಿದೆ. ಈ ಬಗ್ಗೆ ಉಪವಿಭಾಗಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಜೊತೆ ಚರ್ಚಿಸಲಾಗುವುದು. ರೈತರು ಆತಂಕಕ್ಕೆ ಒಳಗಾಗುವುದು ಬೇಡ. ರೈತರ ಹೆಸರನ್ನು ಪಹಣಿಯಲ್ಲಿ ಸೇರಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಹಶೀಲ್ದಾರ್ ಮನೀಷಾ ಎನ್.ಪತ್ರಿ ಸ್ಪಷ್ಟನೆ ನೀಡಿದ್ದಾರೆ.

13ನೇ ಪುಟ ನೋಡಿ

ಹೋರಾಟಕ್ಕೆ ಸಾವಿರ ದಿನ

ದೇವನಹಳ್ಳಿ (ಬೆಂ.ಗ್ರಾಮಾಂತರ): ಕೈಗಾರಿಕೆ ಉದ್ದೇಶಕ್ಕೆ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ 13 ಹಳ್ಳಿಗಳ 1,777 ಎಕರೆ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಮುಂದಾಗಿರುವ ಕೆಐಎಡಿಬಿ ನಿರ್ಧಾರದ ವಿರುದ್ಧ ರೈತರು ನಡೆಸುತ್ತಿರುವ ಧರಣಿ ಸೋಮವಾರ ಸಾವಿರ ದಿನ ಪೂರೈಸಿದೆ.

ಹೋರಾಟ ಸಾವಿರ ದಿನ ಪೂರೈಸಿದ ಹಿನ್ನೆಲೆಯಲ್ಲಿ ಚನ್ನರಾಯಪಟ್ಟಣದಲ್ಲಿ ರೈತರು ಧರಣಿ ನಡೆಸುತ್ತಿರುವ ಸ್ಥಳದಲ್ಲಿ ಬೃಹತ್ ಸಮಾವೇಶ ನಡೆಯಿತು. ರೈತರ ಹೋರಾಟ ಬೆಂಬಲಿಸಿ ಬಹುಭಾಷಾ ಚಿತ್ರನಟ ಪ್ರಕಾಶ್ ರಾಜ್ ಸಮಾವೇಶದಲ್ಲಿ ಭಾಗವಹಿಸಿದ್ದರು. ಒಂದು ಸಾವಿರ ದಿನದಿಂದ ಧರಣಿ ನಡೆಯುತ್ತಿರುವ ರೈತರ ಕೂಗು ಸರ್ಕಾರಕ್ಕೆ ಕೇಳಿಸಲಿಲ್ಲವೆ?. ರೈತ ದೇಶದ ಬೆನ್ನಲುಬು ಎಂಬುದು ಮಾತಿಗಷ್ಟೇ ಸೀಮಿತವಾಗಿದೆ. ಹಲವು ವರ್ಷ ರೈತರು ಹೋರಾಟ ನಡೆಸಿದರೂ ಸರ್ಕಾರಕ್ಕೆ ಕಾಳಜಿ ಇಲ್ಲ. ಇದು ದೇಶಕ್ಕೆ ತಗುಲಿರುವ ಶಾಪ ಎಂದು ಪ್ರಕಾಶ್ ರಾಜ್ ಅವರು ರಾಜಕಾರಣಿಗಳನ್ನು ತರಾಟೆಗೆ ತೆಗೆದುಕೊಂಡರು.

'ಎಲ್ಲ ಸರ್ಕಾರಗಳೂ ರೈತ ವಿರೋಧಿಗಳೇ. ಅಹಂಕಾರದಿಂದ ಸರ್ಕಾರ ರೈತ ಪರ ನಿರ್ಧಾರ ತೆಗೆದುಕೊಳ್ಳುತ್ತಿಲ್ಲ. ಸರ್ಕಾರವನ್ನು ತಡೆಯುತ್ತಿರುವ ಕ್ರೂರಿಗಳಾದರೂ ಯಾರು' ಎಂದು ಖಾರವಾಗಿ ಪ್ರಶ್ನಿಸಿದರು. 'ರೈತರ ಈ ಹೋರಾಟ ಇಡೀ ಭೂ ಸ್ವಾಧೀನ ಪ್ರತಿಕ್ರಿಯೆ ದಿಕ್ಕನ್ನೇ ಬದಲಿಸಬೇಕು. ಸರ್ಕಾರವು ರೈತರ ಭೂಮಿ ಕಿತ್ತುಕೊಂಡು ಬಂಡವಾಳಶಾಹಿಗಳಿಗೆ ಕೊಡುತ್ತಿದೆ. ಸರ್ಕಾರ ಮತ್ತು ಅಧಿಕಾರಿಶಾಹಿಗೆ ಭೂಮಿ ಮತ್ತು ರೈತರ ನಡುವಿನ ಸಂಬಂಧ ಅರ್ಥವಾಗುವುದಿಲ್ಲ. ಭೂಮಿತಾಯಿ ರೈತರ ಸ್ವಾಭಿಮಾನದ ಗುರುತು. ರೈತರ ಋಣ ಎಲ್ಲರ ಮೇಲಿದೆ. ಫಲವತ್ತಾದ ಭೂಮಿ ಮೇಲೆ ಕೈಗಾರಿಕೆಗಳನ್ನು ಕಟ್ಟುತ್ತಾ ಹೋದರೆ ಹೊಟ್ಟೆಗೆ ತಿನ್ನುವುದಾದರೂ ಏನು? ಕೃಷಿ ಸತ್ತರೆ ಯಾರೂ ಬದುಕಿರಲ್ಲ' ಎಂದು ಪ್ರಕಾಶ್ ಹೇಳಿದರು.

13ನೇ ಪುಟ ನೋಡಿ

ಸರ್ವೆಗೆ ಬಂದವರ ಡ್ರೋನ್, ಲ್ಯಾಪ್‌ಟಾಪ್ ಸುಟ್ಟ ರೈತರು

ಪ್ರಜಾವಾಣಿ ವಾರ್ತೆ



ಆನೇಕಲ್: ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ನಿರ್ಮಿಸಲು ಉದ್ದೇಶಿಸಿರುವ ಕೈಗಾರಿಕಾ ಪ್ರದೇಶಕ್ಕೆ ಅಗತ್ಯವಾದ ಭೂಮಿಯನ್ನು ಸರ್ವೆ ಮಾಡಲು ಸೋಮವಾರ ತಾಲ್ಲೂಕಿನ ಹಂದೇನಹಳ್ಳಿ ಗ್ರಾಮಕ್ಕೆ ಬಂದಿದ್ದ ಖಾಸಗಿ ಸಂಸ್ಥೆಯ ಪ್ರತಿನಿಧಿಗಳ ಡ್ರೋನ್ ಮತ್ತು ಲ್ಯಾಪ್‌ಟಾಪ್‌ಗೆ ರೈತರು ಬೆಂಕಿ ಹಚ್ಚಿದ್ದಾರೆ.

ಹಂದೇನಹಳ್ಳಿ ಮತ್ತು ಮೇಡಹಳ್ಳಿ ಗ್ರಾಮಗಳ 700 ಎಕರೆಗೂ ಹೆಚ್ಚು ಪ್ರದೇಶದಲ್ಲಿ ಕೈಗಾರಿಕ ಪ್ರದೇಶ ಸ್ಥಾಪನೆಗೆ ಕೆಐಎಡಿಬಿ ಈಚೆಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿದೆ.

ಕೃಷಿ ಜಮೀನುಗಳ ಸರ್ವೆಗೆ ಖಾಸಗಿ ಸಂಸ್ಥೆಯ ಪ್ರತಿನಿಧಿಗಳು ಡ್ರೋನ್ ಮತ್ತು ಲ್ಯಾಪ್‌ಟಾಪ್ ಜೊತೆ ಬಂದಿದ್ದರು. ಗ್ರಾಮ ಪ್ರವೇಶಿಸದಂತೆ ತಡೆಯೊಡ್ಡಿದ ರೈತರು, ಅವರಿಂದ ಡ್ರೋನ್ ಮತ್ತು ಲ್ಯಾಪ್‌ಟ್ಯಾಪ್ ಕಿತ್ತುಕೊಂಡು ಬೆಂಕಿ ಹಚ್ಚಿದರು. ನಂತರ ಬಡಿಗೆ ಮತ್ತು ದೊಣ್ಣೆಗಳೊಂದಿಗೆ ಅಡ್ಡಲಾಗಿ ನಿಂತು ಸರ್ವೆ ಕಾರ್ಯ ಮಾಡದಂತೆ ತಡೆದು ವಾಪಸ್ ಕಳಿಸಿದರು.

'ನಮ್ಮ ಭೂಮಿಯನ್ನು ನಾವೇ ರಕ್ಷಣೆ ಮಾಡಿಕೊಳ್ಳುತ್ತೇವೆ. ಭೂಮಿಯ ಉಳಿವಿಗಾಗಿ ಎಲ್ಲಾ ತ್ಯಾಗಕ್ಕೂ ಸಿದ್ಧರಾಗಿದ್ದೇವೆ. ಯಾವುದೇ ಕಾರಣಕ್ಕೂ ರಾಜಕಾರಣಿಗಳ ಇಲ್ಲವೇ ರಾಜಕೀಯ ಪಕ್ಷಗಳ ಬಳಿ ಹೋಗಲ್ಲ. ರಕ್ತ ಮತ್ತು ಪ್ರಾಣ ನೀಡುತ್ತೇವೆ. ಒಂದಿಂಚು ಭೂಮಿಯನ್ನೂ ಬಿಟ್ಟು ಕೊಡುವುದಿಲ್ಲ' ಎಂದು ಹೇಳಿದರು.

'ರೈತರ ಕಣ್ಣು ತಪ್ಪಿಸಿ ಸರ್ವೆ ಮಾಡಲು ಕೆಐಎಡಿಬಿ ಸಿದ್ಧತೆ ನಡೆಸಿದೆ. ಸರ್ವೆಗಾಗಿ ಯಾರಾದರೂ ನಮ್ಮ ಭೂಮಿಗಳಿಗೆ ಕಾಲಿಟ್ಟರೆ ಎಲ್ಲದ್ದಕ್ಕೂ ರೈತರು ಸಿದ್ಧರಾಗಿದ್ದೇವೆ' ಎಂದು ರೈತ ಮುಖಂಡ ಚಂದ್ರಾರೆಡ್ಡಿ ಅಸಮಾಧಾನ ವ್ಯಕ್ತಪಡಿಸಿದರು.

ಗಣರಾಜ್ಯೋತ್ಸವ ಪಥಸಂಚಲನಕ್ಕೆ ಕೆ.ಸಿ. ಚಿರಂತ್ ಗೌಡ ಆಯ್ಕೆ

ಪ್ರಜಾವಾಣಿ ವಾರ್ತೆ


ಚಿರಂತ್‌ಗೌಡ

ಯಲಹಂಕ: ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನ ದ್ವಿತೀಯ ಬಿ.ಕಾಂ ವಿದ್ಯಾರ್ಥಿ ಚಿರಂತ್ ಗೌಡ ಕೆ.ಸಿ. ಅವರು ಕೇಂದ್ರ ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯವು ನವದೆಹಲಿಯಲ್ಲಿ ಜನವರಿ 1ರಿಂದ 31ರವರೆಗೆ ಆಯೋಜಿಸಿರುವ ಎನ್‌ಎಸ್‌ಎಸ್ ಗಣರಾಜ್ಯೋತ್ಸವ ಪಥ ಸಂಚಲನ ಶಿಬಿರಕ್ಕೆ ಆಯ್ಕೆಯಾಗಿದ್ದಾರೆ.

ಚಿರಂತ್‌ಗೌಡ ಅವರು ದಕ್ಷಿಣ ವಲಯದ ಎನ್.ಎಸ್.ಎಸ್ ಶಿಬಿರದ ಬಾಲಕರ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿದ್ದರು. ಚಿಕ್ಕಬಳ್ಳಾಪುರ ತಾಲ್ಲೂಕಿನ ಕಡಿಶಿಗೇನಹಳ್ಳಿ ನಿವಾಸಿ ಚಲುವರಾಜು ಅವರ ಪುತ್ರ ಚಿರಂತ್ ಗೌಡ ಜನವರಿ 26ರಂದು ನವದೆಹಲಿಯ ಕರ್ತವ್ಯಪಥದಲ್ಲಿ ನಡೆಯಲಿರುವ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಭಾಗವಹಿಸಲಿದ್ದಾರೆ.

ಬಿ.ವಿ. ಸುರೇಶ್ ಬಾಬು ಪ್ರಧಾನ ಕಾರ್ಯದರ್ಶಿ

ಯಲಹಂಕ: ಬೆಂಗಳೂರು ಉತ್ತರ ತಾಲ್ಲೂಕು ಕೃಷಿಕ ಸಮಾಜದ ಪ್ರಧಾನ ಕಾರ್ಯದರ್ಶಿಯಾಗಿ ಬಿ.ವಿ. ಸುರೇಶ್ ಬಾಬು ನೇಮಕಗೊಂಡಿದ್ದಾರೆ.

ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿಗೆ ಐದು ವರ್ಷಗಳ ಅವಧಿಗೆ ನಡೆದ ಚುನಾವಣೆಯಲ್ಲಿ ಬ್ಯಾತ ಗ್ರಾಮದ ಸುರೇಶ್ ಬಾಬು ಸಮಿತಿಯ ಸದಸ್ಯರಾಗಿ ಆಯ್ಕೆಯಾಗಿದ್ದರು. ಕಾರ್ಯಕಾರಿ ಮಂಡಳಿಯು ಅವರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿದೆ.

ಒಳಚರಂಡಿ: ದಂಡ, ಸೇವಾ ಶುಲ್ಕ ವಸೂಲಿ ಮಾಡಿ ಅಧಿಕೃತಗೊಳಿಸಲು ಜಲಮಂಡಳಿ ಕ್ರಮ

5,146 ಅನಧಿಕೃತ ಸಂಪರ್ಕ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಾದ್ಯಂತ ಅನಧಿಕೃತ ಒಳಚರಂಡಿ ಸಂಪರ್ಕವನ್ನು ಪತ್ತೆ ಮಾಡಿ, ಸಂಬಂಧಿಸಿದವರಿಗೆ ನೋಟಿಸ್ ನೀಡಿ, ದಂಡವಿಧಿಸಿ, ಸೇವಾ ಶುಲ್ಕ ವಸೂಲಿ ಮಾಡಿ, ಅವುಗಳನ್ನು ಅಧಿಕೃತಗೊಳಿಸಲು ಜಲಮಂಡಳಿ ಮುಂದಾಗಿದೆ. ಈ ಮೂಲಕ ಮ್ಯಾನ್‌ಹೋಲ್‌ಗಳು ಉಕ್ಕಿ ಹರಿಯುವ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಜೊತೆಗೆ, ಆದಾಯ ಹೆಚ್ಚಿಸಿಕೊಳ್ಳಲು ಜಲಮಂಡಳಿ ಹೆಜ್ಜೆ ಇಟ್ಟಿದೆ.

ನಗರದ ಕೆಲವೆಡೆ ಜಲಮಂಡಳಿಯಿಂದ ಅಧಿಕೃತವಾಗಿ ಸಂಪರ್ಕ ಪಡೆಯದೆ ತ್ಯಾಜ್ಯ ನೀರನ್ನು ಒಳಚರಂಡಿಗೆ ಹರಿಸಲಾಗುತ್ತಿದೆ. ಕೆಲವು ಕಡೆಗಳಲ್ಲಿ ಮಳೆ ನೀರನ್ನು ನೇರವಾಗಿ ಒಳಚರಂಡಿಗೆ ಹರಿಸಲಾಗುತ್ತಿದೆ. ಇದರಿಂದ ಒಳಚರಂಡಿ ವ್ಯವಸ್ಥೆಯ ಮೇಲೆ ಒತ್ತಡ ಹೆಚ್ಚಾಗಿದ್ದು, ಮ್ಯಾನ್‌ಹೋಲ್‌ಗಳು ಭರ್ತಿಯಾಗಿ ತ್ಯಾಜ್ಯ ನೀರು ರಸ್ತೆಗೆ ಹರಿಯುತ್ತಿದೆ.

ಇತ್ತೀಚೆಗೆ ನಗರದಲ್ಲಿ ಸುರಿದ ಜಡಿ ಮಳೆಗೆ, ಪ್ರಮುಖ ರಸ್ತೆಗಳಲ್ಲಿನ ಕೆಲವು ಮ್ಯಾನ್‌ಹೋಲ್‌ಗಳು ಭರ್ತಿಯಾಗಿ ರಸ್ತೆಗೆ ಕೊಳಚೆ ನೀರು ಹರಿದಿತ್ತು. ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಉಂಟಾಗಿತ್ತು. ಜಲಮಂಡಳಿಗೆ ಜನರು ದೂರುಗಳನ್ನೂ ನೀಡಿದ್ದರು. ಈ ಹಿನ್ನೆಲೆಯಲ್ಲಿ ಜಲಮಂಡಳಿಯು ಕೆಲವು ತಿಂಗಳಿಂದ ಒಳಚರಂಡಿ ಅನಧಿಕೃತ ಸಂಪರ್ಕಗಳನ್ನು ಪತ್ತೆ ಹಚ್ಚಿ ಸಕ್ರಮಗೊಳಿಸಲು ಸಮೀಕ್ಷೆ ನಡೆಸುತ್ತಿದೆ.

43,437 ಸಂಪರ್ಕ ಸಮೀಕ್ಷೆ: ಪ್ರಸ್ತುತ ನಗರದಾದ್ಯಂತ 10.70 ಲಕ್ಷ ಒಳಚರಂಡಿ ಸಂಪರ್ಕಗಳನ್ನು ಜಲಮಂಡಳಿ ಹೊಂದಿದೆ. ಈವರೆಗೆ 43,437 ಸಂಪರ್ಕಗಳ ಸಮೀಕ್ಷೆ ನಡೆಸಿದೆ. ಇದರಲ್ಲಿ 5,146 ಅನಧಿಕೃತ ಸಂಪರ್ಕಗಳನ್ನು ಪತ್ತೆ ಮಾಡಲಾಗಿದೆ. ವಾಯವ್ಯ ಭಾಗದಲ್ಲಿ ಅತಿ ಹೆಚ್ಚು ಪ್ರಕರಣಗಳು ಪತ್ತೆಯಾಗಿವೆ. ಈ ಪೈಕಿ ಪೂರ್ವ–2 ವಿಭಾಗದಲ್ಲಿ 5,919 ಸಂಪರ್ಕ ಪರಿಶೀಲಿಸಲಾಗಿದ್ದು, ಇದರಲ್ಲಿ 804 ಅನಧಿಕೃತ ಸಂಪರ್ಕಗಳು ಪತ್ತೆಯಾಗಿವೆ. ಇದು ಸಮೀಕ್ಷೆಯಲ್ಲಿ ಪತ್ತೆಯಾದ ಹೆಚ್ಚು ಅನಧಿಕೃತ ಸಂಪರ್ಕಗಳಾಗಿವೆ. ಈ ಪೈಕಿ 492 ಸಂಪರ್ಕಗಳನ್ನು ಸಕ್ರಮಗೊಳಿಸಲು ಅರ್ಜಿ ಸಲ್ಲಿಸಲಾಗಿದೆ. 241 ಮಂದಿಗೆ ನೋಟಿಸ್ ನೀಡಲಾಗಿದೆ.

ಪೂರ್ವ–1 ವಿಭಾಗದಲ್ಲಿ 479, ವಾಯವ್ಯ–1ರಲ್ಲಿ 972, ನೈರುತ್ಯ–2ರಲ್ಲಿ 415 ಅನಧಿಕೃತ ಸಂಪರ್ಕಗಳನ್ನು ಪತ್ತೆ ಮಾಡಲಾಗಿದೆ. ಇವು ಜಲಮಂಡಳಿಯ 16 ವಿಭಾಗಗಳಲ್ಲಿ ಅತಿ ಹೆಚ್ಚು ಅನಧಿಕೃತ ಸಂಪರ್ಕಗಳು ಪತ್ತೆಯಾಗಿರುವ ವಿಭಾಗಗಳು. ಇವುಗಳಲ್ಲಿ ಕ್ರಮವಾಗಿ 1,957, 5,744 ಮತ್ತು 1,924 ಸಂಪರ್ಕಗಳನ್ನು ಪರಿಶೀಲಿಸಲಾಗಿದ್ದು, 101, 268 ಮತ್ತು 248 ಸಂಪರ್ಕಗಳ 'ಸಕ್ರಮ'ಕ್ಕಾಗಿ ಅರ್ಜಿ ಸಲ್ಲಿಸಲಾಗಿದೆ ಎಂದು ಮಂಡಳಿ ತಿಳಿಸಿದೆ.

ಅನಧಿಕೃತ ಒಳಚರಂಡಿ ಸಂಪರ್ಕ ಪಡೆದಿರುವವರಿಗೆ ಜಲಮಂಡಳಿ ಸಿಬ್ಬಂದಿ ನೋಟಿಸ್ ನೀಡಿದ್ದಾರೆ. ನೋಟಿಸ್ ನೀಡಿದ ನಂತರ ಹಲವು ವಿಭಾಗಗಳಲ್ಲಿ ನಾಗರಿಕರು ಸಂಪರ್ಕವನ್ನು ಸಕ್ರಮಗೊಳಿಸಿಕೊಂಡಿದ್ದಾರೆ. ನಗರದ 16 ವಿಭಾಗಗಳಲ್ಲಿ, 2,451 ಅನಧಿಕೃತ ಸಂಪರ್ಕಗಳನ್ನು ಸಕ್ರಮಗೊಳಿಸಲು ಅರ್ಜಿ ಸಲ್ಲಿಸಲಾಗಿದೆ. 2,719 ಮನೆಗಳಿಗೆ ನೋಟಿಸ್ ನೀಡಿ, ದಂಡ ವಸೂಲಿ ಮಾಡಲಾಗಿದೆ. ತಕ್ಷಣವೇ ಸಂಪರ್ಕವನ್ನು ಸಕ್ರಮಗೊಳಿಸಬೇಕು ಎಂದು ತಿಳಿವಳಿಕೆ ನೀಡಲಾಗಿದೆ ಎಂದು ಜಲಮಂಡಳಿ ಮೂಲಗಳು ತಿಳಿಸಿವೆ.


ಒಳಚರಂಡಿ ನೀರು ರಸ್ತೆಯಲ್ಲಿ ಹರಿದಿರುವುದು ಸಂಗ್ರಹ ಚಿತ್ರ

ಮುಖ್ಯಾಂಶಗಳು

- 'ಸಕ್ರಮ'ಕ್ಕೆ ಅರ್ಜಿ ಸಲ್ಲಿಸಿರುವುದು 2,451
- ಅಕ್ರಮ ಸಂಪರ್ಕ ಸಕ್ರಮಕ್ಕಾಗಿ 3ಳಿವಳಿಕೆ ನೋಟಿಸ್

ವಿಭಾಗ	ಸಮೀಕ್ಷೆಗೆ ಒಳಪಟ್ಟದ್ದು	ಅನಧಿಕೃತ ಸಂಪರ್ಕ	ಸಕ್ರಮಕ್ಕೆ ಅರ್ಜಿ ಸಲ್ಲಿಕೆ	ನೋಟಿಸ್ ನೀಡಿರುವುದು
ಪೂರ್ವ	7876	1283	593	694
ಪಶ್ಚಿಮ	5213	428	255	173
ಉತ್ತರ	4289	753	318	435
ದಕ್ಷಿಣ	4122	289	185	104
ಕೇಂದ್ರ	1457	159	96	63
ಆಗ್ನೇಯ	3568	432	215	237
ನೈರುತ್ಯ	5618	544	337	207
ವಾಯವ್ಯ	9392	1084	349	735
ಈಶಾನ್ಯ	1902	174	103	71
ಒಟ್ಟು	43437	5146	2451	2719

ಅನಧಿಕೃತ ಸಂಪರ್ಕದಿಂದ ಸಮಸ್ಯೆ

ಕಾವೇರಿ ನೀರಿನ ಸಂಪರ್ಕ ಪಡೆಯುವವರಿಗೆ ಅದರ ಜತೆಗೆ ನಿಗದಿತ ಶುಲ್ಕ ಪಾವತಿಸಿಕೊಂಡು ಒಳಚರಂಡಿ ಸಂಪರ್ಕವನ್ನೂ ಮಂಡಳಿ ನೀಡಲಿದೆ. ಸಂಪರ್ಕಗಳ ಸಂಖ್ಯೆಗೆ ಅನುಗುಣವಾಗಿ ಕೊಳವೆ ಮಾರ್ಗ, ಮ್ಯಾನ್‌ಹೋಲ್ ನಿರ್ಮಾಣ ಮಾಡಲಿದೆ. ಇದರ ಆಧಾರದಲ್ಲಿಯೇ, ತ್ಯಾಜ್ಯ ಸಂಸ್ಕರಣಾ ಘಟಕವನ್ನೂ(ಎಸ್‌ಟಿಪಿ) ನಿರ್ಮಿಸಿ, ತ್ಯಾಜ್ಯ ನೀರು ಸಂಸ್ಕರಣೆ ಹಾಗೂ ನಿರ್ವಹಣೆ ಮಾಡಲಿದೆ. ಅನಧಿಕೃತ ಸಂಪರ್ಕಗಳು ಹೆಚ್ಚಾದರೆ, ಒಳಚರಂಡಿ ವ್ಯವಸ್ಥೆ ಮೇಲೆ ಒತ್ತಡ ಉಂಟಾಗಿ ತ್ಯಾಜ್ಯ ನೀರು ರಸ್ತೆಗೆ ಬರಲಿದೆ. ನಿರ್ವಹಣೆಗೂ ತೊಡಕಾಗಲಿದೆ.

'ಸಕ್ರಮ'ಕ್ಕೆ ಸಲಹೆ

'ಅನಧಿಕೃತ ಒಳಚರಂಡಿ ಸಂಪರ್ಕವನ್ನು ಸಕ್ರಮಗೊಳಿಸಿಕೊಳ್ಳುವ ಕುರಿತು ಸಾಕಷ್ಟು ಪ್ರಚಾರ ಮಾಡಿದ್ದೇವೆ. ಸಂಬಂಧಿಸಿದವರಿಗೆ ನೋಟಿಸ್‌ಗಳನ್ನೂ ನೀಡಿದ್ದೇವೆ. ಸಾಕಷ್ಟು ಕಾಲಾವಕಾಶ ನೀಡಿದ್ದೇವೆ. ಅನಧಿಕೃತ ಸಂಪರ್ಕ ಪಡೆದಿರುವವರು ಹದಿನೈದು ದಿನಗಳೊಳಗೆ ಸಕ್ರಮಗೊಳಿಸಿಕೊಳ್ಳಬೇಕು' ಎಂದು ಜಲಮಂಡಳಿ ಅಧ್ಯಕ್ಷ ರಾಮಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಕ್ರಮಕ್ಕೆ ಆಗ್ರಹಿಸಿ ಸುರೇಶ್ ಪತ್ರ

ಪ್ರಜಾವಾಣಿ ವಾರ್ತೆ


ಡಿ.ಕೆ. ಸುರೇಶ್

ಬೆಂಗಳೂರು: ವಂಚನೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿ ಇರುವ ಐಶ್ವರ್ಯಾ ಗೌಡ ಅಲಿಯಾಸ್ ನವ್ಯಶ್ರೀ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಕೋರಿ, ಮಾಜಿ ಸಂಸದ ಡಿ.ಕೆ. ಸುರೇಶ್ ಅವರು ಬೆಂಗಳೂರು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರಿಗೆ ಪತ್ರ ಬರೆದಿದ್ದಾರೆ.

'ಐಶ್ವರ್ಯಾ ಗೌಡ ಅವರು ನನ್ನ ಹೆಸರು ದುರ್ಬಳಕೆ ಮಾಡಿಕೊಂಡು ಹಲವರಿಗೆ ಚಿನ್ನದ ಆಭರಣ ಹಾಗೂ ಹಣವನ್ನು ವಂಚಿಸುತ್ತಿರುವುದಾಗಿ ಮಾಧ್ಯಮಗಳಲ್ಲಿ ವರದಿ ಬಿತ್ತರವಾಗಿದೆ. ವಂಚನೆ ನಡೆಸಿರುವವರ ವಿರುದ್ಧ ಕ್ರಮ ತೆಗೆದುಕೊಳ್ಳಿ. ಅಲ್ಲದೇ ಮುಂದಿನ ದಿನಗಳಲ್ಲಿ ಈ ರೀತಿ ಯಾರಿಗೂ ಅನ್ಯಾಯ ಆಗದಂತೆ ಕ್ರಮ ಕೈಗೊಳ್ಳಿ' ಎಂದು ಪತ್ರದಲ್ಲಿ ಕೋರಿದ್ದಾರೆ.

ಡಿ.ಕೆ.ಸುರೇಶ್ ಅವರ ತಂಗಿ ಎಂದು ನಂಬಿಸಿ ಚಿನ್ನ ಪಡೆದು ವಂಚಿಸಿದ ಪ್ರಕರಣದ ಆರೋಪಿಗಳಾದ ಐಶ್ವರ್ಯಾ ಗೌಡ ಹಾಗೂ ಅವರ ಪತಿ ಕೆ.ಎನ್. ಹರೀಶ್ ಅವರನ್ನು ಚಂದ್ರಾಲೇಔಟ್ ಠಾಣೆ ಪೊಲೀಸರು ಶನಿವಾರ ಬಂಧಿಸಿದ್ದರು.

ಆರೋಪಿಗಳು ₹9.82 ಕೋಟಿ ಮೌಲ್ಯದ 14 ಕೆ.ಜಿ. 660 ಗ್ರಾಂ ಚಿನ್ನ ಪಡೆದು ವಂಚಿಸಿದ್ದಾರೆ ಎಂದು ವಾರಾಹಿ ವರ್ಲ್ಡ್ ಆಫ್ ಗೋಲ್ಡ್ ಚಿನ್ನದಂಗಡಿಯ ಮಾಲಕಿ ವನಿತಾ ಎಸ್. ಐತಾಳ್ ಅವರು ಪೊಲೀಸರಿಗೆ ದೂರು ನೀಡಿದ್ದರು. ಇದೇ ಪ್ರಕರಣದಲ್ಲಿ ನಟ ಧರ್ಮ ಅವರ ವಿರುದ್ಧವೂ ಎಫ್‌ಐಆರ್ ದಾಖಲಾಗಿದ್ದು, ಅವರಿಗೆ ಪೊಲೀಸರು ಶೋಧ ನಡೆಸುತ್ತಿದ್ದಾರೆ.

ವ್ಹೀಲಿ: 7 ಮಂದಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ವ್ಹೀಲಿ ನಡೆಸಿ ಸಂಚಾರ ನಿಯಮ ಉಲ್ಲಂಘಿಸುತ್ತಿರುವವರ ವಿರುದ್ಧ ಕಾರ್ಯಾಚರಣೆ ಮುಂದುವರೆಸಿರುವ ನಗರ ಸಂಚಾರ ವಿಭಾಗದ ಪೊಲೀಸರು, ಡಿ.28 ಹಾಗೂ 29ರಂದು ಏಳು ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ವ್ಹೀಲಿ ನಡೆಸುವ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸಾಮಾಜಿಕ ಜಾಲತಾಣದಲ್ಲಿ ಸಾರ್ವಜನಿಕರು ಆಗ್ರಹಿಸಿದ್ದರು. ಇದರ ಬೆನ್ನಲ್ಲೇ ಪಶ್ಚಿಮ ಸಂಚಾರ ವಿಭಾಗದ ಬ್ಯಾಟರಾಯನಪುರ, ಕೆಂಗೇರಿ, ಜ್ಞಾನಭಾರತಿ ಹಾಗೂ ಕಾಮಾಕ್ಷಿಪಾಳ್ಯ ಠಾಣೆಯ ಸಂಚಾರ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

46 ಪ್ರಕರಣ ದಾಖಲು: ಮದ್ಯ ಕುಡಿದು ವಾಹನಗಳನ್ನು ಚಾಲನೆ ಮಾಡುತ್ತಿದ್ದವರ ವಿರುದ್ಧ ವಿವಿಧ ಠಾಣೆಯ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ 46 ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಆಟೊಗೆ ಕಾರು ಡಿಕ್ಕಿ: ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ


ಎಡೆಹಳ್ಳಿಯಲ್ಲಿ ಆಟೊ–ಕಾರು ಅಪಘಾತದ ದೃಶ್ಯ

ದಾಬಸ್‌ಪೇಟೆ: ರಾಷ್ಟ್ರೀಯ ಹೆದ್ದಾರಿಯ ಎಡೆಹಳ್ಳಿಯಲ್ಲಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳುತ್ತಿದ್ದ ವೇಳೆ ಆಟೊಗೆ ಹಿಂಬದಿಯಿಂದ ಬಂದ ಕಾರು ಡಿಕ್ಕಿ ಹೊಡೆದ ಪರಿಣಾಮ ಆಟೊ ಪಲ್ಟಿ ಹೊಡೆದು ಸ್ಥಳದಲ್ಲೇ ಒಬ್ಬರು ಮೃತಪಟ್ಟಿದ್ದಾರೆ. ಒಂಬತ್ತು ಮಂದಿ ಗಾಯಗೊಂಡಿದ್ದಾರೆ.

ಈರಣ್ಣ (55) ಅವರು ಮೃತಪಟ್ಟಿದ್ದಾರೆ. ನೇತ್ರಾವತಿ (34), ನೂತನ್ (20), ಮಂಜುನಾಥ (29), ಮೃತ್ಯುಂಜಯ(31), ಹರೀಶ್ (48), ವೆಂಕಮ್ಮ (60), ಕೆಂಪರಾಜು (36), ಆಟೊ ಚಾಲಕ ನವೀನ (25) ಹಾಗೂ ಕಾರಿನ ಚಾಲಕ ಓಂಕಾರ ಗಾಯಗೊಂಡಿದ್ದಾರೆ. ಕಾರಿನಲ್ಲಿದ್ದ ನಾಲ್ವರು ಪಾರಾಗಿದ್ದಾರೆ.

ನೆಲಮಂಗಲ ಕಡೆಗೆ ಪ್ರಯಾಣಿಕರನ್ನು ತುಂಬಿಕೊಂಡು ಹೋಗುತ್ತಿದ್ದ ಆಟೊ ಸೋಂಪುರ ಕೈಗಾರಿಕಾ ಪ್ರದೇಶಕ್ಕೆ ಹೋಗುವ ಮುಖ್ಯರಸ್ತೆಯ ಯು–ಟರ್ನ್ ಬಳಿ ನಿಲ್ಲಿಸಿ ಮತ್ತೆ ಪ್ರಯಾಣಿಕರನ್ನು ಹತ್ತಿಸಿಕೊಂಡು ಹೊರಡುವಾಗ ಹಿಂದಿನಿಂದ ಅತಿ ವೇಗವಾಗಿ ಬಂದ ಕಾರು, ಡಿಕ್ಕಿ ಹೊಡೆದಿದೆ. ಆಟೊ ಮಗುಚಿ ಬಿದ್ದಿದೆ.

ಕಾರು ಆಟೊಗೆ ಡಿಕ್ಕಿ ಹೊಡೆದ ನಂತರ ರಸ್ತೆ ಎಡಬದಿಯಲ್ಲಿ ನಿಂತಿದ್ದ ಲಾರಿ ಹಿಂಭಾಗಕ್ಕೆ ಡಿಕ್ಕಿ ಹೊಡೆದಿದೆ.

ಸದ್ಯ ಗಾಯಾಳುಗಳನ್ನು ಚಿಕಿತ್ಸೆಗಾಗಿ ದಾಬಸ್‌ಪೇಟೆಯ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಸಿದ್ಧಾರ್ಥ ಮೆಡಿಕಲ್ ಕಾಲೇಜಿನ ಮೊದಲನೇ ವರ್ಷದ ವಿದ್ಯಾರ್ಥಿ ನೂತನ್ ತೀವ್ರವಾಗಿ ಗಾಯಗೊಂಡಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ಕಳುಹಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು. ನೆಲಮಂಗಲ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

₹3,000 ಕೋಟಿ ಒಪ್ಪಂದಕ್ಕೆ ಸಹಿ

ನವದೆಹಲಿ: ಆರು ಕಲ್ವರಿ- ದರ್ಜೆಯ ಜಲಾಂತರ್ಗಾಮಿ ನೌಕೆಗಳನ್ನು ಸ್ವದೇಶಿ ನಿರ್ಮಿತ ಏರ್ ಇಂಡಿಪೆಂಡೆಂಟ್ ಪ್ರೊಪಲ್ಷನ್ ಸಿಸ್ಟಮ್ (ಎಐಪಿ) ಮತ್ತು ಭಾರಿ ಕ್ಷಿಪಣಿಗಳಿಂದ ಸಜ್ಜುಗೊಳಿಸಲು ಸುಮಾರು ₹3,000 ಕೋಟಿ ಮೌಲ್ಯದ ಎರಡು ಒಪ್ಪಂದಗಳಿಗೆ ರಕ್ಷಣಾ ಸಚಿವಾಲಯವು ಸೋಮವಾರ ಸಹಿ ಹಾಕಿದೆ.

ಈ ಜಲಾಂತರ್ಗಾಮಿ ನೌಕೆಗಳಿಗೆ ಎಐಪಿ ನಿರ್ಮಾಣ ಮತ್ತು ಅದರ ಅಳವಡಿಕೆಗೆ ಸುಮಾರು ₹1,990 ಕೋಟಿ ಮೌಲ್ಯದ ಒಂದು ಒಪ್ಪಂದಕ್ಕೆ ಮುಂಬೈನ ಮಜಗಾಂವ್ ಡಾಕ್ ಶಿಪ್ ಬಿಲ್ಡರ್ಸ್ ಲಿಮಿಟೆಡ್‌ನೊಂದಿಗೆ ಸಹಿ ಹಾಕಲಾಯಿತು. ಡಿಆರ್‌ಡಿಒ ಸಂಸ್ಥೆ ಅಭಿವೃದ್ಧಿಪಡಿಸಿದ ಎಐಪಿಯು ಜಲಾಂತರ್ಗಾಮಿ ನೌಕೆಗಳನ್ನು ಎರಡು ವಾರಗಳಿಗಿಂತ ಹೆಚ್ಚು ಕಾಲ ನೀರಿನಡಿ ಉಳಿಯಲು ಇದು ಅನುವು ಮಾಡಿಕೊಡುತ್ತದೆ ಎಂದು ಮೂಲಗಳು ತಿಳಿಸಿವೆ.

ಹದಗೆಟ್ಟ ರಸ್ತೆ: ಹರಸಾಹಸದ ಸಂಚಾರ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಬೆಂಗಳೂರು ಉತ್ತರ ತಾಲ್ಲೂಕಿನ ಬೆತ್ತನಗೆರೆ ಗ್ರಾಮದಿಂದ ನೆಲಮಂಗಲದ ವಾಜರಹಳ್ಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯು ಹದಗೆಟ್ಟಿದ್ದು ಸಾರ್ವಜನಿಕರು ಸಂಚರಿಸಲು ಕಷ್ಟಪಡುವಂತಾಗಿದೆ.

ಹೆಸರಘಟ್ಟ, ಗೋಪಾಲಪುರ, ಹುಸ್ಕೂರು ಮಾರ್ಗವಾಗಿ ಶಾಲಾ ಮಕ್ಕಳು, ಕಾರ್ಮಿಕರು ನೆಲಮಂಗಲಕ್ಕೆ ತೆರಳಲು ಇದೇ ರಸ್ತೆಯನ್ನು ಅವಲಂಬಿಸಿದ್ದಾರೆ. ರಸ್ತೆ ತುಂಬಾ ದಪ್ಪ ಜಲ್ಲಿ ಕಲ್ಲುಗಳು ಆವರಿಸಿರುವುದರಿಂದ, ದ್ವಿಚಕ್ರ ವಾಹನದಲ್ಲಿ ಸಂಚರಿಸುವವರು ಹರಸಹಾಸ ಪಡಬೇಕಾಗಿದೆ.

ಈ ರಸ್ತೆಗೆ ಹೊಂದಿಕೊಂಡಂತೆ ಹಲವಾರು ಬಡಾವಣೆಗಳಿವೆ. ಇಲ್ಲಿ ಹೊಸದಾಗಿ ಮನೆಗಳು ನಿರ್ಮಾಣ ಆಗುತ್ತಿವೆ. ಮನೆಗಳ ನಿರ್ಮಾಣಕ್ಕೆ ಬೇಕಾದ ಸಾಮಗ್ರಿಗಳನ್ನು ವಾಹನಗಳಲ್ಲಿ ಸಾಗಿಸಲು ಕೂಡ ಪರದಾಡುವಂತಹ ಸ್ಥಿತಿ ನಿರ್ಮಾಣವಾಗಿದೆ. 'ಶಾಲಾ ಕಾಲೇಜಿಗಾಗಿ ನೆಲಮಂಗಲಕ್ಕೆ ಸೈಕಲ್‌ನಲ್ಲಿ ತೆರಳುವ ವಿದ್ಯಾರ್ಥಿಗಳು, ಈ ರಸ್ತೆಯಲ್ಲಿ ಬಿದ್ದು ಪೆಟ್ಟು ಮಾಡಿಕೊಂಡಿದ್ದಾರೆ' ಎಂದು ಸ್ಥಳೀಯರು ದೂರಿದರು.

ನೆಲಮಂಗಲ ಮತ್ತು ಬೆಂಗಳೂರು ಉತ್ತರ ತಾಲ್ಲೂಕಿನ ಗಡಿ ಭಾಗದಲ್ಲಿರುವ ರಸ್ತೆಯು (ಬೆತ್ತನಗೆರೆ ಮತ್ತು ವಾಜರಹಳ್ಳಿ ಮಧ್ಯೆ) ಅನೇಕ ವರ್ಷಗಳಿಂದ ಅಭಿವೃದ್ಧಿ ಕಂಡಿಲ್ಲ. ಈಗಂತೂ ರಸ್ತೆಯು ಸಂಪೂರ್ಣ ಹಾಳಾಗಿದೆ. ಸಂಬಂಧಪಟ್ಟವರು ಕೂಡಲೇ ರಸ್ತೆಯನ್ನು ಅಭಿವೃದ್ಧಿಪಡಿಸಬೇಕೆಂದು ಸ್ಥಳೀಯ ನಿವಾಸಿ ಮಹೇಶ್ ಒತ್ತಾಯಿಸಿದ್ದಾರೆ.

ಮುಖ್ಯಾಂಶಗಳು

- ಸೈಕಲ್‌ನಿಂದ ಬೀಳುವ ವಿದ್ಯಾರ್ಥಿಗಳು
- ಬೈಕ್ ಸಂಚಾರವೂ ಕಷ್ಟ


ಬೆತ್ತನಗೆರೆ– ವಾಜರಹಳ್ಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯ ದುಸ್ಥಿತಿ

ಮೀಟರ್ ಬಡ್ಡಿ ದಂಧೆ: ಮಹಿಳೆ ವಿರುದ್ಧ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ


ಶಾರದಮ್ಮ

ಕೆ.ಆರ್.ಪುರ: ₹4.23 ಲಕ್ಷ ಸಾಲಕ್ಕೆ ₹42 ಲಕ್ಷಕ್ಕೂ ಹೆಚ್ಚು ಹಣ ವಸೂಲಿ ಮಾಡಿ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಿ ಆವಲಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಲಾಗಿದ್ದು, ಮಹಿಳೆ ವಿರುದ್ಧ ಪ್ರಕರಣ ದಾಖಲಾಗಿದೆ. ಮೀಟರ್ ಬಡ್ಡಿ ದಂಧೆ ವಿರುದ್ಧ ಪವಿತ್ರಾ ಅವರು ದೂರು ನೀಡಿದ್ದಾರೆ.

ಆವಲಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಕೋನದಾಸಪುರದ ನಿವಾಸಿ ಪವಿತ್ರಾ ಅವರು ಅದೇ ಗ್ರಾಮದ ಶಾರದಮ್ಮ ಅವರ ಬಳಿ ಹಂತ ಹಂತವಾಗಿ ಸುಮಾರು ₹ 4.23 ಲಕ್ಷ ಸಾಲ ಪಡೆದಿದ್ದರು. ಆರಂಭದಲ್ಲಿ ತಿಂಗಳಿಗೆ ಶೇ 10 ಬಡ್ಡಿ ಪಡೆಯುತ್ತಿದ್ದ ಶಾರದಮ್ಮ ಅವರು ಒಂದು ವರ್ಷದ ನಂತರ ವಾರಕ್ಕೆ ಶೇ 15 ಬಡ್ಡಿಯನ್ನು ನೀಡುವಂತೆ ಕಿರುಕುಳ ನೀಡಿ ₹ 42ಲಕ್ಷಕ್ಕೂ ಹೆಚ್ಚು ಹಣವನ್ನು ವಸೂಲಿ ಮಾಡಿದ್ದಾರೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಪತಿಗೆ ತಿಳಿಯದೇ ಪಡೆದಿದ್ದ ಸಾಲಕ್ಕೆ ಬಡ್ಡಿ ಕಟ್ಟಲು ತಮ್ಮ ಸಂಬಂಧಿಕರ ಬಳಿ ₹ 20 ಲಕ್ಷಕ್ಕೂ ಹೆಚ್ಚು ಸಾಲ ಮಾಡಲಾಗಿದೆ. ಬಡ್ಡಿಗಾಗಿ ಶಾರದಮ್ಮ ನೀಡುತ್ತಿದ್ದ ಕಿರುಕುಳ ಹಿಂಸೆ ತಾಳಲಾರದೆ ಬೇಸತ್ತು ಪವಿತ್ರಾ ಆತ್ಮಹತ್ಯೆಗೂ ಯತ್ನಿಸಿದ್ದಾರೆ. ಈ ಸಂದರ್ಭದಲ್ಲಿ ಪತಿಗೆ ವಿಷಯ ತಿಳಿದು ಶಾರದಮ್ಮ ಬಳಿ ವಿಚಾರಿಸಿದಾಗ ಅವಾಚ್ಯ ಶಬ್ದಗಳಿಂದ ನಿಂದಿಸಿ ಬೆದರಿಕೆ ಹಾಕಿದ್ದಾರೆ' ಎಂದು ದೂರಿನಲ್ಲಿ ಹೇಳಲಾಗಿದೆ.

'₹18 ಲಕ್ಷವನ್ನು ನೀಡಿರುವುದಕ್ಕೆ ನಮ್ಮ ಬಳಿ ಸಾಕ್ಷಿ ಇದೆ. ಉಳಿದ ಹಣವನ್ನು ನಗದು ಮೂಲಕ ನೀಡಲಾಗಿದೆ. ಪ್ರಕರಣ ದಾಖಲಾಗಿ ಮೂರು ದಿನ ಕಳೆದರೂ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ದೂರುದಾರರು ಆರೋಪಿಸಿದ್ದಾರೆ.

ಮನಮೋಹನಗೆ ಭಾರತ ರತ್ನ ನೀಡಿ ನಿರ್ಣಯ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಇತ್ತೀಚೆಗೆ ನಿಧನರಾದ ಮಾಜಿ ಪ್ರಧಾನಿ ಡಾ. ಮನಮೋಹನ ಸಿಂಗ್ ಅವರಿಗೆ ದೇಶದ ಅತ್ಯುನ್ನತ ಗೌರವ 'ಭಾರತ ರತ್ನ'ವನ್ನು ಪ್ರದಾನ ಮಾಡುವಂತೆ ತೆಲಂಗಾಣ ವಿಧಾನಸಭೆ ಸೋಮವಾರ ಸರ್ವಾನುಮತದಿಂದ ನಿರ್ಣಯ ಅಂಗೀಕರಿಸಿತು.

ಸಿಂಗ್ ಅವರಿಗೆ ಗೌರವ ಸಲ್ಲಿಸಲು ಸೋಮವಾರ ವಿಶೇಷ ಅಧಿವೇಶನ ಆಯೋಜಿಸಲಾಗಿತ್ತು. ಹೈದರಾಬಾದ್‌ನಲ್ಲಿ ಸಿಂಗ್ ಅವರ ಪ್ರತಿಮೆ ಸ್ಥಾಪಿಸುವ ನಿರ್ಣಯವನ್ನೂ ಇಲ್ಲಿ ತೆಗೆದುಕೊಳ್ಳಲಾಯಿತು. ಈ ವೇಳೆ ತೆಲಂಗಾಣ ಮುಖ್ಯಮಂತ್ರಿ ಎ. ರೇವಂತ ರೆಡ್ಡಿ ಅವರು, 2014ರಲ್ಲಿ ತೆಲಂಗಾಣ ರಾಜ್ಯ ರಚನೆಯಲ್ಲಿ ಸಿಂಗ್ ಅವರು ವಹಿಸಿದ್ದ ಪಾತ್ರಕ್ಕೆ ಕೃತಜ್ಞತೆ ಸಲ್ಲಿಸಿದರು. ತೆಲಂಗಾಣಕ್ಕೆ ರಾಜ್ಯದ ಸ್ಥಾನಮಾನ ಒದಗಿಸಿದ ಸಿಂಗ್ ಅವರನ್ನು ರಾಜ್ಯದ ಜನರು ಸದಾ ಸ್ಮರಿಸುತ್ತಾರೆ ಎಂದರು.


ಚಿತ್ರಾವಳಿ



ಕೋಡಿಪಾಳ್ಯದ ಶ್ರೀವಿಶ್ವ ವೆಂಕಟೇಶ್ವರ ಶಿಕ್ಷಣ ಸಮೂಹ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಸಂಭ್ರಮ ಕರುನಾಡು ಸಿರಿ 2024ರ ಕಾರ್ಯಕ್ರಮದಲ್ಲಿ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಹೈಕೋರ್ಟ್ ವಕೀಲ ಬಿ.ಆರ್. ವಿಶ್ವನಾಥ್ ಲ್ಯಾಪ್‌ಟಾಪ್ ವಿತರಿಸಿದರು. ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಕಟ್ಟಾ ಬಾಲಾಜಿ ಬಾಬು, ಮುಖಂಡರಾದ ಕೋಡಿಪಾಳ್ಯ ರಾಮಚಂದ್ರ, ಮಹೇಶ್, ಪ್ರಾಚಾರ್ಯರಾದ ರಾಜೇಶ್ವರಿ ಮತ್ತಿತರರು ಉಪಸ್ಥಿತರಿದ್ದರು



ನಗರದ ಹನುಮಂತನಗರದ ಸ್ವಾಮಿ ವಿವೇಕಾನಂದ ವಿದ್ಯಾಶಾಲಾ ಸಭಾಂಗಣದಲ್ಲಿ ಸಂಗೀತ ಕೃಪಾ ಕುಟೀರ ಸಂಸ್ಥೆ ಆಯೋಜಿಸಿದ್ದ 40ನೇ ಮಾಣಿಕ್ಯ ಸಂಭ್ರಮ ಕಾರ್ಯಕ್ರಮದಲ್ಲಿ ವಿದುಷಿ ಡಾ. ಮೀನಾಕ್ಷಿ ರವಿ ಹಾಗೂ ತಬಲಾವಾದಕ ಪಂಡಿತ್ ಸತೀಶ್ ಹಂಪಿಹೊಳಿ ಅವರಿಗೆ 'ಸಂಗೀತ ಕಲಾರವಿಂದ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಂಸ್ಥೆಯ ಕಾರ್ಯದರ್ಶಿ ಗುಂಡಾಶಾಸ್ತ್ರಿ, ವಕೀಲ ಸುಬ್ರಹ್ಮಣ್ಯ ಜೋಯಿಸ್, ಹಿಂದೂಸ್ಥಾನಿ ಗಾಯಕ ಮುದ್ದುಮೋಹನ್, ಸಂಸ್ಥೆಯ ಸದಸ್ಯ ರಮಾಕಾಂತ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು



ಮಹದೇವಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ನೂತನವಾಗಿ ನಿರ್ಮಿಸಿರುವ ಗ್ರಂಥಾಲಯವನ್ನು ಬೆಂಗಳೂರು ಸಂಚಾರ ಪೂರ್ವ ವಿಭಾಗದ ಡಿಸಿಪಿ ಕುಲದೀಪ್ ಕುಮಾರ್ ಜೈನ್ ಉದ್ಘಾಟಿಸಿದರು. ವೈಟ್‌ಫೀಲ್ಡ್ ಉಪ ವಿಭಾಗದ ಎಸಿಪಿ ವಿ.ಎಲ್.ರಮೇಶ್, ಠಾಣೆ ಇನ್‌ಸ್ಪೆಕ್ಟರ್ ಅನಿತಾಕುಮಾರಿ ಹಾಗೂ ಸಿಬ್ಬಂದಿ ವರ್ಗ ಹಾಜರಿದ್ದರು

'ಮೂಲ ಸೌಲಭ್ಯ ಒದಗಿಸಲು ಬಿಡಿಎಗೆ ಹಲವು ಬಾರಿ ಅರ್ಜಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ'

ಕತ್ತಲಲ್ಲಿ ಕೆಂಪೇಗೌಡ ಬಡಾವಣೆ: ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿರ್ಮಿಸಿರುವ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ (ಎನ್‌ಕೆಪಿಎಲ್) ಸರಿಯಾದ ವಿದ್ಯುತ್ ಸಂಪರ್ಕ ಇಲ್ಲದೇ ನಿವಾಸಿಗಳು ತೊಂದರೆ ಅನುಭವಿಸುವಂತಾಗಿದೆ.

ಬಡಾವಣೆಯಲ್ಲಿ ಒಂಬತ್ತು ಬ್ಲಾಕ್‌ಗಳಿದ್ದು, ಸುಮಾರು 29 ಸಾವಿರ ನಿವೇಶನಗಳಿವೆ. ಆದರೆ, ಸಮರ್ಪಕವಾದ ವಿದ್ಯುತ್, ನೀರು, ರಸ್ತೆ ವ್ಯವಸ್ಥೆ ಇಲ್ಲದ ಕಾರಣ ಸುಮಾರು 70 ಕುಟುಂಬಗಳಷ್ಟೇ ಮನೆ ನಿರ್ಮಿಸಿಕೊಂಡಿವೆ.

ಬಡಾವಣೆಯಲ್ಲಿ ಐದು ವಿದ್ಯುತ್ ಉಪಕೇಂದ್ರಗಳನ್ನು ನಿರ್ಮಿಸಲು ಯೋಜಿಸಲಾಗಿತ್ತು. ಒಂದು ಉಪ ಕೇಂದ್ರವೂ ಆರಂಭವಾಗಿಲ್ಲ. ಕೊಮ್ಮಘಟ್ಟ ವಿದ್ಯುತ್ ಉಪಕೇಂದ್ರ ನಿರ್ಮಾಣಕ್ಕೆ ಅನುಮತಿ ಸಿಕ್ಕಿತ್ತು. ಈ ಉಪಕೇಂದ್ರ ನಿರ್ಮಾಣ ಕಾಮಗಾರಿ ಎರಡೂವರೆ ವರ್ಷಗಳಿಂದ ನಡೆಯುತ್ತಲೇ ಇದೆ. ಆದರೆ, ವಿದ್ಯುತ್ ಪೂರೈಕೆ ಇನ್ನೂ ಆರಂಭವಾಗಿಲ್ಲ. ಇದರಿಂದಾಗಿ ವಿದ್ಯುತ್ ಸರಬರಾಜು ಸಮಸ್ಯೆ ಉಂಟಾಗಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

'ಮನೆ ನಿರ್ಮಾಣ ಪ್ರಾರಂಭಿಸಿರುವವರು ಹಾಗೂ ನಿವಾಸಿಗಳು ಸ್ವಂತ ವೆಚ್ಚದಲ್ಲಿ ಅಕ್ಕಪಕ್ಕದ ಹಳ್ಳಿಗಳು, ಖಾಸಗಿ ಬಡಾವಣೆಗಳ ವಿದ್ಯುತ್ ಕಂಬಗಳ ಮೂಲಕ ವಿದ್ಯುತ್ ಸಂಪರ್ಕವನ್ನು ಪಡೆಯಬೇಕಾಗಿದೆ. ಇದಕ್ಕಾಗಿ ಹೆಚ್ಚುವರಿ ಹಣ ಪಾವತಿಸಬೇಕಾಗಿದೆ' ಎಂದು 'ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ'ಯ ಜಂಟಿ ಕಾರ್ಯದರ್ಶಿ ಸೂರ್ಯಕಿರಣ್ ಹೇಳಿದ್ದಾರೆ.

'ಬಡಾವಣೆಗೆ ವಿದ್ಯುತ್ ಸೇರಿದಂತೆ ಮೂಲ ಸೌಲಭ್ಯ ಒದಗಿಸುವಂತೆ ಬಿಡಿಎಗೆ ಹಲವು ಬಾರಿ ಅರ್ಜಿ ನೀಡಿ, ತಿಂಗಳುಗಟ್ಟಲೆ ಅಲೆದರೂ ಪ್ರಯೋಜನವಾಗಿಲ್ಲ. ಬಡಾವಣೆಯಲ್ಲಿ ಎಲ್ಲ ರಸ್ತೆಗಳಲ್ಲಿ ಬೀದಿ ದೀಪಗಳು ಇಲ್ಲ. ನಿವಾಸಿಗಳು ಕತ್ತಲಲ್ಲೇ ಓಡಾಡುವಂತಾಗಿದೆ. ಕಟ್ಟಡ ನಿರ್ಮಾಣ ಸಾಮಗ್ರಿಗಳ ಕಳ್ಳತನವಾಗುತ್ತಿವೆ. ಅಕ್ರಮ ಚಟುವಟಿಕೆಗಳನ್ನು ತಪ್ಪಿಸಲು ಭದ್ರತಾ ಸಿಬ್ಬಂದಿ ನಿಯೋಜಿಸಲು ಸೂಕ್ತ ವ್ಯವಸ್ಥೆ ಮಾಡಬೇಕಿದೆ' ಎಂದು ಮನವಿ ಮಾಡಿದ್ದಾರೆ.

'ಮನೆ ನಿರ್ಮಾಣ ಪ್ರಾರಂಭಿಸಿರುವ ನಿವೇಶನದಾರರು, ಬಿಡಿಎ ಮತ್ತು ಬೆಸ್ಕಾಂ ನಡುವಿನ ಸಮನ್ವಯ ಕೊರತೆಯಿಂದಾಗಿ ವಿದ್ಯುತ್ ಸಂಪರ್ಕ ಪಡೆಯುವ ಪ್ರಕ್ರಿಯೆಯಲ್ಲಿ ಹಲವು ತೊಂದರೆಗಳನ್ನು ಎದುರಿಸಬೇಕಾಗುತ್ತಿದೆ' ಎಂದು ಹೇಳಿದ್ದಾರೆ.

ಬಡಾವಣೆಯಲ್ಲಿ ವಿದ್ಯುತ್ ಜಾಲ ನಿರ್ಮಾಣ ಆಗದಿರುವುದರಿಂದ ಬೀದಿ ದೀಪಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿಲ್ಲ. ಮನೆಗಳ ನಿರ್ಮಾಣದ ನಂತರ ದೀಪದ ವ್ಯವಸ್ಥೆ ಮಾಡಲಾಗುವುದು ಎಂದು ಗುತ್ತಿಗೆದಾರರು ಹಾಗೂ ಅಧಿಕಾರಿಗಳು ಸಮಜಾಯಿಷಿ ನೀಡುತ್ತಾರೆ ಎಂದು ನಿವಾಸಿಗಳು ವಿವರಿಸುತ್ತಾರೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆಗಾಗಿ ಬಿಡಿಎ ಅಧಿಕಾರಿಯನ್ನು ಸಂಪರ್ಕಿಸಿದಾಗ, ಅವರು ಕರೆ ಸ್ವೀಕರಿಸಲಿಲ್ಲ.

'ಮೇನ್ ಲೈನ್ ನಿರ್ಮಿಸಿಲ್ಲ'

'ಪ್ರಾಧಿಕಾರವು ಬಡಾವಣೆಯ ಒಂಬತ್ತು ಬ್ಲಾಕ್‌ಗಳಿಗೆ ಬಹು ಮುಖ್ಯವಾದ ವಿದ್ಯುತ್ ಜಾಲವನ್ನೇ (ಮೇನ್ ಲೈನ್) ನಿರ್ಮಿಸಿಲ್ಲ. ಯೋಜಿತ ಐದು ಬ್ಲಾಕ್‌ಗಳಲ್ಲಿ ವಿದ್ಯುತ್ ಉಪ ಕೇಂದ್ರದ ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿದೆ. ಹೀಗಾಗಿ ಬಡಾವಣೆ ಜನರು ಕತ್ತಲಲ್ಲೇ ಇರುವಂತಾಗಿದೆ' ಎಂದು ಸೂರ್ಯಕಿರಣ್ ಬೇಸರ ವ್ಯಕ್ತಪಡಿಸಿದ್ದಾರೆ.

ವಿದ್ಯುತ್ ಪೂರೈಸಲು ಬೆಸ್ಕಾಂಗೆ ಬಿಡಿಎ ₹59 ಕೋಟಿ ಪಾವತಿಸಿದರೂ, ವಿದ್ಯುತ್ ಜಾಲವಿಲ್ಲದ ಕಾರಣದಿಂದ ವಿದ್ಯುತ್ ಪೂರೈಕೆ ಮಾಡಲು ಸಾಧ್ಯವಾಗುತ್ತಿಲ್ಲ. ಬಡಾವಣೆಯಲ್ಲಿ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದು ಮನೆ ನಿರ್ಮಿಸಿಕೊಂಡಿರುವವರೂ, ರಸ್ತೆಗಳಲ್ಲಿ ಬೀದಿ ದೀಪಗಳಿಲ್ಲದೆ ಕತ್ತಲಲ್ಲೇ ಓಡಾಡುವಂತಾಗಿದೆ ಎಂದು ನಾಡಪ್ರಭು ಕೆಂಪೇಗೌಡ ಲೇಔಟ್ ಮುಕ್ತ ವೇದಿಕೆ ಕಾರ್ಯದರ್ಶಿ ಎಂ. ಅಶೋಕ್ ತಿಳಿಸಿದ್ದಾರೆ.

- ಆರಂಭವಾಗದ ವಿದ್ಯುತ್ ಉಪಕೇಂದ್ರಗಳು
- ಮುಖ್ಯ ವಿದ್ಯುತ್ ಜಾಲವನ್ನೇ ನಿರ್ಮಿಸಿಲ್ಲ
- ಹಳ್ಳಿಗಳು, ಖಾಸಗಿ ಬಡಾವಣೆಗಳ ವಿದ್ಯುತ್ ಕಂಬಗಳ ಆಶ್ರಯ





ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಅಳವಡಿಸಿರುವ ವಿದ್ಯುತ್ ಸಂಪರ್ಕ ಕಲ್ಪಿಸದ ಟ್ರಾನ್ಸ್‌ಫಾರ್ಮರ್ ಮತ್ತು ಬೀದಿ ದೀಪಗಳ ಕಂಬಗಳು

ಶಶಾಂಕ್‌ಗೆ ಸಾಮಗಾನ ಮಾತಂಗ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಸಾಮಗಾನ ಸಭಾ ನೀಡುವ ಸಾಮಗಾನ ಮಾತಂಗ ರಾಷ್ಟ್ರೀಯ ಪ್ರಶಸ್ತಿಗೆ ವಿದ್ವಾನ್ ಶಶಾಂಕ್ ಸುಬ್ರಮಣ್ಯಮ್ ಅವರನ್ನು ಆಯ್ಕೆ ಮಾಡಲಾಗಿದೆ.

ಭಾರತೀಯ ಸಾಮಗಾನ ಸಭಾದ 16ನೇ ವಾರ್ಷಿಕೋತ್ಸವ 'ಭಾರತ ಗಂಧರ್ವ ಯಾತ್ರೆ' ಕಾರ್ಯಕ್ರಮವನ್ನು ಚೌಡಯ್ಯ ಸ್ಮಾರಕ ಭವನದಲ್ಲಿ ಫೆ. 19ರಿಂದ 23ರ ವರೆಗೆ ಆಯೋಜಿಸಲಾಗಿದೆ. ಫೆ.23ರಂದು ಸಂಜೆ 5ಕ್ಕೆ ಪ್ರಶಸ್ತಿ ಪ್ರದಾನ ನಡೆಯಲಿದೆ.



'ಭಾರತ ಗಂಧರ್ವ ಯಾತ್ರೆ' ಸಂಗೀತ ಉತ್ಸವದಲ್ಲಿ ಗಾಯಕಿಯರಾದ ರಂಜನಿ-ಗಾಯತ್ರಿ, ಸಂದೀಪ್ ನಾರಾಯಣ್, ತ್ರಿಚುರ್ ಸಹೋದರರು, ಸಾಯಿ ವಿಘ್ನೇಶ್, ಆರ್ಯ ಅಂಬೇಕರ್, ಸೂರ್ಯಗಾಯತ್ರಿ, ಲಕ್ಷ್ಮಿ ನಾಗರಾಜ್, ಇಂದು ನಾಗರಾಜ್, ಸುಮಂತ್ ಮಂಜುನಾಥ್ ಷಡಜ್ ಗೋಡ್ಖಿಂಡಿ, ಗಂಗಾ ಶಶಿಧರನ್ ಮತ್ತು ಆರ್ಯ ಬಣಿಕ್ ಭಾಗವಹಿಸಲಿದ್ದಾರೆ ಎಂದು ಭಾರತೀಯ ಸಾಮಗಾನ ಸಭಾ ಟ್ರಸ್ಟಿ ಮತ್ತು ಕಾರ್ಯದರ್ಶಿ ಪ್ರಶಾಂತ್ ಕುಮಾರ್ ಎಚ್.ವಿ. ತಿಳಿಸಿದ್ದಾರೆ.

ಒಡೆಯರ್ ಎಕ್ಸ್‌ಪ್ರೆಸ್ ಎಂಜಿನ್‌ನಲ್ಲಿ ದೋಷ: 2 ತಾಸು ಸಂಚಾರ ವಿಳಂಬ

ಪ್ರಜಾವಾಣಿ ವಾರ್ತೆ

ಬಿಡದಿ: ಬೆಂಗಳೂರು–ಮೈಸೂರು ಮಧ್ಯೆ ಸಂಚರಿಸುವ ಒಡೆಯರ್ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್ ರೈಲಿನ ಎಂಜಿನ್‌ನಲ್ಲಿ ಸೋಮವಾರ ದೋಷ ಕಾಣಿಸಿಕೊಂಡಿದ್ದರಿಂದ ಹೆಜ್ಜಾಲ-ಕೆಂಗೇರಿ ರೈಲ್ವೆ ನಿಲ್ದಾಣದ ಮಧ್ಯೆ ಕೆಲಕಾಲ ನಿಂತಿತ್ತು.

ಇದರಿಂದಾಗಿ, ರೈಲು ಬೆಂಗಳೂರು ತಲುಪುವುದು ಎರಡು ತಾಸು ವಿಳಂಬವಾಯಿತು. ಇದೇ ಮಾರ್ಗದಲ್ಲಿ ಬೆಂಗಳೂರು ಕಡೆಗೆ ಬಂದ ವಂದೇ ಭಾರತ್ ರೈಲಿಗೂ ವಿಳಂಬದ ಬಿಸಿ ತಟ್ಟಿತು. ವಂದೇ ಭಾರತ್ ರೈಲು 50 ನಿಮಿಷ ತಡವಾಗಿ ಸಂಚರಿಸಿತು.

ಮೈಸೂರಿನಿಂದ ಬೆಂಗಳೂರಿಗೆ ಹೊರಟಿದ್ದ ಒಡೆಯರ್ ಎಕ್ಸ್‌ಪ್ರೆಸ್ ಎಂಜಿನ್‌ನಲ್ಲಿ ದೋಷ ಕಾಣಿಸಿಕೊಂಡಿದ್ದರಿಂದ ಮಧ್ಯಾಹ್ನ 1ರ ಸುಮಾರು ಹೆಜ್ಜಾಲ–ಕೆಂಗೇರಿ ಮಧ್ಯೆ ಕೆಟ್ಟು ನಿಂತಿತು.

ಎಂಜಿನ್ ಪರಿಶೀಲಿಸಿದ ಸಿಬ್ಬಂದಿ ಬೆಂಗಳೂರಿನ ನಿಯಂತ್ರಣ ಕೊಠಡಿಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಬಂದು ಎಂಜಿನ್ ಪರಿಶೀಲಿಸಿದ ಸಿಬ್ಬಂದಿ, ಎಂಜಿನ್ ವೈಫಲ್ಯವಾಗಿರುವುದನ್ನು ಪತ್ತೆ ಹಚ್ಚಿದರು ಎಂದು ರೈಲ್ವೆ ಅಧಿಕಾರಿಗಳು 'ಪ್ರಜಾವಾಣಿ'ಗೆ ತಿಳಿಸಿದರು.

ಬಳಿಕ, ಬೆಂಗಳೂರಿನಿಂದ ಬೇರೊಂದು ಎಂಜಿನ್ ಕಳಿಸಿದರು. ಅದರ ಮೂಲಕ ಒಡೆಯರ್ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್ ಬೆಂಗಳೂರು ತಲುಪಿತು.

ಇದರಿಂದಾಗಿ ರೈಲು ಎರಡು ತಾಸು ತಡವಾಗಿ ಸಂಚರಿಸಿತು. ಒಡೆಯರ್ ಎಕ್ಸ್‌ಪ್ರೆಸ್ ಮಾರ್ಗ ಮಧ್ಯೆ ಸಿಲುಕಿದ್ದರಿಂದ ಮೈಸೂರಿನಿಂದ ಬೆಂಗಳೂರಿಗೆ ಬಂದ ವಂದೇ ಭಾರತ್ ರೈಲು ಬಿಡದಿ ರೈಲು ನಿಲ್ದಾಣದಲ್ಲೇ 50 ನಿಮಿಷ ಕಾಯಬೇಕಾಯಿತು. ಮಧ್ಯಾಹ್ನವಾಗಿದ್ದರಿಂದ ರೈಲು ಸಂಚಾರ ವಿರಳವಾಗಿತ್ತು.

ವಿಮಾನದಲ್ಲಿ ಎ.ಸಿ ಅವ್ಯವಸ್ಥೆ: ಮೋಹನ್‌ದಾಸ್ ಪೈ ಟೀಕೆ

ಬೆಂಗಳೂರು (ಪಿಟಿಐ): 'ಇಂಡಿಗೊ ಏರ್‌ಲೈನ್ಸ್‌ನ ವಿಮಾನದಲ್ಲಿ ಇತ್ತೀಚೆಗೆ ಪ್ರಯಾಣ ಮಾಡುವಾಗ ಅಸಮರ್ಪಕ ಹವಾನಿಯಂತ್ರಣ ವ್ಯವಸ್ಥೆ (ಎಸಿ) ಇತ್ತು' ಎಂದು ಇನ್ಫೊಸಿಸ್ ಮಾಜಿ ಸಿಎಫ್‌ಒ ಟಿ.ವಿ. ಮೋಹನ್‌ದಾಸ್ ಪೈ ಟೀಕಿಸಿದ್ದಾರೆ.

ಬೆಂಗಳೂರಿನಿಂದ ಪ್ರಯಾಣಿಸಿದ 6ಇ 7407 ವಿಮಾನದಲ್ಲಿ ಎಸಿ ವ್ಯವಸ್ಥೆ ಸರಿ ಇಲ್ಲದೆ ತಮಗಾದ ಕಹಿ ಅನುಭವವನ್ನು ಅವರು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ.



ಮೋಹನ್‌ದಾಸ್

'ಇಂಡಿಗೊ ತನ್ನ ಪ್ರಯಾಣಿಕರನ್ನು ಕೆಟ್ಟದಾಗಿ ನಡೆಸಿಕೊಳ್ಳುತ್ತದೆ. 6ಇ 7407 ವಿಮಾನವು ಟಾರ್ಮ್ಯಾಕ್‌ನಲ್ಲಿ (ವಿಮಾನ ನಿಲ್ಲುವ ಜಾಗ) ಇದ್ದಷ್ಟು ಹೊತ್ತು ಎಸಿ ಇರಲಿಲ್ಲ. ಪ್ರಯಾಣಿಕರು ಪ್ರತಿಭಟನೆ ಮಾಡಿದ ನಂತರವೇ ಟಾರ್ಮ್ಯಾಕ್‌ನ ಸಿಬ್ಬಂದಿ ಜನರೇಟರ್ ಬಳಸಿ ಎಸಿ ಚಾಲನೆಗೊಳಿಸಿದರು' ಎಂದು ಅವರು ಪೋಸ್ಟ್ ಮಾಡಿದ್ದಾರೆ.

ಮೋಹನ್‌ದಾಸ್ ಅವರ ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ಇಂಡಿಗೊ ಏರ್‌ಲೈನ್ಸ್, 'ಸರ್, ನಿಮ್ಮ ತಾಳ್ಮೆ ಮತ್ತು ಸಹಕಾರವನ್ನು ನಾವು ಮೆಚ್ಚುತ್ತೇವೆ. ನಿಮಗೆ ಆಗಿರುವ ಕಹಿ ಅನುಭವದ ಬಗ್ಗೆ ಪರಿಶೀಲಿಸಲಾಗುವುದು. ಈ ಸಮಸ್ಯೆಯ ಬಗ್ಗೆ ಸಂಬಂಧಿಸಿದ ತಂಡದ ಜತೆ ಚರ್ಚಿಸುವುದಾಗಿ ಭರವಸೆ ನೀಡುತ್ತೇವೆ. ಗ್ರಾಹಕರಿಗೆ ಒದಗಿಸುವ ಸೌಲಭ್ಯ ನಮಗೆ ಅತ್ಯಂತ ಮಹತ್ವದ್ದಾಗಿದೆ' ಎಂದು ಹೇಳಿದೆ.

'ಫ್ರಾಂಕೋ-ಇಟಲಿಯನ್ ಮಾದರಿಯ ಎಟಿಆರ್ ವಿಮಾನ ಇದಾಗಿದೆ. ವಿಮಾನವು ಹಾರಾಟದಲ್ಲಿರುವಾಗ ಮಾತ್ರ ಹವಾನಿಯಂತ್ರಣ ವ್ಯವಸ್ಥೆಯು ಕಾರ್ಯನಿರ್ವಹಿಸುತ್ತದೆ. ವಿಮಾನವು ನೆಲದ ಮೇಲಿರುವಾಗ ಎಸಿ ಕಾರ್ಯನಿರ್ವಹಿಸುವುದಿಲ್ಲ' ಎಂದು ಇಂಡಿಗೊ ಏರ್‌ಲೈನ್ಸ್ ಮೂಲಗಳು ತಿಳಿಸಿವೆ.

ಪುಷ್ಪಗಳಲ್ಲಿ ಅರಳಲಿದ್ದಾರೆ 'ಮಹರ್ಷಿ ವಾಲ್ಮೀಕಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣರಾಜ್ಯೋತ್ಸವದ ಅಂಗವಾಗಿ ತೋಟಗಾರಿಕೆ ಇಲಾಖೆ ಆಯೋಜಿಸುವ ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನದಲ್ಲಿ ಈ ಬಾರಿ 'ಮಹರ್ಷಿ ವಾಲ್ಮೀಕಿ' ಅವರ ವಿಷಯಾಧಾರಿತ ಹೂವಿನ ಪ್ರತಿಕೃತಿ ಕಣ್ಮನ ಸೆಳೆಯಲಿದೆ.

'ಗಣರಾಜ್ಯೋತ್ಸವದ ಅಂಗವಾಗಿ 2025ರ ಜನವರಿ 16 ರಿಂದ 26ರವರೆಗೆ ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನ ನಡೆಯಲಿದೆ. ರಾಮಾಯಣ ಮಹಾಕಾವ್ಯ ರಚಿಸಿದ ಮಹರ್ಷಿ ವಾಲ್ಮೀಕಿ ಅವರ ಜೀವನವನ್ನು ಪುಷ್ಪಗಳಲ್ಲಿ ಕಟ್ಟಿಕೊಡಲು ತೋಟಗಾರಿಕೆ ಇಲಾಖೆ ಸಿದ್ಧತೆ ನಡೆಸಿದೆ. ಪುಷ್ಪ ಪ್ರದರ್ಶನ ಹೇಗಿರಬೇಕು ಎಂಬುದರ ಕುರಿತು ಈಗಾಗಲೇ ವಿಷಯ ತಜ್ಞರು, ಪರಿಣಿತರೊಂದಿಗೆ ಚರ್ಚೆ ನಡೆಸುತ್ತಿದ್ದೇವೆ' ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

'ರಾಮಾಯಣ ಮಹಾಕಾವ್ಯದ ಪ್ರಮುಖ ಘಟನೆಗಳನ್ನು ಫಲಪುಷ್ಪ ಪ್ರದರ್ಶನದಲ್ಲಿ ಪ್ರಸ್ತುತಪಡಿಸಲಾಗುತ್ತದೆ. ವಾಲ್ಮೀಕಿ ಅವರ ಜೀವನದ ಪ್ರಮುಖ ಘಟನೆಗಳು, ಅವರು ರಾಮಾಯಣ ರಚಿಸುತ್ತಿರುವ ಪ್ರತಿಮೆಯನ್ನು ಹೂವಿನ ಲೋಕದ ಮೂಲಕ ತಿಳಿಸುವ ಪ್ರಯತ್ನ ಮಾಡಲಾಗುವುದು' ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ಪ್ರದರ್ಶನಕ್ಕಾಗಿ ಕಟ್ ಫ್ಲವರ್ಸ್, ಇಲಾಖೆ ನರ್ಸರಿಗಳಲ್ಲಿ ವೈವಿಧ್ಯಮಯ ಪುಷ್ಪಗಳನ್ನು ಪಾಟ್‌ಗಳಲ್ಲಿ ಬೆಳೆಯಲಾಗುತ್ತದೆ. ಸನ್‌ಫ್ಲವರ್‌ನ ಕಟ್ ಫ್ಲವರ್ಸ್, ಶೀತ ಪ್ರದೇಶಗಳಲ್ಲಿ ಬೆಳೆಯುವ ಹೂಗಳು ಈ ಬಾರಿ ಆಕರ್ಷಣೆ ಆಗಲಿವೆ. ದೇಶ ಮತ್ತು ವಿದೇಶಗಳಿಂದ ವಿವಿಧ ತಳಿಯ ಹೂಗಳನ್ನು ಆಮದು ಮಾಡಿಕೊಳ್ಳಲಾಗುವುದು' ಎಂದು ವಿವರಿಸಿದರು.

ನಗರದಲ್ಲಿ ಇಂದು

'ವಚನ ಗಾನ ವಿಹಂಗಮ' ಶತಕಂಠಗಳ ಸಮೂಹ ಗಾನ: ಉದ್ಘಾಟನೆ: ಸಿ. ಸೋಮಶೇಖರ್, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಅತಿಥಿ: ಎಸ್. ಜಿ. ಸುಶೀಲಮ್ಮ, ಉಪಸ್ಥಿತಿ: ಆರ್.ವಿ. ಮಂಜುನಾಥ್, ಜಿ.ಕೆ. ಮಂಜುನಾಥ್, ಪ್ರಾಸ್ತಾವಿಕ ನುಡಿ: ಬಂಡ್ಲಹಳ್ಳಿ ವಿಜಯ ಕುಮಾರ್, ಆಯೋಜನೆ: ರಂಗಸಂಸ್ಥಾನ, ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 9.30

12ನೇ ಏಕತಾರಿ ಜಾನಪದ ಸಂಭ್ರಮ–2024: ಉದ್ಘಾಟನೆ: ಎಸ್.ಟಿ. ಸೋಮಶೇಕರ್, ಅಧ್ಯಕ್ಷತೆ: ಗುರುರಾಜ ಹೊಸಕೋಟೆ, ಉಪಸ್ಥಿತಿ: ಬಿ.ಕೆ. ಭಾರತಿ, ಅಶೋಕ್ ಛಲವಾದಿ, ರವಿ ಯು.ಎಂ., ರ. ನರಸಿಂಹಮೂರ್ತಿ, ಚಂದ್ರಶೇಖರ್, ಆಯೋಜನೆ: ಮಲೈಮಹದೇಶ್ವರ ಸಾಂಸ್ಕೃತಿಕ ಜಾನಪದ ಕಲಾ ಟ್ರಸ್ಟ್, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಮಧ್ಯಾಹ್ನ 1.30

ಕೋಲಾಟ ಕಾರ್ಯಕ್ರಮ: ಆಯೋಜನೆ: ವಿನಾಯಕನಗರ, ವಿಕಾಸ್‌ನಗರ ನಾಗರಿಕರು, ಸ್ಥಳ: ಶ್ರೀರಾಮ್ ವೃತ್ತ, ವಿನಾಯಕನಗರ, ಸಂಜೆ 6.30



ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಇಶಾ ಕೆ., ಅತಿಥಿಗಳು: ಎಂ. ಸೂರ್ಯ ಪ್ರಸಾದ್, ಸುನಂದಾದೇವಿ, ಮಾಲತಿ ಆರ್. ನಾರಾಯಣ್, ಸ್ಥಳ: ಎ.ಡಿ.ಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 6

ಗಾಯಗೊಂಡಿದ್ದ ಕಾಡಾನೆ ಮರಿ ಸಾವು

ಪ್ರಜಾವಾಣಿ ವಾರ್ತೆ

ಹೆತ್ತೂರು (ಹಾಸನ ಜಿಲ್ಲೆ): ಯಸಳೂರು ಹೋಬಳಿಯ ಬಾಳೆಕರೆ ಅರಣ್ಯ ಪ್ರದೇಶದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಕಾಡಾನೆ ಮರಿಯೊಂದು, ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದೆ.

ಬಾಳೆಕೆರೆ ಅರಣ್ಯ ಪ್ರದೇಶದ ಸಮೀಪ ಇರುವ ಸರಗಹಳ್ಳಿ ಗ್ರಾಮದಲ್ಲಿ ಸುಮಾರು 3–4 ತಿಂಗಳ ಹೆಣ್ಣು ಆನೆ ಮರಿಯು ಗಂಭೀರವಾಗಿ ಗಾಯಗೊಂಡಿರುವುದನ್ನು ಗ್ರಾಮಸ್ಥರು ಸೋಮವಾರ ನೋಡಿದ್ದಾರೆ. ಈ ಬಗ್ಗೆ ಅರಣ್ಯಾಧಿಕಾರಿಗಳಿಗೆ ಮಾಹಿತಿ ನೀಡಿದ್ದರು.

ಸ್ಥಳಕ್ಕೆ ಬಂದ ಅಧಿಕಾರಿಗಳು ಪರಿಶೀಲನೆ ನಡೆಸಿದರು. ಯಸಳೂರು ವಲಯ ಅರಣ್ಯ ಇಲಾಖೆ ತಂಡ ಪ್ರಾಥಮಿಕ ಚಿಕಿತ್ಸೆ ನೀಡಿತು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಹಾಸನದ ಪಶು ವೈದ್ಯಕೀಯ ಕಾಲೇಜಿಗೆ ಕರೆದೊಯ್ಯಲಾಗಿತ್ತು.

ಬೋನಿಗೆ ಬಿದ್ದ ಹುಲಿ: ಮೈಸೂರು ಜಿಲ್ಲೆ ಎಚ್.ಡಿ.ಕೋಟೆ ತಾಲ್ಲೂಕಿನ ಚಾಕಹಳ್ಳಿ ಬಳಿ ಅರಣ್ಯ ಇಲಾಖೆ ಇರಿಸಿದ್ದ ಬೋನಿನಲ್ಲಿ ಸೋಮವಾರ ಬೆಳಿಗ್ಗೆ ಹುಲಿ ಸೆರೆಯಾಗಿದೆ.

ಮರಿ ಹುಲಿ ಮೃತಪಟ್ಟಿದ್ದ ಸಮೀಪದಲ್ಲಿಯೇ ಬೋನು ಇರಿಸಲಾಗಿತ್ತು. ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ (ಎನ್‌ಟಿಸಿಎ) ನಿಯಮಾವಳಿಯಂತೆ ಚಿಪ್ ಅಳವಡಿಸಿ ಹುಲಿ ವಿರಳವಾಗಿರುವ ಕಾಡಿಗೆ ಬಿಡಲಾಗುವುದು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಮೇಟಿಕುಪ್ಪೆ ಅರಣ್ಯ ವಲಯ ದಂಚಿನ ಹೆಬ್ಬಳ್ಳ, ಶಾಂತಿಪುರ, ಸ್ಟೇಡಿಯಂ ಬಡಾವಣೆಯಲ್ಲಿ ಹುಲಿ ಕಾಣಿಸಿಕೊಂಡಿದ್ದರಿಂದ ಶೋಧ ನಡೆದಿತ್ತು. 25ಕ್ಕೂ ಹೆಚ್ಚು ಕ್ಯಾಮೆರಾ ಅಳವಡಿಸಿದ್ದರೂ ಹುಲಿ ಸುಳಿವು ಪತ್ತೆಯಾಗಿರಲಿಲ್ಲ. ತಾಯಿ ಹುಲಿಯೊಂದಿಗೆ ಇದ್ದ ಎರಡು ಮರಿಗಳಲ್ಲಿ ಒಂದು ಮರಿ ಮೃತಪಟ್ಟಿದ್ದು, ಇನ್ನೊಂದು ಮರಿ ತಾಯಿಯಿಂದ ದೂರವಾಗಿದೆ.


ಅರಣ್ಯ ಇಲಾಖೆ ಅಭಿಪ್ರಾಯ ಪಡೆಯಬೇಕು ಎಂದು ವರದಿಯಲ್ಲಿ ಉಲ್ಲೇಖ

ಸ್ಥಾವರ ವಿಚಾರವಾಗಿ ಆತಂಕ: ಸಭೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಗಂಗಾವತಿ ತಾಲ್ಲೂಕಿನ ಹಿರೇಬೆಣಕಲ್ ಹಾಗೂ ಸುತ್ತಮುತ್ತಲ ಗ್ರಾಮದಲ್ಲಿ ಪರಮಾಣು ವಿದ್ಯುತ್ ಸ್ಥಾವರ ಸ್ಥಾಪನೆ ಮಾಡಲಾಗುತ್ತಿದೆ ಎಂದು ಆತಂಕಗೊಂಡಿರುವ ಜನ ಮಂಗಳವಾರ ಸಭೆ ನಡೆಸಲು ಮುಂದಾಗಿದ್ದಾರೆ.

ಚಿಕ್ಕಬೆಣಕಲ್, ಹಿರೇಬೆಣಕಲ್, ಎಡಹಳ್ಳಿ, ಮುಕ್ಕುಂಪಿ, ಎಚ್‌ಆರ್‌ಜಿ ನಗರ, ಹೇಮಗುಡ್ಡ ಹಾಗೂ ಲಿಂಗದಳ್ಳಿ ಗ್ರಾಮಗಳ ಪ್ರಮುಖರು ಸೇರಿ ಸಭೆ ನಡೆಸಲಿದ್ದಾರೆ ಎಂದು ಗೊತ್ತಾಗಿದೆ. ಜಿಲ್ಲಾಧಿಕಾರಿ ಸೂಚನೆ ಮೇರೆಗೆ ಗಂಗಾವತಿ ತಹಶೀಲ್ದಾರ್ ಯು. ನಾಗರಾಜ ಇತ್ತೀಚೆಗೆ ವರದಿ ಸಲ್ಲಿಸಿದ್ದು, ಚಾಲ್ತಿ ಪಹಣಿ ಪ್ರಕಾರ 2,117 ಎಕರೆ 31 ಗುಂಟೆ ಭೂಮಿ ಇದ್ದು ಅದರಲ್ಲಿ ಅರಣ್ಯ ಇಲಾಖೆ ವ್ಯಾಪ್ತಿಗೆ ಸೇರಿದ 1,200 ಎಕರೆ ಭೂಮಿಯಿದೆ ಎಂದು ತಿಳಿಸಿದ್ದಾರೆ. ಅರಣ್ಯ ಇಲಾಖೆಯ ಅಭಿಪ್ರಾಯವನ್ನೂ ಪಡೆಯಬೇಕು ಎಂದೂ ಹೇಳಿದ್ದಾರೆ.



ಅಣು ಸ್ಥಾವರ ಸ್ಥಾಪನೆಯಾಗುತ್ತದೆ ಎಂದು ನಮ್ಮ ಭಾಗದ ಜನರಲ್ಲಿ ಆತಂಕವಿದೆ. ಅದಕ್ಕೆ ಈಗಿನಿಂದಲೇ ವಿರೋಧ ವ್ಯಕ್ತಪಡಿಸುತ್ತಿದ್ದೇವೆ

ಎಚ್.ಆರ್. ಶ್ರೀನಾಥ್
ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ


ಈ ಕುರಿತು 'ಪ್ರಜಾವಾಣಿ' ಜೊತೆ ಮಾತನಾಡಿದ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು, 'ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಯೋಜನೆ ಅನುಷ್ಠಾನ ಕಷ್ಟ. ದೊಡ್ಡಮಟ್ಟದಲ್ಲಿ ಅರಣ್ಯ ಭೂಮಿ ಪರಿವರ್ತಿಸಲು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಅನುಮತಿಯೂ ಪಡೆಯಬೇಕಾಗುತ್ತದೆ. ಹೀಗಾಗಿ ಯೋಜನೆ ಅನುಷ್ಠಾನ ಸಾಧ್ಯತೆ ಕಡಿಮೆ. ಜಿಲ್ಲಾಡಳಿತ ಕೂಡ ಇಲ್ಲಿಯೇ ಸ್ಥಾವರ ಸ್ಥಾಪನೆಯಾಗುತ್ತದೆ ಎಂದು ಎಲ್ಲಿಯೂ ಹೇಳಿಲ್ಲ. ಇದು ಪ್ರಾಥಮಿಕ ವರದಿಯಷ್ಟೇ' ಎಂದು ತಿಳಿಸಿದರು.

ಸ್ಥಾವರ ಸ್ಥಾಪನೆಯಾಗುತ್ತದೆ ಎಂದು ಆತಂಕಗೊಂಡಿರುವ ಜನ ಸಹಾಯಕ ಆಯುಕ್ತ ಕ್ಯಾಪ್ಟನ್ ಮಹೇಶ ಮಾಲಗಿತ್ತಿ ಅವರನ್ನೂ ಭೇಟಿಯಾಗಿದ್ದು, 'ಇದಕ್ಕೆ ನಮ್ಮ ವಿರೋಧವಿದೆ' ಎಂದಿದ್ದಾರೆ. 'ಸ್ಥಾವರ ಸ್ಥಾಪನೆಗೆ ನಿಮ್ಮೂರು ಅಂತಿಮವಾಗಿಲ್ಲ' ಎಂದು ಗ್ರಾಮಸ್ಥರಿಗೆ ತಿಳಿಸಿದ್ದೇನೆ' ಎಂದು ಮಹೇಶ ಮಾಲಗಿತ್ತಿ ಮಾಹಿತಿ ನೀಡಿದರು.

'ಗಿಡಮೂಲಿಕೆಗಳಿವೆ;ಉಳಿಸಿಕೊಳ್ಳಬೇಕು'

ತಮ್ಮ ಹೋರಾಟದ ಬಗ್ಗೆ ಮಾಹಿತಿ ನೀಡಿದ ಚಿಕ್ಕಬೆಣಕಲ್ ಗ್ರಾಮದ ಚಂದ್ರೇಗೌಡ, 'ನಮ್ಮ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಜನರ ಸಭೆ ನಡೆಸುತ್ತೇವೆ. ಎಲ್ಲರ ಅಭಿಪ್ರಾಯ ಪಡೆದು ಬುಧವಾರ ಅಥವಾ ಗುರುವಾರ ರಸ್ತೆಯಲ್ಲಿ ಪ್ರತಿಭಟನೆ ಮಾಡುವ ಯೋಜನೆ ಹಮ್ಮಿಕೊಂಡಿದ್ದೇವೆ' ಎಂದರು.

'ಸ್ಥಾವರ ಸ್ಥಾಪನೆಗೆ ನಮ್ಮೂರೇ ಅಂತಿಮವಾಗಿಲ್ಲ ಎನ್ನುವ ಮಾಹಿತಿಯೂ ನಮಗಿದೆ. ಮುಂಜಾಗ್ರತಾ ಕ್ರಮವಾಗಿ ಈಗಿನಿಂದಲೇ ನಮ್ಮ ವಿರೋಧ ವ್ಯಕ್ತಪಡಿಸುತ್ತಿದ್ದೇವೆ. ನಮ್ಮ ಸುತ್ತಮುತ್ತಲು ಕುಮಾರರಾಮನ ಬೆಟ್ಟ, ಹೇಮಗುಡ್ಡ, ಮೋರೆರ ಬೆಟ್ಟ ಹೀಗೆ ಅನೇಕ ಐತಿಹಾಸಿಕ ಸ್ಥಳಗಳು ಇವೆ. ಇದೆಲ್ಲಕ್ಕಿಂತ ಹೆಚ್ಚಾಗಿ ಗಿಡಮೂಲಿಕೆಗಳು ಬಹಳಷ್ಟಿವೆ. ಅವುಗಳನ್ನು ಉಳಿಸಿಕೊಳ್ಳಬೇಕು ಎನ್ನುವ ಆಶಯ ನಮ್ಮದು' ಎಂದರು.



ಹೊಸವರ್ಷಾಚರಣೆಗಾಗಿ ನಗರದ ಕಮರ್ಷಿಯಲ್ ಸ್ಟ್ರೀಟ್ ವಿಶೇಷ ವಿದ್ಯುತ್ ಅಲಂಕಾರದಿಂದ ಕಂಗೊಳಿಸುತ್ತಿದೆ ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ಹೊಸ ವರ್ಷದ ಸಂಭ್ರಮಕ್ಕೆ ನಗರ ಸಜ್ಜು

ಬಂದೋಬಸ್ತ್‌ಗಾಗಿ ಪೊಲೀಸರು, ವ್ಯಾಪಾರಕ್ಕೆ ಪಬ್, ರೆಸ್ಟೋರಂಟ್‌ಗಳು ಸಜ್ಜು

ನಗರದ ಬಂದೋಬಸ್ತ್						
11,830	89	23	817	63	114	54
ಬಂದೋಬಸ್ತ್‌ಗೆ ನಿಯೋಜಿಸಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ	ನಿಯೋಜಿತ ಕೆಎಸ್‌ಆರ್‌ಪಿ ತುಕಡಿಗಳು	ನಿಯೋಜಿತ ಸಿಎಆರ್ ತುಕಡಿಗಳು	ಸಿ.ಸಿ.ಟಿ.ವಿ ಕ್ಯಾಮೆರಾಗಳು	ಮಹಿಳಾ ವೀಕ್ಷಣಾ ಗೋಪುರಗಳು	ಮಹಿಳಾ ಸುರಕ್ಷಾ ಸ್ಥಳಗಳು	ತಾತ್ಕಾಲಿಕ ಆರೋಗ್ಯ ಕೇಂದ್ರಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸವರ್ಷದ ಸಂಭ್ರಮದಲ್ಲಿ ಭಾಗಿಯಾಗಲು ಸಿದ್ಧರಾಗುತ್ತಿರುವ ಯುವಜನರು ಸೋಮವಾರ ವಿವಿಧ ಪಬ್, ರೆಸ್ಟೋರಂಟ್‌ಗಳ ಮುಂದೆ ಹೆಸರು ನೋಂದಣಿ ಮಾಡಿಕೊಳ್ಳಲು ಸರದಿಯಲ್ಲಿ ನಿಂತಿದ್ದರು. ಭದ್ರತೆ ಒದಗಿಸಲು ಪೊಲೀಸರು ಸಿದ್ಧತೆ ನಡೆಸಿದರು.

ಮಹಾತ್ಮ ಗಾಂಧಿ ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಒಪೆರಾ ಜಂಕ್ಷನ್, ರೆಸ್ಟ್‌ಹೌಸ್ ರಸ್ತೆ, ಸೇಂಟ್ ಮಾರ್ಕ್ಸ್ ರಸ್ತೆ, ರಿಚ್ಮಂಡ್ ರಸ್ತೆ, ರೆಸಿಡೆನ್ಸಿ ರಸ್ತೆಯಲ್ಲಿ ಡಿ.31ರ ರಾತ್ರಿ ಜನರು ಪ್ರವಾಹದಂತೆ ಬಂದು ಸೇರುತ್ತಾರೆ. ಈ ಬಾರಿ 7 ಲಕ್ಷದಿಂದ 10 ಲಕ್ಷದವರೆಗೆ ಜನರು ಸೇರಬಹುದು ಎಂದು ಪೊಲೀಸರು ಅಂದಾಜಿಸಿದ್ದಾರೆ.

ಇಷ್ಟು ದೊಡ್ಡ ಪ್ರಮಾಣದಲ್ಲಿ ಅಲ್ಲದೇ ಇದ್ದರೂ ಸಣ್ಣ ಪ್ರಮಾಣದಲ್ಲಿ ಇಂದಿರಾನಗರದ 100 ಅಡಿ ರಸ್ತೆಯ ಹಳೇ ಮದ್ರಾಸ್ ರಸ್ತೆ, 12ನೇ ಮುಖ್ಯರಸ್ತೆಯ 80 ಅಡಿ ರಸ್ತೆ–ಡಬಲ್ ರೋಡ್ ಜಂಕ್ಷನ್, ಮಹದೇವಪುರದ ಐಟಿಪಿಎಲ್ ಮುಖ್ಯರಸ್ತೆ, ಗರುಡಾಚಾರ್ ಪಾಳ್ಯ, ಕೋರಮಂಗಲದ ನ್ಯಾಷನಲ್ ಗೇಮ್ ವಿಲೇಜ್–ಯುಕೊ ಬ್ಯಾಂಕ್ ರಸ್ತೆ, ವೈಡಿ ಮಠ ರಸ್ತೆ, ಬ್ಯಾಟರಾಯನಪುರದ ಮಾಲ್ ಆಫ್ ಏಷಿಯಾ, ರಾಜಾಜಿನಗರದ ಓರಾಯನ್ ಮಾಲ್‌ಗಳ ಮುಂದೆಯೂ ಜನರು ಸೇರುತ್ತಾರೆ. ಫಿನಿಕ್ಸ್ ಮಾಲ್, ವೈಟ್‌ಫೀಲ್ಡ್, ಬೆಳ್ಳಂದೂರು, ಕೊತ್ತನೂರು, ಎಚ್‌ಎಸ್‌ಆರ್ ಲೇಔಟ್‌ಗಳೂ ಹೊಸ ವರ್ಷದ ಸಂಭ್ರಮಾಚರಣೆಯ ಸ್ಥಳಗಳಾಗಿವೆ.

ಈ ಪ್ರದೇಶಗಳಲ್ಲಿ ಪೊಲೀಸರು ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸುವ ಕಾರ್ಯವನ್ನು ಸೋಮವಾರ ಪೂರ್ಣಗೊಳಿಸಿದರು. ಸಂಚಾರಕ್ಕೆ ತೊಡಕಾಗದಂತೆ ಬ್ಯಾರಿಕೇಡ್‌ಗಳನ್ನು ಅಳವಡಿಸಿದರು.

ಇಂದಿರಾನಗರ 100 ಅಡಿ ರಸ್ತೆಯೊಂದರಲ್ಲಿಯೇ 30ಕ್ಕೂ ಅಧಿಕ ಪಬ್‌ಗಳಿದ್ದು, ಹಲವು ಕ್ಲಬ್‌ಗಳು, ರೆಸ್ಟೋರಂಟ್‌ಗಳಿವೆ. ಬಹುತೇಕ ಕಡೆಗಳಲ್ಲಿ ಮುಂಗಡವಾಗಿ ಕಾಯ್ದಿರಿಸಲಾಗಿದ್ದು, ಸೋಮವಾರ ಇನ್ನಷ್ಟು ಜನರು ಮುಂಗಡ ಕಾಯ್ದಿರಿಸಲು ಬಂದು ಅವಕಾಶವಿಲ್ಲದೇ ನಿರಾಸೆಗೊಂಡು ಬೇರೆಡೆಗೆ ತೆರಳುತ್ತಿರುವುದು ಕಂಡು ಬಂತು.

ಹೊಸವರ್ಷದ ಬಂದೋಬಸ್ತ್‌ಗಾಗಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಗೃಹರಕ್ಷಕ ದಳ ಬೆಂಗಳೂರಿಗೆ ಬಂದಿದೆ. ಮಂಡ್ಯದಿಂದ ಹಲಸೂರು ಉಪವಿಭಾಗಕ್ಕೆ 250 ಗೃಹರಕ್ಷಕ ದಳದವರು ಬಂದಿದ್ದು, ಹಲಸೂರು ಸಂತ ಲೂರ್ದ್ ಮಾತೆ ಚರ್ಚ್‌ನ ಮೈದಾನದಲ್ಲಿ ಅವರಿಗೆ ಮಾರ್ಗದರ್ಶನ ನೀಡಿ ವಿವಿಧ ಸ್ಥಳಗಳಿಗೆ ಕಳುಹಿಸಲಾಯಿತು. ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್ ಸುತ್ತಲಿನಲ್ಲಿ ಬಂದೋಬಸ್ತ್ ಮಾಡಲು 500 ಗೃಹರಕ್ಷಕ ದಳದವರು, 500 ಸಿವಿಲ್ ಡಿಫೆನ್ಸ್, 1000 ಪೊಲೀಸರು ಎಲ್ಲೆಲ್ಲಿ ಕಾರ್ಯನಿರ್ವಹಿಸಬೇಕು ಎಂದು ಅಶೋಕನಗರ ಪೊಲೀಸ್ ತರಬೇತಿ ಮೈದಾನದಲ್ಲಿ ಮಾರ್ಗದರ್ಶನ ನೀಡಿ ನಿಯೋಜಿಸಲಾಯಿತು.

ಪೊಲೀಸರು ಎಲ್ಲ ಜಂಕ್ಷನ್‌ಗಳಲ್ಲಿ, ಪ್ರಮುಖ ರಸ್ತೆಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಿದ್ದಾರೆ. ಸಂಚಾರ ವ್ಯವಸ್ಥೆಗಳನ್ನು ಬದಲಾಯಿಸಿದ್ದಾರೆ. ಪಾರ್ಕಿಂಗ್‌ಗೆ ಪರ್ಯಾಯ ಜಾಗಗಳನ್ನು ಸೂಚಿಸಿದ್ದಾರೆ. ಜೊತೆಗೆ ಜನರ ಓಡಾಟ ಇರುವಲ್ಲಿ ಕತ್ತಲು ಇರಬಾರದು ಎಂಬ ಕಾರಣಕ್ಕೆ ಲೈಟ್‌ಗಳನ್ನು ಅಳವಡಿಸಲಾಗಿದೆ. ಪೊಲೀಸ್ ಕಮಿಷನರ್ ಸೇರಿದಂತೆ ಉನ್ನತ ಅಧಿಕಾರಿಗಳು ಸೋಮವಾರ ನಗರ ಸುತ್ತಾಟ ನಡೆಸಿ ಬಂದೋಬಸ್ತ್ ಪರಿವೀಕ್ಷಿಸಿದರು. ಹೊಸ ವರ್ಷದ ಸಡಗರದಲ್ಲಿ ಭರ್ಜರಿ ವ್ಯಾಪಾರದ ನಿರೀಕ್ಷೆಯಲ್ಲಿ ಪಬ್‌ಗಳು ಸಂಗೀತ, ನೃತ್ಯಕ್ಕೆ ಬೇಕಾದ ತಯಾರಿ ಮಾಡಿಕೊಂಡಿವೆ. ಬೇಕರಿಗಳಲ್ಲಿ ವಿಭಿನ್ನ ಬಗೆಗಳ ಕೇಕ್‌ಗಳು ತಯಾರಾಗಿವೆ. ಅಲ್ಲದೇ ಅಪಾರ್ಟ್‌ಮೆಂಟ್‌ಗಳು ಕೂಡ ವಿದ್ಯುತ್ ದೀಪಾಲಂಕಾರ ಮಾಡಿಕೊಂಡು ಹೊಸ ವರ್ಷ ಸ್ವಾಗತಿಸಲು ಸಿದ್ಧಗೊಂಡಿವೆ.





ಮಹಿಳಾ ಸುರಕ್ಷತೆಗಾಗಿ ವಿವಿಧ ಭಾಗಗಳಿಂದ ಅಶೋಕನಗರದ ಮೈದಾನಕ್ಕೆ ಬಂದಿರುವ ಗೃಹರಕ್ಷಕ ದಳ (ಎಡಚಿತ್ರ) ನಗರ ಪೊಲೀಸ್ ಆಯುಕ್ತ ಬಿ. ದಯಾನಂದ್, ಹೆಚ್ಚುವರಿ ಪೊಲೀಸ್ ಕಮಿಷನರ್ ಸತೀಶ್ ಕುಮಾರ್, ಕೇಂದ್ರ ವಿಭಾಗದ ಡಿಸಿಪಿ ಶೇಖರ್ ನಗರದ ಬ್ರಿಗೇಡ್ ರಸ್ತೆಯಲ್ಲಿ ಹೊಸವರ್ಷದ ಬಂದೋಬಸ್ತ್ ಪರಿಶೀಲಿಸಿದರು ಪ್ರಜಾವಾಣಿ ಚಿತ್ರಗಳು/ ರಂಜು ಪಿ

ಇಂದು ತೆರೆದಿರಲಿದೆ ಉದ್ಯಾನ

ಆನೇಕಲ್: ಹೊಸ ವರ್ಷದ ನಿಮಿತ್ತ ಬನ್ನೇರುಘಟ್ಟ ಉದ್ಯಾನವನ ರಜಾ ದಿನವಾದ ಮಂಗಳವಾರ (ಡಿ.31) ತೆರೆದಿರಲಿದೆ.

ವಾಡಿಕೆಯಂತೆ ಉದ್ಯಾನಕ್ಕೆ ಮಂಗಳವಾರ ರಜೆ ದಿನವಾಗಿದೆ. ಹೊಸ ವರ್ಷದ ನಿಮಿತ್ತ ಉದ್ಯಾನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿಗೆ ಅನುಕೂಲವಾಗುವಂತೆ ಮಂಗಳವಾರ ಉದ್ಯಾನವನ್ನು ತೆರೆಯಲಾಗುತ್ತಿದೆ. ಉದ್ಯಾನದ ಸಫಾರಿ, ಮೃಗಾಲಯ, ಚಿಟ್ಟೆ ಉದ್ಯಾನವನ ಎಂದಿನಂತೆ ಕಾರ್ಯನಿರ್ವಹಿಸಲಿದೆ. ಆನ್‌ಲೈನ್ ಮೂಲಕ ಟಿಕೆಟ್ ಪಡೆಯಬಹುದಾಗಿದೆ ಎಂದು ಉದ್ಯಾನದ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ನಂದಿಗೆ ಪ್ರವೇಶ ನಿಷೇಧ

ಚಿಕ್ಕಬಳ್ಳಾಪುರ: ಹೊಸ ವರ್ಷಾಚರಣೆ ಪ್ರಯುಕ್ತ ಪ್ರಸಿದ್ಧ ಪ್ರವಾಸಿ ತಾಣ ನಂದಿಗಿರಿಧಾಮಕ್ಕೆ ಡಿ.31ರ ಸಂಜೆ 6ರಿಂದ ಜ.1ರ ರಾತ್ರಿ 11ರವರೆಗೆ ಸಾರ್ವಜನಿಕರು ಮತ್ತು ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿದೆ. ಅತಿಥಿ ಗೃಹಗಳಲ್ಲಿ ಕೊಠಡಿಗಳ ಕಾಯ್ದಿರಿಸುವುದನ್ನು ಸಹ ರದ್ದುಗೊಳಿಸಲಾಗಿದೆ.



ಹೊಸ ವರ್ಷದ ಸಂಭ್ರಮದಲ್ಲಿ ಪಾಲ್ಗೊಳ್ಳಲು ಮುಂಗಡ ಟಿಕೆಟ್ ಕಾಯ್ದಿರಿಸಲು ಇಂದಿರಾನಗರದ ಪಬ್ ಮುಂದೆ ನಿಂತಿರುವ ಯುವಜನರು ಪ್ರಜಾವಾಣಿ ಚಿತ್ರ

ಭದ್ರತೆ ಪರಿಶೀಲನೆ

ಮಹಾತ್ಮ ಗಾಂಧಿ ರಸ್ತೆ, ಚರ್ಚ್ ರಸ್ತೆ ಹಾಗೂ ಬ್ರಿಗೇಡ್ ರಸ್ತೆಗೆ ಸೋಮವಾರ ರಾತ್ರಿ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಭೇಟಿ ನೀಡಿ ಭದ್ರತೆ ಪರಿಶೀಲಿಸಿದರು. ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಇದೇ ಮೊದಲ ಬಾರಿಗೆ ಚರ್ಚ್ ರಸ್ತೆಯ ಎರಡೂ ಬದಿಯಲ್ಲಿ ಬ್ಯಾರಿಕೇಡ್ ಹಾಕಲಾಗಿದ್ದು ಅದನ್ನು ಪರಿಶೀಲಿಸಿದರು.

‘ಆಯಾ ವ್ಯಾಪ್ತಿಯಲ್ಲಿ ಭದ್ರತೆ ಕೈಗೊಳ್ಳಲು ಡಿಸಿಪಿಗಳಿಗೆ ಸೂಚಿಸಲಾಗಿದೆ. ಈ ವರ್ಷ ಭದ್ರತೆಗೆ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿದೆ’ ಎಂದು ಬಿ.ದಯಾನಂದ ಹೇಳಿದರು.

ಹಲವು ಮೇಲ್ಸೇತುವೆಯಲ್ಲಿ ರಾತ್ರಿ ಸಂಚಾರ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವರ್ಷಾಚರಣೆ ವೇಳೆ ಸಾರ್ವಜನಿಕರ ಹಿತದೃಷ್ಟಿಯಿಂದ ಡಿ.31ರ ರಾತ್ರಿ 11ರಿಂದ ಜ.1ರ ಬೆಳಿಗ್ಗೆ 6ರ ವರೆಗೆ ನಗರದ ಹಲವು ಮೇಲ್ಸೇತುವೆಗಳಲ್ಲಿ ಎಲ್ಲ ಮಾದರಿಯ ವಾಹನಗಳ ಸಂಚಾರಕ್ಕೆ ನಿರ್ಬಂಧ ಹೇರಲಾಗಿದೆ.

ಈ ಅವಧಿಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕಿಸುವ ಮೇಲ್ಸೇತುವೆಯಲ್ಲಿ ದ್ವಿಚಕ್ರ ವಾಹನಗಳ ಹೊರತು ಪಡಿಸಿ ಉಳಿದ ವಾಹನಗಳ ಸಂಚಾರಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಹೆಣ್ಣೂರು, ಐಟಿಸಿ, ಬಾಣಸವಾಡಿ, ಲಿಂಗರಾಜಪುರ, ಕಲ್ಪಳ್ಳಿ, ದೊಮ್ಮಲೂರು, ನಾಗವಾರ, ಮೇಡಹಳ್ಳಿ, ಎ.ಎಂ ರಸ್ತೆ, ದೇವರಬಿಸನಹಳ್ಳಿ, ಮಹದೇವಪುರ, ದೊಡ್ಡಕ್ಕುಂದಿ ಮೇಲ್ಸೇತುವೆಯಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಸಂಭ್ರಮಾಚರಣೆಯ ಸಂದರ್ಭದಲ್ಲಿ ಮದ್ಯಪಾನ/ ಮಾದಕ ಪದಾರ್ಥಗಳನ್ನು ತೆಗೆದುಕೊಂಡು ವಾಹನ ಚಾಲನೆ ಮಾಡುವವರ ಪತ್ತೆಗೆ ರಾತ್ರಿಯಿಡೀ ಬೇರೆ ಬೇರೆ ಸ್ಥಳಗಳಲ್ಲಿ ತಪಾಸಣೆ ಗೊಳಪಡಿಸಲು ಪೊಲೀಸರು ಸಿದ್ಧತೆ ನಡೆಸಿದ್ದಾರೆ.

ಅತಿವೇಗ ಮತ್ತು ಅಜಾಗರೂಕತೆಯಿಂದ ವಾಹನ ಚಾಲನೆ ಮಾಡುವವರು ಹಾಗೂ ವ್ಹೀಲಿ, ಡ್ರ್ಯಾಗ್ ರೇಸ್‌ನಲ್ಲಿ ಭಾಗಿಯಾಗಿ ಇತರರಿಗೆ ತೊಂದರೆ ಉಂಟು ಮಾಡುವವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ವಶಕ್ಕೆ ಪಡೆಯಲಾಗುವುದು ಎಂದು ಸಂಚಾರ ಪೊಲೀಸರು ಎಚ್ಚರಿಸಿದ್ದಾರೆ.

ಟೋಯಿಂಗ್ ಎಚ್ಚರಿಕೆ: ಸಂಚಾರ ಪೊಲೀಸರು ಸೂಚಿಸಿರುವ ಸ್ಥಳಗಳನ್ನು ಹೊರತುಪಡಿಸಿ ಇತರೆ ಸ್ಥಳಗಳಲ್ಲಿ ನಿಲ್ಲಿಸುವ ವಾಹನಗಳನ್ನು ಟೋಯಿಂಗ್ ಮಾಡಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ. ಸಂಭ್ರಮಾಚರಣೆಯಲ್ಲಿ ಭಾಗಿಯಾಗಲು ಬರುವ ಸಾರ್ವಜನಿಕರು ಆದಷ್ಟು ತಮ್ಮ ಸ್ವಂತ ವಾಹನಗಳನ್ನು ಬಳಸದೆ ಸಾರ್ವಜನಿಕ ಸಾರಿಗೆ ವ್ಯವಸ್ಥೆಗಳಾದ ಮೆಟ್ರೊ, ಬಿಎಂಟಿಸಿ, ಕೆಎಸ್‌ಆರ್‌ಟಿಸಿ, ಆಟೊ ಅಥವಾ ಕ್ಯಾಬ್‌ಗಳನ್ನು ಬಳಸುವಂತೆ ಕೋರಲಾಗಿದೆ.

ವಾಹನ ನಿಲುಗಡೆ ನಿರ್ಬಂಧ

- ಇಂದಿರಾನಗರ 100 ಅಡಿ ರಸ್ತೆಯ ಹಳೆ ಮದ್ರಾಸ್ ರಸ್ತೆ ಜಂಕ್ಷನ್‌ನಿಂದ ದೊಮ್ಮಲೂರು ಮೇಲ್ಸೇತುವೆ ಜಂಕ್ಷನ್ ವರೆಗೆ
- ಇಂದಿರಾನಗರ 12ನೇ ಮುಖ್ಯರಸ್ತೆಯ 80 ಅಡಿ ರಸ್ತೆಯಿಂದ ಇಂದಿರಾನಗರ ಡಬಲ್ ರೋಡ್ ಜಂಕ್ಷನ್‌ವರೆಗೆ
- ಐಟಿಪಿಎಲ್ ಮುಖ್ಯರಸ್ತೆ ಬಿ.ನಾರಾಯಣಪುರ ಶೆಲ್ ಪೆಟ್ರೋಲ್ ಬಂಕ್‌ನಿಂದ ಗರುಡಾಚಾರ್‌ಪಾಳ್ಯ ಡೆಕತ್ಲಾನ್ ವರೆಗೆ
- ಹೂಡಿ ಮೆಟ್ರೊ ನಿಲ್ದಾಣದಿಂದ ಗ್ರಾಫೈಟ್ ಇಂಡಿಯಾ ಜಂಕ್ಷನ್ ವರೆಗೆ
- ಐಟಿಪಿಎಲ್ ರಸ್ತೆ ಮೆಡಿಕವರ್ ಆಸ್ಪತ್ರೆಯಿಂದ ಬಿಗ್‌ಬಜಾರ್ ಜಂಕ್ಷನ್ ವರೆಗೆ

ಪೊಲೀಸರ ಕ್ರಮಗಳು ಏನು?

- ರಾತ್ರಿ 1 ಗಂಟೆವರೆಗೆ ಹೊಸ ವರ್ಷಾಚರಣೆಗೆ ಅವಕಾಶ
- ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಇಂದಿರಾನಗರದಲ್ಲಿ ಆಚರಣೆಗೆ ಅನುಮತಿ
- ರಾತ್ರಿ 7 ಗಂಟೆ ಬಳಿಕ ಎಂ.ಜಿ.ರಸ್ತೆ, ಚರ್ಚ್ ಸ್ಟ್ರೀಟ್ ವಾಹನ ಸಂಚಾರ ಬಂದ್
- ಮಹಿಳೆಯರ ಸುರಕ್ಷತೆಗಾಗಿ ಮಹಿಳಾ ಪೊಲೀಸರ ನಿಯೋಜನೆ
- ಲೌಡ್ ಸ್ಪೀಕರ್, ಪಟಾಕಿ ಸಿಡಿಸುವುದಕ್ಕೆ ನಿರ್ಬಂಧ
- ಅನುಮತಿ ಪಡೆದ ಕಡೆ ಮಾತ್ರ ಹೆಚ್ಚು ಜನರು ಸೇರಿ ಆಚರಣೆಗೆ ಅವಕಾಶ
- ಮದ್ಯ ಸೇವಿಸಿ ವಾಹನ ಚಾಲನೆ ಹಾಗೂ ವ್ಹೀಲಿ ನಡೆಸಿದರೆ ಕ್ರಮ
- ಅನುಚಿತ ವರ್ತನೆ ಮಾಡಿದರೆ ಬಂಧನ
- ದೊಡ್ಡ ಪರದೆಗಳ ಮೂಲಕ ಪೊಲೀಸರ ನಿಗಾ

ರಜೆ ಪಡೆಯದಂತೆ ಅಧಿಕಾರಿಗಳಿಗೆ ಡಿಸಿಎಂ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ಹೊಸ ವರ್ಷ ಆಚರಣೆ ಹಿನ್ನೆಲೆಯಲ್ಲಿ ಬಿಬಿಎಂಪಿ, ಬೆಸ್ಕಾಂ, ಬಿಡಬ್ಲ್ಯುಎಸ್‌ಎಸ್‌ಬಿ ಇಲಾಖೆಯ ಅಧಿಕಾರಿಗಳು ರಜೆ ಮೇಲೆ ತೆರಳದಂತೆ ಹಾಗೂ ಸಿಬ್ಬಂದಿ ವರ್ಗಕ್ಕೆ ರಜೆ ನೀಡದಂತೆ ಸೂಚನೆ ನೀಡಿದ್ದೇನೆ. ಎಲ್ಲರೂ ಸಹ ನಗರದಲ್ಲಿಯೇ ಇರಬೇಕು ಎಂದು ತಿಳಿಸಲಾಗಿದೆ’ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ನಗರದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ‘ಮೂರನೇ ತಾರೀಕಿನವರೆಗೂ ಜನರು ಹೊಸ ವರ್ಷದ ಸಂಭ್ರಮಾಚರಣೆಯಲ್ಲಿ ಇರುತ್ತಾರೆ. ಬಹಳ ಜಾಗ್ರತೆಯಿಂದ ಎಲ್ಲಾ ವ್ಯವಸ್ಥೆ ಮಾಡಬೇಕು. ಜನರಿಗೆ ಸೇವೆಯನ್ನು ನೀಡಬೇಕು ಹಾಗೂ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಬೇಕು. ಅದಕ್ಕಾಗಿ ಬೆಂಗಳೂರು ನಗರದ ಎಲ್ಲಾ ವಲಯದ ಅಧಿಕಾರಿಗಳು ಹಾಜರಿರಬೇಕು ಎಂದು ಸೂಚಿಸಿದ್ದೇನೆ’ ಎಂದು ತಿಳಿಸಿದರು.



ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ವಾಸವಿ ಕಾಂಡಿಮೆಂಟ್ಸ್ ಆಯೋಜಿಸಿರುವ ಅವರೆ ಮೇಳಕ್ಕೆ ಭೇಟಿ ನೀಡಿದರು

ಅವರೆಮೇಳಕ್ಕೆ ಭೇಟಿ: ನಗರದಲ್ಲಿ ವಾಸವಿ ಕಾಂಡಿಮೆಂಟ್ಸ್ ಆಯೋಜಿಸಿರುವ ‘ಅವರೆ ಮೇಳ’ದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾಗವಹಿಸಿದರು.

ಮೇಳದಲ್ಲಿ ಪಾಲ್ಗೊಂಡ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ‘ಬಲ್ಲವನೇ ಬಲ್ಲ ಅವರೆ ರುಚಿಯ. ಎಲ್ಲಾ ಕಾಳುಗಳಿಗೆ ರಾಜ ಅವರೆ. ನಾನೂ ಸಹ ಅವರೆಯನ್ನು ಬೆಳೆಯುವ ರೈತ. ರೈತರಿಂದ, ರೈತರಿಗಾಗಿ, ರೈತರ ಒಳಿತಿಗಾಗಿ ಇಂತಹ ಮೇಳಗಳು ಹೆಚ್ಚು ನಡೆಯಬೇಕು. ಇತರೇ ಮೇಳಗಳಿಗಿಂತ ರೈತರ ಪರ ವಾದ ಮೇಳಗಳು ಇಂದಿನ ಅಗತ್ಯ’ ಎಂದರು.

‘ನಮ್ಮ ಭಾಗಕ್ಕಿಂತ ಮಾಗಡಿ ಭಾಗದ ಅವರೆಯಲ್ಲಿ ಸೊಗಡು ಹೆಚ್ಚು. ಒಂದೊಂದು ಭೂಮಿಯಲ್ಲಿ ಬೆಳೆಯುವ ಅವರೆ ರುಚಿ ವಿಭಿನ್ನವಾಗಿರುತ್ತದೆ’ ಎಂದು ಹೇಳಿದರು.

ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡ, ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಪಂದ್ಯದಲ್ಲಿ ಸೋಮವಾರ 2–0 ಗೋಲುಗಳಿಂದ ಪರಿಕ್ರಮ ಎಫ್‌ಸಿ ತಂಡವನ್ನು ಸೋಲಿಸಿತು.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಇನ್ನೊಂದು ಪಂದ್ಯದಲ್ಲಿ ಎಎಸ್‌ಸಿ ಸೆಂಟರ್ ಎಫ್‌ಸಿ ತಂಡ 4–1 ಗೋಲುಗಳಿಂದ ರಿಯಲ್ ಚಿಕ್ಕಮಗಳೂರು ಎಫ್‌ಸಿ ತಂಡವನ್ನು ಮಣಿಸಿತು.

ಬಿ ಡಿವಿಷನ್: ರಿವೈವ್ ಎಫ್‌ಸಿ ತಂಡ 3–3 ಗೋಲುಗಳಿಂದ ಮೊಹಮ್ಮಡನ್ ಸ್ಪೋರ್ಟಿಂಗ್ ಎಫ್‌ಸಿ ಜೊತೆ ಡ್ರಾ ಮಾಡಿಕೊಂಡಿತು.

ಎರಡನೇ ಪಂದ್ಯದಲ್ಲಿ ಅಂಚೆ ಇಲಾಖೆ ಫುಟ್‌ಬಾಲ್ ಕ್ಲಬ್ 2–2 ಗೋಲುಗಳಿಂದ ಅಲ್ ಫತೇ ಎಫ್‌ಸಿ ತಂಡದ ಜೊತೆ ಡ್ರಾ ಮಾಡಿಕೊಂಡಿತು.

ಮತ್ತೊಂದು ಪಂದ್ಯದಲ್ಲಿ ಸ್ಟ್ರೈಡ್ ಎಫ್‌ಸಿ ತಂಡ 2–0 ಗೋಲುಗಳಿಂದ ವೆಹಿಕಲ್ಸ್ ಎಫ್‌ಸಿ ವಿರುದ್ಧ 2–0 ಗೋಲುಗಳಿಂದ ಜಯಗಳಿಸಿತು.

ಮಂಗಳೂರಿಗೆ ಪ್ರವಾಸಿಗರ ದೌಡು

ಮಂಗಳೂರು: ಹೊಸ ವರ್ಷಾಚರಣೆಗೆ ನಗರದಲ್ಲಿ ಭರ್ಜರಿ ತಯಾರಿ ನಡೆದಿದ್ದು, ಪ್ರವಾಸಿಗರು ಭಾರಿ ಸಂಖ್ಯೆಯಲ್ಲಿ ಕರಾವಳಿಯತ್ತ ಮುಖ ಮಾಡಿದ್ದಾರೆ. ನಗರದ ಬಹುತೇಕ ಹೋಟೆಲ್‌ಗಳು ಪ್ರವಾಸಿಗರಿಂದ ಭರ್ತಿಯಾಗಿವೆ.

ನಗರದ ಐಷಾರಾಮಿ ಹೋಟೆಲ್‌ಗಳು ಹಾಗೂ ರೆಸಾರ್ಟ್‌ಗಳು ಪ್ರವಾಸಿಗರನ್ನು ಸೆಳೆಯುವ ಸಲುವಾಗಿ ಆಕರ್ಷಕ ಕಾರ್ಯಕ್ರಮಗಳನ್ನು, ವಿವಿಧ ವಿನೋದಾವಳಿಗಳನ್ನು ಏರ್ಪಡಿಸಿವೆ. ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ 49 ಕಡೆ ಹೊಸ ವರ್ಷಾಚರಣೆ ಪ್ರಯುಕ್ತ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲು ಪೊಲೀಸ್ ಇಲಾಖೆ ಅನುಮತಿ ನೀಡಿದೆ.

‘ನಗರದಲ್ಲಿ 25ಕ್ಕೂ ಹೆಚ್ಚು ಕೊಠಡಿಗಳಿರುವ 100ಕ್ಕೂ ಹೆಚ್ಚು ಹೋಟೆಲ್‌ಗಳಿವೆ. 4000ಕ್ಕೂ ಹೆಚ್ಚು ಕೊಠಡಿಗಳು ಬಾಡಿಗೆಗಾಗಿ ಇವೆ. ಬಹುತೇಕ ಎಲ್ಲ ಹೋಟೆಲ್‌ಗಳ ಕೊಠಡಿಗಳೂ ಭರ್ತಿಯಾಗಿವೆ’ ಎಂದು ಮಂಗಳೂರು ಹೋಟೆಲ್ ಅಸೋಸಿಯೇಷನ್ ಅಧ್ಯಕ್ಷ ಚಂದ್ರಹಾಸ ಶೆಟ್ಟಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಬೇಡಿಕೆ ಹೆಚ್ಚಾಗಿದ್ದರಿಂದ ಕೊಠಡಿಗಳ ಬಾಡಿಗೆ ದರವೂ ಶೇ 30ರಿಂದ ಶೇ 40ರಷ್ಟು ಹೆಚ್ಚಾಗಿದೆ. ಡಿ.31ರಂದು ಕನಿಷ್ಠ ₹500ರಿಂದ ಗರಿಷ್ಠ ₹ 15 ಸಾವಿರದವರೆಗೂ ಬಾಡಿಗೆ ದರ ನಿಗದಿಯಾಗಿದೆ’ ಎಂದು ಅವರು ತಿಳಿಸಿದರು.

‘ಉದ್ಯೋಗ ನಿಮಿತ್ತ ವಿದೇಶಗಳಲ್ಲಿ, ಮುಂಬೈನಲ್ಲಿ ನೆಲೆಸಿರುವವರು ವರ್ಷಾಂತ್ಯದಲ್ಲಿ ಬಂಧು ಬಳಗ–ಸ್ನೇಹಿತರ ಜೊತೆ ಊರಿಗೆ ಮರಳುವುದು ವಾಡಿಕೆ. ಆದರೆ, ಕೋವಿಡ್ ಬಳಿಕ ನಗರದಲ್ಲಿ ಹೊಸ ವರ್ಷಾಚರಣೆ ಸಂಭ್ರಮ ಸ್ವಲ್ಪ ಮಂಕಾಗಿತ್ತು. ಈ ವರ್ಷ ಗತ ವೈಭವ ಮರಳಿದೆ. ನಗರದ ಯಾವ ಹೋಟೆಲ್‌ಗಳಲ್ಲೂ ಬಾಡಿಗೆಗೆ ಕೊಠಡಿ ಲಭಿಸುತ್ತಿಲ್ಲ’ ಎಂದು ಮಂಗಳೂರು ಹೋಟೆಲ್ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ನಿಶಾಂಕ್ ಸುವರ್ಣ ತಿಳಿಸಿದರು.

‘ಹೋಟೆಲ್ ಕೊಠಡಿಗಳಿಗೆ 2024ರ ಡಿ. 17ರಿಂದಲೇ ಭಾರಿ ಬೇಡಿಕೆ ಸೃಷ್ಟಿಯಾಗಿತ್ತು. ಬಾಡಿಗೆ ದರ ಹೆಚ್ಚಿಸಿದರೂ ಬೇಡಿಕೆಯೂ ಹೆಚ್ಚುತ್ತಲೇ ಇದೆ. ಈ ಸಲ ಕರಾವಳಿ ಉತ್ಸವ ಆಯೋಜನೆ, ಮದುವೆ ಸಮಾರಂಭಗಳ ಸಂಖ್ಯೆ ಹೆಚ್ಚು ಇರುವುದು ಜಿಲ್ಲೆಯಲ್ಲಿ ಪ್ರವಾಸಿಗರ ಸಂಖ್ಯೆ ಭಾರಿ ಪ್ರಮಾಣದಲ್ಲಿ ಹೆಚ್ಚಳವಾಗುವುದಕ್ಕೆ ಕಾರಣವಿರಬಹುದು’ ಎಂದರು.

ರೆಸಾರ್ಟ್‌ಗಳೂ ಭರ್ತಿ: ಜಿಲ್ಲೆಯ ರೆಸಾರ್ಟ್ ಹಾಗೂ ಹೋಂ ಸ್ಟೇಗಳಿಗೂ ವರ್ಷಾಂತ್ಯದಲ್ಲಿ ಬೇಡಿಕೆ ಹೆಚ್ಚಿದೆ. ಅವುಗಳಲ್ಲೂ ಕೊಠಡಿಗಳು ಬಾಡಿಗೆಗೆ ಸಿಗುತ್ತಿಲ್ಲ. ಹೆಚ್ಚಿನ ರೆಸಾರ್ಟ್‌ಗಳು ಒಂದೆರಡು ತಿಂಗಳು ಮುನ್ನವೇ ಭರ್ತಿಯಾಗಿವೆ. ‘ರೆಸಾರ್ಟ್‌ಗಳಲ್ಲೂ ಬಾಡಿಗೆಗೆ ಕೊಠಡಿಗಳು ಸಿಗುತ್ತಿಲ್ಲ. ಕೊಠಡಿಗಳಿದ್ದರೂ ಮಾಲೀಕರು ದುಬಾರಿ ದರ ಹೇಳುತ್ತಿದ್ದಾರೆ’ ಎಂದು ಪ್ರವಾಸಿಗ ಹರೀಶ್ ತಿಳಿಸಿದರು.

ದಾಸನಪುರ ಹೋಬಳಿ ಹುಸ್ಕೂರು: ಪ್ರಯಾಣಿಕರಿಗೆ ಸಂಕಷ್ಟ

ನಿರ್ವಹಣೆ ಕೊರತೆ; ತಂಗುದಾಣ ಶಿಥಿಲ

• ಬೈಲಮೂರ್ತಿ.ಜಿ


ಹೆಸರಘಟ್ಟ: ದಾಸನಪುರ ಹೋಬಳಿ ಹುಸ್ಕೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಮಾಕಳಿ-ಹುಸ್ಕೂರು ಮುಖ್ಯರಸ್ತೆಯ ಕೃಷಿ ಮಾರುಕಟ್ಟೆ ಸಮೀಪದ ಪಿಳ್ಳಹಳ್ಳಿ ಕ್ರಾಸ್‌ನಲ್ಲಿರುವ ಪ್ರಯಾಣಿಕರ ತಂಗುದಾಣ ಸಂಪೂರ್ಣ ಶಿಥಿಲವಾಗಿದೆ. ಸ್ವಚ್ಛತೆ ಇಲ್ಲದೆ ಗಬ್ಬುನಾರುತ್ತಿದೆ.

ತಂಗುದಾಣದ ಚಾವಣಿ ಶಿಥಿಲವಾಗಿದ್ದು ಬೀಳುವ ಹಂತದಲ್ಲಿದೆ. ಮಳೆ ಬಂದರೆ ಸೋರುತ್ತದೆ. ಕಸ, ತ್ಯಾಜ್ಯಗಳನ್ನು ತುಂಬುವ ಜಾಗವಾಗಿದೆ.ಈ ತಂಗುದಾಣದಲ್ಲಿ ಕೆಲವು ತಿಂಗಳುಗಳಿಂದ ಲಗೇಜ್ ಆಟೊ ನಿಲ್ಲಿಸುತ್ತಿದ್ದಾರೆ. ಇಲ್ಲಿ ಸುರಿದ ಕಸದ ರಾಶಿಗೆ ಒಮ್ಮೊಮ್ಮೆ ಬೆಂಕಿ ಹಚ್ಚಲಾಗುತ್ತದೆ. ಸ್ವಚ್ಛತೆ ಇಲ್ಲದ ಕಾರಣ, ಪ್ರಯಾಣಿಕರು ತಂಗುದಾಣದಲ್ಲಿ ನಿಲ್ಲುತ್ತಿಲ್ಲ. ಈ ತಂಗುದಾಣವು ದಾಸನಪುರ ಕೃಷಿ ಉತ್ಪನ್ನ ಮಾರುಕಟ್ಟೆಗೆ ಹೊಂದಿಕೊಂಡಂತಿದೆ. ಇದೇ ರಸ್ತೆಯಲ್ಲಿ ನೆಲಮಂಗಲ, ದೊಡ್ಡ-ಬಳ್ಳಾಪುರ ಮಾಕಳಿ, ಬೆಂಗಳೂರು ಕಡೆಗೆ ಹೋಗುವಂತಹ ಬಸ್ಸುಗಳು ಸಂಚರಿಸುತ್ತವೆ. ಇಲ್ಲಿ ಹೆಚ್ಚು ಪ್ರಯಾಣಿಕರು ಬಸ್‌ಗಳಿಗಾಗಿ ಕಾಯುತ್ತಾರೆ. ತಂಗುದಾಣ ಹಾಳಾಗಿರುವುದರಿಂದ, ಪ್ರಯಾಣಿಕರು ಬಿಸಿಲು, ಮಳೆಯಲ್ಲೇ ಬಸ್ಸಿಗಾಗಿ ಕಾಯುವ ಪರಿಸ್ಥಿತಿ ಇದೆ.

‘ತಂಗುದಾಣದ ಚಾವಣಿ ಸೇರಿದಂತೆ, ಹಾಳಾಗಿರುವ ಎಲ್ಲ ಭಾಗಗಳನ್ನು ದುರಸ್ತಿಗೊಳಿಸಬೇಕು. ತ್ಯಾಜ್ಯ ವಿಲೇವಾರಿ ಮಾಡಿ ಸ್ವಚ್ಛತೆ ಕಾಪಾಡಬೇಕು. ಉತ್ತಮ ಆಸನಗಳ ವ್ಯವಸ್ಥೆಯಾಗಬೇಕು. ಪ್ರಯಾಣಿಕರು ನಿಲ್ಲಲು ಮತ್ತು ಕುಳಿತುಕೊಳ್ಳುವಂತಹ ವಾತಾವರಣ ನಿರ್ಮಿಸಬೇಕು’ ಎಂದು ಸ್ಥಳೀಯ ವ್ಯಾಪಾರಿ ನಾಗರಾಜು ಹುಸ್ಕೂರು ಗ್ರಾಮ ಪಂಚಾಯಿತಿ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.



ಪಿಳ್ಳಹಳ್ಳಿ ಕ್ರಾಸ್‌ನಲ್ಲಿರುವ ಪ್ರಯಾಣಿಕರ ತಂಗುದಾಣದ ದುಸ್ಥಿತಿ



ಬಸ್ ತಂಗುದಾಣ ಹಾಳಾಗಿರುವುದು ನನ್ನ ಗಮನಕ್ಕೆ ಬಂದಿಲ್ಲ. ಕೂಡಲೇ ಸ್ಥಳ ಪರಿಶೀಲನೆ ಮಾಡಿ ಪಂಚಾಯಿತಿ ವತಿಯಿಂದ ದುರಸ್ತಿಮಾಡಲು ಕ್ರಮ ಕೈಗೊಳ್ಳಲಾಗುವುದು

ಬಿ.ರಮೇಶ್

ಅಧ್ಯಕ್ಷ, ಹುಸ್ಕೂರು ಗ್ರಾಮ ಪಂಚಾಯಿತಿ

ಸಂಕ್ಷಿಪ್ತ ಸುದ್ದಿ

ಕಾದಂಬರಿ ಪ್ರಶಸ್ತಿಗೆ ಕೃತಿ ಆಹ್ವಾನ

ಬೆಂಗಳೂರು: ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನವು ರಾಜ್ಯಮಟ್ಟದ ಅತ್ಯುತ್ತಮ ಕಾದಂಬರಿ ಪ್ರಶಸ್ತಿಗಾಗಿ ಲೇಖಕರು ಮತ್ತು ಪ್ರಕಾಶಕರಿಂದ ಕಾದಂಬರಿಗಳನ್ನು ಆಹ್ವಾನಿಸಿದೆ.



ಪ್ರಶಸ್ತಿಯು ₹25 ಸಾವಿರ ನಗದು ಬಹುಮಾನ ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. ಕಾದಂಬರಿ 2024ರಲ್ಲಿ ಪ್ರಕಟವಾಗಿರಬೇಕು. ಕಾದಂಬರಿಯ ಮೂರು ಪ್ರತಿಗಳನ್ನು ಜನವರಿ 30ರೊಳಗೆ ಈ ಕೆಳಗೆ ನೀಡಿರುವ ವಿಳಾಸಕ್ಕೆ ಕಳುಹಿಸಬೇಕೆಂದು ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ. ಹನೀಫ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪುಸ್ತಕ ಕಳುಹಿಸಬೇಕಾದ ವಿಳಾಸ: ಅಧ್ಯಕ್ಷರು, ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ, ನಂ. 118, 'ಹೊಂಬೆಳಕು', 5ನೇ ಕ್ರಾಸ್, 1ನೇ ಬ್ಲಾಕ್, ಎಚ್.ಎಂ.ಟಿ. ಲೇಔಟ್, ನಾಗಸಂದ್ರ ಅಂಚೆ, ಬೆಂಗಳೂರು 560073. ಹೆಚ್ಚಿನ ಮಾಹಿತಿಗಾಗಿ: 9686073837/7760350244 ಸಂಪರ್ಕಿಸಬಹುದು.

ಬಾಲ ಸಾಹಿತ್ಯ ಪುರಸ್ಕಾರಕ್ಕೆ ಪುಸ್ತಕ ಆಹ್ವಾನ



ಸಿಂದಗಿ (ವಿಜಯಪುರ ಜಿಲ್ಲೆ): 2024ರಲ್ಲಿ ಪ್ರಕಟಗೊಂಡ ಮಕ್ಕಳ ಸಾಹಿತ್ಯ ಪುಸ್ತಕಗಳನ್ನು 'ಬಾಲ ಸಾಹಿತ್ಯ ಪುರಸ್ಕಾರ'ಕ್ಕಾಗಿ ಆಹ್ವಾನಿಸಲಾಗಿದೆ. ಪಟ್ಟಣದ ವಿದ್ಯಾಚೇತನ ಪ್ರಕಾಶನವು ಪುರಸ್ಕಾರ ನೀಡಲಿದೆ.

ಆಸಕ್ತ ಲೇಖಕರು ಮಕ್ಕಳ ಕಥೆ, ಕವನ ಮತ್ತು ಕಾದಂಬರಿ ಪುಸ್ತಕಗಳನ್ನು ಪ್ರತ್ಯೇಕವಾಗಿ ಕಳುಹಿಸಬಹುದು. ಮಕ್ಕಳ ಕಥೆ, ಕವನ, ಕಾದಂಬರಿ ಮೂರು ಪುಸ್ತಕಗಳಿಗೆ ಪ್ರತ್ಯೇಕವಾಗಿ ₹5 ಸಾವಿರ ನಗದು, ಪ್ರಶಸ್ತಿ ಫಲಕ ನೀಡಲಾಗುವುದು. ಪುಸ್ತಕದ 4 ಪ್ರತಿಗಳನ್ನು ಪೋಸ್ಟ್ ಇಲ್ಲವೇ ಕೊರಿಯರ್ ಮೂಲಕ ಜನವರಿ 25 ರೊಳಗೆ ಕಳುಹಿಸಬೇಕು.

ಸಂಪರ್ಕ ವಿಳಾಸ: ಹ.ಮ.ಪೂಜಾರ, ಸಂಸ್ಥಾಪಕ ಅಧ್ಯಕ್ಷ, ವಿದ್ಯಾಚೇತನ ಪ್ರಕಾಶನ, ಸಂಗಮೇಶ್ವರ ಕಾಲೊನಿ ಸಿಂದಗಿ-586128, ವಿಜಯಪುರ. ದೂರವಾಣಿ ಸಂಖ್ಯೆ: 9448986222.

ಸ್ಪರ್ಧಾತ್ಮಕ ಪರೀಕ್ಷೆ ಪಾಸು ಮಾಡಿಸುವುದಾಗಿ ಹಣ ಪಡೆಯುತ್ತಿದ್ದ ಆರೋಪಿ

ರೈಲ್ವೆ ಪ್ರಧಾನ ಟಿಕೆಟ್ ಇನ್‌ಸ್ಪೆಕ್ಟರ್ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಇಲಾಖೆಯಲ್ಲಿ ಖಾಲಿಯಿರುವ ಸರ್ಕಾರಿ ಹುದ್ದೆಗಳಿಗೆ ನಡೆಸಲಾಗುವ ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳನ್ನು ಉತ್ತೀರ್ಣಗೊಳಿಸುವುದಾಗಿ ನಂಬಿಸಿ, ಹಣ ಪಡೆದು ವಂಚಿಸುತ್ತಿದ್ದ ರೈಲ್ವೆ ಇಲಾಖೆಯ ಪ್ರಧಾನ ಟಿಕೆಟ್ ಇನ್‌ಸ್ಪೆಕ್ಟರ್ ಗೋವಿಂದರಾಜ್ (49) ಅವರನ್ನು ವಿಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಗೋವಿಂದರಾಜು ಅವರು ಮೆಜೆಸ್ಟಿಕ್ ಬಳಿಯ ನೈರುತ್ಯ ರೈಲ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ನಾಗರಬಾವಿಯ 'ಡಿ' ಗ್ರೂಪ್ ಲೇಔಟ್‌ನಲ್ಲಿ ವಾಸವಿದ್ದರು.

ಬಾತ್ಮೀದಾರರು ಪೊಲೀಸರಿಗೆ ನೀಡಿದ್ದ ಖಚಿತ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಲಾಯಿತು. ಯೋಗಾ ರಮೇಶ್ ಎಂಬವರ ಮನೆಯಿಂದ ಆರೋಪಿ ಹೊರಕ್ಕೆ ಬಂದು ನಡೆದು ತೆರಳುತ್ತಿದ್ದ ವೇಳೆ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಮಾತುಕತೆಗೆ ಬಂದಿದ್ದ ಆರೋಪಿ: ವಿಜಯನಗರದ ನಿವಾಸಿ ರಮೇಶ್ ಅವರ ಪುತ್ರಿ ಡಿ.29ರಂದು ನಡೆದ ಕೆಎಎಸ್ ಪರೀಕ್ಷೆ ತೆಗೆದುಕೊಂಡಿದ್ದರು. ಪರೀಕ್ಷೆಯಲ್ಲಿ ಉತ್ತೀರ್ಣಗೊಳಿಸುವ ಸಂಬಂಧ ಮಾತುಕತೆಗೆ ರಮೇಶ್ ಮನೆಗೆ ಗೋವಿಂದರಾಜು ಬಂದಿದ್ದರು ಎಂದು ಗೊತ್ತಾಗಿದೆ.



ಗೋವಿಂದರಾಜು

ಆರೋಪಿ ಬಳಿಯಿಂದ ನಾಲ್ಕು ಮೊಬೈಲ್ ಹಾಗೂ ಪ್ರಕರಣಕ್ಕೆ ಸಂಬಂಧಿಸಿದ ಕೆಲವು ದಾಖಲೆಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ಆರೋಪಿ ವಿರುದ್ಧ ಬಿಎನ್‌ಎಸ್‌ಎಸ್ ಕಲಂ 35ರ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

'ಕೆಎಎಸ್, ಪಿಡಿಒ, ಗ್ರಾಮ ಲೆಕ್ಕಾಧಿಕಾರಿ ಸೇರಿದಂತೆ ಇತರೆ ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳನ್ನು ಆರೋಪಿ ಮಧ್ಯವರ್ತಿಗಳ ಮೂಲಕ ಸಂಪರ್ಕಿಸಿ ಪರೀಕ್ಷೆಯಲ್ಲಿ ಉತ್ತೀರ್ಣಗೊಳಿಸುವುದಾಗಿ ನಂಬಿಸುತ್ತಿದ್ದರು. ಇದಕ್ಕೆ ಹಣ ಕೊಡುವಂತೆ ಹೇಳುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಪರೀಕ್ಷಾ ಅಕ್ರಮಕ್ಕೆ ಸಂಬಂಧಿಸಿದಂತೆ 2018ರಲ್ಲೂ ಗೋವಿಂದರಾಜು ಅವರ ವಿರುದ್ಧ ಸಿಸಿಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಕೆಎಎಸ್ ಪರೀಕ್ಷೆ ಉತ್ತೀರ್ಣಕ್ಕೆ ₹50 ಲಕ್ಷ: 'ವಿವಿಧ ಜಿಲ್ಲೆಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಂಡವರನ್ನು ಆರೋಪಿ, ಮಧ್ಯವರ್ತಿಗಳ ಮೂಲಕ ಪತ್ತೆ ಹಚ್ಚುತ್ತಿದ್ದರು. ನಂತರ, ಅವರನ್ನು ಮೊಬೈಲ್ ಫೋನ್ ಮೂಲಕ ಸಂಪರ್ಕಿಸುತ್ತಿದ್ದರು. ಪಿಡಿಒ ಹುದ್ದೆಗೆ ₹25 ಲಕ್ಷ ಹಾಗೂ ಕೆಎಎಸ್ ಪೂರ್ವಭಾವಿ ಪರೀಕ್ಷೆಗೆ ₹50 ಲಕ್ಷ ನೀಡುವಂತೆ ಮಾತುಕತೆ ನಡೆಸುತ್ತಿದ್ದರು. ಖಚಿತವಾಗಿ ಗೊತ್ತಿರುವ ಪ್ರಶ್ನೆಗಳಿಗೆ ಒಎಂಆರ್ ಶೀಟ್‌ನಲ್ಲಿ ಉತ್ತರ ತುಂಬಿಸಿ ಗೊತ್ತಿಲ್ಲದ ಪ್ರಶ್ನೆಗಳಿಗೆ ಉತ್ತರವನ್ನು ಖಾಲಿ ಬಿಟ್ಟು ಬರುವಂತೆ ಪರೀಕ್ಷಾರ್ಥಿಗಳಿಗೆ ತಿಳಿಸುತ್ತಿದ್ದರು. ಅಲ್ಲದೇ ಪರೀಕ್ಷಾರ್ಥಿಗಳಿಂದ ಎಸ್‌ಎಸ್‌ಎಲ್‌ಸಿ ಹಾಗೂ ಪದವಿ ಅಂಕಪಟ್ಟಿಗಳು, ಚೆಕ್ ಸೇರಿದಂತೆ ಇತರೆ ದಾಖಲಾತಿಗಳನ್ನು ಪಡೆದುಕೊಳ್ಳುತ್ತಿದ್ದರು. ಇದೇ ರೀತಿ 46ಕ್ಕೂ ಹೆಚ್ಚು ಅಭ್ಯರ್ಥಿಗಳ ದಾಖಲಾತಿ ಪಡೆದುಕೊಂಡಿರುವ ಮಾಹಿತಿ ಸಿಕ್ಕಿದೆ. ಆರೋಪಿ ಗೋವಿಂದರಾಜು ಜತೆಗೆ ಇನ್ನೂ ಕೆಲವರು ಭಾಗಿಯಾಗಿರುವ ಮಾಹಿತಿ ಸಿಕ್ಕಿದೆ. ತನಿಖೆ ಮುಂದುವರಿದಿದೆ' ಎಂದು ಪೊಲೀಸರು ಹೇಳಿದರು.

ಕೆಎಸ್‌ಡಿಎಲ್ ಅಧಿಕಾರಿ ಆತ್ಮಹತ್ಯೆ



ಅಮೃತ್

ಬೆಂಗಳೂರು: ಕರ್ನಾಟಕ ಸೋಪ್ಸ್ ಆ್ಯಂಡ್ ಡಿಟರ್ಜೆಂಟ್ಸ್‌ನ (ಕೆಎಸ್‌ಡಿಎಲ್) ಮಾರುಕಟ್ಟೆ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಅಧಿಕಾರಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಅಮೃತ್ ಶಿರೂರ್ (40) ಆತ್ಮಹತ್ಯೆ ಮಾಡಿಕೊಂಡ ಅಧಿಕಾರಿ. ಕೌಟುಂಬಿಕ ಕಲಹದಿಂದ ಬೇಸತ್ತು ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ.

ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪ ಅಮೃತ್ ಅವರು ಕೆಎಸ್‌ಡಿಎಲ್‌ನಲ್ಲಿ ಕೆಲಸ ಮಾಡುತ್ತಿದ್ದರು. ಮಹಾಲಕ್ಷ್ಮಿ ಲೇಔಟ್‌ನ ಮುನೇಶ್ವರ ಬ್ಲಾಕ್‌ನ 4ನೇ ಮುಖ್ಯರಸ್ತೆಯ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಡಿ.28ರಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ತಮ್ಮ ಮನೆಯಲ್ಲಿ ಬಾಡಿಗೆಗೆ ಇದ್ದ ಅಮೃತ್ ಅವರು ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಮನೆ ಮಾಲೀಕ ಗಿರೀಶ್ ದೂರು ನೀಡಿದ್ದಾರೆ. ಬಿಎನ್‌ಎಸ್ ಕಲಂ 194 ಅಡಿ ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

'ಹತ್ತು ವರ್ಷದಿಂದ ಕೆಎಸ್‌ಡಿಎಲ್‌ನಲ್ಲಿ ಅಮೃತ್ ಅವರು ಕೆಲಸ ಮಾಡುತ್ತಿದ್ದರು. ಮೊದಲ ಪತ್ನಿಗೆ ವಿಚ್ಛೇದನ ನೀಡಿದ ಅವರು ಎರಡನೇ ಮದುವೆ ಆಗಿದ್ದರು. ಕೌಟುಂಬಿಕ ಕಲಹದಿಂದ ಬೇಸತ್ತು, ಎರಡನೇ ಪತ್ನಿಗೂ ವಿಚ್ಛೇದನ ನೀಡಲು ಮುಂದಾಗಿದ್ದರು. ವಿಚ್ಛೇದನ ಪ್ರಕ್ರಿಯೆಗಳು ನಡೆಯುತ್ತಿದ್ದು, ಬಾಡಿಗೆ ಮನೆಯಲ್ಲಿ ಒಬ್ಬರೇ ವಾಸವಿದ್ದರು. ಮಾನಸಿಕವಾಗಿ ನೊಂದಿದ್ದರು' ಎಂದು ಪೊಲೀಸರು ಹೇಳಿದರು.

ಮರಣ ಪತ್ರ ಪತ್ತೆ: ಸ್ಥಳದಲ್ಲಿ ಮರಣ ಪತ್ರ ಲಭಿಸಿದೆ. ಕೈಯಲ್ಲಿ ಮರಣ ಪತ್ರವನ್ನು ಹಿಡಿದುಕೊಂಡೇ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ತಂದೆ–ತಾಯಿಗೆ ಒಳ್ಳೆಯ ಮಗನಾಗಲಿಲ್ಲ. ಪತ್ನಿಗೆ ಒಳ್ಳೆಯ ಗಂಡನಾಗಲಿಲ್ಲ. ನನ್ನ ಸಾವಿಗೆ ನಾನೇ ಕಾರಣ, ಯಾರೂ ಕಾರಣರಲ್ಲ' ಎಂದು ಆ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಮರಣಪತ್ರವನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರವಾನೆ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಘಟನಾ ಸ್ಥಳ ಪರಿಶೀಲಿಸಿದಾಗ ಯಾವುದೇ ಸಂಶಯ ಕಂಡುಬಂದಿಲ್ಲ. ಮರಣೋತ್ತರ ಪರೀಕ್ಷೆಗಾಗಿ ಅಮೃತ್ ಶವ ಸ್ಥಳಾಂತರ ಮಾಡಲಾಗಿದೆ. ಮರಣೋತ್ತರ ಪರೀಕ್ಷೆ ವರದಿ ಆಧಾರದಲ್ಲಿ ತನಿಖೆ ಮಾಡಲಾಗುವುದು ಎಂದು ಪೊಲೀಸರು ಹೇಳಿದರು.

'ಸಿ.ಎಂ ಹಸ್ತಕ್ಷೇಪದಿಂದ ಕೆಪಿಎಸ್‌ಸಿ ಎಡವಟ್ಟು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯ ಮರುಪರೀಕ್ಷೆಯಲ್ಲಿ ಮತ್ತೆ ಎಡವಟ್ಟು ಮಾಡಿದ್ದು, ಲಕ್ಷಾಂತರ ಉದ್ಯೋಗಾಕಾಂಕ್ಷಿಗಳ ಭವಿಷ್ಯ ಡೋಲಾಯಮಾನವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ರಾಜಕೀಯ ಹಸ್ತಕ್ಷೇಪವೇ ಇದಕ್ಕೆ ಕಾರಣ ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಮರುಪರೀಕ್ಷೆ ನಡೆಸುವಲ್ಲೂ ಕಾಂಗ್ರೆಸ್ ಸರ್ಕಾರ ಮುಗ್ಗರಿಸಿದೆ ಎಂದು ಹೇಳಿದ್ದಾರೆ.

ಆಗಸ್ಟ್‌ನಲ್ಲಿ ನಡೆದ ಪೂರ್ವಭಾವಿ ಪರೀಕ್ಷೆಯಲ್ಲಿ ಭಾರಿ ಎಡವಟ್ಟುಗಳಾಗಿದ್ದವು. ಅಭ್ಯರ್ಥಿಗಳ ಆಕ್ರೋಶಕ್ಕೆ ಮಣಿದ ಸರ್ಕಾರ ಮರು ಪರೀಕ್ಷೆ ನಡೆಸಿತ್ತು. ಅದರಲ್ಲೂ ತಪ್ಪುಗಳ ಸರಮಾಲೆಯೇ ನಡೆದಿದೆ. ಭಾಷಾಂತರದಲ್ಲಿ ಲೋಪ, ಒಎಂಆರ್ ಶೀಟ್ ಮತ್ತು ನೋಂದಣಿ ಸಂಖ್ಯೆ ಅದಲು ಬದಲು, ಕೆಲವೆಡೆ 45 ನಿಮಿಷ ತಡವಾಗಿ ಪರೀಕ್ಷೆ ಆರಂಭ, ಹೀಗೆ ಸಾಲು ಸಾಲು ಲೋಪಗಳಿಂದ ಕೂಡಿದ್ದ ಭಾನುವಾರದ ಮರು ಪರೀಕ್ಷೆ ಮತ್ತೊಮ್ಮೆ ಅಭ್ಯರ್ಥಿಗಳ ಅಸಮಾಧಾನಕ್ಕೆ ಕಾರಣವಾಗಿದೆ ಎಂದು ಅವರು ಕಿಡಿಕಾರಿದ್ದಾರೆ.

ಮರು ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದ 2.10 ಲಕ್ಷ ಅಭ್ಯರ್ಥಿಗಳ ಪೈಕಿ ಕೇವಲ 1 ಲಕ್ಷ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದಾರೆ.



ಆರ್.ಅಶೋಕ

ಆಗಸ್ಟ್‌ನಲ್ಲಿ ನಡೆದ ಪರೀಕ್ಷೆಯಲ್ಲಿ ಶೇ 62.52 ರಷ್ಟಿದ್ದ ಹಾಜರಾತಿ, ಮರು ಪರೀಕ್ಷೆಯಲ್ಲಿ ಶೇ 47.7 ಕ್ಕೆ ಕುಸಿದಿದೆ. ಅಂದರೆ, ಅಭ್ಯರ್ಥಿಗಳು ಕಾಂಗ್ರೆಸ್ ಸರ್ಕಾರ ಹಾಗೂ ಕೆಪಿಎಸ್‌ಸಿ ಮೇಲೆ ಸಂಪೂರ್ಣ ನಂಬಿಕೆ ಕಳೆದುಕೊಂಡಿದ್ದಾರೆ ಎಂದು ಅಶೋಕ ಹೇಳಿದ್ದಾರೆ.

ಆಗಸ್ಟ್‌ನಲ್ಲಿ ನಡೆದ ಪೂರ್ವಭಾವಿ ಪರೀಕ್ಷೆಗೆ ₹13.40 ಕೋಟಿ ವೆಚ್ಚವಾಗಿತ್ತು. ಮರು ಪರೀಕ್ಷೆಗೂ ಅಷ್ಟೇ ಮೊತ್ತ ಅಥವಾ ಅದಕ್ಕಿಂತಲೂ ಹೆಚ್ಚು ಖರ್ಚಾಗಿರುತ್ತದೆ. ಪರೀಕ್ಷಾ ಗೋಪ್ಯತೆ ಕಾಪಾಡುವುದಕ್ಕೆ ಸುಮಾರು ₹5.3 ಕೋಟಿ ವೆಚ್ಚ ಮಾಡಲಾಗಿದೆ. ಇಷ್ಟಾದರೂ ಈ ಪರಿ ಎಡವಟ್ಟುಗಳು ಮರುಕಳಿಸಿವೆ ಎಂದರೆ ಇದಕ್ಕೆ ಯಾರು ಹೊಣೆ? ಸಾರ್ವಜನಿಕರ ತೆರಿಗೆ ಹಣವನ್ನು ಹೀಗೆ ಪೋಲು ಮಾಡುವುದು ಯಾವ ನ್ಯಾಯ? ಒಂದಲ್ಲ ಹತ್ತು ಬಾರಿ ಮರುಪರೀಕ್ಷೆ ನಡೆಸಿದರೂ ಈ ಸರ್ಕಾರಕ್ಕೆ ಪರೀಕ್ಷೆ ನಡೆಸುವ ಯೋಗ್ಯತೆ ಇಲ್ಲ ಎಂದಿದ್ದಾರೆ.

16 ಸದಸ್ಯರಿರುವ ಕೆಪಿಎಸ್‌ಸಿ ದೇಶದಲ್ಲೇ ದೊಡ್ಡ ಪರೀಕ್ಷಾ ಆಯೋಗ. ಅವರ ಸಂಬಳ, ಸಾರಿಗೆಗಾಗಿ ಸರ್ಕಾರ ಕೋಟ್ಯಂತರ ರೂಪಾಯಿ ಹಣ ವ್ಯಯ ಮಾಡುತ್ತಿದೆ. ಇಷ್ಟಾದರೂ ಗೊಂದಲ ಮುಕ್ತ ಪೂರ್ವಭಾವಿ ಪರೀಕ್ಷೆ ನಡೆಸಲು ವಿಫಲವಾಗುತ್ತಿದೆ ಎಂದು ದೂರಿದ್ದಾರೆ.

'ರಾಜಕೀಯ ಒತ್ತಡದ ಕಾರಣಕ್ಕೆ ಕಾನೂನುಬಾಹಿರವಾಗಿ ಎಫ್‌ಐಆರ್'

ರಾಜ್ಯಪಾಲರಿಗೆ ದೂರಿತ್ತ ಸಿ.ಟಿ.ರವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಳಗಾವಿ ವಿಧಾನಮಂಡಲ ಅಧಿವೇಶನದ ವೇಳೆ ವಿಧಾನ ಪರಿಷತ್ತಿನಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ಪೊಲೀಸರಾಗಲಿ ಸಿಐಡಿಯವರಾಗಲಿ ಎಫ್‌ಐಆರ್ ದಾಖಲಿಸುವ, ಪ್ರಶ್ನಿಸುವ ಮತ್ತು ತನಿಖೆ ನಡೆಸುವ ಅಧಿಕಾರ ವ್ಯಾಪ್ತಿ ಹೊಂದಿಲ್ಲ. ಆದರೆ, ರಾಜಕೀಯ ಒತ್ತಡದ ಕಾರಣಕ್ಕೆ ಕಾನೂನುಬಾಹಿರವಾಗಿ ಎಫ್‌ಐಆರ್ ದಾಖಲಿಸಲಾಗಿದೆ' ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರು ರಾಜ್ಯಪಾಲರಿಗೆ ದೂರು ನೀಡಿದ್ದಾರೆ.



ಸಿ.ಟಿ.ರವಿ

ಪಕ್ಷದ ಇತರ ನಾಯಕರ ಜತೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಸೋಮವಾರ ಭೇಟಿ ಮಾಡಿ ಈ ಕುರಿತು ಮನವಿ ಪತ್ರ ನೀಡಿದ್ದಲ್ಲದೇ, ಅದರ ಒಂದು ಪ್ರತಿಯನ್ನು ರಾಷ್ಟ್ರಪತಿಯವರಿಗೂ ಕಳುಹಿಸಿದ್ದಾರೆ.

'ಬೆಳಗಾವಿ ಪೊಲೀಸ್ ಆಯುಕ್ತರು, ಎಸ್‌ಪಿ ಮತ್ತು ಅವರ ಅಧೀನದ ಅಧಿಕಾರಿ ಗಳು ಶಾಮೀಲಾಗಿ ನನ್ನ ವಿರುದ್ಧ ಅಕ್ರಮವಾಗಿ ಎಫ್‌ಐಆರ್ ದಾಖಲು ಮಾಡಿದ್ದಾರೆ. ಕಾನೂನು ಉಲ್ಲಂಘಿಸಿರುವ ಈ ಅಧಿಕಾರಿಗಳ ವಿರುದ್ಧ ಮೊಕದ್ದಮೆ ದಾಖಲಿಸಿಕೊಳ್ಳಲು ಸೂಚನೆ ನೀಡಬೇಕು. ಅವರನ್ನು ಕಠಿಣ ಶಿಕ್ಷೆಗೂ ಗುರಿಪಡಿಸಬೇಕು. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಮತ್ತು ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೂ ಕಾನೂನು ಕ್ರಮ ಜರುಗಿಸಲು ಸೂಚಿಸ ಬೇಕು' ಎಂದು ರವಿ ಮನವಿ ಮಾಡಿದ್ದಾರೆ.

'ಖಾನಾಪುರ ಪೊಲೀಸ್ ಠಾಣೆಯಲ್ಲಿ ನನ್ನ ಮೇಲೆ ನಡೆದ ದೌರ್ಜನ್ಯಕ್ಕೆ ಸಂಬಂಧಿಸಿದ ದೂರಿನ ಪ್ರತಿಯನ್ನು ಬೆಳಗಾವಿ ಜಿಲ್ಲಾ ಎಸ್‌ಪಿ ಮೂಲೆಗೆ ಹಾಕಿದ್ದು, ಅದು ದೂಳು ತಿನ್ನುತ್ತಿದೆ. ಸಂವಿಧಾನದ ರಕ್ಷಕರಾಗಿರುವ ನೀವು ಪೊಲೀಸ್ ಮಹಾ ನಿರ್ದೇಶಕರನ್ನು ಕರೆಸಿ ಈ ಎಲ್ಲ ಘಟನೆಗಳಿಗೆ ಸಂಬಂಧಿಸಿದಂತೆ ವಿವರಣೆ ಪಡೆಯಬೇಕು. ಪೊಲೀಸ್ ದೌರ್ಜನ್ಯಕ್ಕೆ ಮೂಕಪ್ರೇಕ್ಷಕರಂತೆ ವರ್ತಿಸಿರುವ ಕಾರಣ ಆಯುಕ್ತರು ಮತ್ತು ಎಸ್‌ಪಿ ವಿರುದ್ಧವೂ ಕ್ರಮ ತೆಗೆದುಕೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

ಸಭಾಪತಿ ನಡೆಗೆ ಕಿಮ್ಮನೆ ರತ್ನಾಕರ ಬೇಸರ



ಕಿಮ್ಮನೆ ರತ್ನಾಕರ

ಬೆಂಗಳೂರು: ವಿಧಾನಪರಿಷತ್ ಒಳಗೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರನ್ನು ನಿಂದಿಸಿದ್ದ ಸಿ.ಟಿ. ರವಿ ಪ್ರಕರಣದಲ್ಲಿ ಸಭಾಪತಿ ನಡೆಗೆ ಮಾಜಿ ಸಚಿವ ಕಿಮ್ಮನೆ ರತ್ನಾಕರ ಬೇಸರ ವ್ಯಕ್ತಪಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಕಲಾಪ ಮುಂದೂಡಿದಾಗ ಲಕ್ಷ್ಮೀ ಹೆಬ್ಬಾಳಕರ ಅವರಿಗೆ ರವಿ ಅವರು ಅಹಿತಕರ ಮಾತು ಹೇಳಿದ್ದಾರೆ. ಆದರೆ, ಘಟನೆ ನಡೆದಿರುವುದು ಪರಿಷತ್ತಿನ ಸಭಾಂಗಣದೊಳಗೆ ಎನ್ನುವುದನ್ನು ಸಭಾಪತಿ ಬಸವರಾಜ ಹೊರಟ್ಟಿ ಮರೆಯಬಾರದು. ಸಾಂವಿಧಾನಿಕ ಹುದ್ದೆಯಲ್ಲಿರುವ ಅವರಿಗೆ ಕ್ರಮ ತೆಗೆದುಕೊಳ್ಳುವ ಅಧಿಕಾರವಿತ್ತು. ಕಲಾಪದ ವ್ಯಾಪ್ತಿಗೆ ಬರುವುದಿಲ್ಲವೆಂದು ನುಣಚಿಕೊಳ್ಳುವುದು ಸರಿಯಲ್ಲ ಎಂದರು.

ಈ ಘಟನೆ ನಡೆದಾಗ ಇದ್ದ ಎಲ್ಲರನ್ನೂ ಕರೆಸಿ ಸಾಕ್ಷ್ಯ ಸಂಗ್ರಹಿಸಬೇಕು, ಲಭ್ಯವಿರುವ ವಿಡಿಯೊಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಬೇಕು. ಸರ್ಕಾರದ ನೆರವು ಪಡೆಯಬೇಕು. ನಾಲ್ಕು ದಶಕ ವಿಧಾನಪರಿಷತ್‌ನಲ್ಲೇ ಕೆಲಸ ಮಾಡಿರುವ ಅವರಿಗೆ ನಿಷ್ಪಕ್ಷಪಾತವಾಗಿ ನಿಭಾಯಿಸುವ ಎಲ್ಲ ಸಾಮರ್ಥ್ಯವೂ ಇತ್ತು. ಈಗಲಾದರೂ, ಪ್ರಕರಣವನ್ನು ವೈಯಕ್ತಿಕವಾಗಿ ತೆಗೆದುಕೊಳ್ಳದೆ, ಕಾನೂನಿನ ವ್ಯಾಪ್ತಿಯಲ್ಲಿ ಪರಿಶೀಲಿಸಬೇಕು. ಹಕ್ಕು ಬಾಧ್ಯತಾ ಸಮಿತಿಗೆ ನೀಡಬೇಕು ಅಥವಾ ಉಪ ಸಮಿತಿ ರಚನೆ ಮಾಡಬೇಕು ಎಂದು ಒತ್ತಾಯಿಸಿದರು.

ರೇವಂತ್ ರೆಡ್ಡಿ ವಿರುದ್ಧ 89 ಪ್ರಕರಣಗಳು

ಸಿದ್ದರಾಮಯ್ಯ ವಿರುದ್ಧ 13 ಪ್ರಕರಣ



ಪ್ರಜಾವಾಣಿ ವಾರ್ತೆ

ನವದೆಹಲಿ: ಆಂಧ್ರ ಪ್ರದೇಶದ ಚಂದ್ರಬಾಬು ನಾಯ್ಡು ದೇಶದ ಅತ್ಯಂತ ಶ್ರೀಮಂತ ಮುಖ್ಯಮಂತ್ರಿ. ತೆಲಂಗಾಣದ ರೇವಂತ್ ರೆಡ್ಡಿ ವಿರುದ್ಧ 89 ಅಪರಾಧ ಪ್ರಕರಣಗಳಿವೆ. ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ 13 ಪ್ರಕರಣಗಳಿವೆ. ದೇಶದ 31 ಮುಖ್ಯಮಂತ್ರಿಗಳ ಅಪರಾಧ ಹಿನ್ನೆಲೆ, ಹಣಕಾಸು, ಶಿಕ್ಷಣ, ಲಿಂಗ ಹಾಗೂ ಇತರ ವಿಷಯಗಳ ಬಗ್ಗೆ ವಿಶ್ಲೇಷಣೆ ನಡೆಸಿ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಸೋಮವಾರ ವರದಿ ಪ್ರಕಟಿಸಿದೆ. 31 ಮುಖ್ಯಮಂತ್ರಿಗಳ ಪೈಕಿ ಇಬ್ಬರು ಮಾತ್ರ ಮಹಿಳೆಯರು.

13 ಅಪರಾಧ ಪ್ರಕರಣಗಳಿರುವ ಮುಖ್ಯಮಂತ್ರಿಗಳು

10 ಗಂಭೀರ ಅಪರಾಧ ಪ್ರಕರಣಗಳು

₹52.59 ಕೋಟಿ ಮುಖ್ಯಮಂತ್ರಿಗಳ ಸರಾಸರಿ ಆಸ್ತಿ

ಸಿಎಂಗಳ ವಿರುದ್ಧ ಪ್ರಕರಣ

ರೇವಂತ್ ರೆಡ್ಡಿ (ತೆಲಂಗಾಣ)	87
ಎಂ.ಕೆ. ಸ್ಟಾಲಿನ್ (ತಮಿಳುನಾಡು)	47
ಚಂದ್ರಬಾಬು ನಾಯ್ಡು (ಆಂಧ್ರ ಪ್ರದೇಶ)	19
ಸಿದ್ದರಾಮಯ್ಯ (ಕರ್ನಾಟಕ)	13



ಗರಿಷ್ಠ ಆಸ್ತಿ		
ಚಂದ್ರಬಾಬು ನಾಯ್ಡು (ಆಂಧ್ರ)	₹931 ಕೋಟಿ	₹10 ಕೋಟಿ ಸಾಲ
ಪೆಮಾ ಖಂಡು (ಅರುಣಾಚಲ ಪ್ರದೇಶ)	₹332 ಕೋಟಿ	₹182 ಕೋಟಿ ಸಾಲ
ಸಿದ್ದರಾಮಯ್ಯ (ಕರ್ನಾಟಕ)	₹51 ಕೋಟಿ	₹23 ಕೋಟಿ ಸಾಲ
ಕಡಿಮೆ ಆಸ್ತಿ		
ಮಮತಾ ಬ್ಯಾನರ್ಜಿ (ಪಶ್ಚಿಮ ಬಂಗಾಳ)	₹15 ಲಕ್ಷ	
ಒಮರ್ ಅಬ್ದುಲ್ಲಾ (ಜಮ್ಮು ಮತ್ತು ಕಾಶ್ಮೀರ)	₹55 ಲಕ್ಷ	
ಪಿಣರಾಯಿ ವಿಜಯನ್ (ಕೇರಳ)	₹1 ಕೋಟಿ	



ವಯಸ್ಸು 31-40: 1 | 41-50: 7 | 51-60: 12 | 61-70: 5 | 71-80: 6

ಶಿಕ್ಷಣ ಸ್ನಾತಕೋತ್ತರ 9 | ಪದವೀಧರ ವೃತ್ತಿಪರರು 5 | ಪದವಿ 10 | ಡಾಕ್ಟರೇಟ್ 2 | ಡಿಪ್ಲೊಮಾ 1 | ಪಿಯುಸಿ 3 | ಎಸ್‌ಎಸ್‌ಎಲ್‌ಸಿ 1

'ಮಗು ದತ್ತು: ಅತ್ಯಾಚಾರ ಆರೋಪಿ ಸಮ್ಮತಿ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅತ್ಯಾಚಾರದಿಂದಾಗಿ ಸಂತ್ರಸ್ತೆಗೆ ಜನಿಸಿದ ಮಗುವನ್ನು ದತ್ತು ತೆಗೆದುಕೊಳ್ಳಲು ಅತ್ಯಾಚಾರ ಆರೋಪಿಯ ಸಮ್ಮತಿ ಅಗತ್ಯವಿಲ್ಲ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಈ ಸಂಬಂಧದ ಪ್ರಕರಣವೊಂದರಲ್ಲಿ 16 ವರ್ಷದ ಅತ್ಯಾಚಾರ ಸಂತ್ರಸ್ತೆ, ಅವರ ತಾಯಿ ಹಾಗೂ ದತ್ತು ಪಡೆಯಲು ಮುಂದಾಗಿರುವ ಬೆಂಗಳೂರಿನ ಮುಸ್ಲಿಂ ದಂಪತಿ ಜಂಟಿಯಾಗಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಈ ಪ್ರಕರಣದಲ್ಲಿನ ಮಗುವಿನ ತಂದೆಯ ಸಮ್ಮತಿ ಪತ್ರ ಬೇಕು ಎಂದು ಕೇಳದೆ; 2024ರ ನವೆಂಬರ್ 11ರ ದತ್ತು ಡೀಡ್ ಅನ್ನು ನೊಂದಣಿ ಮಾಡಬೇಕು' ಎಂದು ಯಲಹಂಕ ಉಪನೋಂದಣಾಧಿಕಾರಿ ಅವರಿಗೆ ನಿರ್ದೇಶಿಸಿದೆ.

'51 ದಿನಗಳ ಮಗುವನ್ನು ದತ್ತು ಪಡೆಯಲು ಮುಸ್ಲಿಂ ದಂಪತಿ, ಬಾಲ ನ್ಯಾಯ (ಆರೈಕೆ ಮತ್ತು ರಕ್ಷಣಾ) ಕಾಯ್ದೆ-2015 ಮತ್ತು ಅದರಡಿ ರೂಪಿಸಿರುವ ನಿಯಮಗಳ ಅನುಸಾರವೇ ಮುಂದಾಗಿದ್ದಾರೆ. ಈ ಪ್ರಕರಣದಲ್ಲಿ ಪೋಷಕರು ಮಗುವಿನ ಆರೈಕೆ ಮತ್ತು ರಕ್ಷಣೆಗೆ ಅಸಮರ್ಥರಾಗಿರುವುದರಿಂದ ಅದು ಅನಾಥ ಎಂದು ಪರಿಗಣಿಸಲಾಗುತ್ತದೆ. ಹಾಗಾಗಿ, ಇಂತಹ ಪ್ರಕರಣದಲ್ಲಿ ಮಗುವಿನ ದತ್ತು ಪ್ರಕ್ರಿಯೆಗೆ ತಂದೆಯ (ಬಯಲಾಜಿಕಲ್ ಫಾದರ್) ಒಪ್ಪಿಗೆ ಅನಗತ್ಯ' ಎಂದು ನ್ಯಾಯಪೀಠ ತಿಳಿಸಿದೆ.

'ಒಂದು ವೇಳೆ ದತ್ತು ಪ್ರಕ್ರಿಯೆ ನಡೆಯದೇ ಹೋದರೆ ಮಗವು ಸಂವಿಧಾನದ 21ನೇ ವಿಧಿಯಡಿ ಜೀವಿಸುವ ಹಕ್ಕಿನಿಂದ ವಂಚಿತವಾಗುತ್ತದೆ. ಆದ್ದರಿಂದ, ಮಗುವಿನ ಬೆಳವಣಿಗೆ ಮತ್ತು ಯೋಗಕ್ಷೇಮವನ್ನು ಗಮನದಲ್ಲಿರಿಸಿಕೊಂಡು, ಶಾಸನಾತ್ಮಕ ಹಕ್ಕಿಗಿಂತ ನೈತಿಕತೆಯ ಆಧಾರದಡಿ ಈ ಪ್ರಕರಣವನ್ನು ಪರಿಗಣಿಸಬೇಕಾಗುತ್ತದೆ' ಎಂದಿದೆ.

'ಬಾಲ ನ್ಯಾಯ ಕಾಯ್ದೆ-2015ರ ಕಲಂ 38ರ ಪ್ರಕಾರ ಮಕ್ಕಳ ಕಲ್ಯಾಣ ಸಮಿತಿಯಿಂದ (ಸಿಡಬ್ಲ್ಯುಸಿ) ಪೋಷಕರು (ಬಯಲಾಜಿಕಲ್ ಪೇರೆಂಟ್ಸ್) ಹಾಗೂ ದತ್ತು ಪಡೆಯುವವರು ಇಬ್ಬರಿಂದಲೂ ಪ್ರತ್ಯೇಕ ಪ್ರಮಾಣ ಪತ್ರಗಳನ್ನು ಪಡೆದು ವರದಿ ಸಲ್ಲಿಸಲಾಗುತ್ತದೆ. ಆದರೆ, ಈ ಪ್ರಕರಣದಲ್ಲಿ ತಂದೆಯ ಪ್ರತ್ಯೇಕ ಘೋಷಣಾ ಪತ್ರ ಬೇಕಾಗಿಲ್ಲ' ಎಂದು ನ್ಯಾಯಪೀಠ ಹೇಳಿದೆ.

ಅಪಘಾತ ಪರಿಹಾರ ಒಂದೂವರೆ ಪಟ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಸ್ತೆ ಅಪಘಾತದಲ್ಲಿ ಗಾಯಗೊಂಡು ಎರಡೂ ಕಣ್ಣುಗಳ ದೃಷ್ಟಿ ಕಳೆದುಕೊಂಡಿದ್ದ ಆಂಧ್ರಪ್ರದೇಶ ಅನಂತಪುರ ಜಿಲ್ಲೆ ಗುಡಿಬಂಡೆ ವ್ಯಾಪ್ತಿಯ ಕರಿಕೇರ ಗ್ರಾಮದ ಕಿರಣ್ ಕುಮಾರ್ (17) ನೆರವಿಗೆ ಮುಂದಾದ ಹೈಕೋರ್ಟ್, ಮೋಟಾರು ವಾಹನ ಅಪಘಾತ ನ್ಯಾಯಮಂಡಳಿ (ಎಂಎಸಿಟಿ) ನೀಡಿದ್ದ ಪರಿಹಾರವನ್ನು ಒಂದೂವರೆ ಪಟ್ಟು ಹೆಚ್ಚಳ ಮಾಡಿ ಆದೇಶಿಸಿದೆ.

'ಸಂತ್ರಸ್ತ ಯುವಕನಿಗೆ 2017ರಿಂದ ಅನ್ವಯವಾಗುವಂತೆ ವಾರ್ಷಿಕ ಶೇ 9ರ ಬಡ್ಡಿ ಸಹಿತ ₹21.8 ಲಕ್ಷ ಪರಿಹಾರ ಪಾವತಿಸಬೇಕು' ಎಂದು 'ಸೋಂಪೊ ಜನರಲ್ ವಿಮಾ ಕಂಪನಿ'ಗೆ ನಿರ್ದೇಶಿಸಿದೆ.

ಎಂಎಸಿಟಿ ಆದೇಶ ಪ್ರಶ್ನಿಸಿ ಸಂತ್ರಸ್ತ ಕಿರಣ್ ಕುಮಾರ್ ಮತ್ತು ವಿಮಾ ಕಂಪನಿ ಸಲ್ಲಿಸಿದ್ದ ಎರಡು ಪ್ರತ್ಯೇಕ ಮೇಲ್ಮನವಿಗಳನ್ನು ಆಲಿಸಿದ ನ್ಯಾಯಮೂರ್ತಿ ಕೆ.ಎಸ್. ಮುದಗಲ್ ಮತ್ತು ನ್ಯಾಯಮೂರ್ತಿ ವಿಜಯ್‌ಕುಮಾರ್ ಎ. ಪಾಟೀಲ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಅರ್ಜಿದಾರರು ಎರಡೂ ಕಣ್ಣುಗಳ ದೃಷ್ಟಿಯನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದಾರೆ. ಇದರಿಂದಾಗಿ ಅವರು ತಮ್ಮ ಮದುವೆ ಸೇರಿದಂತೆ ಹಲವು ಆನಂದದ ಕ್ಷಣಗಳಿಂದ ವಂಚಿತರಾಗಿದ್ದಾರೆ. ಹಾಗಾಗಿ, ಪರಿಹಾರವನ್ನು ಒಂದೂವರೆ ಪಟ್ಟು ಹೆಚ್ಚಳ ಮಾಡಲಾಗುತ್ತಿದೆ' ಎಂದು ನ್ಯಾಯಪೀಠ ಆದೇಶದಲ್ಲಿ ತಿಳಿಸಿದೆ.

'ಟ್ರಕ್, ಪರ್ಮಿಟ್ ಇಲ್ಲದೆ ಸಂಚರಿಸುತ್ತಿತ್ತು. ಹಾಗಾಗಿ, ಪರಿಹಾರ ನೀಡಬೇಕಿಲ್ಲ ಎಂದು ವಿಮಾ ಕಂಪನಿ ಪ್ರತಿಪಾದಿಸಿದೆ. ಆದರೆ, ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ವಿಮಾ ಕಂಪನಿ ಮೊದಲು ಪರಿಹಾರ ಪಾವತಿಸಿ ನಂತರ ಆ ಮೊತ್ತವನ್ನು ಟ್ರಕ್ ಮಾಲೀಕರಿಂದ ವಸೂಲು ಮಾಡಿಕೊಳ್ಳಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

ಪ್ರಕರಣವೇನು?: ಕಿರಣ್ ಕುಮಾರ್ 2017ರ ಮಾರ್ಚ್‌ನಲ್ಲಿ ಮಡಕಶಿರಾ-ಅಮರಾಪುರಂ ರಸ್ತೆಯಲ್ಲಿ ಹಿರೇತುರ್ಪಿ ಗ್ರಾಮದ ಆಂಜನೇಯ ಸ್ವಾಮಿ ದೇವಾಲಯದ ಬಳಿ ಕಾರಿನಲ್ಲಿ ತೆರಳುತ್ತಿದ್ದಾಗ ಕರ್ನಾಟಕದ ನೋಂದಣಿ ಹೊಂದಿದ್ದ ಟ್ರಕ್ ಡಿಕ್ಕಿ ಹೊಡೆದಿತ್ತು. ಕಾರಿನ ಚಾಲಕ ಸ್ಥಳದಲ್ಲಿಯೇ ಮೃತಪಟ್ಟಿದ್ದರು. ಕಾರಿನಲ್ಲಿ ಇದ್ದ ಕಿರಣ್ ಕುಮಾರ್ ಸೇರಿ ಇತರರು ಗಾಯಗೊಂಡಿದ್ದರು. ಘಟನೆ ನಡೆದಾಗ ಕಿರಣ್ ಕುಮಾರ್‌ಗೆ 10 ವರ್ಷವಾಗಿತ್ತು. ಗಾಯಾಳು ಕಿರಣ್‌ಗೆ ಮೊದಲು ಅನಂತಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿತ್ತು. ನಂತರ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಪಘಾತದಲ್ಲಿ ಬಾಲಕನ ಎರಡೂ ಕಣ್ಣುಗಳು ದೃಷ್ಟಿ ಕಳೆದುಕೊಂಡಿದ್ದನ್ನು ವೈದ್ಯರು ದೃಢಪಡಿಸಿದ್ದರು. ಕಿರಣ್ ಕುಮಾರ್ ₹70 ಲಕ್ಷ ಪರಿಹಾರ ಕೋರಿ ಎಂಎಸಿಟಿಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ಪರಿಶೀಲಿಸಿದ್ದ ನ್ಯಾಯಮಂಡಳಿ ₹8.3 ಲಕ್ಷ ಪರಿಹಾರ ನೀಡುವಂತೆ 2019ರಲ್ಲಿ ವಿಮಾ ಕಂಪನಿಗೆ ಆದೇಶಿಸಿತ್ತು.

'ಎಂಎಸಿಟಿ ನೀಡಿರುವ ಪರಿಹಾರ ಧನ ಹೆಚ್ಚಿಸಬೇಕು' ಎಂದು ಕೋರಿ ಕಿರಣ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ವಿದ್ಯಾರ್ಥಿ ವೇತನ ಬಳಕೆ: ನಮೋಶಿಗೆ ಜಾಮೀನು

ಬೆಂಗಳೂರು: ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ (ಎಚ್‌ಕೆಇಎಸ್) ಅಧೀನದಲ್ಲಿರುವ ಕಲಬುರಗಿಯ ಮಹಾದೇವಪ್ಪ ರಾಂಪೂರೆ ವೈದ್ಯಕೀಯ ಮಹಾವಿದ್ಯಾಲಯದ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳಿಗೆ ನೀಡಬೇಕಾದ ವಿದ್ಯಾರ್ಥಿ ವೇತನವನ್ನು ಸ್ವಂತಕ್ಕೆ ಬಳಕೆ ಮಾಡಿಕೊಂಡ ಆರೋಪದಡಿ ಬಂಧನದ ಭೀತಿ ಎದುರಿಸುತ್ತಿದ್ದ ವಿಧಾನ ಪರಿಷತ್‌ನ ಬಿಜೆಪಿಯ ಸದಸ್ಯ ಶಶೀಲ್ ನಮೋಶಿ ಅವರಿಗೆ ಹೈಕೋರ್ಟ್ ಷರತ್ತು ಬದ್ಧ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ ಶಶೀಲ್ ನಮೋಶಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ಪುರಸ್ಕರಿಸಿದೆ.

ಷರತ್ತುಗಳು: 'ಅರ್ಜಿದಾರರು ₹2 ಲಕ್ಷ ವೈಯಕ್ತಿಕ ಬಾಂಡ್ ಹಾಗೂ ಇಷ್ಟೇ ಮೊತ್ತಕ್ಕೆ ಭದ್ರತೆ ನೀಡಬೇಕು. ತನಿಖೆಗೆ ಹಾಜರಾಗಬೇಕು. ಅನುಮತಿ ಇಲ್ಲದೆ ನ್ಯಾಯಾಲಯದ ವ್ಯಾಪ್ತಿಯಿಂದ ಹೊರಗಡೆ ಹೋಗಬಾರದು.

ತೋಟಗಾರಿಕೆ ಬೆಳೆಗಾರರಿಗೆ ನೆರವಿನ ಜೊತೆಗೆ ಮಾಹಿತಿ


ಬೆಳೆ ಹಾನಿ ತಪ್ಪಿಸಲು ಮುನ್ಸೂಚನಾ ಘಟಕ

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ತೋಟಗಾರಿಕೆ ಇಲಾಖೆಯು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ರೈತರಿಗೆ ಸ್ವಯಂಚಾಲಿತ ಹವಾಮಾನ ಮುನ್ಸೂಚನಾ ಘಟಕವನ್ನು ಒದಗಿಸುತ್ತಿದೆ. ತೋಟಗಾರಿಕೆ ಬೆಳೆ ಬೆಳೆಯುವ ರೈತರು ಹವಾಮಾನ ವೈಪರೀತ್ಯದಿಂದ ಆಗುವ ನಷ್ಟ ತಪ್ಪಿಸಿ, ಉತ್ತಮ ಇಳುವರಿ ಪಡೆಯಲು ನೆರವಾಗುವುದು ಇದರ ಉದ್ದೇಶ.

ಜಿಲ್ಲೆಯಲ್ಲಿ 57 ಸಾವಿರ ಹೆಕ್ಟೇರ್ ತೋಟಗಾರಿಕೆ ಕ್ಷೇತ್ರವಿದೆ. ಈ ಪೈಕಿ 32 ಸಾವಿರ ಹೆಕ್ಟೇರ್‌ನಲ್ಲಿ ತರಕಾರಿ ಮತ್ತು 15 ಸಾವಿರ ಹೆಕ್ಟೇರ್‌ನಲ್ಲಿ ದ್ರಾಕ್ಷಿ, ದಾಳಿಂಬೆ, ಮಾವು, ಪೇರಲ, ಚಿಕ್ಕು, ಡ್ರ್ಯಾಗನ್ ಫ್ರೂಟ್ ಬೆಳೆಯುತ್ತಾರೆ. ಉಳಿದ ಜಮೀನಿನಲ್ಲಿ ಶುಂಠಿ, ಕಾಳುಮೆಣಸು ಮತ್ತಿತರ ಬೆಳೆ ತೆಗೆಯುತ್ತಾರೆ.

'ತೋಟಗಾರಿಕೆ ಬೆಳೆಗೆ ಅಗತ್ಯ ಪ್ರಮಾಣದಷ್ಟು ಮಾತ್ರ ನೀರು ಒದಗಿಸಬೇಕು. ಕೆಲವೊಮ್ಮೆ ಮಳೆಯಾದರೂ ಪಂಪ್‌ಸೆಟ್ ಮೂಲಕ ಹೆಚ್ಚಿನ ನೀರು ಹರಿಸುವುದರಿಂದ ಬೆಳೆಗೆ ಹಾನಿ ಆಗುತ್ತದೆ. ನೀರಿನ ಅಭಾವದಿಂದ ಇಳುವರಿ ಕುಸಿಯುತ್ತದೆ. ಆದರೆ, ಈ ಘಟಕದ ನೆರವಿನಿಂದ ಬೆಳೆಗೆ ಅಗತ್ಯವಿರುವಷ್ಟೇ ನೀರು ಕೊಟ್ಟು, ಉತ್ತಮ ಇಳುವರಿ ಪಡೆಯಬಹುದು' ಎಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಮಹಾಂತೇಶ ಮುರಗೋಡ 'ಪ್ರಜಾವಾಣಿ'ಗೆ ತಿಳಿಸಿದರು.



ರೈತ ಸೋಮಶೇಖರ ರೆಡ್ಡಿ ಅವರು ತಮ್ಮ ಹೊಲದಲ್ಲಿ ಸ್ವಯಂಚಾಲಿತ ಹವಾಮಾನ ಮುನ್ಸೂಚನಾ ಘಟಕ ಅಳವಡಿಸಿಕೊಂಡಿರುವುದು

ಘಟಕ ಅಳವಡಿಸುವ ಕಂಪನಿಯ ಆ್ಯಪ್ ಅನ್ನು ಮೊಬೈಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಂಡಿದ್ದೇನೆ. ಅದರ ಮೂಲಕ ಬೆಳೆ ಕುರಿತು ಮಾಹಿತಿ ಸಿಗುತ್ತಿದೆ

ಸೋಮಶೇಖರ ರೆಡ್ಡಿ, ರೈತ, ಉರಬಿನಹಟ್ಟಿ

'ಮೂರು–ನಾಲ್ಕು ದಿನ ಮುಂಚೆಯೇ, ಮಳೆಯಾಗುವ ಸಾಧ್ಯತೆ ಮತ್ತು ಕೃಷಿಭೂಮಿಯಲ್ಲಿ ಲಭ್ಯವಿರುವ ನೀರಿನ ಪ್ರಮಾಣದ ಬಗ್ಗೆ ತಿಳಿಸುತ್ತದೆ. ಯಾವಾಗ ಮತ್ತು ಎಷ್ಟು ನೀರನ್ನು ಬೆಳೆಗೆ ಹರಿಸಬೇಕೆಂದು ಹೇಳುತ್ತದೆ. ಗಾಳಿಯ ವೇಗದ ಪ್ರಮಾಣದ ಜತೆಗೆ, ಬೆಳೆಗೆ ಯಾವ ಕಾಯಿಲೆ ಬರಬಹುದು, ಯಾವ ಕೀಟನಾಶಕ ಸಿಂಪಡಿಸಬಹುದು ಮತ್ತು ಹನಿ ನೀರಾವರಿ ಪದ್ಧತಿ ಮೂಲಕ ನೀರಿನಲ್ಲಿ ಕರಗುವ ರಸಗೊಬ್ಬರವನ್ನು ಎಷ್ಟು ಸಿಂಪಡಿಸಬೇಕು ಎಂಬುದು ಗೊತ್ತಾಗುತ್ತದೆ' ಎಂದರು.

'2024–25 ಮತ್ತು 2025–26ನೇ ಸಾಲಿಗಾಗಿ ಈ ಯೋಜನೆ ರೂಪಿಸಲಾಗಿದೆ. ಪ್ರತಿ ಘಟಕದ ದರ ಸುಮಾರು ₹40 ಸಾವಿರ ಇದೆ. ಈ ಪೈಕಿ ಸರ್ಕಾರದಿಂದ ₹20 ಸಾವಿರ ಸಹಾಯಧನ ನೀಡಲಾಗುತ್ತಿದೆ. ಈ ಘಟಕಗಳನ್ನು ಪೂರೈಸಲು ರಾಜ್ಯದಲ್ಲಿ 6 ಉತ್ಪಾದಕರು ಮತ್ತು ವಿತರಕರನ್ನು ಗುರುತಿಸಲಾಗಿದೆ' ಎಂದು ಹೇಳಿದರು.

ಉತ್ತಮ ಇಳುವರಿ ನಿರೀಕ್ಷೆ: 'ನಾನು ಒಂದೂವರೆ ಎಕರೆ ಜಮೀನು ಹೊಂದಿದ್ದೇನೆ. ಈ ಪೈಕಿ 30 ಗುಂಟೆಯಲ್ಲಿ ಅಡಿಕೆ ಬೆಳೆದಿರುವೆ. ಈ ಹಿಂದೆ ಅಂದಾಜಿನ ಮೇಲೆ ಬೆಳೆಗೆ ನೀರು ಹರಿಸುತ್ತಿದ್ದೆ. ಕೆಲ ಬಾರಿ ಹೆಚ್ಚಿನ ನೀರು ಹರಿಸಿ, ಬೆಳೆಹಾನಿ ಆಗುತ್ತಿತ್ತು. ನೀರಿನ ಅಪವ್ಯಯವೂ ಉಂಟಾಗುತ್ತಿತ್ತು. ಆದರೆ, ಈಗ ಘಟಕ ಅಳವಡಿಸಿದ್ದು, ಬೆಳೆಗೆ ತಕ್ಕಷ್ಟೇ ನೀರು ಕೊಡುವುದರಿಂದ ಉತ್ತಮ ಇಳುವರಿ ನಿರೀಕ್ಷೆಯಲ್ಲಿದ್ದೇನೆ' ಎಂದು ಗೋಕಾಕ ತಾಲ್ಲೂಕಿನ ಉರಬಿನಹಟ್ಟಿಯ ರೈತ ಸೋಮಶೇಖರ ರೆಡ್ಡಿ ಹೇಳಿದರು.

ಜನವರಿ

3: ಇರಾನ್‌ನ ರೆವಲ್ಯೂಷನರಿ ಗಾರ್ಡ್ಸ್‌ನ ಕಮಾಂಡರ್ ಮೇಜರ್ ಜನರಲ್ ಖಾಸಿಂ ಸುಲೇಮಾನಿ ಹತ್ಯೆಯ ನಾಲ್ಕನೇ ವರ್ಷದ ಸ್ಮರಣೆ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದ ವೇಳೆ ಸಂಭವಿಸಿದ ಎರಡು ಸ್ಫೋಟಗಳಲ್ಲಿ ಕನಿಷ್ಠ 103 ಮಂದಿ ಸಾವು




8: ಬಿಲ್ಕಿಸ್ ಬಾನು ಅವರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ, ಅವರ ಕುಟುಂಬದ ಏಳು ಮಂದಿಯನ್ನು ಹತ್ಯೆಗೈದ ಪ್ರಕರಣದ 11 ಮಂದಿ ಅಪರಾಧಿಗಳಿಗೆ ಕ್ಷಮಾದಾನ ನೀಡಿದ್ದ ಗುಜರಾತ್ ಸರ್ಕಾರದ ಕ್ರಮವನ್ನು ರದ್ದು ಮಾಡಿದ ಸುಪ್ರೀಂ ಕೋರ್ಟ್


9: ಅವಾಮಿ ಲೀಗ್ ಪಕ್ಷದ ನಾಯಕಿ ಶೇಖ್ ಹಸೀನಾ ಅವರು ನಾಲ್ಕನೇ ಬಾರಿಗೆ ಬಾಂಗ್ಲಾದೇಶದ ಪ್ರಧಾನಿಯಾಗಿ ಪ್ರಮಾಣ



10: ಖ್ಯಾತ ಹಿಂದೂಸ್ತಾನಿ ಗಾಯಕ ಉಸ್ತಾದ್ ರಾಶಿದ್ ಖಾನ್ (55) ನಿಧನ



18: ಬಸವಣ್ಣ ಅವರನ್ನು 'ಕರ್ನಾಟಕದ ಸಾಂಸ್ಕೃತಿಕ ನಾಯಕ' ಎಂದು ರಾಜ್ಯ ಸರ್ಕಾರದಿಂದ ಘೋಷಣೆ



22: ಅಯೋಧ್ಯೆಯಲ್ಲಿ ಬಾಲರಾಮನ ವಿಗ್ರಹದ ಪ್ರಾಣಪ್ರತಿಷ್ಠಾಪನೆ


23: ಬಿಹಾರದ ಮಾಜಿ ಮುಖ್ಯಮಂತ್ರಿ ಕರ್ಪೂರಿ ಠಾಕೂರ್ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಗೌರವ 'ಭಾರತ ರತ್ನ' (ಮರಣೋತ್ತರ) ಘೋಷಣೆ

27: ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಲ್ಲಿ ಮ್ಯಾಥ್ಯೂ ಎಬ್ಡೆನ್ ಜೊತೆಗೂಡಿ ಪುರುಷರ ಡಬಲ್ಸ್ ಪ್ರಶಸ್ತಿ ಗೆದ್ದ ರೋಹನ್ ಬೋಪಣ್ಣ, ಈ ಪ್ರಶಸ್ತಿ ಗೆದ್ದ ಅತಿ ಹಿರಿಯ ಆಟಗಾರ (43 ವರ್ಷ).




28: ಬಿಹಾರದ ಮುಖ್ಯಮಂತ್ರಿಯಾಗಿ ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಪ್ರಮಾಣ ವಚನ ಸ್ವೀಕಾರ. ಈ ಮೂಲಕ 9ನೇ ಬಾರಿ ಮುಖ್ಯಮಂತ್ರಿಯಾಗಿ ದಾಖಲೆ ಬರೆದ ನಿತೀಶ್

ಫೆಬ್ರುವರಿ



1. ಜಾರ್ಖಂಡ್ ಮುಖ್ಯಮಂತ್ರಿಯಾಗಿ ಚಂಪೈ ಸೊರೇನ್ ಅಧಿಕಾರ ಸ್ವೀಕಾರ



3. ಮಾಜಿ ಉಪಪ್ರಧಾನಿ ಎಲ್.ಕೆ. ಅಡ್ವಾಣಿಗೆ ಭಾರತ ರತ್ನ ಘೋಷಣೆ

5. ನಾಸಾದದಿಂದ ಭೂಮಿಯನ್ನು ಹೋಲುವ ವಾಸಯೋಗ್ಯವಾದ ಗ್ರಹವೊಂದರ ಅನ್ವೇಷಣೆ

8. ಪಾಕಿಸ್ತಾನದಲ್ಲಿ ಸಾರ್ವತ್ರಿಕ ಚುನಾವಣೆ ಹಾಗೂ ಅತಂತ್ರ ಫಲಿತಾಂಶ

9. ಮಾಜಿ ಪ್ರಧಾನಿಗಳಾದ ಪಿ.ವಿ ನರಸಿಂಹ ರಾವ್ ಮತ್ತು ಚೌಧರಿ ಚರಣ್ ಸಿಂಗ್ ಹಾಗೂ ವಿಜ್ಞಾನಿ ಎಂ.ಎಸ್. ಸ್ವಾಮಿನಾಥನ್‌ಗೆ ಮರಣೋತ್ತರ ಭಾರತರತ್ನ ಘೋಷಣೆ

15. ಚುನಾವಣಾ ಬಾಂಡ್ ಅಸಾಂವಿಧಾನಿಕ ಎಂದು ಸುಪ್ರೀಂ ಕೋರ್ಟ್ ತೀರ್ಪು





17. ಸಂಸ್ಕೃತ ವಿದ್ವಾಂಸ ರಾಮಭದ್ರಚಾರ್ಯ ಮತ್ತು ಉರ್ದು ಕವಿ ಗುಲ್ಜರ್ ಅವರಿಗೆ ಜ್ಞಾನಪೀಠ ಪ್ರಶಸ್ತಿ ಘೋಷಣೆ

19: ಹೆಸರಾಂತ ಕಾದಂಬರಿಕಾರ, ಭಾಷಾತಜ್ಞ ಕೆ.ಟಿ.ಗಟ್ಟಿ (86) ಮಂಗಳೂರಿನಲ್ಲಿ ನಿಧನ

25: ಪ್ರಧಾನಿ ನರೇಂದ್ರ ಮೋದಿ ಗುಜರಾತ್‌ನ ಸ್ಕೂಬಾ ಡೈವಿಂಗ್ ಮೂಲಕ ರೋಚಕ ಅನುಭವ ಪಡೆದರು

26: ನಾಮಫಲಕದಲ್ಲಿ ಕಡ್ಡಾಯವಾಗಿ 60 ಶೇ ಕನ್ನಡ ಬಳಕೆಗೆ ಸಂಬಂಧಿಸಿದ ಮಸೂದೆಗೆ ರಾಜ್ಯಪಾಲರಿಂದ ಅಂಕಿತ

26: ಪ್ರಸಿದ್ಧ ಗಜಲ್ ಗಾಯಕ ಪಂಕಜ್ ಉದಾಸ್ ನಿಧನ

27: ಬಾಲಂಗೋಚಿಗಳಾದ ತನುಷ್ ಕೋಟ್ಯಾನ್ (ಅಜೇಯ 120) ಮತ್ತು ತುಷಾರ್ ದೇಶಪಾಂಡೆ (123) ಅವರು 10 ಮತ್ತು 11ನೇ ಕ್ರಮಾಂಕದಲ್ಲಿ ಶತಕಗಳನ್ನು ಬಾರಿಸಿ ದಾಖಲೆ ಪುಸ್ತಕಕ್ಕೆ ಸೇರಿದರು. 232 ರನ್ ಜೊತೆಯಾಟ

ಮಾರ್ಚ್



1: ವೈಟ್‌ಫೀಲ್ಡ್ ಸಮೀಪದ ಬ್ರೂಕ್‌ಫೀಲ್ಡ್‌ನಲ್ಲಿರುವ 'ದಿ ರಾಮೇಶ್ವರಂ ಕೆಫೆ' ಹೋಟೆಲ್‌ನಲ್ಲಿ ಟೈಮರ್ ಚಾಲಿತ ಕಚ್ಚಾ ಬಾಂಬ್ ಸ್ಫೋಟ, 10 ಮಂದಿಗೆ ಗಾಯ


11: ಪೌರತ್ವ ತಿದ್ದುಪಡಿ ಕಾಯ್ದೆ–2019ಕ್ಕೆ (ಸಿಎಎ) ಸಂಬಂಧಿಸಿದ ನಿಯಮಗಳನ್ನು ಅಧಿಸೂಚನೆ ಮೂಲಕ ಪ್ರಕಟಿಸಿದ ಕೇಂದ್ರ

12: ಬಿಜೆಪಿ ಮುಖಂಡ ನಾಯಬ್ ಸಿಂಗ್ ಸೈನಿ ಅವರು ಹರಿಯಾಣದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ

14: ಮಾಜಿ ಐಎಎಸ್ ಅಧಿಕಾರಿಗಳಾದ ಜ್ಞಾನೇಶ್ ಕುಮಾರ್ ಮತ್ತು ಸುಖ್‌ಬೀರ್ ಸಂಧು ಚುನಾವಣಾ ಆಯುಕ್ತರಾಗಿ ನೇಮಕ

14: ಮುಂಬೈ ತಂಡಕ್ಕೆ 42ನೇ ಬಾರಿ ರಣಜಿ ಟ್ರೋಫಿ ಕಿರೀಟ. ಮುಂಬೈನಲ್ಲಿ ನಡೆದ ಫೈನಲ್‌ನಲ್ಲಿ ವಿದರ್ಭ ವಿರುದ್ಧ 169 ರನ್ ವಿಜಯ

16: ಲೋಕಸಭೆ ಹಾಗೂ ಆಂಧ್ರಪ್ರದೇಶ, ಒಡಿಶಾ, ಅರುಣಾಚಲಪ್ರದೇಶ ಹಾಗೂ ಸಿಕ್ಕಿಂ ರಾಜ್ಯಗಳ ವಿಧಾನಸಭಾ ಚುನಾವಣೆಗೆ ಚುನಾವಣಾ ಆಯೋಗದಿಂದ ವೇಳಾಪಟ್ಟಿ ಪ್ರಕಟ



18: ರಷ್ಯಾ ಅಧ್ಯಕ್ಷೀಯ ಚುನಾವಣೆಯಲ್ಲಿ ವ್ಲಾದಿಮರ್ ಪುಟಿನ್ ಅವರಿಂದ ಮತ್ತೆ ಗೆಲುವಿನ ನಗೆ

18: ಚುನಾವಣಾ ಬಾಂಡ್‌ಗಳಿಗೆ ಸಂಬಂಧಿಸಿ ಸಂಪೂರ್ಣ ಮಾಹಿತಿ ಬಹಿರಂಗಪಡಿಸಲು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಗೆ ಸುಪ್ರೀಂಕೋರ್ಟ್ ತಾಕೀತು



21: ದೆಹಲಿ ಅಬಕಾರಿ ನೀತಿ ಹಗರಣದ ಜೊತೆ ನಂಟಿರುವ ಹಣ ಅಕ್ರಮ ವರ್ಗಾವಣೆ ಆರೋಪದಲ್ಲಿ ಜಾರಿ ನಿರ್ದೇಶನಾಲಯದಿಂದ ದೆಹಲಿಯ ಅಂದಿನ ಮುಖ್ಯಮಂತ್ರಿ ಹಾಗೂ ಆಮ್ ಆದ್ಮಿ ಪಕ್ಷದ ಮುಖ್ಯಸ್ಥ ಅರವಿಂದ್ ಕೇಜ್ರಿವಾಲ್ ಬಂಧನ

23: ಮಾಸ್ಕೊದ ಸಂಗೀತ ಕಾರ್ಯಕ್ರಮವೊಂದು ನಡೆಯಬೇಕಿದ್ದ ಕ್ರಾಕಸ್ ಸಿಟಿ ಹಾಲ್ ಸಭಾಂಗಣದ ಮೇಲೆ ನಡೆದ ದಾಳಿ, 133 ಮಂದಿ ಮೃತ





ಜ್ಞಾಪಕ ಚಿತ್ರಶಾಲೆ

ಏಪ್ರಿಲ್




3: ಅಣ್ವಸ್ತ್ರ ಹೊತ್ತೊಯ್ಯುವ ಸಾಮರ್ಥ್ಯದ ಹೊಸ ಪೀಳಿಗೆಯ ಗುರಿ ನಿರ್ದೇಶಿತ ಕ್ಷಿಪಣಿ 'ಅಗ್ನಿ ಪ್ರೈಮ್' ಅನ್ನು ಒಡಿಶಾ ಕರಾವಳಿಯ ಅಬ್ದುಲ್ ಕಲಾಂ ದ್ವೀಪದಲ್ಲಿ ಯಶಸ್ವಿಯಾಗಿ ಪರೀಕ್ಷಿಸಲಾಯಿತು

14: ಬಾಲಿವುಡ್ ನಟ ಸಲ್ಮಾನ್ ಖಾನ್ ಅವರ ಮುಂಬೈನ ನಿವಾಸದ ಮುಂದೆ ಬೈಕ್‌ನಲ್ಲಿ ಬಂದ ಇಬ್ಬರಿಂದ ಗುಂಡಿನ ದಾಳಿ



14: ಇಸ್ರೇಲ್ ಮೇಲೆ ಇರಾನ್ ಸೇನೆಯಿಂದ ಮೊದಲ ಬಾರಿ ನೇರ ದಾಳಿ. 30ಕ್ಕೂ ಹೆಚ್ಚು ಕ್ಷಿಪಣಿ, 170 ಡ್ರೋನ್, 120ಕ್ಕೂ ಹೆಚ್ಚು ಗುರಿ ನಿರ್ದೇಶಿತ ಕ್ಷಿಪಣಿಗಳಿಂದ ದಾಳಿ


16: ಛತ್ತೀಸಗಢದ ಕಾಂಕೇ ೯ಜಿಲ್ಲೆಯಲ್ಲಿ ಭದ್ರತಾ ಪಡೆಗಳ ಜೊತೆ ನಡೆದ ಗುಂಡಿನ ಚಕಮಕಿಯಲ್ಲಿ 29 ನಕ್ಸಲರ ಹತ್ಯೆ



16: ಹೆಸರಾಂತ ನಟ, ನಿರ್ದೇಶಕ, ನಿರ್ಮಾಪಕ ದ್ವಾರಕೀಶ್ (82) ಅವರು ಹೃದಯಾಘಾತದಿಂದ ತಮ್ಮ ಮನೆಯಲ್ಲಿ ನಿಧನ

19: ಲೋಕಸಭಾ ಚುನಾವಣೆಯ ಮೊದಲ ಹಂತದ ಮತದಾನ

22: ಶಿವಮೊಗ್ಗ ಕ್ಷೇತ್ರದಲ್ಲಿ ಬಂಡಾಯವೆದ್ದು ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ ಕೆ.ಎಸ್. ಈಶ್ವರಪ್ಪ ಅವರನ್ನು ಪಕ್ಷದಿಂದ 6 ವರ್ಷಗಳಿಗೆ ಉಚ್ಚಾಟಿಸಿದ ಬಿಜೆಪಿ



26: ಲೋಕಸಭಾ ಚುನಾವಣೆಯ ಎರಡನೇ ಹಂತದ ಮತದಾನ; ಕರ್ನಾಟಕದ 14 ಕ್ಷೇತ್ರಗಳಲ್ಲಿ ಮತದಾನ

28: ಮನೆಯಲ್ಲಿ ಕೆಲಸಕ್ಕಿದ್ದ ಮಹಿಳೆ ಮತ್ತು ಅವರ ಮಗಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪದಡಿ ಹೊಳೆನರಸೀಪುರ ಕ್ಷೇತ್ರದ ಶಾಸಕ ಎಚ್.ಡಿ.ರೇವಣ್ಣ ಮತ್ತು ಅವರ ಮಗ, ಪ್ರಜ್ವಲ್ ರೇವಣ್ಣ ವಿರುದ್ಧ ಎಫ್ಐಆರ್ ದಾಖಲು



29: ಕೇಂದ್ರದ ಮಾಜಿ ಸಚಿವ, ಚಾಮರಾಜ ನಗರದ ಸಂಸದ ವಿ. ಶ್ರೀನಿವಾಸ ಪ್ರಸಾದ್ (76) ವಯೋಸಹಜ ಅನಾರೋಗ್ಯದಿಂದ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನ

ಮೇ

4: ಅತ್ಯಾಚಾರ ಪ್ರಕರಣದ ಸಂತ್ರಸ್ತೆಯನ್ನು ಅಪಹರಿಸಿ, ಅಕ್ರಮವಾಗಿ ಬಂಧನದಲ್ಲಿರಿಸಿ, ಹಲ್ಲೆ ನಡೆಸಿದ ಆರೋಪದ ಅಡಿಯಲ್ಲಿ ಜೆಡಿಎಸ್ ನಾಯಕ ಎಚ್.ಡಿ. ರೇವಣ್ಣ ಬಂಧನ



10: ವಿಚಾರವಾದಿ ನರೇಂದ್ರ ದಾಭೋಲ್ಕರ್ ಹತ್ಯೆ ಪ್ರಕರಣದಲ್ಲಿ ಇಬ್ಬರಿಗೆ ಜೀವಾವಧಿ ಶಿಕ್ಷೆ


13: ಬಿಜೆಪಿಯ ಹಿರಿಯ ನಾಯಕ ಸುಶೀಲ್ ಕುಮಾರ್ ಮೋದಿ ನಿಧನ

16: ಅಂತರರಾಷ್ಟ್ರೀಯ ಫುಟ್‌ಬಾಲ್‌ಗೆ ವಿದಾಯ ಹೇಳಿದ ಭಾರತ ಫುಟ್‌ಬಾಲ್ ತಂಡದ ನಾಯಕ ಸುನಿಲ್ ಚೆಟ್ರಿ. 150 ಅಂತರರಾಷ್ಟ್ರೀಯ ಪಂದ್ಯಗಳಿಂದ 94 ಗೋಲು ಗಳಿಕೆ

20: ಹೊರಗುತ್ತಿಗೆ ಆಧಾರದಲ್ಲಿ ವಿವಿಧ ಇಲಾಖೆಗಳಲ್ಲಿ ನಡೆಸುವ ನೇಮಕಾತಿಯಲ್ಲಿ ಮೀಸಲಾತಿಯನ್ನು ಪಾಲಿಸುವಂತೆ ರಾಜ್ಯ ಸರ್ಕಾರದಿಂದ ಮಹತ್ವದ ಸೂಚನೆ

30: ಅತ್ಯಾಚಾರ ಹಾಗೂ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಆಗಿನ ಸಂಸದ (ಈಗ ಮಾಜಿ) ಪ್ರಜ್ವಲ್ ರೇವಣ್ಣ ಬಂಧನ





ಒಲಿಂಪಿಕ್ಸ್‌ನಲ್ಲಿ ನೋವು–ನಲಿವು



- ಫ್ರಾನ್ಸ್ ರಾಜಧಾನಿ ಪ್ಯಾರಿಸ್‌ನಲ್ಲಿ ಒಲಿಂಪಿಕ್ ಕೂಟ (ಜುಲೈ 26 ರಿಂದ ಆಗಸ್ಟ್ 11) ನಡೆಯಿತು. ಮೊದಲ ಬಾರಿಗೆ ಒಲಿಂಪಿಕ್ಸ್ ಕ್ರೀಡಾಂಗಣದಿಂದ ಹೊರಗೆ- ಸೀನ್ ನದಿಯಲ್ಲಿ ಉದ್ಘಾಟನಾ ಕಾರ್ಯಕ್ರಮಗಳು ನಡೆದವು.
- ಶೂಟಿಂಗ್ ಪಟು ಮನು ಭಾಕರ್ ಅವರು ಎರಡು ಕಂಚಿನ ಪದಕ ಜಯಿಸಿದರು. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರದಲ್ಲಿ ಒಂದೇ ಒಲಿಂಪಿಕ್ ಕೂಟದಲ್ಲಿ ಎರಡು ಪದಕ ಗೆದ್ದ ಮೊದಲ ಕ್ರೀಡಾಪಟು ಎನಿಸಿದರು.
- ಭಾರತಕ್ಕೆ ಈ ಬಾರಿ 6 ಪದಕಗಳು. 5 ಕಂಚು ಮತ್ತು 1 ಬೆಳ್ಳಿ. ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾಗೆ ಈ ಬಾರಿ ಬೆಳ್ಳಿ ಪದಕ.
- ಮಹಿಳೆಯರ ಫ್ರೀಸ್ಟೈಲ್ ಕುಸ್ತಿಯ 50 ಕೆಜಿ ವಿಭಾಗದಲ್ಲಿ ಭಾರತದ ವಿನೇಶ ಫೋಗಟ್ ಫೈನಲ್ ತಲುಪಿ ಚರಿತ್ರೆ ಬರೆದರು. ಆದರೆ ಅಂತಿಮ ಬೌಟ್‌ಗಿಂತ ಮುನ್ನ ತೂಕದ ಪರೀಕ್ಷೆಯಲ್ಲಿ ವಿನೇಶ ಅವರ ದೇಹ ತೂಕ ನಿಗದಿಗಿಂತ 100 ಗ್ರಾಂ ಹೆಚ್ಚಿತ್ತು. ಆದ್ದರಿಂದ ಅವರನ್ನು ಅನರ್ಹಗೊಳಿಸಲಾಯಿತು. ಇದರಿಂದಾಗಿ ಭಾರತಕ್ಕೆ ಕುಸ್ತಿ ಪದಕ ಕೈತಪ್ಪಿತು.

ಪ್ಯಾರಾಲಿಂಪಿಕ್ಸ್

- ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತದ ಕ್ರೀಡಾಪಟುಗಳು 29 ಪದಕಗಳನ್ನು (7 ಚಿನ್ನ, 9 ಬೆಳ್ಳಿ ಮತ್ತು 13 ಕಂಚು) ಗೆದ್ದು ಹೊಸ ದಾಖಲೆ ನಿರ್ಮಿಸಿದರು





ಗೋಡೆಯ ಮೇಲಿನ ಕ್ಯಾಲೆಂಡರ್ ಅನ್ನು ಬದಲಿಸಿದಷ್ಟು ಸುಲಭವಲ್ಲ, ಚರಿತ್ರೆಯ ಪುಟ ಸೇರುತ್ತಿರುವ 2024ರ ನೆನಪುಗಳನ್ನು ಮರೆಯುವುದು. ಯುದ್ಧಗಳು, ಸಾವು–ನೋವುಗಳ ಕಹಿ ನೆನಪುಗಳು ಒಂದೆಡೆಯಾದರೆ, ಒಲಿಂಪಿಕ್ಸ್ ಸೇರಿದಂತೆ ಹಲವು ಕ್ರೀಡಾಕೂಟಗಳಲ್ಲಿ ಸಾಧನೆಗಳ ಸಿಹಿ ನೆನಪು ಮತ್ತೊಂದೆಡೆ. ಹಲವು ದೇಶಗಳಲ್ಲಿ ಚುನಾವಣೆಗಳು ನಡೆದು ಹೊಸ ಸರ್ಕಾರಗಳು ಬಂದರೆ, ಇನ್ನು ಕೆಲವು ದೇಶಗಳಲ್ಲಿ ನಾಗರಿಕ ದಂಗೆಯಿಂದ ಸರ್ಕಾರಗಳೇ ಪತನಗೊಂಡವು. 2024 ಉರುಳುವ ಮುನ್ನ ಇಲ್ಲಿದೆ ಒಂದು ಹೊರಳು ನೋಟ...

ವಿನ್ಯಾಸ: ವಿಜಯಕುಮಾರಿ ಆರ್.

ಜೂನ್

2: ಅರುಣಾಚಲ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ‘ಹ್ಯಾಟ್ರಿಕ್’ ಗೆಲುವು. ಸಿಕ್ಕಿಂನಲ್ಲಿ ‘ಸಿಕ್ಕಿಂ ಕ್ರಾಂತಿಕಾರಿ ಮೋರ್ಚಾ’ ಮರಳಿ ಅಧಿಕಾರಕ್ಕೆ



4: ಲೋಕಸಭಾ ಚುನಾವಣಾ ಫಲಿತಾಂಶ ಪ್ರಕಟ. ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಮೂರನೇ ಬಾರಿ ಅಧಿಕಾರಕ್ಕೆ. ಆಂಧ್ರ ಪ್ರದೇಶದಲ್ಲಿ ಟಿಡಿಪಿ ಜಯಭೇರಿ; ಒಡಿಶಾದಲ್ಲಿ ಬಿಜೆಪಿಗೆ ಜನಾದೇಶ

6: ಭಾರತ ಮೂಲದ ಗಗನಯಾತ್ರಿ ಸುನಿತಾ ವಿಲಿಯಮ್ಸ್ ಮತ್ತು ಅವರ ಸಹಯಾತ್ರಿ ಬಚ್ ವಿಲ್ಮೋರ್ ಯಶಸ್ವಿಯಾಗಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ



8: ರಾಮೋಜಿರಾವ್ ಸಮೂಹ ಸಂಸ್ಥೆಗಳ ಅಧ್ಯಕ್ಷ, ಮಾಧ್ಯಮ ಕ್ಷೇತ್ರದ ದಿಗ್ಗಜ ಸಿ.ಎಚ್.ರಾಮೋಜಿ ರಾವ್ (87) ನಿಧನ

8-24: ‘ನೀಟ್’ (ಯುಜಿ) ಪರೀಕ್ಷೆಯಲ್ಲಿ ನೀಡಲಾಗಿದ್ದ ಕೃಪಾಂಕಗಳ ಪರಿಶೀಲನೆಗೆ ನಾಲ್ಕು ಸದಸ್ಯರ ಸಮಿತಿ ರಚನೆ. ಅಕ್ರಮಗಳ ಕುರಿತು ಸಿಬಿಐನಲ್ಲಿ ಪ್ರಕರಣ ದಾಖಲು



11: ಖ್ಯಾತ ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್ ನಿಧನ





11: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ ಮೈಸೂರಿನಲ್ಲಿ ಬಂಧನ

12: ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿ ಚಂದ್ರಬಾಬು ನಾಯ್ಡು ಪ್ರಮಾಣ ವಚನ ಸ್ವೀಕಾರ.

22: ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಪಾರದರ್ಶಕ ಮತ್ತು ನ್ಯಾಯೋಚಿತವಾಗಿ ನಡೆಸಲು ಇಸ್ರೊ ಮಾಜಿ ಮುಖ್ಯಸ್ಥ ಕೆ. ರಾಧಾಕೃಷ್ಣನ್ ನೇತೃತ್ವದಲ್ಲಿ ಉನ್ನತ ಮಟ್ಟದ ತಜ್ಞರ ಸಮಿತಿ ರಚನೆ

23: ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಬಂಧನ

29: ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡಕ್ಕೆ ಟಿ–20 ವಿಶ್ವಕಪ್ ಟ್ರೋಫಿ. ನಾಯಕ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಮತ್ತು ಆಲ್‌ರೌಂಡರ್ ರವೀಂದ್ರ ಜಡೇಜ ಅವರು ಟಿ–20 ಕ್ರಿಕೆಟ್ ಮಾದರಿಗೆ ವಿದಾಯ

ಜುಲೈ



1: ದೇಶದಲ್ಲಿ ಮೂರು ಹೊಸ ಕ್ರಿಮಿನಲ್ ಅಪರಾಧ ಕಾನೂನುಗಳು ಜಾರಿ

2: ಉತ್ತರಪ್ರದೇಶದ ಹಾಥರಸ್ ಜಿಲ್ಲೆಯ ಪೂಲರಾಯ್ ಗ್ರಾಮದಲ್ಲಿ ನಡೆದ ‘ಸತ್ಸಂಗ’ದ ವೇಳೆ ಕಾಲ್ತುಳಿತದಿಂದ 116 ಜನ ಸಾವು

5: ಬ್ರಿಟನ್ ನೂತನ ಪ್ರಧಾನಿಯಾಗಿ, ಲೇಬರ್ ಪಕ್ಷದ ನಾಯಕ ಕೀರ್ ಸ್ಟಾರ್ಮರ್ ಆಯ್ಕೆ. ಅಲ್ಲದೆ, ಬ್ರಿಟನ್ ಸಂಸತ್‌ಗೆ ಭಾರತೀಯ ಮೂಲದ 26 ಮಂದಿ ಆಯ್ಕೆ

8: ಇಂಗ್ಲೆಂಡ್ ಕ್ರಿಕೆಟ್ ತಂಡದ ವೇಗದ ಬೌಲರ್ ಜಿಮ್ಮಿ ಆ್ಯಂಡರ್ಸನ್ ಅವರಿಂದ ನಿವೃತ್ತಿ ಘೋಷಣೆ. ಟೆಸ್ಟ್ ಕ್ರಿಕೆಟ್‌ನಲ್ಲಿ 704 ವಿಕೆಟ್‌ಗಳನ್ನು ಗಳಿಸಿದ ಅವರು, ಟೆಸ್ಟ್‌ನಲ್ಲಿ ಅತಿ ಹೆಚ್ಚು ಪಡೆದ ವಿಶ್ವದ 3ನೇ ಬೌಲರ್

9: ಪ್ರಧಾನಿ ಮೋದಿಯವರಿಗೆ ರಷ್ಯಾದ ಅತ್ಯುನ್ನತ ನಾಗರಿಕ ಗೌರವ ಪುಟಿನ್ ಅವರಿಂದ ಪ್ರದಾನ

10: ವಿಚ್ಛೇದಿತ ಮುಸ್ಲಿಂ ಮಹಿಳೆಯರೂ ಜೀವನಾಂಶಕ್ಕೆ ಅರ್ಹರು ಎಂದು ಸುಪ್ರೀಂ ಕೋರ್ಟ್‌ನಿಂದ ಮಹತ್ವದ ತೀರ್ಪು



11: ನಿರೂಪಕಿ, ನಟಿ ಅಪರ್ಣಾ ವಸ್ತಾರೆ ನಿಧನ

12: ಟ್ರಕ್ ಟರ್ಮಿನಲ್ ಪ್ರಕರಣದಲ್ಲಿ ಡಿ.ಎಸ್. ವೀರಯ್ಯ ಬಂಧನ

12: ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ₹ 94 ಕೋಟಿಯನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕ ಬಿ. ನಾಗೇಂದ್ರ ಬಂಧನ

13: ಗಾಜಾ ಪಟ್ಟಿ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಹಮಾಸ್ ಮುಖ್ಯಸ್ಥ ಮೊಹಮ್ಮದ್ ಡೀಫ್ ಸಾವು– 90 ಮಂದಿ ಪ್ಯಾಲೆಸ್ಟೀನಿಯನ್ನರು ಬಲಿ

14: ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮೇಲೆ ಗುಂಡಿನ ದಾಳಿ; ಅವರು ಕೂದಲೆಳೆ ಅಂತರದಲ್ಲಿ ಸಾವಿನಿಂದ ಪಾರು

22: ಹಾಕಿ ತಂಡದ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ನಿವೃತ್ತಿ ಘೋಷಣೆ. ಭಾರತ ಜೂನಿಯರ್ ಹಾಕಿ ತಂಡದ ಕೋಚ್ ಆಗಿ ನೇಮಕ

25: ಗಣಿಗಾರಿಕೆಗೆ ಹಾಗೂ ಖನಿಜಗಳಿರುವ ಜಮೀನಿಗಳ ಮೇಲೆ ತೆರಿಗೆ ವಿಧಿಸಲು ರಾಜ್ಯಗಳು ಶಾಸನಬದ್ಧ ಅಧಿಕಾರ ಹೊಂದಿವೆ ಎಂದು ಸುಪ್ರೀಂ ಕೋರ್ಟ್‌ನಿಂದ ಮಹತ್ವದ ತೀರ್ಪು

28: ದೆಹಲಿಯಲ್ಲಿ ಕೋಚಿಂಗ್ ಸೆಂಟರ್‌ಗೆ ನೀರು ನುಗ್ಗಿ ಮೂವರು ಪರೀಕ್ಷಾ ಆಕಾಂಕ್ಷಿಗಳು ಸಾವು; ಕಟ್ಟಡ ಮಾಲೀಕ ಮತ್ತು ಸೆಂಟರ್ ನಿರ್ವಾಹಕ ಬಂಧನ

30: ಕೇರಳದ ವಯನಾಡ್ ಜಿಲ್ಲೆಯ ಮುಂಡಕ್ಕೈ, ಚೂರಲ್‌ಮಲ, ಅಟ್ಟಮಲ ಹಾಗೂ ನೂಲ್ಪುಳ ಗ್ರಾಮಗಳಲ್ಲಿ ಭಾರಿ ಭೂಕುಸಿತ; ಕಂದಮ್ಮಗಳು ಸೇರಿದಂತೆ 123ಕ್ಕೂ ಹೆಚ್ಚು ಜನರು ಚಿರನಿದ್ರೆಗೆ



ಆಗಸ್ಟ್

1. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಲ್ಲಿ ಒಳಮೀಸಲಾತಿ ಅನುಷ್ಠಾನಗೊಳಿಸುವ ಹಕ್ಕು ರಾಜ್ಯ ಸರ್ಕಾರಗಳಿಗೆ ಇದೆ ಎಂದು ಸುಪ್ರೀಂ ಕೋರ್ಟ್‌ನಿಂದ ಐತಿಹಾಸಿಕ ತೀರ್ಪು



5: ಬಾಂಗ್ಲಾದೇಶದ ಪ್ರಧಾನಿ ನಿವಾಸದ ಮೇಲೆ ಮುತ್ತಿಗೆ. ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿ ಶೇಖ್ ಹಸೀನಾ ಭಾರತಕ್ಕೆ ಆಗಮನ

8: ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ (80) ನಿಧನ



9. ಕೋಲ್ಕತ್ತದ ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಮತ್ತು ಕೊಲೆ

10. ಮಾಜಿ ವಿದೇಶಾಂಗ ಸಚಿವ ನಟವರ್ ಸಿಂಗ್ (93) ನಿಧನ



11. ತುಂಗಭದ್ರಾ ಜಲಾಶಯದ 19ನೇ ಕ್ರಸ್ಟ್ ಗೇಟ್ ನೀರು ಪಾಲು

16. ಕಾಂತರ, ಕೆಜಿಎಫ್ ಸಿನಿಮಾ ಸೇರಿದಂತೆ ಕನ್ನಡಕ್ಕೆ 7 ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ


24. ಏಕೀಕೃತ ಪಿಂಚಣಿ ಯೋಜನೆಗೆ ಕೇಂದ್ರ ಸರ್ಕಾರದಿಂದ ಅನುಮತಿ

26. ಪಾಕಿಸ್ತಾನದ 3 ಕಡೆ ಉಗ್ರರಿಂದ ದಾಳಿ 40 ಸಾವು

ಸೆಪ್ಟೆಂಬರ್



13: ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ಮನೆಯಲ್ಲಿ ನಡೆದ ಗಣಪತಿ ಹಬ್ಬದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗಿ. ರಾಜಕೀಯ ವಿವಾದ



13: ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ (72) ನಿಧನ

13: ಎಲಾನ್ ಮಸ್ಕ್ ಅವರ ‘ಸ್ಪೇಸ್‌ಎಕ್ಸ್’ ಆಯೋಜಿಸಿದ್ದ ‘ವಿಶ್ವದ ಮೊದಲ ಬಾಹ್ಯಾಕಾಶ ನಡಿಗೆ’ಯು ಯಶಸ್ವಿ

14: ಬ್ರಸೆಲ್ಸ್‌ನಲ್ಲಿ ನಡೆದ ಡೈಮಂಡ್ ಲೀಗ್ ಫೈನಲ್‌ನಲ್ಲಿ ಭಾರತದ ಜಾವೆಲಿನ್ ಥ್ರೋ ತಾರೆ ನೀರಜ್ ಚೋಪ್ರಾ ಅವರಿಗೆ ಕೇವಲ 1 ಸೆಂಟಿಮೀಟರ್ ಅಂತರದಲ್ಲಿ ಕೈತಪ್ಪಿದ ಚಿನ್ನ. ಗ್ರೆನೆಡಾದ ಪೀಟರ್ಸ್ ಆ್ಯಂಡರ್ಸನ್‌ಗೆ ಅಗ್ರಸ್ಥಾನ



14: ಜಾತಿ ನಿಂದನೆ ಹಾಗೂ ಘನತ್ಯಾಜ್ಯ ವಿಲೇವಾರಿ ಗುತ್ತಿಗೆಗೆ ಲಂಚಕ್ಕೆ ಬೇಡಿಕೆ ಇರಿಸಿದ್ದ ಆರೋಪದ ಅಡಿ ಬಿಜೆಪಿ ಶಾಸಕ ಮುನಿರತ್ನ ಅವರನ್ನು ಬಂಧನ.

18: ದೆಹಲಿ ಮುಖ್ಯಮಂತ್ರಿ ಸ್ಥಾನಕ್ಕೆ ಅರವಿಂದ ಕೇಜ್ರಿವಾಲ್ ರಾಜೀನಾಮೆ. ಉತ್ತರಾಧಿಕಾರಿಯಾಗಿ ಸಚಿವೆ ಆತಿಶಿ ಆಯ್ಕೆ

20: ‘ತಿರುಮಲ ದೇವಸ್ಥಾನದ ಪ್ರಸಾದ ‘ಲಡ್ಡು’ ತಯಾರಿಸಲು, ಈ ಹಿಂದಿನ ವೈಎಸ್‌ಆರ್‌ಸಿಪಿ ಸರ್ಕಾರದ ಅವಧಿಯಲ್ಲಿ ಪ್ರಾಣಿಗಳ ಕೊಬ್ಬು ಬಳಸಲಾಗುತ್ತಿತ್ತು’ ಎಂದು ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ನೀಡಿದ ಹೇಳಿಕೆಯು ವಿವಾದ ಹುಟ್ಟುಹಾಕಿತು

23: ಬುಡಾಪೆಸ್ಟ್‌ನಲ್ಲಿ ನಡೆದ ಚೆಸ್ ಒಲಿಂಪಿಯಾಡ್‌ನಲ್ಲಿ ಭಾರತದ ಓಪನ್ ಮತ್ತು ಮಹಿಳಾ ತಂಡಗಳಿಗೆ ಐತಿಹಾಸಿಕ ಚಿನ್ನ

23: ಶ್ರೀಲಂಕಾದಲ್ಲಿ ಜನರು ಸರ್ಕಾರದ ವಿರುದ್ಧ ದಂಗೆ ಎದ್ದ ಬಳಿಕ ನಡೆದ ಚುನಾವಣೆಯಲ್ಲಿ ಹೊಸ ಅಧ್ಯಕ್ಷರಾಗಿ ಮಾರ್ಕ್ಸ್‌ವಾದಿ ರಾಜಕಾರಣಿ ಅನುರ ಕುಮಾರ ಡಿಸ್ಸನಾಯಿಕೆ ಆಯ್ಕೆ

29: ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ 40 ಎಕರೆ ಜಾಗದಲ್ಲಿ ಬಿಸಿಸಿಐನ ಶ್ರೇಷ್ಠತಾ ಕೇಂದ್ರ (ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ) ಲೋಕಾರ್ಪಣೆ


29: ಇರಾನ್ ಬೆಂಬಲಿತ ಹಿಜ್ಬುಲ್ಲಾ ಬಂಡುಕೋರ ಸಂಘಟನೆಯ ಮುಖ್ಯಸ್ಥ ಸಯ್ಯದ್ ಹಸನ್ ನಸ್ರಲ್ಲಾ (64) ಅವರ ಹತ್ಯೆ

30: ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಗೆ ನಟ ಮಿಥುನ್ ಚಕ್ರವರ್ತಿ ಆಯ್ಕೆ

ಅಕ್ಟೋಬರ್

8: ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಹಾಗೂ ಜಮ್ಮು ಕಾಶ್ಮೀರದಲ್ಲಿ ‘ಇಂಡಿಯಾ’ ಗುಂಪಿಗೆ ಗೆಲುವು

9: ದೇಶದ ಕೈಗಾರಿಕಾ ಉದ್ಯಮಕ್ಕೆ ಅಭಿವೃದ್ಧಿಯ ದಿಕ್ಸೂಚಿಯನ್ನು ನೀಡಿದ್ದ ಹೆಸರಾಂತ ಕೈಗಾರಿಕೋದ್ಯಮಿ ರತನ್ ಟಾಟಾ ನಿಧನ





12: ಎನ್‌ಸಿಪಿ (ಅಜಿತ್ ಪವಾರ್ ಬಣ) ನಾಯಕ, ಮಹಾರಾಷ್ಟ್ರದ ಮಾಜಿ ಸಚಿವ ಬಾಬಾ ಸಿದ್ದೀಕಿ (66) ಅವರನ್ನು ಗುಂಡಿಕ್ಕಿ ಹತ್ಯೆ

16: ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶದ ಮೊದಲ ಮುಖ್ಯಮಂತ್ರಿಯಾಗಿ ಒಮರ್ ಅಬ್ದುಲ್ಲಾ ಪ್ರಮಾಣ ವಚನ

17: ಹಮಾಸ್ ಬಂಡುಕೋರ ಸಂಘಟನೆಯ ಮುಖ್ಯಸ್ಥ ಯಹ್ಯಾ ಸಿನ್ವರ್‌ನನ್ನು (61) ಹತ್ಯೆಗೈದ ಇಸ್ರೇಲ್

22: ಬೆಂಗಳೂರಿನ ಬಾಬುಸಾಪಾಳ್ಯದಲ್ಲಿ ನಿರ್ಮಾಣ



ಹಂತದ ಆರು ಅಂತಸ್ತಿನ ಕಟ್ಟಡ ಉರುಳಿ 8 ಸಾವು

22: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನ್ಯೂಜಿಲೆಂಡ್ ವಿರುದ್ಧ ಮೊದಲ ಟೆಸ್ಟ್ ಪಂದ್ಯದಲ್ಲಿ ಭಾರತ 46 ರನ್‌ಗೆ ಆಲೌಟ್. ಸ್ವದೇಶದಲ್ಲಿ ಭಾರತದ ಅತ್ಯಂತ ಕಡಿಮೆ ಸ್ಕೋರ್ ಇದು

24: ಜನ್ಮ ದಿನಾಂಕ ನಿರ್ಧರಿಸಲು ಆಧಾರ್ ಕಾರ್ಡ್ ಅಧಿಕೃತ ಪುರಾವೆಯಲ್ಲ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು

28: ಕೇರಳದ ಕಾಸರಗೋಡು ಜಿಲ್ಲೆಯ ನೀಲೇಶ್ವರ ಬಳಿಯ ಅಂಜೂಟ್ಟಂಬಲಂ ವೀರರ್‌ಕಾವ್ ದೈವಸ್ಥಾನದ ಉತ್ಸವದ ವೇಳೆ ಪಟಾಕಿ ಅವಘಡ ಸಂಭವಿಸಿ 150ಕ್ಕೂ ಹೆಚ್ಚು ಮಂದಿಗೆ ಗಾಯ, ನಾಲ್ವರು ಸಾವು

29: ಸ್ಪೇನ್‌ನಲ್ಲಿ ಅಕ್ಟೋಬರ್ 29 ಹಾಗೂ 30ರಂದು ಸಂಭವಿಸಿದ ಭೀಕರ ಪ್ರವಾಹದಲ್ಲಿ 231 ಮಂದಿ ಸಾವು

ನವೆಂಬರ್

1: ವಸ್ತ್ರ ವಿನ್ಯಾಸಕ ರೋಹಿತ್ ಭಾಲ್(63) ನಿಧನ

6: ಅಮೆರಿಕ ಅಧ್ಯಕ್ಷರಾಗಿ ಎರಡನೇ ಬಾರಿಗೆ ಡೊನಾಲ್ಡ್ ಟ್ರಂಪ್ ಆಯ್ಕೆ. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಭಾರತ ಮೂಲದ ಅಮೆರಿಕನ್ನರಾದ ಕಮಲಾ ಹ್ಯಾರಿಸ್‌ಗೆ ನಿರಾಸೆ

6: ರಸ್ತೆ ವಿಸ್ತರಣೆ ಮತ್ತು ಒತ್ತುವರಿ ತೆರವು ವೇಳೆ ಸಂಬಂಧಪಟ್ಟವರಿಗೆ ನೋಟಿಸ್ ನೀಡದೇ, ಕಟ್ಟಡಗಳನ್ನು ‘ರಾತ್ರೋರಾತ್ರಿ ನೆಲಸಮಗೊಳಿಸುವಂತಿಲ್ಲ’ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು

17: ಜನಾಂಗೀಯ ಸಂಘರ್ಷ ಪೀಡಿತ ಮಣಿಪುರ




ರಾಜ್ಯದಲ್ಲಿ ಮತ್ತೆ ಉದ್ವಿಗ್ನ ಸ್ಥಿತಿ. 3 ಜಿಲ್ಲೆಗಳಲ್ಲಿ ಬಿಗುವಿನ ವಾತಾವರಣ. ಸಚಿವರು, ಶಾಸಕರ ಮನೆಗೆ ಬೆಂಕಿ ಇಟ್ಟು ಆಕ್ರೋಶ

20: ಕರ್ನಾಟಕದ ‘ನಂದಿನಿ’ ಬ್ರ್ಯಾಂಡ್‌ನ ಉತ್ಪನ್ನಗಳ ವಹಿವಾಟು ದೇಶದ ರಾಜಧಾನಿ ನವದೆಹಲಿಗೂ ವಿಸ್ತರಣೆ

20: ಟೆನಿಸ್ ದಂತಕತೆ ರಫೆಲ್ ನಡಾಲ್ ವೃತ್ತಿಜೀವನಕ್ಕೆ ವಿದಾಯ ಘೋಷಣೆ. ಸ್ಪೇನ್‌ನ 38 ವರ್ಷದ ಆಟಗಾರ 22 ಗ್ರ್ಯಾನ್‌ಸ್ಲಾಮ್ ಸೇರಿ ಹಲವು ಪ್ರಮುಖ ಪ್ರಶಸ್ತಿ ಗೆದ್ದಿದ್ದಾರೆ

21: ಉದ್ಯಮಿ ಗೌತಮ್ ಅದಾನಿ ವಿರುದ್ಧ, ಭಾರತದಲ್ಲಿ ಸೌರಶಕ್ತಿಯಿಂದ ವಿದ್ಯುತ್ ಉತ್ಪಾದಿಸುವ ಯೋಜನೆಗಳ ಗುತ್ತಿಗೆ ಪಡೆಯಲು ಅಧಿಕಾರಿಗಳಿಗೆ 25 ಕೋಟಿ ಡಾಲರ್ (ಅಂದಾಜು ₹2,100 ಕೋಟಿ) ಲಂಚ ನೀಡಿದ ಆರೋಪ. ಅದಾನಿ ಮತ್ತು ಅವರ ಅಣ್ಣನ ಮಗ ಸಾಗರ್ ಅದಾನಿ ವಿರುದ್ಧ ಬಂಧನ ವಾರಂಟ್ ಹೊರಡಿಸಿದ ಅಮೆರಿಕದ ಕೋರ್ಟ್



23: ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಮಹಾಯುತಿ ಅಧಿಕಾರಕ್ಕೆ. ಜಾರ್ಖಂಡ್‌ನಲ್ಲಿ ಸರ್ಕಾರ ಉಳಿಸಿಕೊಂಡ ಜೆಎಂಎಂ

24: ಸೌದಿ ಅರೇಬಿಯಾದ ಜೆದ್ದಾದಲ್ಲಿ ನಡೆದ ಐಪಿಎಲ್ ಕ್ರಿಕೆಟ್ ಟೂರ್ನಿಯ ಮೆಗಾ ಹರಾಜಿನಲ್ಲಿ ರಿಷಭ್ ಪಂತ್ ಮತ್ತು ಶ್ರೇಯಸ್ ಅಯ್ಯರ್ ಕ್ರಮವಾಗಿ ₹27 ಕೋಟಿ ಮತ್ತು ₹26.75 ಕೋಟಿಗೆ ಖರೀದಿಯಾಗುವ ಮೂಲಕ ಹೊಸ ದಾಖಲೆ ಬರೆದರು

ಡಿಸೆಂಬರ್

1: ಭಾರತೀಯ ಅಮೆರಿಕನ್ ಕಾಶ್ ಪಟೇಲ್ ಅವರನ್ನು ಎಫ್‌ಬಿಐ ಮುಖ್ಯಸ್ಥರನ್ನಾಗಿ ನೇಮಕ ಮಾಡಿದ ಅಮೆರಿಕದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್


1: ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯ ಅಧ್ಯಕ್ಷರಾಗಿ ಭಾರತದ ಜಯ್ ಶಾ ಅಧಿಕಾರ ಸ್ವೀಕಾರ

2: ಬಿಜೆಪಿ ರಾಜ್ಯ ನಾಯಕತ್ವದ ವಿರುದ್ಧ ಬಂಡೆದ್ದಿರುವ ಬಣದ ಮುಂದಾಳು ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಶಿಸ್ತು ಸಮಿತಿಯಿಂದ ನೋಟಿಸ್

5: ಹೈದರಾಬಾದ್‌ನ ಸಂಧ್ಯಾ ಚಿತ್ರಮಂದಿರದಲ್ಲಿ ನಟ ಅಲ್ಲು ಅರ್ಜುನ್ ನಟನೆಯ ‘ಪುಷ್ಪ 2: ದಿ ರೂಲ್’ ಸಿನಿಮಾ ಪ್ರದರ್ಶನ ಉಂಟಾದ ನೂಕುನುಗ್ಗಲು ಮತ್ತು ಕಾಲ್ತುಳಿತದಲ್ಲಿ ಮಹಿಳೆ ಸಾವು. ಘಟನೆಗೆ ಸಂಬಂಧಿಸಿ, ಅಲ್ಲು ಅರ್ಜುನ್ ವಿರುದ್ಧ ಪ್ರಕರಣ ದಾಖಲು

5: ಮಹಾರಾಷ್ಟ್ರ ಮುಖ್ಯಮಂತ್ರಿಯಾಗಿ ದೇವೇಂದ್ರ ಫಡಣವೀಸ್ ಪ್ರಮಾಣ ವಚನ ಸ್ವೀಕಾರ

8: ಸಿರಿಯಾ ಸರ್ಕಾರವು ಪತನ. ಅಧ್ಯಕ್ಷ ಬಶರ್ ಅಸಾದ್ ಕುಟುಂಬದ ಐದು ದಶಕಗಳ ಆಡಳಿತ ಕೊನೆ



10: ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ (93) ನಿಧನ


10: ಪರಿಸರವಾದಿ ಮಾಧವ ಗಾಡ್ಗೀಳ್ ಅವರು ವಿಶ್ವಸಂಸ್ಥೆಯ ‘ಚಾಂಪಿಯನ್ಸ್ ಆಫ್ ದಿ ಅರ್ತ್’ ವಾರ್ಷಿಕ ಪ್ರಶಸ್ತಿಗೆ ಆಯ್ಕೆ

12: ಗುಕೇಶ್ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾರತದ 18 ವರ್ಷ ವಯಸ್ಸಿನ ಡಿ.ಗುಕೇಶ್‌ಗೆ ಕಿರೀಟ

12: ಧಾರ್ಮಿಕ ಸ್ಥಳಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವ ಕೋರಿಕೆ ಇರುವ ಹೊಸ ಅರ್ಜಿಗಳನ್ನು ನ್ಯಾಯಾಲಯಗಳು ಮುಂದಿನ ಸೂಚನೆಯವರೆಗೆ ಕೈಗೆತ್ತಿಕೊಳ್ಳುವಂತೆ ಇಲ್ಲ ಎಂದು ಸುಪ್ರೀಂ ಕೋರ್ಟ್‌ನಿಂದ ನಿರ್ದೇಶನ

13: ನಟ ಅಲ್ಲು ಅರ್ಜುನ್ ಬಂಧನ

16: ವಿಶ್ವವಿಖ್ಯಾತ ತಬಲಾ ವಾದಕ ಜಾಕಿರ್ ಹುಸೇನ್ (73) ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೊದ ಆಸ್ಪತ್ರೆಯಲ್ಲಿ ನಿಧನ



16: ಗಿಡಗಳ ಆರೈಕೆ ಮೂಲಕ ಪ್ರಸಿದ್ಧಿ ಪಡೆದು, ಅದೇ ಕಾರಣಕ್ಕೆ ‘ಪದ್ಮಶ್ರೀ’ ಪ್ರಶಸ್ತಿಗೆ ಭಾಜನರಾಗಿದ್ದ ಅಂಕೋಲಾ ತಾಲ್ಲೂಕು ಹೊನ್ನಳ್ಳಿಯ ತುಳಸಿ ಗೌಡ (80) ನಿಧನ



18: ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಭಾರತ ತಂಡದ ಆಫ್ ಸ್ಪಿನ್–ಆಲ್‌ರೌಂಡರ್ ರವಿಚಂದ್ರನ್ ಅಶ್ವಿನ್ ದಿಢೀರ್ ವಿದಾಯ ಘೋಷಣೆ

18: ಹಿರಿಯ ಭಾಷಾ ವಿದ್ವಾಂಸ ಹಾಗೂ ಸಂಶೋಧಕ ಪ್ರೊ.ಕೆ.ವಿ.ನಾರಾಯಣ ಅವರ ‘ನುಡಿಗಳ ಅಳಿವು’ ಕೃತಿಯು ಕೇಂದ್ರ ಸಾಹಿತ್ಯ ಅಕಾಡೆಮಿಯ 2024ನೇ ಸಾಲಿನ ಪ್ರಶಸ್ತಿಗೆ ಆಯ್ಕೆ

20: ಮಂಡ್ಯದಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಮ್ಮೇಳನದ ಅಧ್ಯಕ್ಷ ಗೊ.ರು. ಚನ್ನಬಸಪ್ಪ ವಿಧ್ಯುಕ್ತ ಚಾಲನೆ

23: ಹೊಸ ಅಲೆಯ ಸಿನಿಮಾ ಚಳವಳಿಗೆ ನಾಂದಿ ಹಾಡಿದ್ದ ಚಲನಚಿತ್ರ ನಿರ್ದೇಶಕ ಶ್ಯಾಮ್ ಬೆನಗಲ್ (90) ನಿಧನ



26: ಮಾಜಿ ಪ್ರಧಾನಿ ಮನಮೋಹನ ಸಿಂಗ್ (92) ನಿಧನ



25: ಮಲಯಾಳಿ ಸಾಹಿತ್ಯ ದಿಗ್ಗಜ ಎಂ.ಟಿ. ವಾಸುದೇವನ್ ನಾಯರ್ (91) ನಿಧನ

29: ಕೋನೇರು ಹಂಪಿ ಅವರಿಗೆ ಮಹಿಳಾ ವಿಶ್ವ ರ್‍ಯಾಪಿಡ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ. ಎರಡನೇ ಬಾರಿ ಗೆದ್ದ ವಿಶ್ವದ ಎರಡನೇ ಆಟಗಾರ್ತಿ

29: ಅಮೆರಿಕದ 39ನೇ ಅಧ್ಯಕ್ಷರಾಗಿದ್ದ ಜಿಮ್ಮಿ ಕಾರ್ಟರ್ (100) ನಿಧನ.

ವಿವಾದಿತ ಹೇಳಿಕೆಗಳು

ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್ ಎಂದು ಹೇಳುವುದು ಈಗ ಫ್ಯಾಶನ್ ಆಗಿಬಿಟ್ಟಿದೆ. ಒಂದುವೇಳೆ ಇಷ್ಟೊಂದು ಸಲ ದೇವರ ಹೆಸರು ಸ್ಮರಿಸಿದ್ದರೆ ಸ್ವರ್ಗ ಪ್ರಾಪ್ತಿಯಾಗುತ್ತಿತ್ತು

ಅಮಿತ್ ಶಾ, ಕೇಂದ್ರ ಗೃಹ ಸಚಿವ (ರಾಜ್ಯಸಭೆಯಲ್ಲಿ ಸಂವಿಧಾನದ ಚರ್ಚೆಯಲ್ಲಿ ಪಾಲ್ಗೊಂಡು ಹೇಳಿದ ಮಾತು. ಈ ಹೇಳಿಕೆ ವಿರುದ್ಧ ದೇಶದಾದ್ಯಂತ ಪ್ರತಿಭಟನೆಗಳು ನಡೆದವು)

ಪ್ರಾ* * *

(ವಿಧಾನ ಪರಿಷತ್‌ನ ಸಭಾಂಗಣದಲ್ಲಿ ಸದನವನ್ನು ಮುಂದೂಡಿದ ಮೇಲೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರನ್ನು ಉದ್ದೇಶಿಸಿ ಶಾಸಕ ಸಿ.ಟಿ. ರವಿ ಈ ಮಾತು ಆಡಿದರೆನ್ನಲಾಗಿದ್ದು ಅವರನ್ನು ಬಂಧಿಸಿ, ಬಿಡುಗಡೆ ಮಾಡಲಾಗಿತ್ತು. ಸಿಐಡಿ ತನಿಖೆ ನಡೆಸುತ್ತಿದೆ)

ದೇಶದ ಪೂರ್ವ ಭಾಗದ ಜನ ಚೀನಿಯರಂತೆ ಕಾಣುತ್ತಿದ್ದರೆ, ಪಶ್ಚಿಮದ ರಾಜ್ಯಗಳಲ್ಲಿ ಇರುವವರು ಅರಬ್ಬರ ಥರ ಕಾಣುತ್ತಾರೆ. ಅದೇ ರೀತಿ, ಉತ್ತರ ಭಾಗಗಳ ಜನ ಬಹುಶಃ ಬಿಳಿಯರಂತೆ ಕಂಡರೆ ದಕ್ಷಿಣದಲ್ಲಿ ಇರುವವರು ಆಫ್ರಿಕಾದವರಂತೆ ಕಾಣುತ್ತಾರೆ.

–ಸ್ಯಾಮ್ ಪಿತ್ರೋಡಾ (ಪಾಡ್‌ಕಾಸ್ಟ್‌ವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿದ ಮಾತು. ದಕ್ಷಿಣ ಭಾರತೀಯರ ಜನಾಂಗೀಯ ನಿಂದನೆ ಮಾಡಿದ್ದಾರೆ ಎಂಬ ವಿವಾದ ಭುಗಿಲೆದ್ದಿತ್ತು)

ಎತ್ತಿನಹೊಳೆ ಯೋಜನೆ: ಕಾಡು ಬೆಳೆಸಲು 508 ಎಕರೆ ಗುರುತಿಸಿದ ಕರ್ನಾಟಕ ಸರ್ಕಾರ

ಕೇಂದ್ರ ಚಾಟಿ ಬಳಿಕ ಕಾಡಿಗೆ ಜಾಗ

ಪ್ರಜಾವಾಣಿ ವಾರ್ತೆ

ನವದೆಹಲಿ: ಬರಪೀಡಿತ ಬಯಲು ಸೀಮೆಯ ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸುವ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಗೆ ಕೇಂದ್ರ ಸರ್ಕಾರ ತಕರಾರು ಎತ್ತಿದ ಬಳಿಕ ಪರಿಹಾರಾತ್ಮಕ ಅರಣ್ಯೀಕರಣಕ್ಕೆ ರಾಜ್ಯ ಸರ್ಕಾರವು 508 ಎಕರೆ ಜಾಗ ಗುರುತಿಸಿದೆ. ಕೇಂದ್ರ ಸರ್ಕಾರಕ್ಕೆ ವಿವರಣೆಯನ್ನೂ ನೀಡಿದೆ.

ಯೋಜನೆಯ ಕಾಮಗಾರಿ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದ ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ, 'ಯೋಜನೆಯಿಂದಾಗಿ ಪಶ್ಚಿಮ ಘಟ್ಟಕ್ಕೆ ಹಾನಿಯಾದ ಬಗ್ಗೆ ವರದಿಗಳಿದ್ದು, ಈ ಬಗ್ಗೆ ವಾಸ್ತವಾಂಶ ಹಾಗೂ ಇಡೀ ಯೋಜನೆಯ ಕಾರ್ಯಸಾಧ್ಯತೆಯ ವರದಿ ಸಲ್ಲಿಸಬೇಕು' ಎಂದು ರಾಜ್ಯ ಸರ್ಕಾರಕ್ಕೆ ಸೂಚಿಸಿತ್ತು.

'ಅರಣ್ಯ ಬಳಕೆಗೆ ರಾಜ್ಯ ಸರ್ಕಾರ ಸಲ್ಲಿಸಿರುವ ಪ್ರಸ್ತಾವನೆಯ ವಿವರಗಳನ್ನು ಪರಿಶೀಲನೆ ನಡೆಸಿದಾಗ, ಪರಿಹಾರಾತ್ಮಕ ಅರಣ್ಯೀಕರಣಕ್ಕೆ ಗುರುತಿಸಿರುವ ಜಾಗದಲ್ಲಿ ರಸ್ತೆ ಹಾದು ಹೋಗಿರುವುದು ಗಮನಕ್ಕೆ ಬಂದಿದೆ. ಈ ಬಗ್ಗೆ ವಿವರಣೆ ನೀಡಬೇಕು ಹಾಗೂ ಪ್ರಮಾಣಪತ್ರ ಸಲ್ಲಿಸಬೇಕು. ಪರಿಹಾರಾತ್ಮಕ ಅರಣ್ಯಕ್ಕೆ ಗುರುತಿಸಿರುವ ಅರಣ್ಯೇತರ ಜಾಗವು ತೀರ್ಥರಾಮಪುರ ರಾಜ್ಯ ಅರಣ್ಯದ ವ್ಯಾಪ್ತಿಯಲ್ಲಿದೆ. ಈ ಬಗ್ಗೆ ಸ್ಪಷ್ಟನೆ ನೀಡಬೇಕು. ಪರಿಹಾರಾತ್ಮಕ ಅರಣ್ಯೀಕರಣದ ಸಮಗ್ರ ಯೋಜನೆಯನ್ನು ಕೂಡಲೇ ಸಲ್ಲಿಸಬೇಕು' ಎಂದು ತಾಕೀತು ಮಾಡಿತ್ತು.

ಯೋಜನೆಯ ಎರಡನೇ ಹಂತದಲ್ಲಿ 252 ಕಿ.ಮೀ. ಉದ್ದದ ಮುಖ್ಯ ಗುರುತ್ವ ಕಾಲುವೆಯು ಹಾಸನ ಹಾಗೂ ತುಮಕೂರು ಜಿಲ್ಲೆಗಳ 508 ಎಕರೆ ಅರಣ್ಯ ಪ್ರದೇಶಗಳಲ್ಲಿ ಹಾದು ಹೋಗುತ್ತಿದೆ. ಈ ಅರಣ್ಯ ಬಳಕೆಗೆ ಅರಣ್ಯ ಸಚಿವಾಲಯದ ಒಪ್ಪಿಗೆ ಬೇಕಾಗಿದೆ. ಅರಣ್ಯ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸುವ ಸಂದರ್ಭದಲ್ಲಿ ಪರಿಹಾರಾತ್ಮಕ ಅರಣ್ಯೀಕರಣಕ್ಕೂ ಜಾಗ ಗುರುತಿಸುವುದು ಕಡ್ಡಾಯ. ಆದರೆ, ಎತ್ತಿನಹೊಳೆ ಯೋಜನೆಯಲ್ಲಿ ರಾಜ್ಯವು ಲೋಪ ಎಸಗಿದ್ದನ್ನು ಕೇಂದ್ರ ಅರಣ್ಯ ಸಚಿವಾಲಯ ಗಂಭೀರವಾಗಿ ಪರಿಗಣಿಸಿತ್ತು. ಕಾಡು ಬೆಳೆಸಲು ಜಾಗ ಗುರುತಿಸಿರುವ ರಾಜ್ಯ ಸರ್ಕಾರವು, ಅಗತ್ಯ ದಾಖಲೆಗಳನ್ನು ಪರಿವೇಶ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿದೆ.

ಅರಣ್ಯ ತೀರುವಳಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ರೈಲ್ವೆ ಇಲಾಖೆ ಅನುಮತಿ ಹಾಗೂ ಭೂಸ್ವಾಧೀನ ಪ್ರಕ್ರಿಯೆಯಲ್ಲಿನ ವಿಳಂಬ ಇತ್ಯಾದಿ ಅಡೆತಡೆಗಳನ್ನು ನಿವಾರಿಸಿಕೊಂಡು ಯೋಜನೆಯನ್ನು 2027ರ ಮಾರ್ಚ್ ಒಳಗೆ ಪೂರ್ಣಗೊಳಿಸಲಾಗುವುದು ಎಂದು ಜಲಸಂಪನ್ಮೂಲ ಇಲಾಖೆ ಮೂಲಗಳು ತಿಳಿಸಿವೆ.

ಅರಣ್ಯೀಕರಣಕ್ಕೆ ಜಾಗ ಎಲ್ಲೆಲ್ಲಿ?

- ವಿಶ್ವೇಶ್ವರಯ್ಯ ಜಲ ನಿಗಮದ 71 ಎಕರೆ
- ತುಮಕೂರಿನ ಚಿಕ್ಕನಾಯನಹಳ್ಳಿ ತಾಲ್ಲೂಕಿನಲ್ಲಿ ಮಪತ್ತು ಜಮೀನಿನ 65 ಎಕರೆ
- ಹಾಸನ ಜಿಲ್ಲೆಯ ಬೇಲೂರು ಹಾಗೂ ಅರಸೀಕೆರೆ ತಾಲ್ಲೂಕಿನಲ್ಲಿ 373 ಎಕರೆ ಜಾಗ. ಈ ಪೈಕಿ, ಅರಣ್ಯೀಕರಣಕ್ಕೆ 31 ಎಕರೆ ಸೂಕ್ತವಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿರುವುದರಿಂದ, ಅದನ್ನು ಕೈಬಿಟ್ಟು ಬೇರೆ ಕಡೆ ಜಾಗ ಗುರುತು



ರಾಗಿ ಒಕ್ಕಣೆ... ಮೈಸೂರು ಹೊರವಲಯದ ಆರ್.ಟಿ.ನಗರದಲ್ಲಿ ಸೋಮವಾರ ರಾಗಿಯನ್ನು ತೂರಿ ಸ್ವಚ್ಛಗೊಳಿಸಿದ ರೈತ ಮಹಿಳೆಯರು ಪ್ರಜಾವಾಣಿ ಚಿತ್ರ:ಅನೂಪ್ ರಾಘ.ಟಿ.

ಮಣ್ಣಲ್ಲಿ ಹೂತಿಟ್ಟ ತೊಗರಿಬೇಳೆ ಪತ್ತೆ

ನವಲಗುಂದ (ಧಾರವಾಡ ಜಿಲ್ಲೆ): ಪಟ್ಟಣದ ಎಪಿಎಂಸಿ ಆವರಣದಲ್ಲಿನ ಮಣ್ಣಿನಲ್ಲಿ ಹೂತಿಟ್ಟ 'ಅನ್ನಭಾಗ್ಯ' ಯೋಜನೆಯ ಎರಡು ಚೀಲ ತೊಗರಿ ಬೇಳೆ ಪೊಟ್ಟಣಗಳು ಸೋಮವಾರ ಸಿಕ್ಕಿವೆ.

ಗ್ರಾಮ ಆಡಳಿತಾಧಿಕಾರಿ ಎಚ್.ವಿ. ಚಿಕ್ಕನರಗುಂದ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಎಫ್‌ಡಿಎ ಪ್ರಕಾಶ ಮೇಲಿನಮನಿ ಮತ್ತು ಇಬ್ಬರು ಪೊಲೀಸರು ಪರಿಶೀಲಿಸಿದರು. ಮಣ್ಣು ಸರಿಸಿದಾಗ, ಚೀಲಗಳು ಸಿಕ್ಕವು.

ಪೊಟ್ಟಣದ ಮೇಲೆ 'ಕರ್ನಾಟಕ ಸರ್ಕಾರ, ಅನ್ನಭಾಗ್ಯ ಹಸಿವು ಮುಕ್ತ ಕರ್ನಾಟಕ, ತೊಗರಿ ಬೇಳೆ' ಎಂದು ಮುದ್ರಿತವಾಗಿದೆ.

ಅನ್ನಭಾಗ್ಯ ಯೋಜನೆಯಡಿ 'ತೊಗರಿ ಬೇಳೆ' ಪೊಟ್ಟಣ ಈಗ ವಿತರಿಸುತ್ತಿಲ್ಲ. ಹಳೆಯ ಪೊಟ್ಟಣಗಳು ಇರಬಹುದು ಎಂದು ತಹಶೀಲ್ದಾರ್ ಸುಧೀರ್ ಸಾಹುಕಾರ ತಿಳಿಸಿದ್ದಾರೆ.

ಶಸ್ತ್ರಾಸ್ತ್ರ ತೊರೆಯಿರಿ: ಸಿ.ಎಂ

ಮುಖ್ಯವಾಹಿನಿಗೆ ಬನ್ನಿ; ನಕ್ಸಲರಿಗೆ ಸಿದ್ದರಾಮಯ್ಯ ಕರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕ್ಸಲ್ ಚಟುವಟಿಕೆಯಲ್ಲಿ ತೊಡಗಿಸಿಕೊಂಡವರು ಶಸ್ತ್ರಾಸ್ತ್ರ ತೊರೆದು ಮುಖ್ಯವಾಹಿನಿಗೆ ಬರುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ಕೊಟ್ಟಿದ್ದಾರೆ.



ಸಿದ್ದರಾಮಯ್ಯ

'ನಕ್ಸಲರು ಮುಖ್ಯವಾಹಿನಿಗೆ ಬರಲು ಮನಸ್ಸು ಮಾಡಿ, ಮಾತುಕತೆಗೆ ಮುಂದಾದರೆ, ಈ ಪ್ರಕ್ರಿಯೆಯನ್ನು ಸರ್ಕಾರ ಕಾನೂನಿನ ಚೌಕಟ್ಟಿನಲ್ಲಿ ಸ್ವಾಗತಿಸುತ್ತದೆ. ಸಹಾನುಭೂತಿಯಿಂದ ನಡೆದುಕೊಳ್ಳುತ್ತದೆ. ಕರ್ನಾಟಕದ ಎಲ್ಲ ನಕ್ಸಲರೂ ಶರಣಾಗತರಾಗಬೇಕು. ನಕ್ಸಲರಿಗಾಗಿ ಸರ್ಕಾರ ನೀತಿ ರೂಪಿಸಿದೆ. ಈ ನೀತಿಯನ್ನು ಇನ್ನಷ್ಟು ಸರಳಗೊಳಿಸಲಾಗುವುದು, ಸಮರ್ಪಕವಾಗಿ ಜಾರಿ ಮಾಡಲಾಗುವುದು' ಎಂದಿದ್ದಾರೆ.

'ನಕ್ಸಲೀಯ ಚಟುವಟಿಕೆಗಳು ನೆರೆಯ ರಾಜ್ಯಗಳಂತೆ ಕರ್ನಾಟಕದಲ್ಲಿ ವಿಪರೀತ ನಡೆದಿಲ್ಲ. ಆದರೆ, ಮಲೆನಾಡಿನಲ್ಲಿ ಎರಡು ದಶಕಗಳಿಂದ ನಕ್ಸಲೀಯ ಚಟುವಟಿಕೆಗಳು ಕಾಣಿಸುತ್ತಿವೆ. ಅಮಾಯಕರು, ಪೊಲೀಸರ ಜೀವಕ್ಕೂ ಹಾನಿಯಾಗಿದೆ. ಪ್ರಜಾತಂತ್ರ ಸಮಾಜದಲ್ಲಿ ಬಂದೂಕಿನ ಮೂಲಕ ಬದಲಾವಣೆ ತರಲು ಹೊರಟಿರುವ ಆದರ್ಶವಾದಿಗಳು ತಮ್ಮ ಜೀವವನ್ನೂ ಕಳೆದುಕೊಂಡಿದ್ದಾರೆ. ಇತರರ ಜೀವಹಾನಿಗೂ ಕಾರಣವಾಗಿದ್ದಾರೆ. ಇದು ನೋವಿನ ವಿಚಾರ. ಇಂತಹ ಪ್ರಕರಣಗಳಲ್ಲಿ ಸಂವಿಧಾನಬದ್ಧವಾಗಿ ಆಡಳಿತ ನಡೆಸುವ ಸರ್ಕಾರ ಸುಮ್ಮನೇ ಕೂರಲು ಸಾಧ್ಯವಿಲ್ಲ. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು, ಶಾಂತಿ ನೆಲೆಸುವಂತೆ ಮಾಡಲು ಸರ್ಕಾರ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲೂ ಹಿಂಜರಿಯದು' ಎಂದು ಎಚ್ಚರಿಸಿದ್ದಾರೆ.

'ಶರಣಾಗತರಾದವರ ಮೇಲಿನ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆ. ಅವರಿಗೆ ಕಾನೂನಿನ ನೆರವು ನೀಡುತ್ತದೆ. ಈಗಾಗಲೇ ಶರಣಾಗತರಾದ ನಕ್ಸಲರ ಅಗತ್ಯಗಳನ್ನು ಗುರುತಿಸಿ ಪುನರ್ವಸತಿ ಕಲ್ಪಿಸುವ ಪ್ರಕ್ರಿಯೆಗೆ ವೇಗ ನೀಡಲಾಗುವುದು' ಎಂದು ತಮ್ಮನ್ನು ಭೇಟಿ ಮಾಡಿದ ವಿವಿಧ ಪ್ರಗತಿಪರರು ಹಾಗೂ ಜನಪರ ವೇದಿಕೆಗಳ ಮುಖಂಡರಿಗೆ ಭರವಸೆ ನೀಡಿದ್ದಾರೆ.

ಮತ್ತೊಬ್ಬ ಅಯ್ಯಪ್ಪ ಮಾಲಾಧಾರಿ ಸಾವು

ಹುಬ್ಬಳ್ಳಿ: ಗ್ಯಾಸ್ ಸಿಲಿಂಡರ್ ಸ್ಫೋಟದಿಂದ ತೀವ್ರ ಗಾಯಗೊಂಡು ಇಲ್ಲಿನ ಕೆಎಂಸಿಆರ್‌ಐ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅಯ್ಯಪ್ಪ ಮಾಲಾಧಾರಿಗಳ ಪೈಕಿ ಮತ್ತೊಬ್ಬರು ಸೋಮವಾರ ಮೃತಪಟ್ಟಿದ್ದಾರೆ. ಈವರೆಗೆ ಒಟ್ಟು ಏಳು ಮಂದಿ ಮೃತಪಟ್ಟಿದ್ದಾರೆ.



ತೇಜೇಶ್ವರ ಸಾತ್ರಿ

'ರಾಮನಗರದ ನಿವಾಸಿ ತೇಜೇಶ್ವರ ಸಾತ್ರಿ (26) ಮೃತರು. ಗಾಯಗೊಂಡಿರುವ ಪ್ರಕಾಶ ಬಾರಕೇರ(42) ಸ್ಥಿತಿ ಚಿಂತಾಜನಕವಾಗಿದೆ. ಸದ್ಯಕ್ಕೆ ವಿನಾಯಕ (12) ಚೇತರಿಸಿಕೊಳ್ಳುತ್ತಿದ್ದಾನೆ' ಎಂದು ಕೆಎಂಸಿಆರ್‌ಐ ನಿರ್ದೇಶಕ ಡಾ. ಎಸ್.ಎಫ್. ಕಮ್ಮಾರ್ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ರಾಜ್ಯ ಮಟ್ಟದ ಯುವಜನೋತ್ಸವ ಜ.5ರಿಂದ

ದಾವಣಗೆರೆ: 'ರಾಜ್ಯ ಮಟ್ಟದ ಯುವಜನೋತ್ಸವವನ್ನು ಜ.5 ಮತ್ತು 6ರಂದು ನಗರದ ಎಂಬಿಎ ಕಾಲೇಜು ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ. ಏಳು ವಿಭಾಗಗಳಲ್ಲಿ ಸಮಾನಾಂತರ ವೇದಿಕೆಗಳಲ್ಲಿ ಏಕಕಾಲಕ್ಕೆ ಸ್ಪರ್ಧೆಗಳು ನಡೆಯಲಿವೆ' ಎಂದು ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ತಿಳಿಸಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜ.5ರಂದು ಬೆಳಿಗ್ಗೆ 10.30ಕ್ಕೆ ಯುವಜನೋತ್ಸವ ಉದ್ಘಾಟಿಸಲಿದ್ದಾರೆ. ಇಲ್ಲಿ ವಿಜೇತರಾದವರು ದೆಹಲಿಯಲ್ಲಿ ನಡೆಯಲಿರುವ ರಾಷ್ಟ್ರ ಮಟ್ಟದ ಸ್ಪರ್ಧೆಗೆ ಅರ್ಹತೆ ಪಡೆಯುತ್ತಾರೆ' ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಜನಪದ ನೃತ್ಯ, ಜನಪದ ಗೀತೆ, ವಿಜ್ಞಾನ ವಸ್ತು ಪ್ರದರ್ಶನ, ಕಥೆ, ಕವನ ರಚನೆ, ಚಿತ್ರಕಲೆ ಹಾಗೂ ಚರ್ಚೆ ವಿಭಾಗದಲ್ಲಿ ಸ್ಪರ್ಧೆಗಳು ನಡೆಯಲಿವೆ. 1,500ಕ್ಕೂ ಅಧಿಕ ಸ್ಪರ್ಧಾಳುಗಳು ಪಾಲ್ಗೊಳ್ಳಲಿದ್ದಾರೆ. ಸ್ಪರ್ಧಾಳುಗಳ ರಾತ್ರಿ ಊಟಕ್ಕೆ ಮಾಂಸಾಹಾರ ನೀಡಲೂ ತೀರ್ಮಾನಿಸಲಾಗಿದೆ' ಎಂದರು.

ಪ್ರವಾಸ ನಿರ್ಬಂಧ ಸಂಜೆಯಿಂದ

ಚಿಕ್ಕಮಗಳೂರು: ಮುಳ್ಳಯ್ಯನಗಿರಿ ಸೇರಿ ಜಿಲ್ಲೆಯ ಪ್ರಮುಖ ಪ್ರವಾಸಿ ತಾಣಗಳಲ್ಲಿ ಡಿ.31ರಂದು (ಮಂಗಳವಾರ) ಸಂಜೆ 6 ರಿಂದ ಜ.1ರ(ಬುಧವಾರ) ಬೆಳಿಗ್ಗೆ 6 ಗಂಟೆ ತನಕ ಪ್ರವಾಸಿಗರ ಭೇಟಿಯನ್ನು ಜಿಲ್ಲಾಡಳಿತ ನಿರ್ಬಂಧಿಸಿದೆ.

ಮುಳ್ಳಯ್ಯನಗಿರಿ, ಸೀತಾಳಯ್ಯನಗಿರಿ, ಬಾಬಾಬುಡನ್‌ಗಿರಿ, ಮಾಣಿಕ್ಯಧಾರ, ಕೆಮ್ಮಣ್ಣುಗುಂಡಿ, ಹಿರೆಕೊಳಲೆ ಕೆರೆ, ಎತ್ತಿನಭುಜ, ದೇವರಮನೆ, ರಾಣಿಝರಿ, ಬಲ್ಲಾಳರಾಯನ ದುರ್ಗ, ಬಂಡಾಜೆ ಜಲಪಾತ, ಕೂಡಿಗೆ ಜಲಪಾತ, ಕ್ಯಾತನಮಕ್ಕಿ, ರುದ್ರಪಾದ, ಅಬ್ಬುಗುಡಿಗೆ ಜಲಪಾತ, ಕೆಮ್ಮಣ್ಣುಗುಂಡಿ, ಕಲ್ಲತ್ತಗಿರಿ, ಹೆಬ್ಬೆ ಜಲಪಾತ, ಅಯ್ಯನಕೆರೆ, ಮದಗದ ಕೆರೆ ಸೇರಿ ಯಾವುದೇ ಪ್ರವಾಸಿ ತಾಣಗಳಿಗೆ ಸಂಜೆ ನಂತರ ಪ್ರವಾಸಿಗರು ಭೇಟಿ ನೀಡಲು ಅವಕಾಶ ಇಲ್ಲ. ಬುಕ್ಕಿಂಗ್ ಮಾಡಿರುವ ಪ್ರವಾಸಿಗರು ಹೋಂ ಸ್ಟೇ, ರೆಸಾರ್ಟ್‌ಗಳಿಗೆ ತೆರಳಲು ಅವಕಾಶ ಇದೆ ಎಂದು ಜಿಲ್ಲಾಧಿಕಾರಿ ಮೀನಾ ನಾಗರಾಜ್ ಆದೇಶದಲ್ಲಿ ವಿವರಿಸಿದ್ದಾರೆ.

ಪ್ರವಾಸಿ ತಾಣಗಳಲ್ಲಿ ಮದ್ಯ ಕುಡಿದು ಮೋಜಿನಲ್ಲಿ ತೊಡಗಿದರೆ ಅಪಾಯಗಳು ಸಂಭವಿಸುವ ಸಾಧ್ಯತೆ ಇದೆ. ಆದ್ದರಿಂದ ಈ ನಿರ್ಬಂಧ ವಿಧಿಸಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ವಿಕ್ರಮ ಅಮಟೆ ಹೇಳಿದ್ದಾರೆ.

ಹಾಜಬ್ಬಗೆ ಇಮಾಂ ಸ್ಮಾರಕ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಜಗಳೂರಿನ ಸಜ್ಜನ ರಾಜಕಾರಣಿ ಜೆ. ಮಹಮ್ಮದ್ ಇಮಾಂ ಅವರ ನೆನಪಿಗಾಗಿ ನೀಡುವ 'ಜೆ.ಎಂ.ಇಮಾಂ ಸ್ಮಾರಕ' ರಾಜ್ಯಮಟ್ಟದ ಪ್ರಶಸ್ತಿಗೆ ದಕ್ಷಿಣ ಕನ್ನಡ ಜಿಲ್ಲೆಯ ಅಕ್ಷರ ಸಂತ ಹರೇಕಳ ಹಾಜಬ್ಬ ಅವರನ್ನು ಆಯ್ಕೆ ಮಾಡಲಾಗಿದೆ.



ಹಾಜಬ್ಬ

'ಕಿತ್ತಳೆ ಹಣ್ಣಿನ ವ್ಯಾಪಾರದ ಹಣದಿಂದ ಗ್ರಾಮದಲ್ಲಿ ಶಾಲೆ ತೆರೆದವರು ಹರೇಕಳ ಹಾಜಬ್ಬ. ಇವರ ಸೇವೆಯನ್ನು ಗುರುತಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ₹ 50,000 ನಗದು ಒಳಗೊಂಡಿದ್ದು, ಜನವರಿ 4ರಂದು ಜಗಳೂರಿನಲ್ಲಿ ಪ್ರದಾನ ಮಾಡಲಾಗುತ್ತದೆ' ಎಂದು ಟ್ರಸ್ಟ್ ಸಲಹಾ ಸಮಿತಿಯ ಅಧ್ಯಕ್ಷ ಎನ್.ಟಿ.ಎರ್ರಿಸ್ವಾಮಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಕೊಡಗಿನ ಯೋಧ ದಿವಿನ್ ನಿಧನ

ಪ್ರಜಾವಾಣಿ ವಾರ್ತೆ

ಶನಿವಾರಸಂತೆ (ಕೊಡಗು ಜಿಲ್ಲೆ): ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯಲ್ಲಿ ಈಚೆಗೆ ಸೇನಾ ವಾಹನವು ಕಂದಕಕ್ಕೆ ಉರುಳಿ ತೀವ್ರ ಗಾಯಗೊಂಡಿದ್ದ ಕೊಡಗು ಜಿಲ್ಲೆಯ ಶನಿವಾರಸಂತೆ ಸಮೀಪದ ಆಲೂರು ಸಿದ್ದಾಪುರದ ಮಾಲಂಬಿ ಗ್ರಾಮದ ಸೈನಿಕ ಪಿ.ಪಿ.ದಿವಿನ್ (28) ಭಾನುವಾರ ರಾತ್ರಿ ಶ್ರೀನಗರ ಆಸ್ಪತ್ರೆಯಲ್ಲಿ ನಿಧನರಾದರು.

ಸೇನಾ ವಾಹನ ಪ್ರಪಾತಕ್ಕೆ ಬಿದ್ದಾಗ ಇವರ ಶ್ವಾಸಕೋಶಕ್ಕೆ ತೀವ್ರ ಹಾನಿಯಾಗಿತ್ತು. ನಂತರ ಶ್ರೀನಗರ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ದಿವಿನ್ ತಾಯಿ ಜಯ ಕೂಡ ಆಸ್ಪತ್ರೆ ತಲುಪಿದ್ದರು.



ದಿವಿನ್

ತಂದೆ, ತಾಯಿಗೆ ಒಬ್ಬನೇ ಮಗನಾಗಿದ್ದ ದಿವಿನ್ 10 ವರ್ಷದ ಹಿಂದೆ ಸೇನೆಗೆ ಸೇರಿದ್ದರು. ಇವರ ತಂದೆ 2 ವರ್ಷಗಳ ಹಿಂದೆ ಅನಾರೋಗ್ಯದಿಂದ ನಿಧನರಾಗಿದ್ದರು. ಕಳೆದ ಒಂದು ವರ್ಷದ ಹಿಂದೆ ಹೊಸಮನೆಯನ್ನು ಕಟ್ಟಿಸಿ ಸಾಂಸಾರಿಕ ಬದುಕಿಗೆ ಅಡಿ ಇಡಲು ಸಿದ್ಧತೆ ನಡೆಸಿದ್ದರು. ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ಯುವತಿಯೊಂದಿಗೆ ಈಚೆಗೆ ನಿಶ್ಚಿತಾರ್ಥ ಕೂಡ ನೆರವೇರಿತ್ತು. ಫೆಬ್ರುವರಿಯಲ್ಲಿ ವಿವಾಹ ನಿಗದಿ ಆಗಿತ್ತು.

ಇವರ ಪಾರ್ಥಿವ ಶರೀರ ಸೋಮವಾರ ತಡರಾತ್ರಿ ಇಲ್ಲವೇ ಮಂಗಳವಾರ ಇಲ್ಲಿಗೆ ಬರುವ ಸಾಧ್ಯತೆ ಇದೆ ಎಂದು ಕುಟುಂಬದವರು ಮಾಹಿತಿ ನೀಡಿದರು.



❦ ಸುಭಾಷಿತ ❦

ದುಡಿಮೆಗೆ ಗುರಿಯಿರಲಿ, ದುಡಿಯುವುದರಲ್ಲಿ ನಿಯಮವಿರಲಿ.

ಸರ್ ಎಂ.ವಿಶ್ವೇಶ್ವರಯ್ಯ

ಚೆಸ್ ಸಂಭ್ರಮ ಹೆಚ್ಚಿಸಿದ ಕೋನೇರು ಹಂಪಿ ಸಾಧನೆ

ಈ ವರ್ಷ ಚೆಸ್ ಆಟವು ಭಾರತದ ಪಾಲಿಗೆ ಸಂಭ್ರಮದ ಹೊನಲು ಹರಿಸಿದೆ. ಇದನ್ನು ಹೆಚ್ಚಿಸುವಂತೆ ಗ್ರ್ಯಾಂಡ್‌ಮಾಸ್ಟರ್ ಕೋನೇರು ಹಂಪಿ ಅವರು ವರ್ಷದ ಕೊನೆಯಲ್ಲಿ ನ್ಯೂಯಾರ್ಕ್‌ನ ವಾಲ್‌ಸ್ಟ್ರೀಟ್‌ನಲ್ಲಿ ನಡೆದ ಮಹಿಳಾ ವಿಶ್ವ ರ್‍ಯಾಪಿಡ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದುಕೊಂಡರು. ಜಾರ್ಜಿಯಾದಲ್ಲಿ 2019ರಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲೂ ಚಿನ್ನ ಗೆದ್ದಿದ್ದ ಹಂಪಿ, ಈ ಪ್ರಶಸ್ತಿಯನ್ನು ಎರಡನೇ ಬಾರಿ ಗೆದ್ದ ವಿಶ್ವದ ದ್ವಿತೀಯ ಆಟಗಾರ್ತಿ ಎನಿಸಿದರು. ಈ ಬಾರಿ ಬೆಳ್ಳಿ ಗೆದ್ದ ಚೀನಾದ ಜು ವೆನ್‌ಜುನ್ ಮಾತ್ರ ಈ ಹಿಂದೆ ಎರಡು ಬಾರಿ ಚಾಂಪಿಯನ್ ಆಗಿದ್ದರು. ಈ ಚಾಂಪಿಯನ್‌ಷಿಪ್‌ನಲ್ಲಿ ಹಂಪಿ ಮೊದಲ ಸುತ್ತು ಸೋತ ನಂತರ ಚೇತರಿಸಿಕೊಂಡ ರೀತಿ ಗಮನಾರ್ಹ. ಅವರು 11 ಸುತ್ತುಗಳಿಂದ 8.5 ಪಾಯಿಂಟ್ಸ್ ಸಂಗ್ರಹಿಸಿದರು. 2022ರ ಬ್ಲಿಟ್ಜ್ ಚಾಂಪಿಯನ್‌ಷಿಪ್‌ನಲ್ಲಿ ಹಂಪಿ ಬೆಳ್ಳಿ ಪದಕ ಗೆದ್ದಿದ್ದರು. ಆದರೆ ಈ ವರ್ಷ ಆಡಿದ ಟೂರ್ನಿಗಳಲ್ಲಿ ಅವರಿಂದ ಉತ್ತಮ ಸಾಧನೆ ಕಂಡುಬಂದಿರಲಿಲ್ಲ. ಜೂನ್‌ನಲ್ಲಿ ನಡೆದ ನಾರ್ವೆ ಚೆಸ್ ಟೂರ್ನಿಯಲ್ಲಿ ಕೊನೆಯಿಂದ ಎರಡನೇ ಸ್ಥಾನ ಪಡೆದಿದ್ದರು. ನವೆಂಬರ್‌ನಲ್ಲಿ ನಡೆದ ಟಾಟಾ ಸ್ಟೀಲ್ ರ್‍ಯಾಪಿಡ್ ಚೆಸ್ ಟೂರ್ನಿಯಲ್ಲಿ ಅವರು ಕೊನೆಯ ಸ್ಥಾನ ಗಳಿಸಿದ್ದರು. ಈ ವರ್ಷ ಒಲಿಂಪಿಯಾಡ್‌ನಲ್ಲಿ ಚಾರಿತ್ರಿಕ ಚಿನ್ನ ಗೆದ್ದ ಭಾರತ ತಂಡದಲ್ಲಿ ಅವರಿಗೆ ಸ್ಥಾನವಿರಲಿಲ್ಲ. ಹೀಗಾಗಿ, 37 ವರ್ಷ ವಯಸ್ಸಿನ ಈ ಆಟಗಾರ್ತಿಯ ಹೆಸರು ಈ ಟೂರ್ನಿ ಗೆಲ್ಲುವ ನೆಚ್ಚಿನ ಆಟಗಾರ್ತಿಯರ ಪಟ್ಟಿಯಲ್ಲಿ ಸೇರಿರಲಿಲ್ಲ. 'ಈ ವರ್ಷ ನನ್ನ ಆಟ ಉತ್ತಮವಾಗಿರಲಿಲ್ಲ. ಕೆಲವು ಪಂದ್ಯಗಳನ್ನು ದಯನೀಯವಾಗಿ ಸೋತಿದ್ದೆ' ಎಂದು ಸ್ವತಃ ಹಂಪಿ ಅವರೇ ಹೇಳಿದ್ದಾರೆ. ಆದರೆ ಈ ಮಾದರಿಯ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಹಿಂದೆ ತೋರಿದ ಸಾಧನೆ, ಬೆನ್ನಿಗಿದ್ದ ಕುಟುಂಬದ ಪ್ರೋತ್ಸಾಹ ಅವರನ್ನು ಮತ್ತೆ ಉತ್ಸಾಹದಿಂದ ಕಣಕ್ಕಿಳಿಯಲು ಪ್ರೇರೇಪಿಸಿತು. ಮೊದಲ ಸುತ್ತಿನಲ್ಲಿ ಸೋತರೂ ಅವರು ಧೃತಿಗೆಡಲಿಲ್ಲ. ಆರನೇ ಸುತ್ತಿನಲ್ಲಿ ಭಾರತದ ವಂತಿಕಾ ಅಗರವಾಲ್ ಮತ್ತು ಎಂಟನೇ ಸುತ್ತಿನಲ್ಲಿ ಜಾರ್ಜಿಯಾದ ನೀನೊ ಬಾಟ್ಸಿಯಾಶ್ವಿಲಿ ವಿರುದ್ಧ ಗೆಲುವು ಪಡೆದ ರೀತಿ ಅವರ ಉತ್ಸಾಹವನ್ನು ಹೆಚ್ಚಿಸಿತು. ಇಲ್ಲಿನ ಗೆಲುವು ಆಂಧ್ರ ಪ್ರದೇಶದ ಗುಡಿವಾಡದ ಆಟಗಾರ್ತಿಯ ಸಂಕಲ್ಪ, ಇಚ್ಛಾಶಕ್ತಿಗೆ ಸಂದ ಯಶಸ್ಸು. 15ನೇ ವಯಸ್ಸಿನಲ್ಲಿ ಗ್ರ್ಯಾಂಡ್‌ಮಾಸ್ಟರ್ ಪಟ್ಟ ಪಡೆದ ದೇಶದ ಮೊದಲ ಆಟಗಾರ್ತಿ ಎನಿಸಿದ್ದ ಹಂಪಿ, ತಮ್ಮಲ್ಲಿ ಇನ್ನೂ ಆಟದ ಕಸುವು ಉಳಿದಿದೆ ಎಂಬುದನ್ನು ಸಾಬೀತು ಪಡಿಸಿದರು. ಅರ್ಧ ಪಾಯಿಂಟ್ ಅಂತರದಿಂದ ಅವರು ಅಗ್ರಸ್ಥಾನ ಪಡೆದರು. ಆರು ಮಂದಿ ಆಟಗಾರ್ತಿಯರು ತಲಾ ಎಂಟು ಪಾಯಿಂಟ್ಸ್ ಪಡೆದರು. ಇವರಲ್ಲಿ ಒಬ್ಬರಾದ ಭಾರತದ ಗ್ರ್ಯಾಂಡ್ ಮಾಸ್ಟರ್ ದ್ರೋಣವಲ್ಲಿ ಹಾರಿಕಾ ಟೈಬ್ರೇಕರ್‌ನಲ್ಲಿ ಐದನೇ ಸ್ಥಾನ ಪಡೆದರು.



ಯುವ ಉತ್ಸಾಹಿಗಳ ಸಾಧನೆಯ ಜೊತೆಗೆ ಹಂಪಿ ಅಂಥ ಅನುಭವಿ ಆಟಗಾರ್ತಿ ಉತ್ತಮ ಪ್ರದರ್ಶನ ನೀಡಿರುವುದು ಆಶಾದಾಯಕ ಬೆಳವಣಿಗೆ

ಓಪನ್ ವಿಭಾಗದಲ್ಲಿ ಮೊದಲ ಮೂರು ಸ್ಥಾನ ರಷ್ಯಾದ ಆಟಗಾರರ ಪಾಲಾಗಿದ್ದು ಗಮನಾರ್ಹ. ವಿಶ್ವ ಚೆಸ್‌ನಲ್ಲಿ ರಷ್ಯಾ ಹಿಂದಿನ ಹಿಡಿತ ಕಳೆದುಕೊಳ್ಳುತ್ತಿದೆ ಎನ್ನುವ ಮಾತು ಕೇಳಿಬರುತ್ತಿರುವಾಗಲೇ ಈ ಸಾಧನೆ ದಾಖಲಾಗಿದೆ. ಎಲ್ಲರ ನಿರೀಕ್ಷೆ ಮೀರಿ ಆ ದೇಶದ 18 ವರ್ಷ ವಯಸ್ಸಿನ ವಾಲೊಡರ್ ಮುರ್ಝಿನ್ ಚಾಂಪಿಯನ್ (13 ಸುತ್ತುಗಳಿಂದ 10 ಪಾಯಿಂಟ್ಸ್) ಎನಿಸಿದರು. ವಿಶ್ವದ ಅಗ್ರಮಾನ್ಯ ಆಟಗಾರ ಕಾರ್ಲ್‌ಸನ್ ಅವರನ್ನು ವಸ್ತ್ರಸಂಹಿತೆ ಉಲ್ಲಂಘನೆಗಾಗಿ ಕೂಟದ ಅರ್ಧದಲ್ಲೇ ಅನರ್ಹಗೊಳಿಸಿದ್ದು ಚರ್ಚೆಯ ವಿಷಯವಾಯಿತು. 9 ಪಾಯಿಂಟ್ಸ್ ಗಳಿಸಿದ ಭಾರತದ ಆಟಗಾರ ಅರ್ಜುನ್ ಇರಿಗೇಶಿ ಎರಡನೇ ದಿನದವರೆಗೂ ಮುನ್ನಡೆ ಹಂಚಿಕೊಂಡಿದ್ದರು. ಆದರೆ ಅಂತಿಮವಾಗಿ ಐದನೇ ಸ್ಥಾನ ಪಡೆಯಬೇಕಾಯಿತು. ಅಪಾರ ಬುದ್ಧಿಮತ್ತೆ ಬೇಡುವ ಈ ಆಟದಲ್ಲಿ ಭಾರತ ಈ ವರ್ಷ ಅಭೂತಪೂರ್ವ ಯಶಸ್ಸು ಕಂಡಿದೆ. ಜೂನ್‌ನಲ್ಲಿ ಗುಜರಾತ್‌ನ ಗಾಂಧಿನಗರದಲ್ಲಿ ನಡೆದ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ನಾಗ್ಪುರದ ದಿವ್ಯಾ ದೇಶಮುಖ್ ಚಾಂಪಿಯನ್ ಆಗಿದ್ದರು. ಸೆಪ್ಟೆಂಬರ್‌ನಲ್ಲಿ ಹಂಗೆರಿಯ ಬುಡಾಪೆಸ್ಟ್‌ನಲ್ಲಿ ನಡೆದ 45ನೇ ಒಲಿಂಪಿಯಾಡ್‌ನಲ್ಲಿ ಓಪನ್ ಮತ್ತು ಮಹಿಳಾ ವಿಭಾಗಗಳಲ್ಲಿ ಭಾರತ ಮೊದಲ ಬಾರಿಗೆ ಚಿನ್ನ ಗೆದ್ದುಕೊಂಡಿತು. ಇದರ ಜೊತೆಗೆ ಎರಡೂ ವಿಭಾಗಗಳಲ್ಲಿ ತಲಾ ಎರಡು ವೈಯಕ್ತಿಕ ಚಿನ್ನದ ಪದಕಗಳು ಭಾರತದ ಪ್ರಾಬಲ್ಯಕ್ಕೆ ಪುರಾವೆಯಾದವು. ನವೆಂಬರ್–ಡಿಸೆಂಬರ್‌ನಲ್ಲಿ ನಡೆದ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಗುಕೇಶ್ ದೊಮ್ಮರಾಜು ಅವರು ಅತಿ ಕಿರಿಯ ಚಾಂಪಿಯನ್ ಗೌರವಕ್ಕೆ ಪಾತ್ರರಾದರು. ವಿಶ್ವ ಕ್ರಮಾಂಕಪಟ್ಟಿಯಲ್ಲೂ ಭಾರತದ ಆಟಗಾರರು ದಾಪುಗಾಲಿಟ್ಟರು. ಡಿಸೆಂಬರ್ ತಿಂಗಳ ಫಿಡೆ ರ್‍ಯಾಂಕಿಂಗ್ ಪಟ್ಟಿಯ ಅಗ್ರ 10ರಲ್ಲಿ ಭಾರತದ ಅರ್ಜುನ್ ಇರಿಗೇಶಿ, ಗುಕೇಶ್ ಮತ್ತು ವಿಶ್ವನಾಥನ್ ಆನಂದ್ ಕ್ರಮವಾಗಿ ನಾಲ್ಕು, ಐದು ಮತ್ತು ಹತ್ತನೇ ಸ್ಥಾನ ಪಡೆದಿದ್ದಾರೆ. ಇವೆಲ್ಲವೂ ಭಾರತವು ಚೆಸ್ ಜಗತ್ತಿನ ಪ್ರಬಲ ಶಕ್ತಿಯಾಗುತ್ತಿರುವುದರ ದ್ಯೋತಕ. ಯುವ ಉತ್ಸಾಹಿಗಳ ಜೊತೆ ಹಂಪಿ ಅಂಥ ಅನುಭವಿ ಆಟಗಾರ್ತಿ ಉತ್ತಮ ಪ್ರದರ್ಶನ ನೀಡಿರುವುದು ಆಶಾದಾಯಕ ಬೆಳವಣಿಗೆ.

ಹಣ, ಅಧಿಕಾರಕ್ಕಿಂತ ಒಲವು ಮುಖ್ಯವೆಂಬುದನ್ನೇ ಆಧುನಿಕತೆ ನಮ್ಮಿಂದ ಮರೆಮಾಚುತ್ತಿದೆ

ಸಂಬಂಧದ ಬೆಸುಗೆ: ನವವರ್ಷದ ಒಸಗೆ



ವಿಶ್ಲೇಷಣೆ

ಟಿ.ಎನ್. ವಾಸುದೇವಮೂರ್ತಿ

ನಮ್ಮ ಆಯುಷ್ಯದ ಒಂದು ವರ್ಷ ಮುಗಿದು ಮತ್ತೊಂದು ಹೊಸ ವರ್ಷದ ಹೊಸ್ತಿಲಿನಲ್ಲಿ ನಿಂತಿದ್ದೇವೆ. ಈ ಒಂದು ವರ್ಷದ ಅವಧಿಯಲ್ಲಿ ಎಷ್ಟೊಂದು ಸಂಬಂಧಗಳಲ್ಲಿ ಬಿರುಕುಗಳು ಮೂಡಿವೆ ಮತ್ತು ಎಷ್ಟೊಂದು ಹೊಸ ಸಂಬಂಧಗಳು ಬೆಸೆದುಕೊಂಡಿವೆ! ಈ ಹೊಸ ಬೆಸುಗೆಗಳಲ್ಲಿ ಎಷ್ಟು ಸಂಬಂಧಗಳು ಕೊನೆತನಕ ಉಳಿಯುತ್ತವೋ ಮತ್ತು ಎಷ್ಟು ಸಂಬಂಧಗಳಲ್ಲಿ ಹೊಸ ಬಿರುಕುಗಳು ಮೂಡುತ್ತವೋ ತಿಳಿಯದು.

ಪ್ರತಿ ಸಂಬಂಧವನ್ನೂ ಜತನದಿಂದ ಕಾಪಾಡಿಕೊಳ್ಳಬೇಕೆಂಬ ನಮ್ಮ ಕಾಳಜಿಯ ಹೊರತಾಗಿಯೂ ಸಂಬಂಧಗಳು ಅದೇಕೆ ಹಳಸುತ್ತವೆ? ಅದಕ್ಕೆ ಕಾರಣವಿಲ್ಲದಿಲ್ಲ. ನಮ್ಮ ಬಹುತೇಕ ಸಂಬಂಧಗಳು ಪೈಪೋಟಿಯ ಜಗತ್ತಿನ ಪ್ರಭಾವದಡಿಯಲ್ಲಿ ಸಿಲುಕಿವೆ. ಇಂತಹ ಸಂಬಂಧಗಳು ಪ್ರಾರಂಭದಿಂದಲೇ ಒಂದು ಅಗೋಚರ ಬಿರುಕನ್ನು ಅಂತರ್ಗತ ಆಗಿಸಿಕೊಂಡಿರುತ್ತವೆ. ವಿಚಿತ್ರವೆಂದರೆ, ನಮ್ಮ ಪ್ರೀತಿಪಾತ್ರರಿಗೆ ನೀಡಬೇಕೆಂಬ ಔದಾರ್ಯದೊಳಗೂ ಆತ್ಮಸುಖಾಪೇಕ್ಷೆಯೇ ಮಡುಗಟ್ಟಿರುತ್ತದೆ.

ಷಣ್ಮುಖನು ವಿಶ್ವ ಪರ್ಯಟನೆಗೆ ಹೊರಟಾಗ ಗಣೇಶ ತಾಯ್ತಂದೆಗೇ ಪ್ರದಕ್ಷಿಣೆ ಹಾಕಿದ ಪ್ರಸಿದ್ಧ ಪೌರಾಣಿಕ ಕಥೆ ಹಿಂದೆಂದಿಗಿಂತಲೂ ಇಂದು ಹೆಚ್ಚು ಪ್ರಸ್ತುತವಾಗಿದೆ. ಪ್ರಾರಂಭದಿಂದಲೇ ಮೊಬೈಲ್ ಫೋನ್ ಬಳಕೆಯ ಕೌಶಲವನ್ನು ಆರ್ಜಿಸಿಕೊಳ್ಳುವ ಇಂದಿನ ಮಕ್ಕಳಿಗೆ ಮನೆಯಾಗಲಿ, ತಾಯ್ತಂದೆಯಾಗಲಿ ಮೊದಲ ಪಾಠಶಾಲೆಯಾಗಿ ಮತ್ತು ಮೊದಲ ಗುರುಗಳಾಗಿ ಕಾಣಿಸುವುದಿಲ್ಲ. ಸಹಜವಾಗಿಯೇ ಇಂದಿನ ಪೀಳಿಗೆಗೆ ತಾಯ್ತಂದೆಯೊಂದಿಗೆ ಭಾವನಾತ್ಮಕ ಸಂಬಂಧ, ಅವಲಂಬನೆ ಏರ್ಪಡುವುದಿಲ್ಲ. ಈ ಪೈಪೋಟಿಯ ಜಗತ್ತಿನಲ್ಲಿ ತಮ್ಮ ಮಕ್ಕಳು ಮುಂಚೂಣಿಯಲ್ಲಿದ್ದರೆ ಸಾಕೆಂದು ಹಪಹಪಿಸುವ ತಾಯ್ತಂದೆಗೂ ಇವೆಲ್ಲ ಬೇಕಿಲ್ಲ.

ಹಿಂದೆಲ್ಲ ಮನೆಗೆ ಯಾರಾದರೂ ನೆಂಟರು ಬಂದಾಗ ಮಕ್ಕಳು ಸಂಕೋಚದಿಂದ ಮೂಲೆ ಸೇರುತ್ತಿದ್ದರು. ಆಗ ಮನೆಯ ಹಿರಿಯರು 'ಮುಖೇಡಿತನ ತೋರಿಸಬಾರದು' ಎಂದು ಗದರಿಸಿ, ಅತಿಥಿಗಳೊಂದಿಗೆ ಹೇಗೆ ವರ್ತಿಸಬೇಕೆಂಬ ಪಾಠ ಕಲಿಸುತ್ತಿದ್ದರು. ಆದರೆ ಇಂದಿನ ಆಧುನಿಕ ಯುಗದಲ್ಲಿ ಮುಖೇಡಿತನವೇ ಒಂದು ಮೌಲ್ಯವಾಗಿಬಿಟ್ಟಿದೆ. ಎಕ್ಸ್, ಫೇಸ್‌ಬುಕ್‌ನಂತಹ ಮುಖಹೀನ ಸಾಮಾಜಿಕ ಪ್ಲ್ಯಾಟ್‌ಫಾರಂಗಳಿಂದ ಸ್ನೇಹದ ವ್ಯಾಪ್ತಿ ವಿಸ್ತರಿಸಿದೆಯಾದರೂ ಸ್ನೇಹದ ಗಹನತೆ ಮತ್ತು ಮಾನವೀಯ ಸ್ಪಂದನಗಳು ಕ್ಷೀಣಿಸಿವೆ. ಪರದೆಯ ಮೇಲೆ ಸಂವಹಿಸುವಾಗ ವ್ಯಕ್ತವಾಗುವ ಉತ್ಸಾಹವು ಪರದೆ ಸರಿದು, ಮುಖ ಕೊಟ್ಟು ಮಾತನಾಡುವಾಗ ಕಾಣಿಸದಾಗಿದೆ. ಫೇಸ್‌ಬುಕ್ ಸ್ನೇಹಿತರು ಎದುರಿಗೆ ಸಿಕ್ಕಾಗ ಪರಿಚಯವೇ ಇಲ್ಲದಂತೆ ವರ್ತಿಸುವುದು ಸರ್ವೇಸಾಮಾನ್ಯ ಸಂಗತಿಯಾಗಿದೆ. ಇಂತಹ ಭಾವಶೂನ್ಯ ಸ್ನೇಹ ಸಂಬಂಧ ಮನುಷ್ಯರ ನಡುವಿನ ಬಾಂಧವ್ಯವನ್ನು ದುರ್ಬಲಗೊಳಿಸುತ್ತದೆ. ಮನುಷ್ಯರನ್ನು ಕ್ರಮೇಣ ಏಕಾಕಿಗಳನ್ನಾಗಿಸುತ್ತದೆ.

ಇವೆಲ್ಲದರ ಪರಿಣಾಮವಾಗಿ, ಇಂದು ನಗರಗಳಲ್ಲಿ ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚುತ್ತಿದೆ ಮತ್ತು ಬಹುತೇಕ ಹಳ್ಳಿಗಳು ಬರೀ ವೃದ್ಧರು ವಾಸಿಸುವ ವಸತಿ ಪ್ರದೇಶಗಳಾಗಿ ಮಾರ್ಪಟ್ಟಿವೆ. ಇಂದು ಕೌಟುಂಬಿಕ ನ್ಯಾಯಾಲಯಗಳ ಸಂಖ್ಯೆ ಹೆಚ್ಚಾಗಿದೆ. ಬೆಂಗಳೂರಿನ ಕೌಟುಂಬಿಕ ನ್ಯಾಯಾಲಯವೊಂದರಲ್ಲೇ ಮೂರೂವರೆ ಲಕ್ಷಕ್ಕೂ ಅಧಿಕ ವಿಚ್ಛೇದನ ಪ್ರಕರಣಗಳು ದಾಖಲಾಗಿವೆ. ದೆಹಲಿಯಲ್ಲಿ ಮೂವತ್ತಕ್ಕೂ ಅಧಿಕ ಸಂಖ್ಯೆಯ ಕೌಟುಂಬಿಕ ನ್ಯಾಯಾಲಯಗಳು ಸ್ಥಾಪನೆಯಾಗಿದ್ದು, ಅಲ್ಲಿ ಪ್ರತಿನಿತ್ಯ 60ರಿಂದ 70 ಪ್ರಕರಣಗಳನ್ನು ನಿರ್ವಹಿಸಲಾಗುತ್ತಿದೆ ಎಂದು ವರದಿಗಳು ಹೇಳುತ್ತವೆ.

ಆಧುನಿಕ ಸೌಲಭ್ಯಗಳು ಎಲ್ಲವೂ ನಮ್ಮ ಕೈಗೆಟಕುವಂತೆ ಮಾಡಿವೆ ನಿಜ; ಆದರೆ, ಮತ್ತೊಂದೆಡೆ ಎಲ್ಲವೂ ನಮ್ಮ ಸೇವೆಗೆ ನಿಲ್ಲಲಿ ಎಂಬ ರಾಕ್ಷಸ ಪ್ರಲೋಭನೆಯನ್ನು ಉದ್ದೀಪಿಸಿವೆ. ಪ್ರಲೋಭನೆಗಳು ನಮ್ಮ ಸುಖಾಕಾಂಕ್ಷೆಯನ್ನು ಹೆಚ್ಚಿಸುತ್ತವೆಯೇ ವಿನಾ ಸುಖ ಸಂವೇದನೆಯನ್ನಲ್ಲ.

'ಸ್ವಲ್ಪ ವರ್ಷ ಕಾದಿದ್ದರೆ ಇನ್ನೂ ಉತ್ಕೃಷ್ಟ ಮೊಬೈಲನ್ನು, ಕಾರನ್ನು ಮತ್ತು ಹೆಂಡತಿಯನ್ನು ಸಂಪಾದಿಸಬಹುದಿತ್ತು' ಎಂಬ ಅರ್ಥದ ಹಾಸ್ಯಚಟಾಕಿಗಳು ವಾಟ್ಸ್‌ಆ್ಯಪ್‌ನಲ್ಲಿ ಆಗಾಗ ಹರಿದಾಡುತ್ತಿರುತ್ತವೆ. ಹೀನ ಅಭಿರುಚಿಯನ್ನು ಬೆಳೆಸಿಕೊಂಡವರಿಗೆ ಮಾತ್ರ, ಅಂದರೆ ಪ್ರತಿಯೊಂದನ್ನೂ ಉಪಭೋಗದ ವಸ್ತುವನ್ನಾಗಿ ಕಾಣುವ ಒಂದು ಮನಃಸ್ಥಿತಿಗಷ್ಟೇ ಇಂತಹ ಚಟಾಕಿಗಳಲ್ಲಿ ಹಾಸ್ಯರಸವನ್ನು ಅನುಭವಿಸಲು ಸಾಧ್ಯವಾಗುತ್ತದೆ. ಸುಖಸಂಪತ್ತು ಹೆಚ್ಚಾದಾಗ ವ್ಯಕ್ತಿಗೆ ಸಲ್ಲಬೇಕಾದ ಮೌಲ್ಯ ವಸ್ತುವಿಗೂ ವಸ್ತುವಿಗೆ ಸಲ್ಲಬೇಕಾದ ಮೌಲ್ಯ ವ್ಯಕ್ತಿಗೂ ಸಲ್ಲುತ್ತದೆ.

ನಮ್ಮ ಯುವಕರು ವಾರದಲ್ಲಿ 70 ಗಂಟೆಗಳ ಕಾಲ ಕೆಲಸ ಮಾಡಬೇಕೆಂದು ಇನ್ಫೊಸಿಸ್ ಸಹಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಅವರು ನೀಡಿದ್ದ ಸಲಹೆಯನ್ನು ಈ ಹಿನ್ನೆಲೆಯಲ್ಲಿ ಗಮನಿಸಬೇಕು. ಇಂತಹ ಆಲೋಚನೆ ಬರೀ ಅವರಲ್ಲಷ್ಟೇ ಮೂಡಿಲ್ಲ. ಇನ್ನೂ ಕೆಲವು ಉದ್ಯಮಿಗಳು ಈ ದಿಸೆಯಲ್ಲಿ ಆಲೋಚಿಸಿದ್ದಾರೆ ಮತ್ತು ನಾರಾಯಣಮೂರ್ತಿ ಅವರ ಹೇಳಿಕೆಯನ್ನು ಬೆಂಬಲಿಸಿದ್ದಾರೆ. ಇವರು ಪ್ರಧಾನಿ ನರೇಂದ್ರ ಮೋದಿ ಅಂತಹವರನ್ನು ಉದಾಹರಿಸಿ ತಮ್ಮ ವಾದವನ್ನು ಸಮರ್ಥಿಸಿಕೊಳ್ಳುತ್ತಾರೆ. ಇಂಥವರ ವಾದದಲ್ಲಿ, ದೇಶದ ಉತ್ಪಾದಕತೆ ಹೆಚ್ಚಬೇಕು, ಹೊಸ ಅವಕಾಶಗಳು ಸೃಷ್ಟಿಯಾಗಬೇಕು, ವಿಶ್ವಸಮುದಾಯದ ಎದುರು ನಾವು ಹೆಮ್ಮೆಯಿಂದ ತಲೆ ಎತ್ತಬೇಕು ಎಂಬಂತಹ ಸದಾಶಯ ಇರಬಹುದು. ಆದರೆ ಸದಾಶಯ ಸತ್ಪರಿಣಾಮವಾಗಿಯೇ ಫಲಿಸುತ್ತದೆ ಎಂದೇನೂ ಖಾತರಿ ಇಲ್ಲ. ಹಾಗೆ ಎಪ್ಪತ್ತು ಗಂಟೆ ಕೆಲಸ ಮಾಡುವವರು ಆರೋಗ್ಯವನ್ನು ಹದಗೆಡಿಸಿಕೊಳ್ಳುವುದರ ಜೊತೆಗೆ, ಮೇಲೆ ಉಲ್ಲೇಖಿಸಿದಂತೆ ಕೌಟುಂಬಿಕ ಸಂಬಂಧಗಳಿಂದ ವಂಚಿತರಾಗುತ್ತಿದ್ದಾರೆ. ಒಂದು 'ಆದರ್ಶ'ವನ್ನು ಒಂದು ಇಡೀ ತಲೆಮಾರಿನ ಮೇಲೆ ಹೇರಲು ಹೊರಟಾಗ ಅದರಿಂದ ಹಾನಿಯೂ ಆಗುವುದಿದೆ. ಇಂತಹ ಆಲೋಚನೆಗಳ ಬಗ್ಗೆ ಮರುಮಾತನಾಡದೆ ಮೂಕ ಎತ್ತುಗಳಂತೆ ದುಡಿಯುತ್ತಿರುವ ದೊಡ್ಡ ವರ್ಗವೂ ಇದೆ.



ನಾವಿಂದು ಯಾವ ಪ್ರಲೋಭನಾಜನ್ಯ ಜೀವನಕ್ರಮವನ್ನು, ಅದರ ಪರಿಣಾಮವಾಗಿ ಕೌಟುಂಬಿಕ ವಿಘಟನೆಯನ್ನು ಅನುಭವಿಸುತ್ತಿರುವೆವೋ ಅದನ್ನು ಟಾಲ್‌ಸ್ಟಾಯ್ ಇನ್ನೂರು ವರ್ಷಗಳಷ್ಟು ಹಿಂದೆಯೇ ಕಂಡರಿತಿದ್ದರು. ಸಾವಿರಾರು ಎಕರೆ ಭೂಮಾಲೀಕತ್ವ ಹೊಂದಿದ್ದ ಅವರು, ಸಂಬಂಧ ನಾಶಕ್ಕೆ ಸಂಪತ್ತೇ ಕಾರಣವೆಂದು ಮನಗಂಡು, ಭೂಮಿಯನ್ನು ಉಳುವವರಿಗೇ ಕೊಟ್ಟು ತಾವೂ ಉಳುವವರೊಂದಿಗೆ ದುಡಿಮೆ ಮಾಡಲು ಸಂಕಲ್ಪಿಸಿದ್ದರು.

'ಕಾರ್ಪೊರೇಟ್ ಆಧ್ಯಾತ್ಮಿಕತೆ'ಯ ಕಾಲಘಟ್ಟದಲ್ಲಿ ಬದುಕುತ್ತಿರುವ ನಾವಿಂದು ರೈತರ ಭೂಮಿಯನ್ನು ಕಬಳಿಸಿ ಐಷಾರಾಮಿ ಆಶ್ರಮಗಳನ್ನು ಕಟ್ಟುವುದು ಧಾರ್ಮಿಕತೆಯೋ ಅಥವಾ ಭೂಮಿಯನ್ನು ಉಳುವವರಿಗೇ ಬಿಟ್ಟುಕೊಟ್ಟು ಅವರೊಂದಿಗೆ ಸಹಬಾಳ್ವೆ ಮಾಡುವುದು ಧಾರ್ಮಿಕತೆಯೋ ಎಂದು ವಿವೇಚಿಸಿಕೊಳ್ಳಬೇಕಾಗಿದೆ. ಮದುವೆ, ಗೃಹಪ್ರವೇಶಗಳಲ್ಲಿ ಮಾಡಬೇಕಾದ ಅತಿಥಿ ಸತ್ಕಾರ, ಅಂತರಂಗಕ್ಕೆ ಸಾಂತ್ವನ ನೀಡಬೇಕಾದ ಅಧ್ಯಾತ್ಮ, ರಿಯಾಲಿಟಿ ಷೋ ಹೆಸರಿನಲ್ಲಿ ಪ್ರದರ್ಶಿಸಲಾಗುವ ಕಲೆ, ಸಂಗೀತ, ಭಾವುಕತೆ, ಖಾಸಗಿ ಬದುಕು ಎಲ್ಲವೂ ಇಂದು ಲಾಭಕರ ವ್ಯಾಪಾರೋದ್ಯಮವಾಗಿ ಪರಿಣಮಿಸಿವೆ, ಕೌಟುಂಬಿಕ ಮೌಲ್ಯಗಳು ಅಂಚಿಗೆ ಸರಿದಿವೆ.

ಗಂಡಾಗಲಿ, ಹೆಣ್ಣಾಗಲಿ ಸುಖ ಸಂಪತ್ತು, ಲಾಭ ಗಳಿಕೆಯ ಸೆಳೆತಕ್ಕೆ ಒಳಗಾಗುವುದು ಪ್ರಕೃತಿ ಸ್ವಭಾವ. ಆದರೆ ಬೇಂದ್ರೆ 'ನಾನು ಬಡವಿ ಆತ ಬಡವ ಒಲವೆ ನಮ್ಮ ಬದುಕು' ಎಂದು ಹಾಡಿದಾಗ ಅದು ಈ ಸ್ವಾಭಾವಿಕ ಸೆಳೆತಕ್ಕೆ, ಈ ಲಾಭಕೋರತನದ ಬದುಕಿಗೆ ವ್ಯತಿರಿಕ್ತವಾದ ದಿಕ್ಕಿನಲ್ಲಿ ಹೊರಟಂತೆ, ದಾಂಪತ್ಯದ ತಪಸ್ಸಾಧನೆಯಂತೆ ಧ್ವನಿಸುತ್ತದೆ. ಈ ಆಧುನಿಕತೆಯು ಹಣ, ಅಧಿಕಾರಕ್ಕಿಂತ ಒಲವು ಮುಖ್ಯವೆಂಬ ಸರಳವಾದ ಸಂಗತಿಯನ್ನೇ ನಮ್ಮಿಂದ ಮರೆಮಾಚಿರುವುದು ದುರದೃಷ್ಟಕರ.

ಬರ್ಟ್ರಂಡ್ ರಸೆಲ್ ತಮ್ಮ ಒಂದು ಕೃತಿಯಲ್ಲಿ 'ಬದುಕಿನ ಶಾಶ್ವತತೆಯ ಧ್ಯಾನವನ್ನು ಕಾಪಾಡಿಕೊಳ್ಳದ ಮನುಷ್ಯನ ಬದುಕು, ತಿಂದು ಕೊಬ್ಬಿದ ಹಂದಿಯ ಬದುಕಿಗಿಂತ ಹೆಚ್ಚಿನದ್ದಲ್ಲ' ಎಂಬ ಸಾಲುಗಳನ್ನು ಬರೆದಿದ್ದಾರೆ. ಆಧುನಿಕ ಐಷಾರಾಮದಿಂದ ಸೃಷ್ಟಿಯಾಗಿರುವ ಕೊಬ್ಬನ್ನು ಕರಗಿಸಿಕೊಂಡು ಹಗುರವಾಗದ ವಿನಾ ಸಂಬಂಧಗಳ ಬೆಲೆಯನ್ನು ತಿಳಿಯಲಾಗದು. ಆ ಹಗುರತನವನ್ನೇ ಬೇಂದ್ರೆ 'ಬಡತನ' ಎಂದು ಕರೆದಿರುವುದು. ಆಲ್ಫ್ರೆಡ್ ಷೂಮಾಕರ್ 'ಸ್ಮಾಲ್ ಈಸ್ ಬ್ಯೂಟಿಫುಲ್' ಎಂದು ಉದ್ಗರಿಸಿದ್ದು. ಮತ್ತೇನನ್ನೂ ಸಂಪಾದಿಸದೆ, ಇರುವುದನ್ನು ಕರಗಿಸಿಕೊಂಡು ಹಗುರವಾಗಬೇಕೆಂಬ, ಅರ್ಥಪೂರ್ಣ ಸಂಬಂಧಗಳ ಬೆಸುಗೆಯಿಂದ ಬದುಕನ್ನು ಕೃತಾರ್ಥವಾಗಿಸಿಕೊಂಡರೆ ಸಾಕೆಂಬ ಹಂಬಲವೇ ಆಧುನಿಕ ಸೌಲಭ್ಯಗಳ ಪರಾಕಾಷ್ಠೆಯಲ್ಲಿ ನಿಂತಿರುವ ನಮ್ಮ ಹೊಸ ವರ್ಷದ ಸಂಕಲ್ಪವಾಗಬೇಕಿದೆ.

ಲೇಖಕ: ಸಹ ಪ್ರಾಧ್ಯಾಪಕ, ಆದಿಚುಂಚನಗಿರಿ ವಿಶ್ವವಿದ್ಯಾಲಯ

ಚುರುಮುರಿ



ಬಾಕ್ಸಿಂಗ್ ಡೇ

• ಡಿ.ಎಸ್.ಲಿಂಗರಾಜು

'ಪರ್ಸೆಂಟೇಜಿಗೆ ಯಾವ ಪಕ್ಷದವಾದ್ರೂ ಒಂದೀಯೆ. ಈ ಆಟದೇಲಿ ಗುತ್ತಿಗೆದಾರರ ಸಾವು ಮುಂದುವರೀತಾ ಅದೆ ಕನೋ' ತುರೇಮಣೆ ಬೇಸರ ವ್ಯಕ್ತಪಡಿಸಿದರು.

'ಎಲೆಕ್ಷನ್ ಬಂದೇಟಿಗೆ ಕುಣಕಂಡೋಗಿ ವೋಟಾಕಿ ಬೆಳ್ಳು ತೋರಿಸಿಗ್ಯಂಡು ವಾಟ್ಸಪ್ಪಿಗೆ ಫೋಟಾ ಹಾಕ್ತೀವಿ. ಯೋಗ್ಯನ್ನ ಆಯ್ಕೆ ಮಾಡಿದ್ದೀವಾ ಅಂತ್ಲೂ ಯೋಚ್ನೆ ಮಾಡಕುಲ್ಲ' ಸಿಟ್ಟು ತೋರಿಸಿದೆ.

'ರಾಜಕಾರಣಿಗಳ ವೃತ್ತಿಗುಣ ಬದಲಾಗಕುಲ್ಲ ಕಲಾ. ನಾವು ಅಂಗಿ ತಕ್ಕಂದಂಗೆ ಆಳೋರನ್ನ ಆಯ್ಕೆ ಮಾಡ್ತೀವಲ್ಲಾ ಅದೇ ತಪ್ಪು' ತುರೇಮಣೆ ವಿಚಾರ ನನಗೆ ಅರ್ಥಾಗಲಿಲ್ಲ.

'ಹಂಗಂದ್ರೇನು ಸಾ?'

'ಅಂಗಿ ತಗಣಕ್ಕೆ ಅಂಗಡಿಗೋದಾಗ ಮಿಣಗುಟ್ಟೋ ಕವರಲ್ಲಿ ಅಂಗಿ ತಕ್ಕಬಂದು ತೋರಿಸ್ತರೆ. 'ಈ ಬ್ರಾಂಡು ಹೈಕ್ಲಾಸ್. ತಕ್ಕಳಿ ಸಾ. ಹರಿಯಕುಲ್ಲ, ಬಣ್ಣೋಗಲ್ಲ' ಅಂತ ಇರದು ಇಲ್ಲದ್ದು ಸೇರಿಸಿ ಹೇಳತರೆ. ನಾವು ಇದು ಚೆನ್ನಾಗದೆ ಅಂದ್ಕಂದು ನಮಗೆ ಒಪ್ಪತದ ಇಲ್ಲವಾ ಅಂತ್ಲೂ ಯೋಚನೆ ಮಾಡದೆ ತಕ್ಕತೀವಿ. ಅಲ್ಲವಾ?' ನಾನು ಹೂಕಂದೆ.


'ನಾವು ನಮ್ಮ ಆಳೋರನ್ನ ಆರಿಸದೂ ಹಿಂಗೇ. ಒಳ್ಳೇನು ಅಂದ್ಕಂದು ವೋಟಾಕ್ತೀವಿ. ಗೆದ್ದ ಮ್ಯಾಲೆ ಹಳಬನ ಚಾಳಿ ಮುಂದುವರೀತದೆ. ಸದನದೇಲೆ ಕದನ ಸುರು ಮಾಡಿ ಹೊಲಸು ಬಾಯಲ್ಲಿ ಅವರವರೇ ತಾರಾಮಾರ ಬೈಕಂದು ತೆವಲು ತೀರಿಸಿಗ್ಯತ್ತರೆ. ದಿಟ ತಾನೆ?' ನಾನು ಒಪ್ಪಿಕ್ಯಂದೆ.

'ಇವರೆಂಗೆ ಅಂತ ಜನಕ್ಕೆ ಗೊತಾಗಬಕಲ್ಲ. ಏನು ಮಾಡನ ಅಂತೀರ?'

'ಅಸೆಂಬ್ಲಿ ಕೊನೆ ಎರಡು ದಿನ ಬಾಕ್ಸಿಂಗ್ ಡೇ ಅಂತ ಬಯ್ಯಕ್ಕೆ, ಬಡಿದಾಡಕ್ಕೆ ಬುಟ್ಟು 'ನೀವು ಯಂಗನ್ನಾ ಬೈದಾಡಿಕ್ಯಳಿ, ಹೊಡೆದಾಡಿಕ್ಯಳಿ ಬಾರಾಖೂನ್ ಮಾಫಿ' ಅಂತ ಆಡ್ರು ಹೊಂಡುಸ್ಬೇಕು. ನಾಯಕರು ಕೈಕೈ ಮಿಲಾಯಿಸೋ ದಗಾಯುದ್ಧಗಳು, ಛೀ-ಥೂ ಬಾಣಗಳನ್ನೆಲ್ಲಾ ಟೀವಿಯಲ್ಲಿ ನೇರಪ್ರಸಾರ ಮಾಡಿ, ನಮ್ಮ ನಾಯಕರು ಜನಕ್ಕೋಸ್ಕರ ಏನೇನು ಕಡಿದು ಕಟ್ಟೆ ಹಾಕ್ತರೆ ಅನ್ನೋ ಸತ್ಯ ಜನಕ್ಕೆ ತಿಳಿಸಬಕು' ಅಂತ ಪರಿಹಾರ ಕೊಟ್ಟರು.

ದಿನದ ಟ್ವೀಟ್

ಮಾನವೀಯತೆ ಮರೆಯಾಯಿತೇ?



ಸಹ ದೇಶವಾಸಿಗಳನ್ನು ಕನಿಷ್ಠ ಮಟ್ಟದ ಘನತೆಯಿಂದಲೂ ನಾವು ಕಾಣಲಿಲ್ಲವೆಂದರೆ, ನಮ್ಮದು ನಾಗರಿಕ ಪ್ರಜ್ಞೆ ಇರುವ ದೇಶ ಎಂದು ನಾವು ಕರೆದುಕೊಳ್ಳಲು ಸಾಧ್ಯವಿಲ್ಲ. ದೇಶದ ದೊಡ್ಡ ನಗರಗಳಲ್ಲಿನ ರೈಲು ನಿಲ್ದಾಣಗಳು ನಿಜವಾದ ಭಾರತ ದರ್ಶನವನ್ನು ಮಾಡಿಸುತ್ತವೆ ಮತ್ತು ಇಂತಹ ಪ್ರಕರಣಗಳು ಆ ಮುಗ್ಧರ ಮೇಲೆ ಪರಿಣಾಮ ಬೀರುವುದರಿಂದ, ಆಘಾತದಿಂದ ಹೊರಬರಲು ಅವರಿಗೆ ವರ್ಷಗಳೇ ಬೇಕಾಗುತ್ತದೆ...

(ಉತ್ತರಪ್ರದೇಶದ ಲಖನೌನ ಚಾರ್‌ಬಾಗ್ ರೈಲು ನಿಲ್ದಾಣದಲ್ಲಿ, ರಾತ್ರಿ ಕೊರೆಯುವ ಚಳಿಯಲ್ಲಿ ಪ್ಲ್ಯಾಟ್‌ಫಾರ್ಮ್ ಮೇಲೆ ಮಲಗಿದ್ದವರನ್ನು ತಣ್ಣೀರು ಎರಚಿ ಚದುರಿಸಿರುವುದಕ್ಕೆ ಪ್ರತಿಕ್ರಿಯೆ)

ಪ್ರಶಾಂತ ಮೆಂಡನ್

ಕಿಡಿನುಡಿ



ಒಂದು ಸಾರಿ ತಪ್ಪು ಮಾಡಿದರೆ 'ರೀ ಎಕ್ಸಾಂ' ಅನ್ನಬಹುದು, ಪದೇಪದೇ ತಪ್ಪು ಮಾಡುವವರಿಗೆ 'ನೋ ಎಕ್ಸಾಂ' ಅನ್ನಬೇಕು ಅಷ್ಟೇ. ಕೆಪಿಎಸ್‌ಸಿ ಕಾರ್ಯದರ್ಶಿ ಅವರೇ, ಇನ್ನು ಮುಂದೆ ಯಾವ ಪರೀಕ್ಷೆಯನ್ನೂ ನಡೆಸಬೇಡಿ. ಕೆಪಿಎಸ್‌ಸಿಯನ್ನು ಸುಧಾರಣೆ ಮಾಡಲು ಸಾಧ್ಯವಾಗದಷ್ಟು ಸರ್ಕಾರಗಳು ದುರ್ಬಲವಾಗಿವೆ. ಇಂತಹ ದುರ್ಬಲ ಸರ್ಕಾರಗಳು ಕರ್ನಾಟಕವನ್ನು ಸುಧಾರಣೆ ಮಾಡಲು ಸಾಧ್ಯವೇ?

ಸುಹಾಸ್ ದುಗಾ

25 ವರ್ಷಗಳ ಹಿಂದೆ

ಶುಕ್ರವಾರ, 31-12-1999

• **'ಮಿಲಿಯನ್ ಇದ್ದವರಿಗೆ ಮಿಲೇನಿಯಂ ಸಂಭ್ರಮ': ಸಹಸ್ರಮಾನ ವಿಶೇಷ**

ಬೆಂಗಳೂರು, ಡಿ. 30– ಹೊಸ ವರ್ಷದ ಆಚರಣೆ ರಾಜಧಾನಿ ಬೆಂಗಳೂರಿಗೆ ದೇವೇಂದ್ರ ನಗರಿಯ ಕಳೆ ಕಟ್ಟಿಕೊಟ್ಟೀತೇ?

ಈ ಬಾರಿ ಹೊಸ ಸಹಸ್ರಮಾನದ ನವೋದಯವೂ ಆಗುತ್ತಿರುವುದರಿಂದ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ ನವ ವಧುವಿನಂತೆ ಸಿಂಗಾರಗೊಂಡಿರುವುದನ್ನು ಕಂಡವರು ಕೇಳುವ ಪ್ರಶ್ನೆ ಇದು. ಇವೆರಡೇ ರಸ್ತೆಗಳಿಗೆ ರಾಜಧಾನಿಯ ಸಂಭ್ರಮವೆಲ್ಲಾ ಸೀಮಿತವೆಂದು ಭಾವಿಸಬೇಕಿಲ್ಲ. ಎಲ್ಲಾ ಪಂಚತಾರಾ ಹೋಟೇಲುಗಳು, ಕ್ಲಬ್ಬು, ಪಬ್ಬು, ರೆಸಾರ್ಟ್‌ಗಳು ಶೃಂಗರಿಸಿಕೊಂಡು ಅತಿಥಿಗಳಿಗೆ ಪಾನಸೇವೆ, ನೃತ್ಯ ಸೇವೆಯ ಹೆಸರಲ್ಲಿ ದುಡ್ಡು ಬಾಚಿಕೊಳ್ಳಲು ತುದಿಗಾಲಲ್ಲಿವೆ.

• **ಸಂದಿಗ್ಧ ಪರಿಸ್ಥಿತಿಯತ್ತ ವಿಮಾನ ಅಪಹರಣ ಪ್ರಕರಣ**

ನವದೆಹಲಿ, ಡಿ. 30– ಭಾರತೀಯ ನಿಯೋಗವು ವಿಮಾನ ಅಪಹರಣಕಾರರ ಜತೆ ನಡೆಸಿದ ಐದನೇ ಸುತ್ತಿನ ಮಾತುಕತೆಯು ಯಾವುದೇ ಫಲಪ್ರದವಾಗದೇ ಪರಿಸ್ಥಿತಿ ಇನ್ನೂ ಸೂಕ್ಷ್ಮವಾಗಿಯೇ ಇದೆ ಎಂದು ಸಚಿವ ಜಸ್ವಂತ್ ಸಿಂಗ್ ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಮಂಗಳವಾರ, 31-12-1974

• **ಆರು ಜನ ಹಿರಿಯ ಸಾಹಿತಿಗಳಿಗೆ ಪ್ರಶಸ್ತಿ**

ಬೆಂಗಳೂರು, ಡಿ. 30– ಕನ್ನಡ ಸಾಹಿತ್ಯ ಕ್ಷೇತ್ರದ ವಿವಿಧ ಮುಖಗಳಲ್ಲಿ ತಮ್ಮದೇ ಆದ ವಿಶಿಷ್ಟ ರೀತಿಯ ಸೇವೆ ಸಲ್ಲಿಸಿರುವ ಆರು ಮಂದಿ ಹಿರಿಯ ಸಾಹಿತಿಗಳನ್ನು ಇಂದು ಕನ್ನಡದ ಜನತೆಯ ಪರವಾಗಿ ಅಭಿನಂದಿಸಿ ರಾಜ್ಯ ಪ್ರಶಸ್ತಿ ನೀಡಲಾಯಿತು.

ತ.ರಾ.ಸುಬ್ಬರಾಯ (ತರಾಸು), ಪಿ.ನರಸಿಂಗರಾವ್ (ಪರ್ವತವಾಣಿ), ಸಿದ್ದಯ್ಯ ಪುರಾಣಿಕ, ಎಚ್.ಎಲ್.ನಾಗೇಗೌಡ, ಎ.ಎನ್.ಮೂರ್ತಿರಾವ್ ಮತ್ತು ಗಮಕಿ ಎಂ.ರಾಘವೇಂದ್ರ ರಾವ್ ಅವರನ್ನು ನಗರಭವನದಲ್ಲಿ ಸಾಹಿತ್ಯ ಅಕಾಡೆಮಿ ಆಶ್ರಯದಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲ ಮೋಹನ ಲಾಲ್ ಸುಖಾಡಿಯಾ ಅವರು ಸನ್ಮಾನಿಸಿ ಪ್ರಶಸ್ತಿ ನೀಡಿದರು.

• **ಏಳು ಸಚಿವರಿಂದ ಆಸ್ತಿ ವಿವರ ಸಲ್ಲಿಕೆ**

ಬೆಂಗಳೂರು, ಡಿ. 30– ಮಂತ್ರಿಗಳು ತಮ್ಮ ಆಸ್ತಿಪಾಸ್ತಿಗಳನ್ನು ಘೋಷಿಸಿಕೊಳ್ಳಬೇಕೆಂಬ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಆದೇಶವನ್ನು ಇದುವರೆಗೆ ಪಾಲಿಸಿರುವವರು ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರೂ ಸೇರಿದಂತೆ ಏಳು ಮಂದಿ ಸಚಿವರು ಮಾತ್ರ.

ಈವರೆಗೆ ಸಚಿವರಾದ ಎಸ್.ಎಂ.ಯಾಹ್ಯಾ, ಡಿ.ಕೆ.ನಾಯ್ಕರ್, ಶ್ರೀಮತಿ ಈವಾವಾಜ್, ರಾಜ್ಯ ಸಚಿವರಾದ ಎಸ್.ಬಿ.ನಾಗರಾಳ್ ಮತ್ತು ಶ್ರೀಮತಿ ಮನೋರಮಾ ಮಧ್ವರಾಜ್ ಅವರು ಆಸ್ತಿ ವಿವರ ಕೊಟ್ಟಿದ್ದಾರೆಂದು ಕೆ.ಪಿ.ಸಿ.ಸಿ. ವಕ್ತಾರರೊಬ್ಬರು ತಿಳಿಸಿದ್ದಾರೆ.

ಸಂಗತ

ದೇಗುಲ ಪ್ರವೇಶ: ಬೇಕಿದೆ ಪರಿವರ್ತನೆ

ಮಂದಿರಗಳ ಪ್ರವೇಶಕ್ಕೆ ಎಲ್ಲರಿಗೂ ಅವಕಾಶ ಕಲ್ಪಿಸಲು ಸೌಮ್ಯ ಮಾರ್ಗದಲ್ಲಿ ಮನಃಪರಿವರ್ತನೆ ಮಾಡುವ ಕೆಲಸ ಚುರುಕು ಪಡೆಯಬೇಕು

• ಮಲ್ಲಿಕಾರ್ಜುನ ಹೆಗ್ಗಳಗಿ

ಗಾಂಧೀಜಿ 1934ರಲ್ಲಿ ಉಡುಪಿಗೆ ಬಂದಿದ್ದರು. ಅಲ್ಲಿ ಅವರು ಸಾರ್ವಜನಿಕ ಭಾಷಣದಲ್ಲಿ 'ಉಡುಪಿ ಬಹಳ ದಿನಗಳಿಂದ ನನ್ನ ಮನಸ್ಸಿನಲ್ಲಿ ಇದೆ. ಇಲ್ಲಿಯ ಕೃಷ್ಣ ದೇವಾಲಯದ ಬಗ್ಗೆ ಕೇಳಿ ತಿಳಿದಿದ್ದೇನೆ. ಜಾತಿಯ ಕಾರಣದಿಂದ ಭಕ್ತ ಕನಕನಿಗೆ ದೇವಾಲಯ ಪ್ರವೇಶ ನಿರಾಕರಿಸಿದ ಕಾರಣ, ಇಲ್ಲಿಯ ಕೃಷ್ಣದೇವರು ತಿರುಗಿ ಭಕ್ತನಿಗೆ ದರ್ಶನ ದಯಪಾಲಿಸಿದ ಕಥೆಯನ್ನು ಅರಿತಿದ್ದೇನೆ. ಇದು ಭಾರತದ ಜಾತಿ ತಾರತಮ್ಯ ನಿವಾರಣೆ ಸಂಬಂಧದ ಅರ್ಥಪೂರ್ಣ ರೂಪಕ. ದೇವರೇ ಪರಿಹಾರ ಸೂಚಿಸಿರುವುದು ನಿಜಕ್ಕೂ ಒಂದು ಅಪರೂಪದ ಸಂಗತಿ. ಇದು ನನ್ನ ಮನಸ್ಸನ್ನು ಆವರಿಸಿದೆ. ಆದ್ದರಿಂದ ದೇವಾಲಯ ಪ್ರವೇಶಿಸಲು ಎಲ್ಲರಿಗೂ ಸಾಧ್ಯವಾಗುವಂತೆ, ಸೌಮ್ಯ ಮಾರ್ಗದಿಂದ ಜನಾಭಿಪ್ರಾಯವನ್ನು ರೂಪಿಸಬೇಕು. ಇದು ಆತ್ಮಶುದ್ಧಿಯ ಚಳವಳಿಯಾಗಬೇಕು' ಎಂದು ಹೇಳಿದ್ದರು. ಮುಂದೆ ಕೆಲವೇ ದಿನಗಳಲ್ಲಿ ಅವರ ಇಚ್ಛೆಯಂತೆ ಕೃಷ್ಣ ಮಂದಿರ ಪ್ರವೇಶ ಎಲ್ಲರಿಗೂ ಮುಕ್ತವಾಯಿತು.

ಮೈಸೂರು ತಾಲ್ಲೂಕಿನ ಮಾರ್ಬಳ್ಳಿ ಗ್ರಾಮದ ದಲಿತರಿಗೆ ಅಲ್ಲಿಯ ಮಾರಮ್ಮ ದೇವಾಲಯ ಪ್ರವೇಶ ನಿರಾಕರಿಸಿ 11 ವರ್ಷಗಳಿಂದ ಮಂದಿರದ ದ್ವಾರಕ್ಕೆ ಬೀಗ ಹಾಕಲಾಗಿತ್ತು. ಹಿರಿಯ ಅಧಿಕಾರಿಗಳು ಈಚೆಗೆ ಗ್ರಾಮದಲ್ಲಿ ಶಾಂತಿ ಸಭೆ ನಡೆಸಿ, ಸ್ಥಳೀಯರ ಮನವೊಲಿಸಿ ದಲಿತರ ಪ್ರವೇಶಕ್ಕೆ ಮುಕ್ತ ಅವಕಾಶ ಮಾಡಿಕೊಟ್ಟ ವರದಿ ಓದಿದಾಗ, ಗಾಂಧೀಜಿ ಹೇಳಿದಂತೆ ಸೌಮ್ಯ ಮಾರ್ಗದಲ್ಲಿ ಈಗಲೂ ಚಳವಳಿ ರೂಪಿಸುವುದು ಅವಶ್ಯ ಎನಿಸಿತು.

ಸಮಾಜದಲ್ಲಿ ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತೆ ಆಚರಣೆ ಇನ್ನೂ ಜೀವಂತವಾಗಿವೆ. ಗ್ರಾಮೀಣ ಭಾಗದಲ್ಲಿ ಇದು ಅಧಿಕವಾಗಿದೆ. ಹಳ್ಳಿಗಳ ಹೋಟೆಲುಗಳಲ್ಲಿ ತಳ ಸಮುದಾಯದವರಿಗಾಗಿ ಚಹಾ ಕಪ್ಪು, ಬಸಿ, ಉಪಾಹಾರದ ತಟ್ಟೆ, ಆಸನಗಳನ್ನು ಪ್ರತ್ಯೇಕವಾಗಿ ಇಟ್ಟಿರುತ್ತಾರೆ ಮಾತ್ರವಲ್ಲ ಅವುಗಳನ್ನು ಅವರೇ ಸ್ವಚ್ಛ ಮಾಡಿಕೊಂಡು ಬಳಸಬೇಕಾಗುತ್ತದೆ. ಕೆಲವು ಹಳ್ಳಿಗಳಲ್ಲಿ ಮಂದಿರ ಪ್ರವೇಶ ತಾರತಮ್ಯದಿಂದಾಗಿ ದ್ವೇಷದ ವಾತಾವರಣ ಕಾಣಿಸುತ್ತದೆ. ಇದೇ ಕಾರಣಕ್ಕಾಗಿ ವಿವಿಧ ಸಮುದಾಯಗಳ ನಡುವೆ ಘರ್ಷಣೆಗಳು ನಡೆಯುತ್ತಿವೆ.

ಜನರಲ್ಲಿ ವೈಚಾರಿಕ ಮನೋಭಾವ, ವೈಜ್ಞಾನಿಕ ಪ್ರಜ್ಞೆ, ಸಾಮಾಜಿಕ ಚಿಂತನೆ, ಮಾನವ ಹಕ್ಕುಗಳ ಅರಿವು, ಕಾನೂನಿನ ಜ್ಞಾನ ಈಗ ಬಹಳಷ್ಟು ಬೆಳೆದಿದೆ. ಇದು ಕ್ರಿಯಾತ್ಮಕವಾಗಿ ಬದಲಾಗಬೇಕಾದ ಅವಶ್ಯಕತೆ ಇದೆ. ಗ್ರಾಮಗಳಲ್ಲಿ ಯುವಕರು ಸಂಘಟಿತರಾಗಬೇಕು. ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತೆಯ ಕರಾಳ ರೂಪವನ್ನು ಅಹಿಂಸಾ ಮಾರ್ಗದಿಂದ ಬದಲಿಸಲು ಮುಂದಾಗಬೇಕು. ಗ್ರಾಮದ ಎಲ್ಲ ಮಂದಿರಗಳಿಗೆ, ಸಾಮೂಹಿಕ ಸ್ಥಳಗಳಿಗೆ ಮುಕ್ತ ಪ್ರವೇಶಕ್ಕೆ ಅವಕಾಶ ಸಿಗಬೇಕು. ಇದು ಸಾಮಾಜಿಕ ಚಳವಳಿಯಾಗಿ ರೂಪುಗೊಳ್ಳಬೇಕು.

ಭಾರತದ ಸಂವಿಧಾನವು ಧರ್ಮ, ಜಾತಿ, ವರ್ಣ, ವರ್ಗ, ಪ್ರದೇಶ, ಭಾಷೆ, ರಾಜಕೀಯ ನಿಲುವುಗಳ ಆಧಾರದ ಮೇಲೆ ತಾರತಮ್ಯ ಮಾಡುವುದಕ್ಕೆ ಅವಕಾಶ ನೀಡುವುದಿಲ್ಲ. ಹಾಗೆಯೇ ದೇಶದ ಎಲ್ಲ ನಾಗರಿಕರಿಗೆ ವಿಚಾರ, ನಂಬಿಕೆ, ಧರ್ಮ, ಪೂಜೆ, ಉಪಾಸನೆಯ ಸ್ವಾತಂತ್ರ್ಯ ಹಾಗೂ ಸ್ಥಾನಮಾನಗಳ ಸಮಾನತೆಯನ್ನು ನೀಡಿದೆ. ವ್ಯಕ್ತಿಯ ಘನತೆ ಕಾಪಾಡುವುದು ಸಂವಿಧಾನದ ಮುಖ್ಯ ಆಶಯವಾಗಿದೆ.



ಪ್ರಗತಿಪರ ಲೇಖಕರಾಗಿದ್ದ ಬೆಳಗಾವಿಯ ದೇವರಾಯ ಇಂಗಳೆ ಅವರು ಬಿ.ಆರ್.ಅಂಬೇಡ್ಕರ್ ಅವರ ಸ್ನೇಹಿತರಾಗಿದ್ದರು. ಅವರ ಮೊದಲ ಹೆಸರು ದೇವರಾಯ ಹೊಲೆಯರ ಎಂದು ಇತ್ತು. ಅವರು ಸಾಂಗ್ಲಿಯಲ್ಲಿ ಕ್ಷೌರ ಮಾಡಿಸಿಕೊಳ್ಳಲು ಸಲೂನಿಗೆ ಹೋಗಿದ್ದರು. ಹೊಲೆಯರ ಎಂಬ ಅಡ್ಡ ಹೆಸರಿನಿಂದ ಇವರ ಜಾತಿಯನ್ನು ಗುರುತಿಸಿ, ಹೇರ್‌ಕಟ್ ಮಾಡುತ್ತಿದ್ದ ವ್ಯಕ್ತಿ ಆ ಕೆಲಸವನ್ನು ಅರ್ಧಕ್ಕೇ ನಿಲ್ಲಿಸಿ ಇವರನ್ನು ಹೊರದಬ್ಬಿದ್ದ. ಇದರಿಂದ ನೊಂದುಕೊಂಡ ದೇವರಾಯ ಅವರು ತಮ್ಮ ಅಡ್ಡಹೆಸರನ್ನು ಇಂಗಳೆ ಎಂದು ಬದಲಿಸಿಕೊಂಡರು (ಅವರ ಹುಟ್ಟೂರು ಇಂಗಳೆ ಗ್ರಾಮ). ಅವರು ಉತ್ತರ ಕರ್ನಾಟಕದ ಜಾತಿಸೂಚಕ ಅಡ್ಡ ಹೆಸರುಗಳನ್ನು ಬದಲಿಸುವ 'ಅಡ್ಡ ಹೆಸರು ಅಡ್ಡಡ್ಡ ಸೀಳಿ' ಎಂಬ ವಿಶಿಷ್ಟ ಚಳವಳಿಯನ್ನು ಹುಟ್ಟುಹಾಕಿದ್ದರು. ಕೆಳವರ್ಗಗಳ ಜಾತಿಸೂಚಕ ಅಡ್ಡ ಹೆಸರನ್ನು ಹೊಂದಿದವರು ತಮ್ಮ ಅಡ್ಡ ಹೆಸರನ್ನು ತಮ್ಮ ಊರಿನ ಹೆಸರಿಗೆ ಅಥವಾ ಇಷ್ಟವಾಗುವ ಹೆಸರಿಗೆ ಬದಲಾವಣೆ ಮಾಡಿಕೊಳ್ಳಬೇಕು ಎಂದು ಅವರು ಹೇಳುತ್ತಿದ್ದರು. ಅವರ ಸಲಹೆಯಂತೆ ಅನೇಕರು ತಮ್ಮ ಅಡ್ಡ ಹೆಸರು ಬದಲಿಸಿಕೊಂಡಿದ್ದಾರೆ. ಈಗಲೂ ಬದಲಿಸಿಕೊಳ್ಳುತ್ತಿದ್ದಾರೆ. ಜಾತಿಸೂಚಕ ತಾರತಮ್ಯ ನಿವಾರಣೆಯಲ್ಲಿ ಈ ಸರಳ ವಿಧಾನ ತಕ್ಕಮಟ್ಟಿಗೆ ನೆರವಾಗಿದೆ. ದೇವರಾಯ ಅವರನ್ನು ಕುರಿತು ಪತ್ರಕರ್ತ ಸರಜೂ ಕಾಟ್ಕರ್ ಪುಸ್ತಕ ರಚಿಸಿದ್ದಾರೆ. ಅದು 'ಇಂಗಳೆ ಮಾರ್ಗ' ಎಂಬ ಹೆಸರಿನಲ್ಲಿ ಕನ್ನಡ ಚಲನಚಿತ್ರ ಆಗಿದೆ.

'ಮನುಷ್ಯ ಜಾತಿ ತಾನೊಂದೆ ವಲಂ' ಎಂದಿದ್ದಾರೆ ಪಂಪ ಮಹಾಕವಿ. ಮಂದಿರ ಮುಕ್ತ ಪ್ರವೇಶ ಅವಕಾಶಕ್ಕಾಗಿ ಕೇರಳದಲ್ಲಿ ನಡೆದ ವೈಕಂ ಅಹಿಂಸಾತ್ಮಕ ಚಳವಳಿಯ ಶತಮಾನದ ಸ್ಮರಣೆ ಈಗ ದೇಶದಲ್ಲಿ ನಡೆಯುತ್ತಿದೆ. ಮಂದಿರಗಳ ಪ್ರವೇಶಕ್ಕೆ ಎಲ್ಲರಿಗೂ ಮುಕ್ತ ಅವಕಾಶ ಕಲ್ಪಿಸಲು ಮನಃಪರಿವರ್ತಿಸುವ ಕೆಲಸ ಚುರುಕು ಪಡೆಯಬೇಕು. ಸುಶಿಕ್ಷಿತರು, ಪ್ರಜ್ಞಾವಂತರು, ಧಾರ್ಮಿಕ ಮುಖಂಡರು, ಜನಪ್ರತಿನಿಧಿಗಳು ಈ ಕಾರ್ಯಕ್ಕೆ ಕೈಜೋಡಿಸಬೇಕು. ಸಂಘ–ಸಂಸ್ಥೆಗಳು ಹೆಗಲು ಕೊಡಬೇಕು.

ವಾಚಕರ ವಾಣಿ

ಕೆಪಿಎಸ್‌ಸಿ: ಲೋಪಕ್ಕೆ ಕೊನೆಯಿಲ್ಲವೇ?

ಉದ್ಯಮಿ ಹೆನ್ರಿ ಫೋರ್ಡ್ ಅವರ 'ವೈಫಲ್ಯ ಎಂಬುದು ಯಾವುದೇ ಒಂದು ಕೆಲಸವನ್ನು ಹೆಚ್ಚು ಬುದ್ಧಿವಂತಿಕೆಯಿಂದ ಪುನರಾರಂಭಿಸಲು ಸಿಗುವ ಅವಕಾಶ' ಎಂಬ ಮಾತು ಎಲ್ಲ ಕಾಲಕ್ಕೂ ಎಲ್ಲರಿಗೂ ಅನ್ವಯಿಸುವಂಥದ್ದು. ಆದರೆ, ಇದು ನಮ್ಮ ಕೆಪಿಎಸ್‌ಸಿಗೆ ಮಾತ್ರ ಅನ್ವಯಿಸಿದಂತೆ ಕಾಣುವುದಿಲ್ಲ. ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯ ಪೂರ್ವಭಾವಿ ಪರೀಕ್ಷೆಯು ಶಿಸ್ತುಬದ್ಧವಾಗಿ ನಡೆಯಬೇಕಾಗಿತ್ತು. ಪ್ರಶ್ನೆಪತ್ರಿಕೆಯಲ್ಲಿ ಭಾರಿ ಎಡವಟ್ಟುಗಳು ಕಂಡುಬಂದ ಕಾರಣ ಮರುಪರೀಕ್ಷೆಗೆ ಆದೇಶಿಸಲಾಯಿತು. ಭಾನುವಾರ ಮರುಪರೀಕ್ಷೆ ನಡೆಯಿತು. ಕೆಪಿಎಸ್‌ಸಿ ಈ ಬಾರಿಯೂ ಮುಗ್ಗರಿಸಿರುವುದು ಅತ್ಯಂತ ದುರದೃಷ್ಟಕರ. ಭಾಷಾಂತರ ಲೋಪ ಮರುಕಳಿಸಿದೆ, ತಾಂತ್ರಿಕ ಸಮಸ್ಯೆಗಳಿಂದಾಗಿ ಕೆಲವು ಕೇಂದ್ರಗಳಲ್ಲಿ ಪರೀಕ್ಷೆ ತಡವಾಗಿ ಪ್ರಾರಂಭವಾಗಿದೆ. ಶಿಸ್ತುಬದ್ಧವಾಗಿ ಪರೀಕ್ಷೆ ನಡೆಸಲು ಕೆಪಿಎಸ್‌ಸಿಗೆ ಏಕೆ ಸಾಧ್ಯವಾಗುತ್ತಿಲ್ಲ?

ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

ಆಲ್ಕೋ...ಹಾಲು !

ಅತ್ತ, ಆರು ರಾಜ್ಯಗಳಲ್ಲಿ
ಮಾರಾಟವಾಗುತ್ತಿಹುದಂತೆ
ರಾಜ್ಯದ 'ನಂದಿನಿ' ಹಾಲು!
ಇತ್ತ, ಹೊಸ ವರ್ಷದ ಸ್ವಾಗತಕ್ಕಾಗಿ
ರಾಜಧಾನಿ ಬೆಂಗಳೂರಲ್ಲಿ
ಮಾರಾಟವಾಗಿದೆಯಂತೆ
ದಾಖಲೆ ಪ್ರಮಾಣದಲ್ಲಿ
ಆಲ್ಕೋಹಾಲು!

ಮ.ಗು.ಬಸವಣ್ಣ, ಮೈಸೂರು

'ಪತನ' ನಿವಾರಣೆಗೆ ಪರಿಹಾರ ಇದಲ್ಲ

'ಹವ್ಯಕ ಸಮುದಾಯದ ಯುವಕ-ಯುವತಿಯರಿಗೆ 18– 21 ವರ್ಷಕ್ಕೆ ವಿವಾಹ ಮಾಡಿಸಬೇಕು. ಕನಿಷ್ಠ ಮೂರು ಮಕ್ಕಳನ್ನಾದರೂ ಪಡೆಯಬೇಕು...' ಎಂಬ ಸ್ವರ್ಣವಲ್ಲಿ ಮಠದ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಅವರ ಹೇಳಿಕೆ (ಪ್ರ.ವಾ., ಡಿ. 30) ಅನುಚಿತವಾಗಿದೆ. 'ಜನಸಂಖ್ಯೆ ಕುಸಿತ, ಸಂಸ್ಕೃತಿಯ ತೀವ್ರ ಹಿನ್ನಡೆ, ನೈತಿಕತೆಯ ಪತನದಂತಹ ಸಮಸ್ಯೆಗಳನ್ನು ಸಮುದಾಯ ಎದುರಿಸುತ್ತಿದೆ...' ಎಂದು ಅವರು ಹೇಳಿದ್ದಾರೆ. ಅವರು ಹೇಳಿರುವ ರೀತಿಯಲ್ಲಿ ವಿವಾಹವಾಗುವುದು ಮತ್ತು ಮಕ್ಕಳನ್ನು ಹೊಂದುವುದು ಈ ಸಮಸ್ಯೆಗಳಿಗೆ ಪರಿಹಾರ ಆಗಲಾರದು. ಅವರ ಹೇಳಿಕೆ ಹೇಗಿದೆ ಎಂದರೆ, ಮನೆಯಲ್ಲಿ ಇಲಿಯ ಕಾಟ ಹೆಚ್ಚಾದಷ್ಟೂ ಹೆಚ್ಚು ಬೆಕ್ಕುಗಳನ್ನು ಸಾಕಿರಿ ಎನ್ನುವಂತಿದೆ.

ಆಶಾ ಅಪ್ರಮೇಯ, ದಾವಣಗೆರೆ

ಕ್ರಿಕೆಟ್: ಈ ಸೋಲು ನ್ಯಾಯವೇ?

ಆಸ್ಟ್ರೇಲಿಯಾ ತಂಡದ ವಿರುದ್ಧದ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಭಾರತದ ಸೋಲು ಕ್ರೀಡಾ ಅಭಿಮಾನಿಗಳಿಗೆ ವಿಶೇಷ ಎನಿಸಲಿಲ್ಲ. ಆದರೆ, ಇದು ಸೋಲಲ್ಲ, ಶರಣಾಗತಿ. ಈ ರೀತಿಯ ಸೋಲನ್ನು ಮಾತ್ರ ಸಹಿಸಲಾಗುತ್ತಿಲ್ಲ. ಹೋರಾಡಿ ಸೋತಿದ್ದರೆ ಒಪ್ಪಬಹುದಿತ್ತು. ನಮ್ಮವರು ಗೆಲುವನ್ನು ಹರಿವಾಣದಲ್ಲಿ ಇಟ್ಟು ಆಸ್ಟ್ರೇಲಿಯಾದವರ ಕೈಗೆ ನೀಡಿದ ಬಗೆ ಮಾತ್ರ ಕ್ರಿಕೆಟ್ ಅಭಿಮಾನಿಗಳನ್ನು ಬಹುಕಾಲ ಹಿಂಸಿಸುತ್ತದೆ. ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಮತ್ತು ಆಯ್ಕೆ ಸಮಿತಿಯು ಕೆಲವು ಹಿರಿಯ ಆಟಗಾರರ ಸಾಧನೆ ಹಾಗೂ ಅವರ ಅನುಭವದ ಮೂಸೆಯನ್ನು ಬದಿಗೊತ್ತಿ ಕ್ರಿಕೆಟ್ ತಂಡಕ್ಕೆ ಆಮೂಲಾಗ್ರ ಶಸ್ತ್ರಚಿಕಿತ್ಸೆ ಮಾಡಬೇಕಾದ ಕಾಲ ಸನ್ನಿಹಿತವಾಗಿದೆ. ಹಾಗೆಯೇ ಕ್ರಿಕೆಟ್‌ನಲ್ಲಿ ಆಟಗಾರರಿಗೆ ಗರಿಷ್ಠ ವಯಸ್ಸು ಮತ್ತು ಗರಿಷ್ಠ ಪಂದ್ಯಗಳ ಮಿತಿಯನ್ನು ನಿಗದಿಪಡಿಸಬೇಕು. ಈ ದೇಶದಲ್ಲಿ ಅರ್ಹತೆಯುಳ್ಳ ಪ್ರತಿಭೆಗಳ ಕೊರತೆ ಇಲ್ಲ, ಆದರೆ ಅಂಥವರಿಗೆ ಅವಕಾಶದ ಕೊರತೆ ಇದೆ.

ರಮಾನಂದ ಶರ್ಮಾ, ಬೆಂಗಳೂರು

ಪ್ರಯಾಗ್‌ರಾಜ್ ರೈಲು: ಜನಸ್ನೇಹಿಯಾಗಲಿ

ಹನ್ನೆರಡು ವರ್ಷಗಳಿಗೊಮ್ಮೆ ಪ್ರಯಾಗ್‌ರಾಜ್ ಪ್ರದೇಶದಲ್ಲಿ ನಡೆಯುವ ಮಹಾ ಕುಂಭಮೇಳಕ್ಕೆ ರೈಲ್ವೆ ಇಲಾಖೆಯು ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಜನವರಿ 13ರಿಂದ 45 ದಿನ ಬೆಂಗಳೂರು ಹಾಗೂ ಮೈಸೂರಿನಿಂದ ವಿಶೇಷ ರೈಲುಗಳಿಗೆ ಚಾಲನೆ ನೀಡಿದೆ. ಬೆಂಗಳೂರಿನಿಂದ ಪ್ರಯಾಗ್‌ರಾಜ್‌ಗೆ 1,730 ಕಿ.ಮೀ. ಅಂತರವಿದ್ದು, 46 ಗಂಟೆಗಳ ಪ್ರಯಾಣವಾಗಿರುತ್ತದೆ. ಆದರೆ ಇಲಾಖೆಯ ಮಾಹಿತಿ ಪ್ರಕಾರ, ಬೆಂಗಳೂರು ಮತ್ತು ಮೈಸೂರಿನಿಂದ ಅತಿ ಹೆಚ್ಚು ಪ್ರಯಾಣಿಕರು ಆಸನಗಳನ್ನು ಕಾದಿರಿಸಿದ್ದಾರೆ. ಕರ್ನಾಟಕದ ಗಡಿ ಪ್ರದೇಶದವರೆಗೆ ನಿಯಮಿತ ನಿಲುಗಡೆಗಳನ್ನು ನೀಡಿ, ನಂತರ ನಿಲುಗಡೆರಹಿತ ಪ್ರಯಾಣವನ್ನಾಗಿ ಪರಿವರ್ತಿಸಿ, ಪ್ರಯಾಣದ ಅವಧಿಯನ್ನು ಕಡಿಮೆ ಮಾಡುವ ಮೂಲಕ ಸಮಯವನ್ನು ಉಳಿಸಬಹುದಾಗಿದೆ.

ಇಲಾಖೆಯು ಈಗಾಗಲೇ ಮೇಳ ಸಂಬಂಧದ ಮಾಹಿತಿಗಾಗಿ ವಿವಿಧ ಭಾಷೆಗಳಲ್ಲಿ ಸಂವಹನ ನಡೆಸಬಹುದಾದ ಪೋರ್ಟಲ್ ಪ್ರಾರಂಭಿಸಿದೆ. ಇದರಲ್ಲಿ ದಕ್ಷಿಣ ಭಾರತದ ಭಾಷೆಗಳ ಪೈಕಿ ಕನ್ನಡವನ್ನು ಬಿಟ್ಟಿರುವುದು ವಿಷಾದದ ಸಂಗತಿ. ಇಲಾಖೆಯ ಲಾಭಾಂಶದಲ್ಲಿ ಕರ್ನಾಟಕದಿಂದ ಅತಿ ಹೆಚ್ಚಿನ ಕೊಡುಗೆ ಇದೆ. ರೈಲ್ವೆ ಸಚಿವರು ಈ ತಾರತಮ್ಯವನ್ನು ಸರಿಪಡಿಸಬೇಕು.

ಚಿ.ಉಮಾ ಶಂಕರ್, ಬೆಂಗಳೂರು

ಮಾನಸಿಕ ಚೈತನ್ಯ ತುಂಬಬೇಕಿದೆ

ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಮನೋವ್ಯಾಧಿಗೆ ಸಮಾಲೋಚನೆ ಹಾಗೂ ಚಿಕಿತ್ಸೆ ಪಡೆದಿರುವವರ ಸಂಖ್ಯೆ ಹೆಚ್ಚಿರುವುದಾಗಿ ವರದಿಯಾಗಿದೆ (ಪ್ರ.ವಾ., ಡಿ. 30). ಶೈಕ್ಷಣಿಕ ಒತ್ತಡ, ಪರೀಕ್ಷೆ, ಅತಿಯಾಗಿ ಡಿಜಿಟಲ್ ಸಾಧನಗಳ ಬಳಕೆಯಂತಹ ಕಾರಣಗಳಿಂದ ಲಕ್ಷಾಂತರ ಮಕ್ಕಳು ಮತ್ತು ಹದಿಹರೆಯದವರು ಮಾನಸಿಕ ಅನಾರೋಗ್ಯಕ್ಕೆ ಒಳಗಾಗಿದ್ದಾರೆ ಎಂಬುದು ಆತಂಕಕಾರಿ. ಮಕ್ಕಳ ಮಾನಸಿಕ ಒತ್ತಡವನ್ನು ಅರಿಯುವಲ್ಲಿ ಬಹುಪಾಲು ಪೋಷಕರು ಮತ್ತು ಶಿಕ್ಷಕರು ವಿಫಲರಾಗುತ್ತಿದ್ದಾರೆ. ಆಟೋಟಗಳಾಗಲಿ, ಸಂಗೀತ, ನೃತ್ಯ, ಕಲೆಗಳಾಗಲಿ ಇಂದು ಮಾನಸಿಕ ಆರೋಗ್ಯ ಕಾಪಿಡುವ ಭಾಗಗಳಾಗದೆ ಸ್ಪರ್ಧೆಯ ಕಣಗಳಾಗಿ ಮಾರ್ಪಡುತ್ತಿವೆ.

ಇಂದು ಕೆಲವು ವಿದ್ಯಾರ್ಥಿಗಳು ಮತ್ತು ಯುವಪೀಳಿಗೆ ಗುರುಹಿರಿಯರ ಮಾರ್ಗದರ್ಶನಕ್ಕೆ ಕಿವಿಗೊಡುವ ತಾಳ್ಮೆಯನ್ನು ತೋರದಿರುವುದಕ್ಕೆ ಬಹುಮುಖ್ಯ ಕಾರಣ ಜಂಕ್‌ಫುಡ್ ಮತ್ತು ಸ್ಮಾರ್ಟ್‌ಫೋನ್‌ಗಳು ಅವರ ಮೈಮನಸ್ಸುಗಳನ್ನು ಆಪೋಶನ ಮಾಡಿಕೊಂಡಿರುವುದು. ವಾಸ್ತವದ ಬದುಕಿಗೆ ಭವಿಷ್ಯದ ಮಕ್ಕಳನ್ನು ಅಣಿಗೊಳಿಸಬೇಕಾದರೆ, ಶಾಲಾ ಕಾಲೇಜುಗಳಲ್ಲಿ ಮಕ್ಕಳ ಮನಸ್ಸನ್ನು ಅರಿತು ಅವರಿಗೆ ಅಗತ್ಯವಾದ ಮಾನಸಿಕ ಚೈತನ್ಯ ತುಂಬುವ ಕಾರ್ಯಕ್ರಮಗಳನ್ನು ಆಯೋಜಿಸಬೇಕಾದ ತುರ್ತಿದೆ.

ರೇವಣ್ಣ ಎಂ.ಜಿ., ಕೃಷ್ಣರಾಜಪೇಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

2025 ನಿರೀಕ್ಷೆ ಹಲವು

‘ದೊಡ್ಡಣ್ಣ’ನ ಒಲವು ಯಾರಿಗೆ?



2024ಕ್ಕೆ ವಿದಾಯ ಹೇಳಲು ಇನ್ನು ಕೆಲವು ಗಂಟೆಗಳಷ್ಟೇ ಇವೆ. ಹುರುಪು, ವಿಶ್ವಾಸದಿಂದ ಹೊಸ ವರ್ಷ 2025 ಸ್ವಾಗತಿಸಲು ಜಗತ್ತು ಸಜ್ಜಾಗಿದೆ. ಜಾಗತಿಕ ಮಟ್ಟದಲ್ಲಿ ಯುದ್ಧ, ಸಂಘರ್ಷ, ಸಾವು–ನೋವುಗಳಿಗೆ ಸಾಕ್ಷಿಯಾಗಿದ್ದ ಈ ವರ್ಷ ಸಿಹಿಗಿಂತ ಕಹಿಯೇ ನೀಡಿದೆ. ಅಮೆರಿಕ, ಭಾರತ ಸೇರಿದಂತೆ ಹಲವು ರಾಷ್ಟ್ರಗಳಲ್ಲಿ ಚುನಾವಣೆಗಳು ನಡೆದ ವರ್ಷ ಇದು. ಕೆಲವು ಕಡೆ ಹೊಸ ಆಡಳಿತ ಅಸ್ತಿತ್ವಕ್ಕೆ ಬಂದಿದ್ದರೆ, ಇನ್ನೂ ಕೆಲವೆಡೆ ಬರಬೇಕಿದೆ. ರಾಷ್ಟ್ರಗಳ ನಡುವೆ ಗಡಿ ಬಿಕ್ಕಟ್ಟು, ಸಂಘರ್ಷ, ವೈಮನಸ್ಸು, ರಾಜಕೀಯ ಮೇಲಾಟಗಳೇ ಮೇಳೈಸಿರುವ ಹೊತ್ತಿನಲ್ಲಿ ಹೊಸ ವರ್ಷ ಜಾಗತಿಕವಾಗಿ ಹಲವು ನಿರೀಕ್ಷೆಗಳನ್ನು ಹುಟ್ಟುಹಾಕಿದೆ

ಹೊಸ ದಿಕ್ಕು ತೋರುವ ಚುನಾವಣೆಗಳು

2024 ಚುನಾವಣಾ ವರ್ಷ ಎಂದೇ ಕರೆಯಬೇಕಾಗುತ್ತದೆ. ಯುರೋಪಿಯನ್ ಯೂನಿಯನ್ ಸೇರಿದಂತೆ ಜಗತ್ತಿನ 64 ದೇಶಗಳಲ್ಲಿ ಈ ವರ್ಷ ಚುನಾವಣೆಗಳು ನಡೆದಿವೆ. ಭಾರತ, ಯುರೋಪಿಯನ್ ಯೂನಿಯನ್, ಇಂಗ್ಲೆಂಡ್, ಇಂಡೊನೇಷ್ಯಾ, ಪಾಕಿಸ್ತಾನ, ಬಾಂಗ್ಲಾದೇಶ, ಉಕ್ರೇನ್, ದಕ್ಷಿಣ ಕೊರಿಯಾ, ದಕ್ಷಿಣ ಆಫ್ರಿಕಾ, ಅಲ್ಜೀರಿಯಾ, ಮಡಗಾಸ್ಕರ್, ವೆನಿಜುವೆಲಾ, ತೈವಾನ್, ಮಾಲಿ, ಶ್ರೀಲಂಕಾ, ರೊಮೇನಿಯಾ ಸೇರಿದಂತೆ ವಿವಿಧ ರಾಷ್ಟ್ರಗಳಲ್ಲಿ ಈ ವರ್ಷ ಚುನಾವಣೆ ನಡೆದಿವೆ. ಅಮೆರಿಕದಲ್ಲಿ ಟ್ರಂಪ್ ಎರಡನೆಯ ಬಾರಿಗೆ ಅಧ್ಯಕ್ಷರಾಗಿ ಆಯ್ಕೆ ಆಗಿದ್ದಾರೆ. ವಿಶ್ವದ ಶೇ 49ರಷ್ಟು ಜನರು ಚುನಾವಣೆಗಳಲ್ಲಿ ಮತ ಚಲಾವಣೆ ಮಾಡಿದ್ದಾರೆ. ಹಲವು ದೇಶಗಳಲ್ಲಿ ಅಚ್ಚರಿಯ ಫಲಿತಾಂಶ ಬಂದಿದೆ. ಈ ಚುನಾವಣೆಗಳಲ್ಲಿ ಆಯ್ಕೆಯಾದ ನಾಯಕರು 2025 ಸೇರಿದಂತೆ ಮುಂದಿನ ದಿನಗಳಲ್ಲಿ ಜಾಗತಿಕ ಬೆಳವಣಿಗೆಗಳನ್ನು ದೊಡ್ಡ ಮಟ್ಟದಲ್ಲಿ ನಿಯಂತ್ರಿಸಲಿದ್ದಾರೆ ಎನ್ನಲಾಗುತ್ತಿದೆ.

ಅಮೆರಿಕದತ್ತ ಭಾರತದ ಚಿತ್ತ: ಜಗತ್ತಿನ ಅತಿ ದೊಡ್ಡ ಪ್ರಜಾತಾಂತ್ರಿಕ ರಾಷ್ಟ್ರವಾದ ಭಾರತದಲ್ಲಿ ನರೇಂದ್ರ ಮೋದಿ ಮೂರನೆಯ ಬಾರಿಗೆ ಪ್ರಧಾನಿಯಾದರು. ಬಿಜೆಪಿ ನೇತೃತ್ವದ ಎನ್‌ಡಿಎ ಕೂಟವು ಚುನಾವಣೆಯಲ್ಲಿ ಅತ್ಯಧಿಕ ಸ್ಥಾನಗಳನ್ನು ಗೆದ್ದಿದೆ. ‘ಇಂಡಿಯಾ’ ಕೂಟದ ಹೆಸರಿನಲ್ಲಿ ಸಂಘಟಿತವಾಗಿ ಎನ್‌ಡಿಎ ವಿರುದ್ಧ ಹೋರಾಡಿದ್ದ ವಿರೋಧ ಪಕ್ಷಗಳಲ್ಲಿ ವರ್ಷಾಂತ್ಯದ ಹೊತ್ತಿಗೆ ವಿಘಟನೆಯ ಮಾತುಗಳು ಕೇಳಿಬರುತ್ತಿವೆ.

ಇನ್ನೊಂದೆಡೆ, ಟ್ರಂಪ್ ಅವರ ಆಯ್ಕೆಯು ಜಾಗತಿಕ ಬೆಳವಣಿಗೆಗಳ ಮೇಲೆ ಪರಿಣಾಮ ಬೀರಲಿದೆ ಎನ್ನುವ ವಿಶ್ಲೇಷಣೆಗಳು ಕೇಳಿಬಂದಿವೆ. ‘ದೊಡ್ಡಣ್ಣ’ನ ಕೃಪಾಕಟಾಕ್ಷಕ್ಕೆ ಮತ್ತು ಅವಕೃಪೆಗೆ ಯಾರೆಲ್ಲಾ ಗುರಿಯಾಗಲಿದ್ದಾರೆ ಎನ್ನುವ ಬಗ್ಗೆ ಜಾಗತಿಕ ಮಟ್ಟದಲ್ಲಿ ಚರ್ಚೆಗಳು ನಡೆಯುತ್ತಿವೆ. ಮುಖ್ಯವಾಗಿ, ಭಾರತದ ವಿದ್ಯಾರ್ಥಿಗಳು ಮತ್ತು ಉದ್ಯೋಗಿಗಳ ಪಾಲಿಗೆ ಅಮೆರಿಕ ನೆಚ್ಚಿನ ತಾಣವಾಗಿದ್ದು, ಟ್ರಂಪ್ ಅವರ (ವೀಸಾ ನಿರ್ಬಂಧ ಇತ್ಯಾದಿ) ನೀತಿಯಿಂದ ಭಾರತಕ್ಕೆ ಕೊಂಚ ಹಿನ್ನಡೆಯಾಗುವ ಸಾಧ್ಯತೆ ಇದೆ.

ವ್ಯಾಪಾರ ಕ್ಷೇತ್ರದಲ್ಲೂ ಟ್ರಂಪ್ ಆಯ್ಕೆ ಗಮನಾರ್ಹ ಬದಲಾವಣೆಗಳಿಗೆ ಕಾರಣವಾಗಬಹುದು. ‘ಭಾರತವು ಅಮೆರಿಕದ ಉತ್ಪನ್ನಗಳ ಮೇಲೆ ಅತ್ಯಂತ ಹೆಚ್ಚಿನ ತೆರಿಗೆ ವಿಧಿಸುತ್ತಿದ್ದು, ಅದಕ್ಕೆ ಅನುಗುಣವಾಗಿ ನಾವೂ ತೆರಿಗೆ ವಿಧಿಸುತ್ತೇವೆ’ ಎಂದು ಇತ್ತೀಚೆಗಷ್ಟೇ ಟ್ರಂಪ್ ಬೆದರಿಕೆ ಒಡ್ಡಿದ್ದಾರೆ.

ಟ್ರಂಪ್ ಅಬ್ಬರ.. ಯಾರಿಗೆಲ್ಲ ವರ?

ಅಮೆರಿಕದ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಎರಡನೆಯ ಬಾರಿಗೆ ಆಯ್ಕೆ ಆಗಿರುವುದರಿಂದ ವಿಶ್ವದ ರಾಜಕೀಯ ಮತ್ತು ಆರ್ಥಿಕ ರಂಗಗಳಲ್ಲಿ ಮಹತ್ವದ ಬದಲಾವಣೆಗಳು ಘಟಿಸುವ ಸಾಧ್ಯತೆ ದಟ್ಟವಾಗಿದೆ. ಅಮೆರಿಕದ ಒಳಗೂ ಹೊರಗೂ ಭಾರಿ ಬದಲಾವಣೆ ತರುವುದಾಗಿ ಟ್ರಂಪ್ ಹೇಳಿದ್ದಾರೆ.

ಟ್ರಂಪ್ ಅವರ ಮೊದಲ ಅವಧಿಯಲ್ಲಿ ವಲಸೆ ನಿಯಂತ್ರಣದ ಸಂಬಂಧ ಹಲವು ಬಿಗಿ ನಿಯಮಗಳನ್ನು ರೂಪಿಸಿದ್ದರು. ಜತೆಗೆ, ಅಕ್ರಮವಾಗಿ ಅಮೆರಿಕ ಪ್ರವೇಶಿಸುವವರನ್ನು ತಡೆಯಲು ಕಠಿಣ ಕ್ರಮಗಳನ್ನು ಕೈಗೊಂಡಿದ್ದರು. ವಲಸೆ ದಾಖಲೆಗಳ ಕಾರಣಕ್ಕೆ ಪೋಷಕರು ಮತ್ತು ಮಕ್ಕಳನ್ನು ಕೂಡ ಬೇರ್ಪಡಿಸಿದ ಹಿನ್ನೆಲೆ ಇರುವ ಸ್ಟೀಫನ್ ಮಿಲ್ಲರ್ ಅವರನ್ನು ಟ್ರಂಪ್ ಶ್ವೇತಭವನಕ್ಕೆ ನೇಮಿಸಿರುವುದು ಈ ಬಾರಿಯೂ ಇಂಥವೇ ಕ್ರಮಗಳು ಪುನರಾವರ್ತನೆ ಆಗಲಿವೆ ಎನ್ನುವುದನ್ನು ಸೂಚಿಸುತ್ತವೆ.



ರಷ್ಯಾ ಜತೆ ಸ್ನೇಹವೋ ವೈರವೋ?

ರಷ್ಯಾ, ಜಗತ್ತಿನ ಮತ್ತೊಂದು ದೊಡ್ಡ ‘ಸೂಪರ್ ಪವರ್’. ಟ್ರಂಪ್ ಅವರು ಅಮೆರಿಕ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ರಷ್ಯಾದ ಮೇಲೆ ಯಾವ ರೀತಿಯ ಪರಿಣಾಮಗಳನ್ನು ಬೀರಬಹುದು ಎನ್ನುವುದನ್ನು ಈಗಲೇ ಹೇಳಲಾಗದು. ಈ ಬಾರಿ ಟ್ರಂಪ್ ಅವರಿಂದ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರಿಗೆ ಹೆಚ್ಚಿನ ನಿರೀಕ್ಷೆ ಇರುವಂತಿಲ್ಲ.

2016ರಲ್ಲಿ ಅಧ್ಯಕ್ಷರಾಗಿದ್ದ ಟ್ರಂಪ್ ಅವರಿಂದ ರಷ್ಯಾ ಹೆಚ್ಚು ನಿರೀಕ್ಷೆ ಹೊಂದಿತ್ತು. ಆದರೆ, ವಾಸ್ತವ ಅವರು ಊಹಿಸಿದ್ದಕ್ಕಿಂತ ಭಿನ್ನವಾಗಿತ್ತು. ಟ್ರಂಪ್ ವರ್ತನೆ ಬಿಗುವಿನಿಂದ ಕೂಡಿತ್ತು. ರಷ್ಯಾ ಮೇಲೆ ಅವರು ಹಲವು ನಿರ್ಬಂಧ ಹೇರಿದ್ದರು. ರಷ್ಯಾ–ಅಮೆರಿಕ ಸಂಬಂಧ ಮತ್ತಷ್ಟು ಹದಗೆಟ್ಟಿತ್ತು. ಹೀಗಾಗಿ ಈ ಬಾರಿ ರಷ್ಯಾ ಅಮೆರಿಕ ಬಗ್ಗೆ ಭಾರಿ ನಿರೀಕ್ಷೆಗಳನ್ನೇನೂ ಹೊಂದಿಲ್ಲವಾದರೂ ಹೆಚ್ಚಿನ ನಿರ್ಬಂಧಗಳನ್ನು ವಿಧಿಸದಿದ್ದರೆ ಅಷ್ಟೇ ಸಾಕು ಎನ್ನುವ ಭಾವನೆ ಹೊಂದಿದೆ. ಜತೆಗೆ, ಉಕ್ರೇನ್ ಯುದ್ಧ ಮತ್ತಿತರ ಕಾರಣಕ್ಕೆ ಪಶ್ಚಿಮವು ತನ್ನ ಮೇಲೆ ಹೇರಿರುವ ನಿರ್ಬಂಧಗಳನ್ನು ತೆಗೆದುಹಾಕಬೇಕು ಎಂದು ರಷ್ಯಾ ಪ್ರತಿಪಾದಿಸುತ್ತಿದೆ.



‘ಚೀನಾ ನಿರ್ಮಾತೃ’ ಟ್ರಂಪ್

ಜಗತ್ತಿನ ಆರ್ಥಿಕ ವ್ಯವಸ್ಥೆಯ ಮೇಲೆ ಅಮೆರಿಕ ಬಲವಾದ ಹಿಡಿತ ಹೊಂದಿದೆ. ‘ಅಮೆರಿಕ ಮೊದಲು’ ನೀತಿಯ ಪ್ರತಿಪಾದಕರಾದ ಟ್ರಂಪ್ ಅವರು ಅಮೆರಿಕದ ಅಧ್ಯಕ್ಷರಾಗಿ ಆಯ್ಕೆಯಾಗಿರುವುದರಿಂದ ಜಾಗತಿಕ ವ್ಯಾಪಾರ ಸಮರ ಉಂಟಾಗಲಿದ್ದು, ಹಲವು ರಾಷ್ಟ್ರಗಳ ಆರ್ಥಿಕತೆ ಮೇಲೆ ಪರಿಣಾಮ ಬೀರಲಿದೆ ಎನ್ನಲಾಗುತ್ತಿದೆ. ವ್ಯಾಪಾರ, ವಹಿವಾಟಿಗೆ ಸಂಬಂಧಿಸಿದ ನಿಯಮಗಳನ್ನು ಬಿಗಿಗೊಳಿಸುವ, ಅಮೆರಿಕದ ಉದ್ಯಮಗಳನ್ನು ರಕ್ಷಿಸಲು ಆಮದಿನ ಮೇಲೆ ಹೆಚ್ಚಿನ ಸುಂಕ ಹೇರುವ ಸೂಚನೆ ನೀಡಿದ್ದಾರೆ.

ಇನ್ನೊಂದೆಡೆ, ಹಲವು ಕ್ಷೇತ್ರಗಳಲ್ಲಿ ಅಮೆರಿಕದ ಪ್ರತಿಸ್ಪರ್ಧಿಯಾಗಿರುವ ಚೀನಾ ವಿಚಾರದಲ್ಲಿಯೂ ಟ್ರಂಪ್ ಇಂಥದ್ದೇ ನಿಲುವು ಪ್ರಕಟಿಸಿದ್ದಾರೆ. ದೇಶದ ವ್ಯಾಪಾರ ಕೊರತೆಯನ್ನು ಕಡಿಮೆ ಮಾಡಲು ಟ್ರಂಪ್ ತಮ್ಮ ಮೊದಲ ಅವಧಿಯಲ್ಲಿಯೇ ಚೀನಾದಿಂದ ಆಮದಾಗುತ್ತಿದ್ದ ವಸ್ತುಗಳ ಮೇಲೆ ಹೆಚ್ಚಿನ ಸುಂಕ ಹೇರಿದ್ದರು.

ಪ್ರಸ್ತುತ ಚೀನಾದ ಆರ್ಥಿಕ ಪರಿಸ್ಥಿತಿ ಕೂಡ ಉತ್ತಮವಾಗಿಲ್ಲ. ಅಲ್ಲಿನ ಯುವಜನರಲ್ಲಿ ನಿರುದ್ಯೋಗ ದರ ಅತಿ ಹೆಚ್ಚಾಗಿದೆ. ಇಂಥ ಸ್ಥಿತಿಯಲ್ಲಿ ಟ್ರಂಪ್ ಅವರ ಆಯ್ಕೆ ಚೀನಾದ ಪರಿಸ್ಥಿತಿ ಬಾಣಲೆಯಿಂದ ಬೆಂಕಿಗೆ ಹಾರಿದಂತಾಗಿದೆ. ಆದರೆ, ಇದರ ಮುನ್ಸೂಚನೆ ಇದ್ದ ಚೀನಾ, ಈ ದಿಸೆಯಲ್ಲಿ ಒಂದಷ್ಟು ಸಿದ್ಧತೆ ನಡೆಸಿದೆ. ಅಮೆರಿಕದಿಂದ ಆಗುವ ವ್ಯಾಪಾರದ ನಷ್ಟವನ್ನು ತುಂಬಿಸಿಕೊಳ್ಳಲು ವಿಶ್ವದ ಇತರ ರಾಷ್ಟ್ರಗಳ ಜತೆ ಸ್ನೇಹ ಸಂಬಂಧ ಉತ್ತಮಪಡಿಸಿಕೊಳ್ಳಲು ಚೀನಾ ಪ್ರಯತ್ನಿಸುತ್ತಿದೆ. ಭಾರತವೂ ಸೇರಿದಂತೆ ಆಸ್ಟ್ರೇಲಿಯಾ, ಆಗ್ನೇಯ ಏಷ್ಯಾ, ಕೊರಿಯಾ, ಜಪಾನ್ ಮುಂತಾದ ರಾಷ್ಟ್ರಗಳ ಜತೆಗೆ ಸ್ನೇಹ ಹಸ್ತ ಚಾಚಿದೆ. ಇದರ ಮೂಲಕ ವ್ಯಾಪಾರದ ಇತರ ವಿಧಗಳನ್ನು ಶೋಧಿಸುವ, ಹೊಸ ಮಾರುಕಟ್ಟೆ ಕಂಡುಕೊಳ್ಳುವ ಪ್ರಯತ್ನ ನಡೆಸಿದೆ. ತಮ್ಮ ಉತ್ಪನ್ನಗಳ ಮೇಲೆ ಟ್ರಂಪ್ ಅವರು ಹೆಚ್ಚಿನ ನಿರ್ಬಂಧ, ತೆರಿಗೆ ವಿಧಿಸಿದ್ದರಿಂದಾಗಿಯೇ ತಾವು ವ್ಯಾಪಾರದ ಹೊಸ ಮಾರ್ಗಗಳನ್ನು, ಹೊಸ ಮಾರುಕಟ್ಟೆಗಳನ್ನು ಹುಡುಕಿಕೊಳ್ಳಲು ಸಾಧ್ಯವಾಗಿದ್ದು ಎನ್ನುವುದು ಚೀನಾದ ಜನರ ಭಾವನೆ. ಹೀಗಾಗಿಯೇ ಚೀನಾದ ಜನರು ಟ್ರಂಪ್ ಅವರನ್ನು ‘ಚೀನಾ ನಿರ್ಮಾತೃ’ ಎಂದು ಕರೆಯುತ್ತಾರೆ ಎಂದು ಬಿಬಿಸಿ ವರದಿ ಮಾಡಿದೆ.

ಫ್ರಾನ್ಸ್, ಜರ್ಮನಿ ರಾಜಕೀಯ ಬಿಕ್ಕಟ್ಟು

ವಿಶ್ವದ ಎರಡು ದೊಡ್ಡ ಆರ್ಥಿಕತೆಗಳಾದ ಫ್ರಾನ್ಸ್, ಜರ್ಮನಿ ರಾಜಕೀಯ ಬಿಕ್ಕಟ್ಟಿನ ಸ್ಥಿತಿ ಎದುರಿಸುತ್ತಿವೆ. ಫ್ರಾನ್ಸ್‌ನಲ್ಲಿ ಈ ವರ್ಷದ ಜುಲೈನಲ್ಲಿ ನಡೆದಿದ್ದ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಬಹುಮತ ಬಂದಿರಲಿಲ್ಲ. ಅಲ್ಲಿಂದ ಇಲ್ಲಿಯವರೆಗೆ ಇಬ್ಬರು ಪ್ರಧಾನಿಗಳನ್ನು ಕಂಡಿದೆ. ಯೂರೊ ಕರೆನ್ಸಿ ವಲಯದ ಎರಡನೇ ಅತಿ ದೊಡ್ಡ ಆರ್ಥಿಕತೆಯಾದ ಫ್ರಾನ್ಸ್, ಆರ್ಥಿಕವಾಗಿಯೂ ಸಮಸ್ಯೆಗಳನ್ನು ಎದುರಿಸುತ್ತಿದೆ.

ಜರ್ಮನಿಯಲ್ಲೂ ಇದೇ ಕಥೆ. ಟ್ರಂಪ್ ಎರಡನೇ ಬಾರಿಗೆ ಆಯ್ಕೆ ಆದ ಸಂದರ್ಭದಲ್ಲೇ ಜರ್ಮನಿಯಲ್ಲಿ ಸರ್ಕಾರ ಪತನಗೊಂಡಿತ್ತು. ಅಲ್ಲಿ ಫೆಬ್ರುವರಿಯಲ್ಲಿ ಚುನಾವಣೆ ನಡೆಯಲಿದೆ. ಜರ್ಮನಿಯ ಆರ್ಥಿಕತೆ ಕೂಡ ಸಮಸ್ಯೆಗಳನ್ನು ಎದುರಿಸುತ್ತಿದೆ. ಯೂರೋಪ್‌ನ ಹೃದಯ ಭಾಗವಾದ ಈ ದೇಶಗಳಲ್ಲಿ ಅಸ್ಥಿರತೆ ಮನೆ ಮಾಡಿದೆ. ಟ್ರಂಪ್ ಈ ದೇಶಗಳ ವಸ್ತುಗಳ ಮೇಲೆ ಹೆಚ್ಚು ಸುಂಕ ವಿಧಿಸುವ ಸೂಚನೆ ಇದ್ದು, ಅದು ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುವ ಸಂಭವ ಇದೆ.

ಹವಾಮಾನ ಬದಲಾವಣೆ ತಡೆ ಕನಸೇ?

ಈ ವರ್ಷದಂತೆ 2025ರಲ್ಲೂ ವಾತಾವರಣದ ಉಷ್ಣತೆ ದಾಖಲೆ ಮಟ್ಟದಲ್ಲಿ ಹೆಚ್ಚೇ ಇರಲಿದೆ ಎಂದು ವಿಶ್ವ ಹವಾಮಾನ ಸಂಸ್ಥೆ ಎಚ್ಚರಿಸಿದೆ. ಜಾಗತಿಕ ಮಟ್ಟದಲ್ಲಿ ವಾತಾವರಣದ ಸರಾಸರಿ ಉಷ್ಣತೆಯು ಕೈಗಾರಿಕಾ ಪೂರ್ವ ಅವಧಿಯಲ್ಲಿದ್ದ ಉಷ್ಣಾಂಶದ ಮಟ್ಟಕ್ಕಿಂತ 1.5 ಡಿಗ್ರಿ ಸೆಲ್ಸಿಗಿಂತ ಹೆಚ್ಚು ಆಗಬಾರದು. ಆ ಮಿತಿಯ ಒಳಗೆಯೇ ಇರುವಂತೆ ನೋಡಿಕೊಳ್ಳಬೇಕು ಎಂಬ ಗುರಿಯನ್ನು ವಿಶ್ವಸಂಸ್ಥೆ ಹಾಕಿಕೊಂಡಿದೆ. 2015ರ ಪ್ಯಾರಿಸ್ ಒಪ್ಪಂದವೂ ಇದನ್ನೇ ಹೇಳುತ್ತದೆ. ಭಾರತ ಹಾಗೂ ಅಭಿವೃದ್ಧಿಶೀಲ ರಾಷ್ಟ್ರಗಳು ಈ ದಿಸೆಯಲ್ಲಿ ಕ್ರಮಗಳನ್ನು ಕೈಗೊಳ್ಳಲು ಸಿದ್ಧವಿದೆಯಾದರೂ, ಅಮೆರಿಕ, ಪಶ್ಚಿಮದ ರಾಷ್ಟ್ರಗಳು ಹಿಂದೇಟು ಹಾಕುತ್ತಿವೆ. ಟ್ರಂಪ್ ಅವರು ಹವಾಮಾನ ಬದಲಾವಣೆ ಪರಿಕಲ್ಪನೆಯ ವಿರುದ್ಧವಾಗಿ ಮಾತನಾಡಿದ್ದಾರೆ. ಹೀಗಿರುವಾಗ ಈ ಗುರಿಯನ್ನು ತಲುಪಲು ಸಾಧ್ಯವೇ ಎಂಬ ಪ್ರಶ್ನೆ ಉದ್ಭವವಾಗಿದೆ.

ಸಿರಿಯಾಕ್ಕೆ ಹೊಸ ಬೆಳಕು?

ಪಶ್ಚಿಮ ಏಷ್ಯಾ ರಾಷ್ಟ್ರವಾಗಿರುವ ಸಿರಿಯಾದಲ್ಲಿ 13 ವರ್ಷಗಳ ನಾಗರಿಕ ಯುದ್ಧ ಅಲ್ ಬಷರ್ ಅವರ ಆಡಳಿತ ಕೊನೆಗೊಳ್ಳುವುದರೊಂದಿಗೆ ಅಂತ್ಯಕಂಡಿದೆ. ಮಧ್ಯಂತರ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಅಲ್ಲೀಗ ಪರಿಸ್ಥಿತಿ ಸುಧಾರಿಸುತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೆ ತರುವ, ಹೊಸ ಸಂವಿಧಾನ ರಚಿಸುವ ಪ್ರಯತ್ನ ಆರಂಭವಾಗಿದೆ. ಮೂರು ವರ್ಷಗಳಲ್ಲಿ ದೇಶಕ್ಕೆ ಹೊಸ ಸಂವಿಧಾನ ರೂಪಿಸಲಾಗುವುದು, ಚುನಾವಣೆ ನಡೆಸಲು ನಾಲ್ಕು ವರ್ಷಗಳು ಬೇಕಾಗಬಹುದು ಎಂದು ಮಧ್ಯಂತರ ಸರ್ಕಾರದ ನೇತೃತ್ವ ವಹಿಸಿರುವ ಅಹ್ಮದ್ ಅಲ್–ಷರಾ ಹೇಳಿದ್ದಾರೆ. ನಾಗರಿಕ ಯುದ್ಧದಿಂದ ತತ್ತರಿಸಿದ್ದ ಸಿರಿಯಾಕ್ಕೆ 2024ರ ವರ್ಷಾಂತ್ಯದಲ್ಲಿ ನಡೆದ ಬೆಳವಣಿಗೆ ಹೊಸ ಬೆಳಕು ತೋರಿಸಿದ್ದು, 2025ರಲ್ಲಿ ಆ ಬೆಳಕು ಇನ್ನಷ್ಟು ಪ್ರಕಾಶಿಸುವ ಸಾಧ್ಯತೆ ಇದೆ.

ಭಾರತ–ಚೀನಾ: ಹೊಸ ಮಜಲಿಗೆ ಬಾಂಧವ್ಯ?

ಗಾಲ್ವನ್ ಕಣಿವೆಯಲ್ಲಿ 2020ರ ಜೂನ್‌ನಲ್ಲಿ ನಡೆದ ಸೇನಾ ಘರ್ಷಣೆಯ ನಂತರ ಹದಗೆಟ್ಟಿದ್ದ ಭಾರತ ಮತ್ತು ಚೀನಾ ಸಂಬಂಧವು, ಪೂರ್ವ ಲಡಾಖ್‌ನ ವಾಸ್ತವ ನಿಯಂತ್ರಣ ರೇಖೆಯಲ್ಲಿ (ದೆಪ್ಸಾಂಗ್ ಮತ್ತು ಡೆಮ್‌ಚೋಕ್ ಪ್ರದೇಶಗಳಲ್ಲಿ) ಹಿಂದಿನಂತೆಯೇ ಗಸ್ತು ತಿರುಗುವ ಸಂಬಂಧ ಈ ವರ್ಷ ಏರ್ಪಟ್ಟ ನಂತರ ಸುಧಾರಿಸಿದಂತೆ ಕಾಣುತ್ತಿದೆ. ಏಷ್ಯಾದ ಆಗ್ನೇಯ ಭಾಗದಲ್ಲಿ ಸ್ಥಿರತೆ ಕಾಣಿಸಿಕೊಳ್ಳಬೇಕಾದರೆ ಏಷ್ಯಾ ಖಂಡದ ಈ ಎರಡೂ ರಾಷ್ಟ್ರಗಳ ಉತ್ತಮ ಬಾಂಧವ್ಯ ಹೊಂದುವುದು ಅತ್ಯಂತ ಅವಶ್ಯಕ. ದಶಕಗಳಿಂದ ಎರಡೂ ರಾಷ್ಟ್ರಗಳ ನಡುವೆ ಸ್ಪಷ್ಟವಾಗಿ ಗಡಿ ಗುರುತಿಸದೇ ಇರುವುದರಿಂದ ಗಡಿ ವಿವಾದ ಆಗಾಗ ಭುಗಿಲೇಳುತ್ತಿರುತ್ತದೆ. ಇದು ಉಭಯ ರಾಷ್ಟ್ರಗಳ ನಡುವೆ ಅಪನಂಬಿಕೆಗೆ ಕಾರಣವಾಗಿದೆ.



ಪರಸ್ಪರ ವಿಶ್ವಾಸ ಮೂಡದೇ ಸಂಬಂಧ ಸುಧಾರಣೆ ಸಾಧ್ಯವಿಲ್ಲ ಎಂಬುದನ್ನು ಅರಿತಿರುವ ಎರಡೂ ರಾಷ್ಟ್ರಗಳು ಕೆಲವು ತಿಂಗಳುಗಳಿಂದ ಬಾಂಧವ್ಯ ಸುಧಾರಿಸುವತ್ತ ಮುನ್ನಡೆಯುತ್ತಿವೆ. ಈ ಹೊತ್ತಿನಲ್ಲೇ ಚೀನಾವು ಬ್ರಹ್ಮಪುತ್ರ ನದಿಗೆ ಜಗತ್ತಿನಲ್ಲೇ ಅತ್ಯಂತ ದೊಡ್ಡ ಅಣೆಕಟ್ಟು ನಿರ್ಮಿಸುವುದಾಗಿ ಘೋಷಿಸಿದೆ. ಜಮ್ಮು ಮತ್ತು ಕಾಶ್ಮೀರ ಭಾಗದಲ್ಲಿ ಚೀನಾ ಅತಿಕ್ರಮಿಸಿಕೊಂಡಿರುವ ಭಾರತದ ಭೂಭಾಗವಾದ ಅಕ್ಸಯ್ ಚಿನ್‌ನ ದೊಡ್ಡ ಭಾಗದ ಆಡಳಿತ ನಿರ್ವಹಣೆಗೆ ಕೌಂಟಿಯನ್ನು ರಚಿಸಿದೆ. ಆದರೆ, ಐದು ವರ್ಷಗಳಿಂದ ನಿಂತಿದ್ದ ಗಡಿ ವಿವಾದಕ್ಕೆ ಸಂಬಂಧಿಸಿದ ಮಾತುಕತೆ ಪುನರಾರಂಭವಾಗಿರುವುದು ಮತ್ತು ಪೂರ್ವ ಲಡಾಖ್‌ನಲ್ಲಿ ಗಸ್ತು ತಿರುಗುವ ಒಪ್ಪಂದ ಅನುಷ್ಠಾನಕ್ಕೆ ಬಂದಿರುವುದು ಹೊಸ ವರ್ಷದಲ್ಲಿ ಎರಡೂ ರಾಷ್ಟ್ರಗಳ ನಡುವಿನ ಬಾಂಧವ್ಯ ಇನ್ನೊಂದು ಮಜಲಿಗೆ ಏರುವ ನಿರೀಕ್ಷೆಯನ್ನು ಹುಟ್ಟುಹಾಕಿದೆ.

ಅಂತ್ಯ ಕಾಣುವುದೇ ಯುದ್ಧ?



ರಷ್ಯಾ–ಉಕ್ರೇನ್: ರಷ್ಯಾವು ಉಕ್ರೇನ್ ಮೇಲೆ 2022ರ ಫೆಬ್ರುವರಿ 24ರಂದು ಯುದ್ಧ ಸಾರಿದ ನಂತರ ಎರಡೂ ರಾಷ್ಟ್ರಗಳ ನಡುವೆ ನಡೆಯುತ್ತಿರುವ ಕದನ ನಿಂತಿಲ್ಲ. ಎರಡೂ ಕಡೆಗಳಲ್ಲಿ ಅಪಾರ ಪ್ರಮಾಣದಲ್ಲಿ ಸಾವು ನೋವು, ಆಸ್ತಿ ಹಾನಿ ಸಂಭವಿಸಿದೆ. ಎರಡು ಲಕ್ಷಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಯುದ್ಧ ನಿಲ್ಲಿಸಲು ವಿಶ್ವಸಂಸ್ಥೆ ನಡೆಸುತ್ತಿರುವ ಯತ್ನಗಳು ಫಲಪ್ರದವಾಗಿಲ್ಲ. ಜೋ ಬೈಡನ್ ನೇತೃತ್ವದ ಅಮೆರಿಕ ಆಡಳಿತ ಈವರೆಗೂ ಉಕ್ರೇನ್‌ಗೆ ಬೆಂಬಲ ನೀಡುತ್ತಾ ಬಂದಿದೆ.

ಹೊಸ ಅಧ್ಯಕ್ಷ ಟ್ರಂಪ್ ಮತ್ತು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ವೈಯಕ್ತಿಕ ಬಾಂಧವ್ಯ ಚೆನ್ನಾಗಿದೆ. ಟ್ರಂಪ್ ಚುನಾವಣೆ ಗೆಲುವಿನ ನಂತರ ಮಾಡಿದ ಭಾಷಣದಲ್ಲೂ ‘ನಾನು ಯುದ್ಧ ಮಾಡುವುದಿಲ್ಲ.. ಯುದ್ಧ ನಿಲ್ಲಿಸುತ್ತೇನೆ...’ ಎಂದು ಹೇಳಿದ್ದರು. ಇದಲ್ಲದೇ, ಟ್ರಂಪ್ ಸಹೋದ್ಯೋಗಿಗಳು ಉಕ್ರೇನ್ ವಿರುದ್ಧ ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಟ್ರಂಪ್ ಆಡಳಿತ ಈ ನಿಲುವಿಗೆ ಅಂಟಿಕೊಂಡರೆ, ಉಕ್ರೇನ್‌ಗೆ ಇದುವರೆಗೂ ಸಿಗುತ್ತಿದ್ದ ಅಮೆರಿಕದ ಬೆಂಬಲ ಕೈತಪ್ಪಿ, ಅದು ಶಾಂತಿ ಮಾತುಕತೆ ಒಪ್ಪುವುದು ಅನಿವಾರ್ಯವಾಗುತ್ತದೆ.

ಪಶ್ಚಿಮ ಏಷ್ಯಾ ಬಿಕ್ಕಟ್ಟು: 2023ರ ಅಕ್ಟೋಬರ್ 7ರಂದು ಹಮಾಸ್ ಬಂಡುಕೋರರು ಇಸ್ರೇಲ್ ಮೇಲೆ ದಾಳಿ ನಡೆಸಿದ ಕಾರಣಕ್ಕೆ ಆರಂಭವಾದ ಯುದ್ಧ ಒಂದೂಕಾಲು ವರ್ಷವಾದರೂ ನಿಂತಿಲ್ಲ. ಈ ಅವಧಿಯಲ್ಲಿ ಈ ಸಂಘರ್ಷವು ಹಮಾಸ್–ಲೆಬನಾನಿನ ಹಿಜ್ಬುಲ್ಲಾ ಸಂಘಟನೆ ನಡುವಿನ ಕಲಹ, ಇಸ್ರೇಲ್–ಇರಾನ್ ಮಧ್ಯದ ಘರ್ಷಣೆಗೂ ಕಾರಣವಾಗಿ ಬಿಕ್ಕಟ್ಟು ಪೂರ್ವ ಏಷ್ಯಾದ ವಿವಿಧ ರಾಷ್ಟ್ರಗಳಿಗೆ ಹರಡುವಂತೆ ಆಗಿದೆ. 43 ಸಾವಿರಕ್ಕೂ ಹೆಚ್ಚು ಜನರು ಮೃತಪಟ್ಟು, 25 ಲಕ್ಷಕ್ಕೂ ಹೆಚ್ಚು ಜನರು ನಿರಾಶ್ರಿತರಾಗಿದ್ದಾರೆ. ವಿಶ್ವಸಂಸ್ಥೆಯು ಇಸ್ರೇಲ್ ನಡೆಸುತ್ತಿರುವ ಯುದ್ಧಾಪರಾಧದ ಬಗ್ಗೆ ನಿರಂತರವಾಗಿ ಎಚ್ಚರಿಸುತ್ತಿದ್ದರೂ ಜಗತ್ತು ಮೌನವಾಗಿದೆ. ಟ್ರಂಪ್ ಅವರು ಎಲ್ಲ ಯುದ್ಧ ನಿಲ್ಲಿಸುತ್ತೇನೆ ಎಂದು ಹೇಳಿರುವುದು, ಪೂರ್ವ ಏಷ್ಯಾದಲ್ಲಿ ಕದನಕ್ಕೆ ವಿರಾಮ ಸಿಗುವ ನಿರೀಕ್ಷೆಯನ್ನು ಹುಟ್ಟಿಸಿದೆ.

ಸಿನಿ ಬಿಟ್ಸ್

2025ರ ಡಿಸೆಂಬರ್‌ಗೆ ‘ಪರಾಕ್’



ಹಾಲೇಶ್, ಶ್ರೀಮುರಳಿ

‘ಬಘೀರ’ ಚಿತ್ರದ ಯಶಸ್ಸಿನ ಬೆನ್ನಲ್ಲೇ ನಟ ಶ್ರೀಮುರಳಿ ಅವರ ಹೊಸ ಪ್ರಾಜೆಕ್ಟ್ ಘೋಷಣೆಯಾಗಿದೆ. ಹಾಲೇಶ್ ಕೋಗುಂಡಿ ಆ್ಯಕ್ಷನ್ ಕಟ್ ಹೇಳಲಿರುವ ‘ಪರಾಕ್’ ಸಿನಿಮಾ 2025ರ ಮಾರ್ಚ್‌ನಲ್ಲಿ ಸೆಟ್ಟೇರಲಿದ್ದು, ಡಿಸೆಂಬರ್‌ನಲ್ಲಿ ತೆರೆಕಾಣಲಿದೆ.

ಇತ್ತೀಚೆಗೆ ಚಿತ್ರದ ಹೊಸ ಪೋಸ್ಟರ್ ಬಿಡುಗಡೆಯಾಗಿದೆ. ಒಂದು ಕೈಯಲ್ಲಿ ಗನ್ ಹಿಡಿದು ನಡೆಯುತ್ತಿರುವ ಶ್ರೀಮುರಳಿ ಬೆನ್ನಿಗೆ ಸ್ನೈಪರ್ ಹಾಕಿಕೊಂಡು ಪ್ರೇಕ್ಷಕರೆದುರಿಗೆ ಬಂದಿದ್ದಾರೆ. ಒಂದಷ್ಟು ಕಿರುಚಿತ್ರಗಳನ್ನು ನಿರ್ದೇಶಿಸಿರುವ ಅನುಭವವಿರುವ ಹಾಲೇಶ್‌ಗೆ ‘ಪರಾಕ್’ ಸಿನಿಮಾ ನಿರ್ದೇಶಕರಾಗಿ ಮೊದಲ ಹೆಜ್ಜೆ. ದೊಡ್ಡ ಬಜೆಟ್ ಸಿನಿಮಾ ಇದಾಗಿದ್ದು ದೊಡ್ಡ ತಾರಾಗಣವಿರಲಿದೆ ಎಂದು ಚಿತ್ರತಂಡ ತಿಳಿಸಿದೆ. ಬ್ರ್ಯಾಂಡ್ ಸ್ಟುಡಿಯೋಸ್ ಬ್ಯಾನರ್‌ನಡಿ ಈ ಸಿನಿಮಾ ನಿರ್ಮಾಣವಾಗುತ್ತಿದೆ. ಹಾಲೇಶ್‌ಗೆ ಮಂಜುನಾಥ್ ಬರವಣಿಗೆಯಲ್ಲಿ ಜೊತೆಯಾಗಿದ್ದಾರೆ. ಆ್ಯಕ್ಷನ್ ಸಸ್ಪೆನ್ಸ್ ಥ್ರಿಲ್ಲರ್ ಜಾನರ್‌ನಲ್ಲಿ ಈ ಸಿನಿಮಾವಿದೆ.

ಜ.24ಕ್ಕೆ ರಾಯಲ್ ಬಿಡುಗಡೆ



ಸಂಜನಾ, ವಿರಾಟ್


ಜಯಣ್ಣ ಕಂಬೈನ್ಸ್ ಬ್ಯಾನರ್‌ನಡಿ ಜಯಣ್ಣ ಮತ್ತು ಭೋಗೇಂದ್ರ ಜೊತೆಯಾಗಿ ನಿರ್ಮಿಸಿರುವ, ದಿನಕರ್ ತೂಗುದೀಪ ನಿರ್ದೇಶನದ ‘ರಾಯಲ್’ ಸಿನಿಮಾ ಜ.24ರಂದು ಬಿಡುಗಡೆಯಾಗಲಿದೆ.

‘ಕಿಸ್’ ಚಿತ್ರದ ಮೂಲಕ ಚಂದನವನಕ್ಕೆ ಹೆಜ್ಜೆ ಇಟ್ಟಿದ್ದ ನಟ ವಿರಾಟ್ ಈ ಚಿತ್ರದಲ್ಲಿ ನಾಯಕನಾಗಿ ಅಭಿನಯಿಸಿದ್ದು, ‘ಸಲಗ’ ಖ್ಯಾತಿಯ ಸಂಜನಾ ನಾಯಕಿಯಾಗಿದ್ದಾರೆ. ಈಗಾಗಲೇ ಚಿತ್ರದ ಮೂರು ಹಾಡುಗಳು ಬಿಡುಗಡೆಯಾಗಿದ್ದು, ಜನವರಿ ಎರಡನೇ ವಾರದಲ್ಲಿ ಚಿತ್ರದ ಟ್ರೇಲರ್ ರಿಲೀಸ್ ಆಗಲಿದೆ ಎಂದಿದೆ ಚಿತ್ರತಂಡ.

‘ರಾಯಲ್’ ಕುರಿತು ಮಾತನಾಡಿದ ದಿನಕರ್ ತೂಗುದೀಪ, ‘ಚಿತ್ರ ಚೆನ್ನಾಗಿ ಮೂಡಿಬರುವುದಕ್ಕೆ ಕಥೆಗಾರ ರಘು ನಿಡುವಳ್ಳಿ ಕಾರಣ. ಸಂಭಾಷಣೆಯನ್ನೂ ಅವರೇ ಬರೆದಿದ್ದಾರೆ. ವಿರಾಟ್ ಎರಡನೇ ಸಿನಿಮಾಗೇ ಇಷ್ಟೊಂದು ಖರ್ಚು ಮಾಡಬೇಕಿತ್ತಾ ಎಂದೆನಿಸಬಹುದು. ಆದರೆ ಚಿತ್ರದಿಂದ ದುಡ್ಡು ಮಾಡಬೇಕು ಎನ್ನುವುದಕ್ಕಿಂತ, ಚಿತ್ರರಂಗಕ್ಕೊಬ್ಬ ಒಳ್ಳೆಯ ಹೀರೊ ಕೊಡಬೇಕು ಎನ್ನುವ ದೃಷ್ಟಿಯಿಂದ ನಿರ್ಮಾಪಕರು ಹಣ ಹಾಕಿದ್ದಾರೆ. ಬೆಂಗಳೂರು, ಮೈಸೂರು, ಮಂಗಳೂರು, ಗೋವಾ ಮುಂತಾದೆಡೆ ಚಿತ್ರೀಕರಣ ನಡೆಸಲಾಗಿದೆ’ ಎಂದರು. ರಘು ಮುಖರ್ಜಿ, ಛಾಯಾ ಸಿಂಗ್, ಅಚ್ಯುತ್ ಕುಮಾರ್, ರಂಗಾಯಣ ರಘು, ಪ್ರಮೋದ್ ಶೆಟ್ಟಿ, ರವಿ ಭಟ್, ಗೋಪಾಲಕೃಷ್ಣ ದೇಶಪಾಂಡೆ ಮುಂತಾದವರು ತಾರಾಬಳಗದಲ್ಲಿದ್ದಾರೆ. ಚಿತ್ರಕ್ಕೆ ಸಂಕೇತ್ ಛಾಯಾಚಿತ್ರಗ್ರಹಣ, ಚರಣ್ ರಾಜ್ ಸಂಗೀತ, ಕೆ.ಎಂ. ಪ್ರಕಾಶ್ ಸಂಕಲನ, ಮೋಹನ್ ಬಿ. ಕೆರೆ ಕಲಾ ನಿರ್ದೇಶನ, ರವಿವರ್ಮ ಸಾಹಸ ನಿರ್ದೇಶನವಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ದೇವರು ಎಲ್‌ಐಸಿ ಸಂಸ್ಥೆಯಲ್ಲ!

ನುಡಿ ಬೆಳಗು 99



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ಈ ವಿಸ್ಮಯ ಜಗತ್ತಿಗೆ ಜೀವಿಗಳು ಹೇಗೆ ಬಂದ್ವು? ಆನ್‌ಲೈನ್‌ನಲ್ಲಿ ಅಪ್ಲಿಕೇಷನ್ ಹಾಕಿ ಬಂದ್ವಾ? ಅಥವಾ ಗೂಗಲ್ ಅರ್ಥ್‌ನಲ್ಲಿ ಹುಡುಕಿ ಇಲ್ಲಿಯೇ ಹುಟ್ಟಬೇಕು ಅಂತ ನಿರ್ಧರಿಸಿ ಬಂದ್ವಾ? ಹ್ಯಾಂಗ್ ಬಂದ್ವು? ಇದ್ಯಾವುದೂ ಇಲ್ಲ. ಅರಿಯದ ಅಜ್ಞಾತ ಸ್ಥಳಕ್ಕೆ ಗೊತ್ತಿಲ್ಲದೆ ಬಂದಿದ್ದೇವೆ. ಮೊದಲೇ ಗೊತ್ತಿಲ್ಲದ ಜಗತ್ತು, ಇಂತಹ ಸ್ಥಳಕ್ಕೆ ಬಂದು ನಮ್ಮ ಆಯುಷ್ಯ ಇರುವ ತನಕ ನಾವು ಮಾಡಿದ್ದೇನು? ಜಕಣಾಚಾರಿಯ ಕಲೆಗೆ ನಾವು ಉಳಿ ಆಗ್ಯಾವೇನು? ಬುದ್ಧನ ಭಿಕ್ಷಾಪಾತ್ರೆಯಾಗಿದ್ದೇವೇನು? ಒಬ್ಬ ಶ್ರೇಷ್ಠ ಸಂಗೀತಗಾರನ ರಾಗವಾಗಿ ಹೊರಗೆ ಬಂದೇವೇನು? ಶರಣರ ವಚನವಾದೇವೇನು? ಸಂತರ ಅಭಂಗಕ್ಕೆ ಒಂದು ಅಕ್ಷರವಾದೇವೇನು?

ಏನು ಆಗೇವಿ ಅಂತ ಒಂದು ಕ್ಷಣ ವಿಚಾರ ಮಾಡಬೇಕಲ್ಲ ಮನುಷ್ಯ. ಎಮ್ಮೆ, ಕುರಿ ಮುಂತಾದ ಪ್ರಾಣಿಗಳ ಚರ್ಮ ವಾದ್ಯಗಳಾಗುತ್ತವೆ. ಒಂದು ಮರ ನೂರು ವರ್ಷ ಬಾಳಿ ಬಿದ್ದರೂ ಇನ್ನೂ ಒಂದು ನೂರು ವರ್ಷ ಮನೆಗೆ ತೊಲೆಯಾಗುತ್ತದೆ. ಮನುಷ್ಯ ಬಂದು ಏನು ಮಾಡಿದ್ದಾನೆ? ಡಿವಿಜಿಯವರು ‘ಹಸುವಾಗು, ಹಿಸುವಾಗು’ ಅಂತ ಹೇಳುತ್ತಾ ಏನೂ ಆಗದಿದ್ದರೆ ಕಸಬರಿಗೆಯಾಗು ಮಂಕುತಿಮ್ಮ ಎಂದು ಹೇಳುತ್ತಾರೆ.

ಊರಾಗೆ ಒಬ್ಬ ಗೌಡ ಇದ್ದ. ಅವ ಇಲ್ಲದೆ ಯಾವುದೇ ಕಾರ್ಯಕ್ರಮ ನಡೀತಿರಲಿಲ್ಲ. ಒಂದಿನ ಅವ ಸತ್ತ. ಆಗ ಜನ ಗೌಡ್ರು ಫೇಲಾದರು ಅಂತಾರೆ. ಯಾಕೆ ಫೇಲಾದರು? ಹಾರ್ಟ್ ಫೇಲಾತು, ಇಲ್ಲಾ ಕಿಡ್ನಿ ಫೇಲಾತು ಅದಕ್ಕೆ ಫೇಲಾದರು. ನೀವು ವಿಚಾರ ಮಾಡಿ. ಯಾವುದೇ ಬಸ್ ನಿಲ್ದಾಣಕ್ಕೆ ಹೋಗಿ ಯಾವುದಾದರೂ ಊರಿನ ಬಸ್ ಹೋತೇನು ಅಂತ ಕೇಳಿದರೆ ಜಸ್ಟ್ ಪಾಸಾತ್ರಿ ಅಂತಾರ. ಬಸ್ ಪಾಸಾತು, ಗೌಡರು ಫೇಲಾದರು ಯದಕ್ಕ? ಮನುಷ್ಯ ಏನು ಮಾಡಿದರೆ ಪಾಸಾಗ್ತಾನ? ಮನುಷ್ಯ ಹುಟ್ಟಿನಿಂದ ಸಾವಿನವರೆಗೆ ಮಾಡಿದ್ದು ಇಷ್ಟೆ, ಗುಡಿಗುಂಡಾರಗಳಿಗೆ ಓಡಾಡಿದ್ದು ಮಠ ಮಂದಿರಕ್ಕೆ ಹೋಗಿದ್ದು, ಜ್ಯೋತಿಷಿಗಳ ಮನೆಗೆ ಹೋಗಿದ್ದು, ಎಲ್ಲವೂ ‘ನಾನು ಶ್ರೀಮಂತ ಆಗಬೇಕು ಮತ್ತು ನನಗೆ ಬಂದ ಶ್ರೀಮಂತಿಕೆ ಹೊರಟು ಹೋಗಬಾರದು ಎನ್ನುವುದಕ್ಕೆ ಅಷ್ಟೆ. ಎಲ್ಲರಿಗೂ ದೀಪಹಚ್ಚಿದ್ದು ಇದರ ಸಲುವಾಗೆ ಮತ್ತು ಮಂದಿ ಮನೆ ದೀಪ ಆರಿಸಿದ್ದೂ ಇದರ ಸಲುವಾಗೆ. ಮತ್ತೆ ಇದನ್ನು ಚೆನ್ನಾಗಿ ಕಲಿಸ್ತಾರ. ಯಾವುದಾದರೂ ಮನೆಯಲ್ಲಿ ಮಗುವಾತು ಅಂದ್ರ ಮಾರಿ ನೋಡೋಕೆ ಹೋದವರು ಭಸ್ಮದ ಉಂಡೆ ಕೊಟ್ಟಾರ, ವಚನದ ಪುಸ್ತಕ ಕೊಟ್ಟಾರ ಇಲ್ಲ, ಮಾರಿ ನೋಡಿ ರೊಕ್ಕ ಕೊಟ್ಟು ಬಂದಾರ.

ಮಗು ಸ್ವಲ್ಪ ದೊಡ್ಡದಾಗಿ ಅಳಾಕೆ ಶುರುಮಾಡಿದಾಗ ಸುಮ್ಮನಿರು ಪೈಸಾ ಕೊಡ್ತೀನಿ ಅಂತಾರ. ಹುಡುಗ ಇನ್ನೂ ದೊಡ್ಡವ ಆದಮ್ಯಾಲೆ ಕನ್ಯಾ ನೋಡೋಕೆ ಹೋದಾಗಲೂ ಕೇಳಿದ್ದು ಇದೇ ರೊಕ್ಕ. ಲಗ್ನ ಆದಮ್ಯಾಲೆ ಹೊಡೆದಾಟ ಬಡಿದಾಟ, ಸಂಘರ್ಷ ಶುರುವಾಗಿದ್ದೂ ಇದೇ ಪೈಸೆ ಸಲುವಾಗಿನೆ. ಮುಂದೊಂದು ದಿನ ಜೀವ ಹೋಗಾಕ ಬಂದಾಗ ಅಳಕೋತ ಕುಂತು. ಯಾಕಂದರ ನಾನು ಕಷ್ಟಪಟ್ಟು ದುಡಿದ ಆ ಪೈಸೆನೇ ಕೈಕೊಡ್ತು ಅಂತ. ಈ ಪೈಸೆ ಜೀವನಾದಾಗ ಏನೇನೆಲ್ಲ ಮಾಡ್ತೈತಿ. ದೇವರಿಗೆ ಯಾಕೆ ದೀಪ ಹಚ್ಚತೀವಿ, ದೇವರಿಗೆ ಯಾಕೆ ನೈವೇದ್ಯ ಇಟ್ಟೇವಿ. ಎಲ್ಲಾ ಈ ಪೈಸೆಗಾಗಿಯೆ. ನೂರಾ ಒಂದು ರೂಪಾಯಿ ಕಾಣಿಕೆ ಹಾಕಿ ನಮ್ಮ ಮಕ್ಕಳು ಮೊಮ್ಮಕ್ಕಳು ಶ್ರೀಮಂತರಾಗುವಂತೆ ಹರಸು ದೇವರೇ ಎಂದು ಬೇಡಿಕೊಳ್ಳುತ್ತೀವಿ. ಹೀಗೆ ಕೊಡಲು ದೇವರೇನು ಎಲ್‌ಐಸಿ ಸಂಸ್ಥೆ ಏನು?

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಡಿಸೆಂಬರ್ 31, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ಪ್ರತಿಪದ್ ಗಂ. 27-22 ನಕ್ಷತ್ರ: ಪೂರ್ವಾಷಾಢ ಗಂ, 24-04 ಯೋಗ: ಧ್ರುವ ಗಂ. 18-59 ಕರಣ: ಕಿಂಸ್ತುಘ್ನ ಗಂ. 15-43, ಧನು ಮಾಸದ 15 ನೇ ದಿನ, ಮಳೆನಕ್ಷತ್ರ: ಪೂರ್ವಾಷಾಢ 1.
ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-57 ಸೂರ್ಯಾಸ್ತ : 06-11
ಮುಸ್ಲಿಂ ದಿನಾಂಕ : 28 ಜುಮಾದುಸ್ಸಾನಿ , ದಿನ ವಿಶೇಷ : ಹೊಸ ವರ್ಷದ ಹಿಂದಿನ ದಿನ (ಕ್ರಿಶ್ಚಿಯನ್), ಅದೃಷ್ಟ ಸಂಖ್ಯೆ : 3, 4

ಮೇಷ: ಹಣಕಾಸಿನ ಕೊರತೆ ಇರುವುದಿಲ್ಲ. ಆದರೆ ವಿದೇಶಿ ವಸ್ತುಗಳ ಖರೀದಿಗಾಗಿ ಧನ ವ್ಯಯವಾಗುವುದನ್ನು ಕಡಿಮೆ ಮಾಡುವುದು ಉತ್ತಮ. ಸಾಧಿಸಲೇಬೇಕೆಂಬ ಛಲವಿರುವ ಕಾರ್ಯಗಳೆಲ್ಲವೂ ಸಿದ್ಧಿಸಲಿದೆ.

ವೃಷಭ: ಬದುಕಿನ ಸಾರ ತಿಳಿಯುವುದು ಬಹಳ ವಿಚಾರವಾದ ವಿಷಯವಾದರೂ ಅದರ ಬಗ್ಗೆ ಹೆಚ್ಚಿನ ಆಲೋಚನೆ ಬೇಡ. ಹೈನು ವ್ಯವಸಾಯದಲ್ಲಿ ಆದಾಯ ವೃದ್ಧಿ. ಲೆಕ್ಕಪರಿಶೋಧಕರಿಗೆ ಆದಾಯದಿಂದ ತೃಪ್ತಿ ಉಂಟಾಗುವುದು.

ಮಿಥುನ: ಉದಾತ್ತ ಚಿಂತನೆಯ ಲಾಭವನ್ನು ಸುತ್ತಮುತ್ತಲಿನವರು ಪಡೆಯುವ ಸುದಿನ. ಬುದ್ಧಿವಂತಿಕೆಯಿಂದ ಕೆಲಸ ಕಾರ್ಯಗಳಲ್ಲಿ ಯಶಸ್ಸು ಗಳಿಸಿಕೊಳ್ಳುವಿರಿ. ಸಮಯದಲ್ಲಿ ಸಣ್ಣ ವಿಹಾರಕ್ಕೆ ತೆರಳುವಿರಿ.

ಕರ್ಕಾಟಕ: ಸ್ನೇಹಪರ ಸ್ವಭಾವದಿಂದಾಗಿ ವೈಯಕ್ತಿಕ ಸ್ಥಾನಮಾನಗಳು ಲಭಿಸುವುದು. ಧನಾಗಮನ ನಿರಂತರವಾಗಿ ಇರಲಿದೆ. ನಗದು ವ್ಯವಹಾರವನ್ನು ಮಾಡುವಲ್ಲಿ ಮೋಸ ಹೋಗುವ ಸಾಧ್ಯತೆಗಳಿದೆ.

ಸಿಂಹ: ಪದವೀಧರರಿಗೆ ತಮ್ಮ ಉದ್ಯೋಗದ ಅನ್ವೇಷಣೆಯಲ್ಲಿ ಹೊಸ ರೀತಿಯ ಬೆಳವಣಿಗೆ ಕಂಡು ಬರಲಿದೆ. ಕೆಲವು ನೀತಿ ನಿರ್ಬಂಧಗಳಿಂದ ಸಮಾಜದಲ್ಲಿ ಒಂಟಿಯಾಗಿರಬೇಕಾಗುತ್ತದೆ. ಹಳದಿ ವಸ್ತ್ರವು ಇಂದು ಶುಭ ತರಲಿದೆ.

ಕನ್ಯಾ: ರಾಜಕೀಯ ಕ್ಷೇತ್ರದಲ್ಲಿ ಇರುವವರು ಈ ದಿನ ಪಕ್ಷ ಬಲಪಡಿಸಲು, ಅನುಯಾಯಿಗಳನ್ನು ಸಂಪಾದಿಸಿಕೊಳ್ಳಲು ಸಾಮಾಜಿಕ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗುತ್ತದೆ. ದಂತವೈದ್ಯ ವೃತ್ತಿಯವರಿಗೆ ಅನುಕೂಲ ದಿನವಾಗಿದೆ.

ತುಲಾ: ಭಾವನೆಗಳ ಜತೆಗೆ ಅಭಿಪ್ರಾಯವು ಬದಲಾಗುವ ಕಾಲ ಇದಾಗಿದೆ. ಯಾವುದೇ ವಿಷಯದಲ್ಲಿ ನಿರ್ಧಾರ ತೆಗೆದುಕೊಳ್ಳುವುದು ಸರಿಯಲ್ಲ. ರೋಮಾಂಚನಕಾರಿ ವಿಷಯಗಳು ನಿಮಗಾಗಿ ಕಾದಿವೆ.

ವೃಶ್ಚಿಕ: ವೈವಾಹಿಕ ವಿಚಾರದಲ್ಲಿ ಮನೋಭಿಲಾಷೆಗಳನ್ನು ವ್ಯಕ್ತಪಡಿಸಲು ಹಿಂಜರಿಯಬೇಡಿ. ವಿಶೇಷವಾದ ಶಕ್ತಿ ಪ್ರಕಾಶಿಸಲಿದೆ. ಅಚ್ಚರಿಯನ್ನು ಉಂಟು ಮಾಡಬಹುದು. ಶೀತ ಬಾಧೆಯ ಸಾಧ್ಯತೆ ಇದೆ.

ಧನು: ಧನಾಗಮನ ಉತ್ತಮವಾಗಿರುವುದರಿಂದ ಸಾಲದಿಂದ ಮುಕ್ತಿ ಪಡೆಯುವಿರಿ. ವೈಯಕ್ತಿಕ ಸಮಸ್ಯೆಗಳು ಬಗೆಹರಿಯಲಿವೆ. ಮನೋಭಿಲಾಷೆಯಂತೆ ಸಂಘ ಸಂಸ್ಥೆಗಳ ಅಧಿಕಾರ ಪ್ರಾಪ್ತಿಯಾಗಲಿದೆ.

ಮಕರ: ಬಹುದಿನಗಳಿಂದ ಕೂಡಿಟ್ಟ ಹಣದಿಂದ ಬಂಗಾರ ಖರೀದಿಸುವ ಮನಸ್ಸಾಗುವುದು. ಅಂತೆಯೇ ಮಾಡುವುದರಿಂದ ಲಾಭ ಹೊಂದುವಿರಿ. ರಕ್ಷಣೆ ದೃಷ್ಟಿಯಿಂದ ತಪ್ಪುಗಳನ್ನು ಮಾಡಬೇಕಾದ ಪರಿಸ್ಥಿತಿ ಬರುವುದು.

ಕುಂಭ: ಪಾಲುದಾರಿಕೆಯಲ್ಲಿ ನಿರೀಕ್ಷೆಗೂ ಮೀರಿದ ಲಾಭವಾದರೂ ದೊಡ್ಡ ಮೊತ್ತದ ಅಥವಾ ಹೆಚ್ಚಿನ ಜವಾಬ್ದಾರಿಯ ಕೆಲಸದಲ್ಲಿ ವಿಘ್ನಗಳು ಎದುರಾಗಲಿವೆ. ಸಂಸಾರದ ವಿಷಯಗಳತ್ತ ಹೆಚ್ಚು ಗಮನ ಹರಿಸಬೇಕಾಗಲಿದೆ.


ಮೀನ: ಬಂಧುಗಳ ನೆರವಿನಿಂದ ಬರಬೇಕಿದ್ದ ಹಳೆಯ ಬಾಕಿ ಹಣ ಕೈ ಸೇರಲಿದೆ. ಸುಖ ನೆಮ್ಮದಿಯ ಭಾವವನ್ನು ಕಾಣಲಿದ್ದೀರಿ. ಹಣಕಾಸಿನ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಯಶಸ್ವಿಯಾಗುವಿರಿ.

ಪದಬಂಧ 5908

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಯಜ್ಞ ಪುರೋಹಿತನನ್ನು ಹೀಗೂ ಕರೆವರು (3)
4.ಭವದಲ್ಲಿ ಕೊನೆಗೊಂಡಿರುವ ಹುಟ್ಟು (3)
6.ವಂಚನೆಯ ಯುಕ್ತಿಯಿದು (5)
7.ಭವನದ ಮೇಲಿಂದ ನೋಡಿರುವ ಆಕಾಶ (2)
9.ಮಾನವನಲ್ಲಿ ಹೊಸತು ಕಾಣುತಿದೆ (2)
10.ಗುರುವಿಗೆ ತಕ್ಕನಾದ ವಿದ್ಯಾರ್ಥಿ (2)
11.ಸುಪ್ರಭಾತದ ಹೊತ್ತಿನಲ್ಲಿ ಬಂದಿರುವ ಮಗ (2)
13.ಅಳಿಯನನ್ನು ಮನೆಯಲ್ಲಿಯೇ ಇರಿಸಿಕೊಳ್ಳುವುದು (5)
16.ಮಸ್ತಿಷ್ಕ ಇಲ್ಲಿದೆ (3)
17.ಪುನಃ ಪುನಃ ಬಂದಿರುವ ಸ್ಮರಣೆ (3)

ಮೇಲಿಂದ ಕೆಳಕ್ಕೆ
1.ವರ್ಷದ ಎರಡೆರಡು ತಿಂಗಳುಗಳ ಅವಧಿ (4)
2.ಒತ್ತಾಸೆಯು ಇಲ್ಲಿ ತಿರುವುಮುರುವಾಗಿದೆ (3)
3.ಕಣ್ಣು ಇಲ್ಲಿ ಉಲ್ಟಾ ಕಾಣಿಸುತ್ತಿದೆಯಲ್ಲಾ? (3)
4.ಶಯನದ ಸಮಯದಲ್ಲಿ ಬಂದಿರುವ ಅನುಮಾನ (3)
5.ಅರವತ್ತು ವರ್ಷದ ಹುಟ್ಟಿದ ಹಬ್ಬ (4)
8.ಮುಂದೆ ಬರಲಿರುವ ಕಾಲ (3)
9.ಸ್ವಪ್ನವಿಲ್ಲಿ ನಿಜವಾಗಿದೆ (3)
10.ತಲೆ ಬರಹವಿದು (4)
12.ಕನ್ನಡಿಗ ಧರಿಸಿದ ಹೆಲ್ಮೆಟ್! (4)
13.ಮರದ ಬಳಿಯಿರುವ ಉಸುಕು (3)
14.ಚನ್ನಾಗಿ ಮಾತನಾಡುವವನು (3)
15.ಮೂಲೆಮನೆಯ ಮಾದರಿ (3)



5907ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಆಯವ್ಯಯ 3.ಹಬೆ 6.ರಜತ 7.ವಾದಸರಣಿ 9.ಕೆರ 10.ಜಾಗ 11.ಸಮಕಾಲೀನ 12.ಮಳೆ 13.ತೂತು 15.ಬದಲುಮಾತು 17.ಕನ್ನಡ 18.ಗಿಣ್ಣು 19.ಬೆಂಗಳೂರು

ಮೇಲಿಂದ ಕೆಳಕ್ಕೆ: 1.ಅನಾಮಿಕೆ 2.ವ್ಯಯುವಾ 4.ಬೆರಣಿ 5.ಅಂತರಂಗ 8.ಸರ್ಪಕಾವಲು 12.ಮಧುಕರಿ 14.ತುಮಕೂರು 15.ಬಡಗಿ 16.ತುರಗ

ಸುಡೊಕು 6293

3	7	6		4				9
	9			7		3		
7	8			2			5	3
			4		5			7
6		5		8			2	
		7					9	5
	5	2			7			
9		1		5	8	2		4


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6292 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,813
ಇಂದಿನ ಅಂತ್ಯ	23,644
▼	168
ದಿನದ ಕನಿಷ್ಠ	23,599

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ




ಬೆಂಗಳೂರು	
100ಕ್ಕೆ	₹580
12 ಕ್ಕೆ	₹80
ಮೈಸೂರು	
100ಕ್ಕೆ	₹580

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹305-645
ದ್ವಿತಳಿ (ಬಿ.ವಿ)	₹333-760

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹185
ಆರ್‌ಎಸ್‌ಎಸ್-5	₹180
ಗುಡ್ ಲಾಟ್	₹174

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1480 (1480)
ಸೋಯಾ (ರಿಫೈನ್ಡ್)	₹1280 (1270)
ಸೂರ್ಯಕಾಂತಿ (ರಿಫೈನ್ಡ್)	₹1370 (1355)
ಪಾಮೋಲಿನ್	₹1370 (1358)

ವಿನಿಮಯ ದರ

$ ಡಾಲರ್	85.52
£ ಪೌಂಡ್	107.60
€ ಯುರೊ	89.27
¥ ಯೆನ್ (100ಕ್ಕೆ)	55

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹14500-14500
ತುರುವೇಕೆರೆ	₹14000-14600

ಅದಾನಿ ವಿಲ್ಮರ್‌ನಿಂದ ಅದಾನಿ ಸಮೂಹ ನಿರ್ಗಮನ

ನವದೆಹಲಿ (ಪಿಟಿಐ): ಅದಾನಿ ವಿಲ್ಮರ್ ಲಿಮಿಟೆಡ್‌ನಿಂದ ಹೊರ ಬರುತ್ತಿರುವುದಾಗಿ ಅದಾನಿ ಸಮೂಹವು ಸೋಮವಾರ ಘೋಷಿಸಿದೆ.

ಅದಾನಿ ವಿಲ್ಮರ್ ಕಂಪನಿಯು ಅದಾನಿ ಸಮೂಹ ಮತ್ತು ಸಿಂಗಪುರದ ವಿಲ್ಮರ್ ಸಮೂಹದ ನಡುವಿನ ಜಂಟಿ ಉದ್ಯಮವಾಗಿದೆ. ವಿಲ್ಮರ್ ಲಿಮಿಟೆಡ್‌ನಲ್ಲಿ ಅದಾನಿ ಸಮೂಹವು ಶೇ 44ರಷ್ಟು ಷೇರನ್ನು ಹೊಂದಿದೆ.

ವಿಲ್ಮರ್ ಸಮೂಹಕ್ಕೆ ಶೇ 31ರಷ್ಟು ಮತ್ತು ಮುಕ್ತ ಮಾರುಕಟ್ಟೆಯಲ್ಲಿ ಶೇ 13ರಷ್ಟು ಷೇರುಗಳನ್ನು ಮಾರಾಟ ಮಾಡಲಿದೆ. ಇದರಿಂದ ₹17 ಸಾವಿರ ಕೋಟಿಗೂ ಹೆಚ್ಚು ಸಂಗ್ರಹಿಸಲಿದೆ. ಈ ಮೂಲಕ ಅದಾನಿ ವಿಲ್ಮರ್ ಲಿಮಿಟೆಡ್‌ನಿಂದ ಸಂಪೂರ್ಣ ನಿರ್ಗಮಿಸುತ್ತಿರುವುದಾಗಿ ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್ ಹೇಳಿದೆ.

ಈ ವಹಿವಾಟು 2025ರ ಮಾರ್ಚ್ 31ರ ಮೊದಲು ಮುಕ್ತಾಯಗೊಳ್ಳುವ ನಿರೀಕ್ಷೆ ಇದೆ.

ಅದಾನಿ ವಿಲ್ಮರ್ ಭಾರತದ ಪ್ರಮುಖ ಎಫ್‌ಎಂಸಿಜಿ (ತ್ವರಿತವಾಗಿ ಬಿಕರಿಯಾಗುವ ವಸ್ತುಗಳು) ಕಂಪನಿಯಾಗಿದ್ದು, ಅಡುಗೆ ಎಣ್ಣೆ, ಗೋಧಿ ಹಿಟ್ಟು, ಅಕ್ಕಿ, ಧಾನ್ಯಗಳು, ಕಡಲೆ ಹಿಟ್ಟು, ಸಕ್ಕರೆ ಸೇರಿದಂತೆ ಅಡುಗೆ ಪದಾರ್ಥಗಳನ್ನು ಮಾರಾಟ ಮಾಡುತ್ತದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಹಳತು	45000-48500
ಕೋಕ	20000-27500

ಕುಮಟಾ	
ಚಾಲಿ	33089-37099
ಚಿಪ್ಪು	16099-26089
ಕೋಕ	6099-21089
ಫ್ಯಾಕ್ಟರಿ	3509-20629
ಹಳೆಚಾಲಿ	36689-38499
ಹೊಸಚಾಲಿ	24569-29106

ಪುತ್ತೂರು	
ಕೋಕ	20500-27500
ಹೊಸತು	25000-35000
ಹಳತು	36000-48500

ಸಾಗರ	
ಬಿಳಿಗೋಟು	8269-27099
ಚಾಲಿ	24699-34099
ಕೋಕ	8569-27109
ಕೆಂಪುಗೋಟು	14369-30699
ರಾಶಿ	34299-50599
ಸಿಪ್ಪೆಗೋಟು	8009-16888

ಶಿವಮೊಗ್ಗ	
ಬೆಟ್ಟೆ	44509-57900
ಗೊರಬಲು	17099-31295
ರಾಶಿ	30099-50511
ಸರಕು	50199-92996

ಸಿದ್ದಾಪುರ	
ಬಿಳಿಗೋಟು	24109-26899
ಚಾಲಿ	31599-37419
ಕೋಕ	15319-19389
ಕೆಂಪುಗೋಟು	21389-21899
ರಾಶಿ	41209-46799
ತಟ್ಟಿಬೆಟ್ಟೆ	28409-44829

ಶಿರಸಿ	
ಬೆಟ್ಟೆ	28699-36009
ಬಿಳಿಗೋಟು	21709-29923
ಚಾಲಿ	34350-38671
ಕೆಂಪುಗೋಟು	11509-23099
ರಾಶಿ	42099-44909

ಯಲ್ಲಾಪುರ	
ಬಿಳಿಗೋಟು	13089-26309
ಚಾಲಿ	27469-38001
ಕೋಕ	4609-18109
ಕೆಂಪುಗೋಟು	16010-26399
ರಾಶಿ	37699-57559
ತಟ್ಟಿಬೆಟ್ಟೆ	29109-36109

‘ಆದಾಯ ತೆರಿಗೆ ಕಡಿತಗೊಳಿಸಿ’

ನವದೆಹಲಿ (ಪಿಟಿಐ): ಮಧ್ಯಮ ವರ್ಗದ ಜನರ ಕೈಯಲ್ಲಿ ಹಣದ ಹರಿವನ್ನು ಹೆಚ್ಚಿಸಲು ವೈಯಕ್ತಿಕ ಆದಾಯ ತೆರಿಗೆ ಕಡಿತಗೊಳಿಸಬೇಕು. ಇಂಧನದ ಮೇಲಿನ ಅಬಕಾರಿ ಸುಂಕ ಕಡಿತ ಮತ್ತು ಉದ್ಯೋಗ ವಲಯಗಳಿಗೆ ಉತ್ತೇಜನ ನೀಡುವ ಕ್ರಮಗಳನ್ನು ತೆಗೆದುಕೊಳ್ಳುವಂತೆ ಉದ್ಯಮ ಸಂಸ್ಥೆಗಳ ಪ್ರತಿನಿಧಿಗಳು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ.

ಕೇಂದ್ರ ಹಣಕಾಸು ಇಲಾಖೆ ಸೋಮವಾರ ಆಯೋಜಿಸಿದ್ದ ಬಜೆಟ್ ಪೂರ್ವ ಸಮಾಲೋಚನೆಯಲ್ಲಿ ಭಾಗವಹಿಸಿದ ಬಳಿಕ ಸುದ್ದಿಗಾರ-ರೊಂದಿಗೆ ಮಾತನಾಡಿದ ಭಾರತೀಯ ಕೈಗಾರಿಕಾ ಒಕ್ಕೂಟದ ಅಧ್ಯಕ್ಷ ಸಂಜೀವ್ ಪುರಿ, ಭಾರತ ಸೇರಿದಂತೆ ಹಲವಾರು ರಾಷ್ಟ್ರಗಳಿಗೆ ಚೀನಾದಿಂದ ಆಮದು ಹೆಚ್ಚಳವಾಗುತ್ತಿದ್ದು, ಇದು ಸವಾಲನ್ನು ಸೃಷ್ಟಿಸಿದೆ. ಜೊತೆಗೆ ಆಹಾರ ಭದ್ರತೆ ಮತ್ತು ಹಣದುಬ್ಬರಕ್ಕೆ ಒಡ್ಡಿದ ಸವಾಲುಗಳು ಸೇರಿ ಹಲವು ವಿಷಯಗಳನ್ನು ಸಭೆಯಲ್ಲಿ ಪ್ರಸ್ತಾಪಿಸಲಾಯಿತು ಎಂದು ಹೇಳಿದರು.

2025-26ರ ಸಾಲಿನ ಬಜೆಟ್ ಅನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆಬ್ರುವರಿ 1ರಂದು ಸಂಸತ್‌ನಲ್ಲಿ ಮಂಡಿಸಲಿದ್ದಾರೆ.


ಪ್ರತಿಕೂಲ ಹವಾಮಾನದಿಂದ ಉತ್ಪಾದನೆಯಲ್ಲಿ ಕುಸಿತ ● ಬೆಲೆ ಹೆಚ್ಚಳದ ಸಾಧ್ಯತೆ

ಚಹಾ ಉತ್ಪಾದನೆ 10 ಲಕ್ಷ ಕ್ವಿಂಟಲ್ ಇಳಿಕೆ?

ಕೋಲ್ಕತ್ತ (ಪಿಟಿಐ): ಪ್ರತಿಕೂಲ ಹವಾಮಾನದಿಂದ ಪ್ರಸಕ್ತ ಕ್ಯಾಲೆಂಡರ್ ವರ್ಷದಲ್ಲಿ ದೇಶದ ಚಹಾ ಉತ್ಪಾದನೆಯಲ್ಲಿ 10 ಲಕ್ಷ ಕ್ವಿಂಟಲ್‌ಗೂ ಹೆಚ್ಚು ಕುಸಿತವಾಗಬಹುದು ಎಂದು ಅಂದಾಜು ಮಾಡಲಾಗಿದೆ ಎಂದು ಉದ್ಯಮವು ಸೋಮವಾರ ಹೇಳಿದೆ. ಉತ್ಪಾದನೆಯಲ್ಲಿನ ಇಳಿಕೆಯಿಂದಾಗಿ ಚಹಾ ಬೆಲೆ ಏರಿಕೆಯಾಗುವ ಸಾಧ್ಯತೆ ಇದೆ ಎಂದು ಹೇಳಿದೆ.

2023ರ ಜನವರಿ-ಅಕ್ಟೋಬರ್ ಅವಧಿಯಲ್ಲಿ 117.8 ಕೋಟಿ ಕೆ.ಜಿ ಚಹಾ ಉತ್ಪಾದನೆಯಾಗಿತ್ತು. ಆದರೆ, ಪ್ರಸಕ್ತ ವರ್ಷದ ಇದೇ ಅವಧಿಯಲ್ಲಿ 111.2 ಕೋಟಿ ಕೆ.ಜಿ ಉತ್ಪಾದನೆಯಾಗಿದ್ದು, 6.6 ಕೋಟಿ ಕೆ.ಜಿಯಷ್ಟು ಕಡಿಮೆಯಾಗಿದೆ. ಡಿಸೆಂಬರ್ ಅಂತ್ಯದ ವೇಳೆಗೆ 4.5 ಕೋಟಿ ಕೆ.ಜಿಯಿಂದ 5 ಕೋಟಿ ಕೆ.ಜಿಯಷ್ಟು ಉತ್ಪಾದನೆಯಲ್ಲಿ ಕಡಿಮೆಯಾಗುವ ನಿರೀಕ್ಷೆ ಇದೆ ಎಂದು ಭಾರತೀಯ ಚಹಾ ಮಂಡಳಿ (ಟಿಎಬಿ) ಅಧ್ಯಕ್ಷ ಹೇಮಂತ್ ಬಂಗೂರ್ ಹೇಳಿದ್ದಾರೆ.

ಕಳೆದ ವರ್ಷ 23.1 ಕೋಟಿ ಕೆ.ಜಿಯಷ್ಟು ಚಹಾ ರಫ್ತಾಗಿತ್ತು. ಅದು ಈ ಬಾರಿ 25 ಕೋಟಿ ಕೆ.ಜಿಗೆ ತಲುಪುವ ಅಂದಾಜಿದೆ ಎಂದು ಹೇಳಿದ್ದಾರೆ.



‘ಜಾಗತಿಕ ಬಿಕ್ಕಟ್ಟಿನ ನಡುವೆಯೂ ದೇಶದ ಚಹಾ ರಫ್ತು ಆರೋಗ್ಯಕರ-ವಾಗಿದೆ. ವ್ಯಾಪಾರಿಗಳು ಹೆಚ್ಚಿನ ಚಹಾ ರಫ್ತು ಮಾಡಲು ಮುಂದಾಗಿದ್ದರಿಂದ ಸಾಗಣೆ ಪ್ರಮಾಣ ಹೆಚ್ಚಳವಾಗಿದೆ’ ಎಂದು ಭಾರತೀಯ ಚಹಾ ರಫ್ತುದಾರರ ಸಂಘದ ಅಧ್ಯಕ್ಷ ಅಂಶುಮಾನ್ ಕನೋರಿಯಾ ಹೇಳಿದ್ದಾರೆ.

ಇರಾಕ್‌ಗೆ ಚಹಾ ರಫ್ತಿನಲ್ಲಿ ಏರಿಕೆಯಾಗಿದ್ದು, ರಫ್ತಿನ ಶೇ 20ರಷ್ಟಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಪಶ್ಚಿಮ ಏಷ್ಯಾದ ದೇಶಗಳಿಗೆ 4ರಿಂದ 5 ಕೋಟಿ ಕೆ.ಜಿ ರಫ್ತು ಮಾಡುವ ನಿರೀಕ್ಷೆಯಲ್ಲಿ ವ್ಯಾಪಾರಿಗಳು ಇದ್ದಾರೆ ಎಂದು ಕನೋರಿಯಾ ಹೇಳಿದ್ದಾರೆ.

ಈ ವರ್ಷದಲ್ಲಿ ಅನೇಕ ಚಹಾ ಬೆಳೆಯುವ ಪ್ರದೇಶಗಳು 35ರಿಂದ 40 ಡಿಗ್ರಿ ಸೆಲ್ಸಿಯಸ್ ತಾಪಮಾನವನ್ನು ಕಂಡಿವೆ. ಮಳೆ ಪ್ರಮಾಣವೂ ಕಡಿಮೆಯಾಗಿದೆ. ಇದು ಸರಾಸರಿ ಶೇ 20ರಷ್ಟು ಚಹಾ ಉತ್ಪಾದನೆಯ ಮೇಲೆ ಪರಿಣಾಮ ಬೀರಿತು ಎಂದು ಟಿಆರ್‌ಎ ಕಾರ್ಯದರ್ಶಿ ಜಾಯ್‌ದೀಪ್ ಫೂಕನ್ ಸುದ್ದಿಸಂಸ್ಥೆ ಪಿಟಿಐಗೆ ತಿಳಿಸಿದ್ದಾರೆ.

ಚಹಾ ಉತ್ಪಾದನೆಯಲ್ಲಿ ಇಳಿಕೆಯಿಂದ ಮುಂಬರುವ ವರ್ಷದಲ್ಲಿ ಚಹಾ ಬೆಲೆ ಏರಿಕೆಯಾಗುವ ಸಾಧ್ಯತೆ ಇದೆ ಎಂದು ಕ್ರೆಡಿಟ್ ರೇಟಿಂಗ್ ಸಂಸ್ಥೆ ಐಸಿಆರ್‌ಎ ತಿಳಿಸಿದೆ.

ಕರ್ನಾಟಕದಲ್ಲೂ ಶೇ 15 ಕುಸಿತ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಕರ್ನಾಟಕದಲ್ಲೂ ಚಹಾ ಉತ್ಪಾದನೆ ಗಣನೀಯವಾಗಿ ಕುಸಿತವಾಗಿದೆ. ಹವಾಮಾನ ವೈಪರೀತ್ಯದಿಂದ ಶೇ 15ರಷ್ಟು ಉತ್ಪಾದನೆ ಕಡಿಮೆಯಾಗಿದೆ ಎಂದು ಅಂದಾಜಿಸಲಾಗಿದೆ.

ರಾಜ್ಯ ಮಟ್ಟಿಗೆ ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿ ಟೀ ತೋಟಗಳಿವೆ. ವರ್ಷಕ್ಕೆ ಸರಾಸರಿ 50 ಲಕ್ಷ ಕೆ.ಜಿಯಷ್ಟು ಚಹಾ ಉತ್ಪಾದನೆಯಾಗುತ್ತಿದೆ. ನವೆಂಬರ್ ವೇಳೆಗೆ ಶೇ 13ರಷ್ಟು ಕಡಿಮೆಯಾಗಿತ್ತು. ಈಗ ಸರಾಸರಿ ಶೇ 15ರಷ್ಟು ಕಡಿಮೆಯಾಗಿದೆ ಎಂದು ಕರ್ನಾಟಕ ಪ್ಲಾಂಟರ್ಸ್ ಅಸೋಸಿಯೇಷನ್(ಕೆಪಿಎ) ಅಧ್ಯಕ್ಷ ಅರವಿಂದ ರಾವ್ ‘ಪ್ರಜಾವಾಣಿ’ಗೆ ತಿಳಿಸಿದರು.

ಕರ್ನಾಟಕ ಮಾತ್ರವಲ್ಲದೇ ಹವಾಮಾನ ವೈಪರೀತ್ಯದಿಂದ ಎಲ್ಲೆಡೆ ಉತ್ಪಾದನೆ ಕಡಿಮೆಯಾಗಿದೆ. ಆದ್ದರಿಂದ ಚಹಾ ಪುಡಿ ದರ ಹೆಚ್ಚಾಗುವ ಸಾಧ್ಯತೆ ಇದೆ ಎಂದರು.

ಕಾಡುಮನೆ ಟೀ ಎಸ್ಟೇಟ್‌ನಲ್ಲೂ ಕುಂಠಿತ

ಹಾಸನ: 2 ಸಾವಿರ ಎಕರೆ ಪ್ರದೇಶದಲ್ಲಿರುವ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನಲ್ಲಿ ಏಕೈಕ ಕಾಡುಮನೆ ಟೀ ಎಸ್ಟೇಟ್‌ನಲ್ಲಿಯೂ ಹವಾಮಾನ ವೈಪರೀತ್ಯದಿಂದ ಚಹಾ ಬೆಳೆಯಲ್ಲಿ ಶೇ 25ರಷ್ಟು ಕುಂಠಿತವಾಗಿದೆ.

‘ಏಪ್ರಿಲ್–ಮೇನಲ್ಲಿ ಮಳೆ ಬರಬೇಕಿತ್ತು. ಆದರೆ, ಮಳೆಯ ಕೊರತೆ ಎದುರಾಯಿತು. ಸೆಪ್ಟೆಂಬರ್–ಅಕ್ಟೋಬರ್ ನಲ್ಲಿ ಮಳೆ ನಿಂತು, ಬಿಸಿಲು ಬೇಕಿತ್ತು. ಆದರೆ, ಈ ವೇಳೆ ನಿರಂತರ ಮಳೆ ಸುರಿಯಿತು. ಹಾಗಾಗಿ ಚಹಾ ಬೆಳೆಯ ಮೇಲೆ ಹವಾಮಾನ ಪರಿಣಾಮ ಬೀರಿದೆ’ ಎಂದು ಕಾಡುಮನೆ ಟೀ ಎಸ್ಟೇಟ್‌ನ ಪ್ರಧಾನ ವ್ಯವಸ್ಥಾಪಕ ಕಾರ್ಯಪ್ಪ ತಿಳಿಸಿದರು. ಈ ಬಾರಿ ಸುರಿದ ಧಾರಾಕಾರ ಮಳೆಯಿಂದ ಕಾಡುಮನೆ ಎಸ್ಟೇಟ್‌ನಲ್ಲಿ ಭೂಕುಸಿತ ಉಂಟಾಗಿತ್ತು. ಅಲ್ಲದೇ ನಿರಂತರ ಮಳೆ ಸುರಿದ ಪರಿಣಾಮ, ಚಹಾದ ಉತ್ಪಾದನೆಯ ಮೇಲೆ ಪರಿಣಾಮ ಬೀರಿದೆ.

ನ್ಯಾಯಮೂರ್ತಿ ಸಂಬಂಧಿಗಳನ್ನು ನೇಮಕಕ್ಕೆ ಪರಿಗಣಿಸದೆ ಇರುವ ಪ್ರಸ್ತಾವ ಪರಿಶೀಲನೆ?

ನವದೆಹಲಿ (ಪಿಟಿಐ): ಹೈಕೋರ್ಟ್‌ಗಳಲ್ಲಿ ನ್ಯಾಯಮೂರ್ತಿಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವವರ ಹತ್ತಿರದ ಸಂಬಂಧಿಗಳನ್ನು ನೇಮಕಾತಿಗೆ ಪರಿಗಣಿಸದೆ ಇರುವ ಪ್ರಸ್ತಾವವನ್ನು ಸುಪ್ರೀಂ ಕೋರ್ಟ್‌ನ ಕೊಲಿಜಿಯಂ (ಹಿರಿಯ ನ್ಯಾಯಮೂರ್ತಿಗಳ ಸಮಿತಿ) ಪರಿಶೀಲಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಹಿರಿಯ ನ್ಯಾಯಮೂರ್ತಿಯೊಬ್ಬರು ಈ ಪ್ರಸ್ತಾವ ಇರಿಸಿದ್ದಾರೆ ಎಂದು ಗೊತ್ತಾಗಿದೆ. ಇದು ಜಾರಿಗೆ ಬಂದಲ್ಲಿ, ನೇಮಕಾತಿಗಳಲ್ಲಿ ಹೆಚ್ಚಿನ ಪ್ರಮಾಣದ ಒಳಗೊಳ್ಳುವಿಕೆ ಸಾಧ್ಯವಾಗಲಿದೆ. ನ್ಯಾಯಾಂಗದ ನೇಮಕಾತಿಗಳಲ್ಲಿ ಪ್ರತಿಭಾವಂತರಿಗಿಂತ ಹೆಚ್ಚಿನ ಆದ್ಯತೆಯು ಕೆಲವರಿಗೆ ಸಿಗುತ್ತದೆ ಎಂಬ ಭಾವನೆಯನ್ನು ಅಳಿಸಲು ಸಾಧ್ಯವಾಗುತ್ತದೆ ಎಂದು ಮೂಲಗಳು ಹೇಳಿವೆ.

ಅಭ್ಯರ್ಥಿಗಳ ತಂದೆ, ತಾಯಿ ಅಥವಾ ಹತ್ತಿರದ ಸಂಬಂಧಿಕರು ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್ ಹಾಲಿ, ನಿವೃತ್ತ ನ್ಯಾಯಮೂರ್ತಿ ಆಗಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಹೆಸರನ್ನು ಶಿಫಾರಸು ಮಾಡಬಾರದು ಎಂಬ ಸೂಚನೆಯನ್ನು ಹೈಕೋರ್ಟ್‌ನ ಕೊಲಿಜಿಯಂಗಳಿಗೆ ರವಾನಿಸುವ ಪ್ರಸ್ತಾವನೆಯನ್ನು ಸುಪ್ರೀಂ ಕೋರ್ಟ್‌ನ ಕೊಲಿಜಿಯಂ ಪರಿಶೀಲಿಸಬಹುದು ಎಂದು ಮೂಲಗಳು ಹೇಳಿವೆ.

ಈ ಪ್ರಸ್ತಾವ ಜಾರಿಗೆ ಬಂದರೆ, ಕೆಲವು ಅರ್ಹ ಅಭ್ಯರ್ಥಿಗಳು ನೇಮಕಾತಿಯಿಂದ ಅನರ್ಹಗೊಳ್ಳಬಹುದು. ಆದರೆ ಇದರಿಂದ ಮೊದಲ ತಲೆಮಾರಿನ ವಕೀಲರಿಗೆ ಅವಕಾಶಗಳನ್ನು ತೆರೆದಂತಾಗುತ್ತದೆ ಮತ್ತು ಸಾಂವಿಧಾನಿಕ ನ್ಯಾಯಾಲಯಗಳಲ್ಲಿ ವಿಭಿನ್ನ ಸಮುದಾಯಗಳ ಪ್ರಾತಿನಿಧ್ಯವನ್ನು ಹೆಚ್ಚು ಮಾಡಲು ಆಗುತ್ತದೆ ಎಂದು ನ್ಯಾಯ-ಮೂರ್ತಿಯೊಬ್ಬರು ಪ್ರತಿಪಾದಿಸಿದ್ದಾರೆ.

ಆದರೆ ಈ ಕ್ರಮದ ಪರಿಣಾಮವಾಗಿ, ಅರ್ಹ ಅಭ್ಯರ್ಥಿಗೆ ಅವರು ಹಾಲಿ ಅಥವಾ ನಿವೃತ್ತ ನ್ಯಾಯಮೂರ್ತಿಯ ಸಂಬಂಧಿ ಎಂಬ ಕಾರಣಕ್ಕೇ ನ್ಯಾಯಮೂರ್ತಿ ಹುದ್ದೆಯು ನಿರಾಕರಣೆ ಆಗಬಹುದು ಎಂದು ಮೂಲಗಳು ಹೇಳಿವೆ.

ಶೇ 71ರಷ್ಟು ವಿಮೆ ಮಂಜೂರು

ನವದೆಹಲಿ (ಪಿಟಿಐ): 2023-24ರ ಹಣಕಾಸು ವರ್ಷದಲ್ಲಿ ದೇಶದ ಸಾಮಾನ್ಯ ಮತ್ತು ಆರೋಗ್ಯ ವಿಮಾ ಕಂಪನಿಗಳು ಆರೋಗ್ಯ ವಿಮೆದಾರರಿಗೆ ₹83,493 ಕೋಟಿ ಮೌಲ್ಯದ ಕ್ಲೇಮುಗಳನ್ನು ಮಂಜೂರು ಮಾಡಿವೆ. ಇದು ಒಟ್ಟು ಸಲ್ಲಿಕೆಯಾದ ಕ್ಲೇಮುಗಳ ಶೇ 71ರಷ್ಟಾಗಿದೆ. ಒಟ್ಟು ₹1.17 ಲಕ್ಷ ಕೋಟಿ ಮೊತ್ತಕ್ಕೆ ಕ್ಲೇಮುಗಳು ಸಲ್ಲಿಕೆಯಾಗಿದ್ದವು.

ಆರೋಗ್ಯ ವಿಮಾ ಕಂಪನಿಗಳು ₹15,100 ಕೋಟಿ ಮೌಲ್ಯದ ಕ್ಲೇಮುಗಳನ್ನು ಮಂಜೂರು ಮಾಡಲು ನಿರಾಕರಿಸಿವೆ. ಇದು ಸಲ್ಲಿಕೆಯಾದ ಕ್ಲೇಮುಗಳ ಶೇ 13ರಷ್ಟಾಗಿದೆ ಎಂದು ಭಾರತೀಯ ವಿಮೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಐಆರ್‌ಡಿಎಐ) ಸೋಮವಾರ ತಿಳಿಸಿದೆ.

ವಿಮಾ ಕಂಪನಿಗಳು ₹10,937.18 ಕೋಟಿ (ಶೇ 9.34) ಮೊತ್ತದ ಕ್ಲೇಮುಗಳನ್ನು ತಿರಸ್ಕರಿಸಲಿವೆ. ₹7,584.57 ಕೋಟಿ (ಶೇ 6.48) ಮೊತ್ತದ ಕ್ಲೇಮುಗಳು ಪಾವತಿಗೆ ಬಾಕಿ ಇವೆ.



ಕಳೆದ ಹಣಕಾಸು ವರ್ಷದಲ್ಲಿ ಸುಮಾರು 3.26 ಕೋಟಿ ಆರೋಗ್ಯ ವಿಮೆ ಕ್ಲೇಮುಗಳಿದ್ದವು. ಅದರಲ್ಲಿ 2.69 ಕೋಟಿ (ಶೇ 82.46) ಕ್ಲೇಮುಗಳನ್ನು ವಿಮಾ ಕಂಪನಿಗಳು ಇತ್ಯರ್ಥಗೊಳಿಸಿವೆ. ಪ್ರತಿ ಕ್ಲೇಮಿಗೆ ಪಾವತಿಸಿದ ಸರಾಸರಿ ಮೊತ್ತ ₹31,086 ಎಂದು ಹೇಳಿದೆ.

ಶೇ 66ರಷ್ಟು ಕ್ಲೇಮುಗಳನ್ನು ನಗದು ರಹಿತ ವಿಧಾನದ ಮೂಲಕ, ಇತರೆಯನ್ನು ಮರುಪಾವತಿ ವಿಧಾನದ ಮೂಲಕ ಇತ್ಯರ್ಥಗೊಳಿಸಲಾಗಿದೆ ಎಂದು ತಿಳಿಸಿದೆ.

2023-24ರ ಹಣಕಾಸು ವರ್ಷದಲ್ಲಿ ಸಾಮಾನ್ಯ ಮತ್ತು ಆರೋಗ್ಯ ವಿಮಾ ಕಂಪನಿಗಳು ಆರೋಗ್ಯ ವಿಮೆಯಿಂದ ₹1.07 ಲಕ್ಷ ಕೋಟಿ ಸಂಗ್ರಹಿಸಿವೆ. 2022–23ರ ಹಣಕಾಸು ವರ್ಷಕ್ಕೆ ಹೋಲಿಸಿದರೆ ಶೇ 20ರಷ್ಟು ಬೆಳವಣಿಗೆ ದಾಖಲಿಸಿವೆ ಎಂದಿದೆ.

‘ಆರ್ಥಿಕ ಪ್ರಗತಿ ಸುಧಾರಣೆ ನಿರೀಕ್ಷೆ’

ಆರ್ಥಿಕ ಸ್ಥಿರತೆ ಸಾಧಿಸಲು ಬದ್ಧ: ಸಂಜಯ್ ಮಲ್ಹೋತ್ರಾ



ಮುಂಬೈ (ಪಿಟಿಐ): 2025ರಲ್ಲಿ ದೇಶದ ಆರ್ಥಿಕ ಬೆಳವಣಿಗೆ ಉತ್ತಮಗೊಳ್ಳುವ ನಿರೀಕ್ಷೆಯಿದೆ ಇದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಗವರ್ನರ್ ಸಂಜಯ್ ಮಲ್ಹೋತ್ರಾ ಸೋಮವಾರ ಹೇಳಿದ್ದಾರೆ.

ದೇಶದ ಆರ್ಥಿಕ ಸ್ಥಿರತೆಯನ್ನು ಕಾಪಾಡಿಕೊಳ್ಳಲು ಬದ್ಧರಾಗಿದ್ದೇವೆ. ಜನರಲ್ಲಿ ಖರೀದಿ ಸಾಮರ್ಥ್ಯ ಹೆಚ್ಚಳವಾಗಿದ್ದು, ಆರ್ಥಿಕತೆ ಬೆಳವಣಿಗೆ ಸಾಧಿಸಲಿದೆ. ಜಾಗತಿಕ ಅನಿಶ್ಚಿತತೆಯ ಹೊರತಾಗಿಯೂ ಪ್ರಸಕ್ತ ಹಣಕಾಸು ವರ್ಷದ ದ್ವಿತೀಯಾರ್ಧದಲ್ಲಿ ಭಾರತೀಯ ಆರ್ಥಿಕತೆಯು ವೇಗವನ್ನು ಪಡೆದುಕೊಳ್ಳುವ ನಿರೀಕ್ಷೆಯಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಭಾರತದ ಮಹತ್ವಾಕಾಂಕ್ಷೆಯ ಗುರಿಗಳನ್ನು ಸಾಧಿಸಲು ಜನರ ನಂಬಿಕೆ ಮತ್ತು ವಿಶ್ವಾಸವನ್ನು ಉಳಿಸಿಕೊಳ್ಳಲಿದ್ದೇವೆ. ಆಧುನಿಕ ಹಣಕಾಸು ವ್ಯವಸ್ಥೆ ಯನ್ನು ಅಭಿವೃದ್ಧಿಪಡಿಸಲು ಬದ್ಧರಾಗಿದ್ದೇವೆ ಎಂದು ಹೇಳಿದ್ದಾರೆ.

ಮುಂದಿನ ದಿನಗಳಲ್ಲಿ ಹಣದುಬ್ಬರದ ಕುಸಿತವು ಮುಂದುವರಿಯುವ ಸಾಧ್ಯತೆಯಿದೆ. ಇದು ಜನರಲ್ಲಿ ಖರೀದಿ ಶಕ್ತಿಯನ್ನು ಹೆಚ್ಚಿಸಲಿದೆ. ಜಾಗತಿಕ ಬಿಕ್ಕಟ್ಟು, ಪ್ರತಿಕೂಲ ಹವಾಮಾನ, ಹೆಚ್ಚುತ್ತಿರುವ ಸಾಲವು ಸಮಸ್ಯೆಯನ್ನು ಸೃಷ್ಟಿಸಬಹುದು ಎಂದು ಹೇಳಿದ್ದಾರೆ.

ಜಿಡಿಪಿ ಪ್ರಗತಿ ಶೇ 6.6ರಷ್ಟು: ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಬೆಳವಣಿಗೆ ಶೇ 6.6ರಷ್ಟಾಗಲಿದೆ ಎಂದು ಆರ್‌ಬಿಐ ವರದಿ ಅಂದಾಜಿಸಿದೆ.

ಗ್ರಾಮೀಣ ಪ್ರದೇಶದ ಜನರಲ್ಲಿ ಸರಕುಗಳನ್ನು ಖರೀದಿಸುವ ಸಾಮರ್ಥ್ಯ ಹೆಚ್ಚಳವಾಗಿದೆ. ಸರ್ಕಾರದ ಬಂಡವಾಳ ವೆಚ್ಚ ಮತ್ತು ಹೂಡಿಕೆ ಪ್ರಮಾಣವು ಏರಿಕೆಗೊಂಡಿದೆ. ಸೇವಾ ವಲಯದ ರಫ್ತು ಸದೃಢಗೊಂಡಿದೆ ಎಂದು ವರದಿ ಹೇಳಿದೆ.

ಪ್ರಸಕ್ತ ಹಣಕಾಸು ವರ್ಷದ ಮೊದಲಾರ್ಧದಲ್ಲಿ ಜಿಡಿಪಿ ಬೆಳವಣಿಗೆ ಮಂದಗೊಂಡಿದ್ದು, ಶೇ 6ರಷ್ಟಾಗಿದೆ. 2023–24ರ ಹಣಕಾಸು ವರ್ಷದ ಮೊದಲಾರ್ಧದಲ್ಲಿ ಶೇ 8.2 ಮತ್ತು ದ್ವಿತೀಯಾರ್ಧದಲ್ಲಿ ಶೇ 8.1ರಷ್ಟಿತ್ತು ಎಂದು ಹೇಳಿದೆ.

ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ಬೆಳೆಯು ಉತ್ತಮವಾ-ಗಿದ್ದು, ಧಾನ್ಯಗಳ ಬೆಲೆ ಇಳಿಕೆಯಾಗುವ ನಿರೀಕ್ಷೆಯಿದೆ. ಇದರಿಂದ ಹಣದುಬ್ಬರವು ಕಡಿಮೆಯಾಗಬಹುದು ಎಂದು ಹೇಳಿದೆ.

ಅಣ್ಣಾ ವಿವಿ ಪ್ರಕರಣ: ರಾಜ್ಯಪಾಲರ ಭೇಟಿಯಾದ ಅಣ್ಣಾಮಲೈ, ವಿಜಯ್

ಪ್ರಜಾವಾಣಿ ವಾರ್ತೆ

ಚೆನ್ನೈ: ಅಣ್ಣಾ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿನಿಯೊಬ್ಬಳ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ ಎಂಬ ಆರೋಪದ ಕಾರಣ ರಾಜ್ಯದಲ್ಲಿ ಮಹಿಳೆಯರ ಸುರಕ್ಷತೆ ಕುರಿತು ಕ್ರಮ ಕೈಗೊಳ್ಳುವಂತೆ ಬಿಜೆಪಿ ರಾಜ್ಯಾಧ್ಯಕ್ಷ ಅಣ್ಣಾಮಲೈ ಹಾಗೂ ನಟ ವಿಜಯ್ ರಾಜ್ಯಪಾಲರಿಗೆ ಮನವಿ-ಪತ್ರವನ್ನು ಸೋಮವಾರ ನೀಡಿದ್ದಾರೆ.

ರಾಜಭವನಕ್ಕೆ ತೆರಳಿ ರಾಜ್ಯಪಾಲ ಅರ್.ಎನ್ ರವಿ ಅವರನ್ನು ಭೇಟಿ ಮಾಡಿದ ವಿಜಯ್ ‘ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುಸಿದಿದೆ. ಇದರಿಂದ ಮಹಿಳೆಯರ ಸುರಕ್ಷತೆ ಮೇಲೆ ಪರಿಣಾಮ ಬೀರಿದೆ. ಮಹಿಳೆಯರ ಸುರಕ್ಷತೆ ಕುರಿತು ಕ್ರಮ ಕೈಗೊಳ್ಳಬೇಕು’ ಎಂದು ಬರೆದ ಮನವಿಪತ್ರ ನೀಡಿದರು.

ಎನ್‌ಸಿಡಬ್ಲ್ಯು ತಂಡದಿಂದ ವಿಚಾರಣೆ: ಅಣ್ಣಾ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿನಿ ಮೇಲೆ ನಡೆದಿದ್ದ ಲೈಂಗಿಕ ದೌರ್ಜನ್ಯ ಪ್ರಕರಣ ಕುರಿತ ವಿಚಾರಣೆಯನ್ನು ರಾಷ್ಟ್ರೀಯ ಮಹಿಳಾ ಆಯೋಗದ (ಎನ್‌ಸಿಡಬ್ಲ್ಯು) ತಂಡ ಸೋಮವಾರ ಮುಕ್ತಾಯಗೊಳಿಸಿದೆ.

ತಂಡವು ವಿಚಾರಣೆಯಲ್ಲಿ ತಿಳಿದುಬಂದಿರುವ ಮಾಹಿತಿಯನ್ನು ತಮಿಳುನಾಡಿನ ರಾಜ್ಯಪಾಲ ಆರ್.ಎನ್. ರವಿ ಅವರಿಗೆ ಸಲ್ಲಿಸಿದೆ. ಅಂತಿಮ ವರದಿಯನ್ನು ಎನ್‌ಸಿಡಬ್ಲ್ಯು ಮೂಲಕ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ವಿಚಾರಣೆ ನಡೆಸಿದ ತಂಡದ ಸದಸ್ಯೆ ಮಮತಾ ಕುಮಾರಿ ತಿಳಿಸಿದರು.



ಮಹಿಳೆಯರ ಸುರಕ್ಷತೆಗೆ ಕ್ರಮ ಕೈಗೊಳ್ಳುವಂತೆ ರಾಜ್ಯಪಾಲ ಆರ್.ಎನ್ ರವಿ ಅವರಿಗೆ ಮನವಿ ಸಲ್ಲಿಸಿದ ತಮಿಳಿಗ ವೆಟ್ರಿ ಕಳಗಂ ಪಕ್ಷದ ಅಧ್ಯಕ್ಷ ವಿಜಯ್ – ಪಿಟಿಐ ಚಿತ್ರ

ಬೋಯಿಂಗ್ ವಿಮಾನಗಳ ತಪಾಸಣೆಗೆ ನಿರ್ಧಾರ

ಸೋಲ್ (ದಕ್ಷಿಣ ಕೊರಿಯಾ) (ಎಪಿ): ‘ದೇಶದ ವಿಮಾನಯಾನ ಸಂಸ್ಥೆಗಳಲ್ಲಿ-ರುವ ಎಲ್ಲ ಬೋಯಿಂಗ್ 737-800 ಸರಣಿಯ ಎಲ್ಲ ವಿಮಾನಗಳನ್ನು ಸುರಕ್ಷತಾ ತಪಾಸಣೆ ನಡೆಸಲಾಗುವುದು’ ಎಂದು ದಕ್ಷಿಣ ಕೊರಿಯಾ ತಿಳಿಸಿದೆ.

ದಕ್ಷಿಣ ಕೊರಿಯಾದ ಮುವಾನ್ ವಿಮಾನ ನಿಲ್ದಾಣದಲ್ಲಿ ಭಾನುವಾರ ರನ್‌ವೇನಿಂದ ಪಕ್ಕಕ್ಕೆ ಜಾರಿದ ವಿಮಾನವು ಕಾಂಕ್ರೀಟ್ ಗೋಡೆಗೆ ಡಿಕ್ಕಿ ಹೊಡೆದು ಸ್ಫೋಟಿಸಿ, ಅದರಲ್ಲಿದ್ದ 181 ಮಂದಿಯ ಪೈಕಿ 179 ಮಂದಿ ಜೀವ ಕಳೆದುಕೊಂಡಿದ್ದರು. ಜೆಜು ಏರ್ ವಿಮಾನಯಾನ ಕಂಪನಿಗೆ ಸೇರಿದ್ದ ವಿಮಾನ ಇದಾಗಿತ್ತು. ಕಳೆದೊಂದು ದಶಕದಲ್ಲಿ ದೇಶದಲ್ಲಿ ಸಂಭವಿಸಿದ ಅತ್ಯಂತ ಭೀಕರ ವಿಮಾನ ಅಪಘಾತಗಳಲ್ಲಿ ಇದು ಒಂದಾಗಿದೆ.

ಹಂಗಾಮಿ ಅಧ್ಯಕ್ಷ ಚೊಯ್ ಸಂಗ್ ಮೊಕ್ ಅವರು ಸೋಮವಾರ ಟಾಸ್ಕ್‌ಫೋರ್ಸ್ ಸಭೆ ನಡೆಸಿದರು. ಇಡೀ ದೇಶದಲ್ಲಿನ ವಿಮಾನಯಾನ ಕಾರ್ಯಾಚರಣೆ ವ್ಯವಸ್ಥೆಯನ್ನು ತುರ್ತಾಗಿ ಪರಿಶೀಲಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಾಂಗ್ಲಾ ಗಡಿ ಉದ್ವಿಗ್ನ

ಢಾಕಾ (ಪಿಟಿಐ): ಬಾಂಗ್ಲಾದೇಶ ಮತ್ತು ಮ್ಯಾನ್ಮಾರ್ ದೇಶಗಳ 271 ಕಿ.ಮೀ ವ್ಯಾಪ್ತಿಯ ಗಡಿ ಭಾಗದ ಮೇಲೆ ಹಿಡಿತ ಸಾಧಿಸಿರುವ ಮ್ಯಾನ್ಮಾರ್‌ನ ಬಂಡುಕೋರರ ಗುಂಪಾದ ‘ಅರಾಕನ್ ಆರ್ಮಿ’ (ಎಎ) ಮತ್ತು ಅಲ್ಲಿನ ಸರ್ಕಾರದ ಜತೆ ಸಂಪರ್ಕದಲ್ಲಿ ಇರುವುದಾಗಿ ಪ್ರೊ. ಮೊಹಮ್ಮದ್ ಯೂನಸ್ ನೇತೃತ್ವದ ಬಾಂಗ್ಲಾದೇಶದ ಮಧ್ಯಂತರ ಸರ್ಕಾರ ಸೋಮವಾರ ತಿಳಿಸಿದೆ.

‘ಈ ಗಡಿ ಪ್ರದೇಶ ಅರಾಕನ್ ಆರ್ಮಿ ನಿಯಂತ್ರಣದಲ್ಲಿದೆ. ಗಡಿ ಭಾಗದಲ್ಲಿ ಬಾಂಗ್ಲಾದೇಶ ಭದ್ರತಾ ಪಡೆಗಳು ಸನ್ನದ್ಧ ಸ್ಥಿತಿಯಲ್ಲಿವೆ’ ಎಂದು ಗೃಹ ವ್ಯವಹಾರಗಳ ಸಲಹೆಗಾರ ಲೆಫ್ಟಿನೆಂಟ್ ಜನರಲ್ (ನಿವೃತ್ತ) ಜಹಂಗೀರ್ ಆಲಂ ಚೌಧರಿ ಹೇಳಿದ್ದಾರೆ.

ಮಹಿಳೆಯರಿಗೆ ಉದ್ಯೋಗ ನೀಡಿದರೆ ಕ್ರಮ: ತಾಲಿಬಾನ್

ಕಾಬೂಲ್ (ಎಪಿ): ಅಫ್ಗಾನಿಸ್ತಾನದ ಮಹಿಳೆಯರಿಗೆ ಉದ್ಯೋಗ ನೀಡುವ ಎಲ್ಲ ರಾಷ್ಟ್ರೀಯ ಮತ್ತು ವಿದೇಶಿ ಸರ್ಕಾರೇತರ ಸಂಸ್ಥೆಗಳನ್ನು (ಎನ್‌ಜಿಒ) ಮುಚ್ಚುವುದಾಗಿ ತಾಲಿಬಾನ್ ಸರ್ಕಾರ ಎಚ್ಚರಿಕೆ ನೀಡಿದೆ.

ಸರ್ಕಾರದ ಆದೇಶವನ್ನು ಉಲ್ಲಂಘಿಸಿದರೆ ಎನ್‌ಜಿಒಗಳು ತಮ್ಮ ಪರವಾನಗಿಯನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದು ಆರ್ಥಿಕ ಸಚಿವಾಲಯವು ಭಾನುವಾರ ರಾತ್ರಿ ‘ಎಕ್ಸ್’ ಮೂಲಕ ನೀಡಿರುವ ಪ್ರಕಟಣೆಯಲ್ಲಿ ತಿಳಿಸಿದೆ.

ರಾಷ್ಟ್ರೀಯ ಮತ್ತು ವಿದೇಶಿ ಎನ್‌ಜಿಒಗಳ ನೋಂದಣಿ ಮತ್ತು ಮೇಲ್ವಿಚಾರಣೆಯನ್ನು ನಡೆಸುವ ಜವಾಬ್ದಾರಿ ಸಚಿವಾಲಯದ್ದಾಗಿದೆ ಎಂದು ಅದು ತಿಳಿಸಿದೆ.

ತನ್ನ ನಿಯಂತ್ರಣದಲ್ಲಿ ಇಲ್ಲದ ಎಲ್ಲ ಸಂಸ್ಥೆಗಳಲ್ಲಿಯೂ ಮಹಿಳೆಯರು ಕಾರ್ಯನಿರ್ವಹಿಸುವುದನ್ನು ತಡೆಯಲು ತಾಲಿಬಾನ್ ಸರ್ಕಾರ ಮುಂದಾಗಿದೆ.

ಹಿಜಾಬ್ ಸರಿಯಾಗಿ ಧರಿಸದ ಕಾರಣ ಮಹಿಳೆಯರನ್ನು ಕೆಲಸದಿಂದ ವಜಾಗೊಳಿಸುವಂತೆ ತಾಲಿಬಾನ್ ಸರ್ಕಾರ ಎಲ್ಲ ಎನ್‌ಜಿಒಗಳಿಗೆ ಎರಡು ವರ್ಷಗಳ ಹಿಂದೆ ಸೂಚನೆ ನೀಡಿತ್ತು.

ಈ ಹೊಸ ಸೂಚನೆ ಮೂಲಕ ಎನ್‌ಜಿಒಗಳನ್ನು ನಿಯಂತ್ರಿಸಲು ತಾಲಿಬಾನ್ ಆಡಳಿತ ಮುಂದಾಗಿದೆ.

ಕಟ್ಟಡಗಳಿಗೆ ಕಿಟಕಿ ಬೇಡ: ಕಟ್ಟಡಗಳಿಗೆ ಕಿಟಕಿಗಳನ್ನು ಅಳವಡಿಸಬಾರದು ಎಂದು ತಾಲಿಬಾನ್ ನಾಯಕ ಹಿಬತ್‌ಉಲ್ಲಾ ಅಖುಂಡ್ಜಾದ ಆದೇಶ ಹೊರಡಿಸಿದ್ದಾರೆ. ಈ ಆದೇಶವು ಹೊಸ ಮತ್ತು ಈಗಿರುವ ಕಟ್ಟಡಗಳಿಗೂ ಅನ್ವಯವಾಗಲಿದೆ.

ಅಮೆರಿಕದ 39ನೇ ಅಧ್ಯಕ್ಷ : ಭಾರತದ ಜತೆ ಉತ್ತಮ ಬಾಂಧವ್ಯ

ಭಾರತದ ಸ್ನೇಹಿತ ಕಾರ್ಟರ್ ಇನ್ನಿಲ್ಲ



ಜಿಮ್ಮಿ ಕಾರ್ಟರ್

ವಾಷಿಂಗ್ಟನ್ (ಪಿಟಿಐ): ಅಮೆರಿಕದ 39ನೇ ಅಧ್ಯಕ್ಷರಾಗಿದ್ದ ಜಿಮ್ಮಿ ಕಾರ್ಟರ್ (100) ಅವರು ಜಾರ್ಜಿಯಾದ ಪ್ಲೇನ್ಸ್‌ನ ತಮ್ಮ ಮನೆಯಲ್ಲಿ ಭಾನುವಾರ ಮಧ್ಯಾಹ್ನ ನಿಧನರಾದರು. ಅಮೆರಿಕದ ಇತಿಹಾಸ-ದಲ್ಲಿಯೇ ದೀರ್ಘಕಾಲ ಬದುಕಿದ್ದ ಮಾಜಿ ಅಧ್ಯಕ್ಷ ಅವರಾಗಿದ್ದರು.

ಆರೋಗ್ಯ ಸಮಸ್ಯೆಯ ಕಾರಣ ಅವರು ವರ್ಷದಿಂದ ವಿಶ್ರಾಂತಿಯಲ್ಲಿದ್ದರು. ಅವರ ಪತ್ನಿ ರೋಸಲಿನ್ ಅವರು 2023ರಲ್ಲಿ 96ನೇ ವಯಸ್ಸಿನಲ್ಲಿ ನಿಧನರಾಗಿದ್ದರು.

ಕಡಲೆಕಾಯಿ ಬೆಳೆಯುವ ರೈತರಾಗಿದ್ದ ಕಾರ್ಟರ್ ಅವರು ವಾಟರ್‌ಗೇಟ್ ಹಗರಣ ಮತ್ತು ವಿಯೆಟ್ನಾಂ ಯುದ್ಧದ ಬೆನ್ನಲ್ಲೆ ಅಮೆರಿಕ ಅಧ್ಯಕ್ಷ ಹುದ್ದೆಗೆ (1977) ಆಯ್ಕೆಯಾದರು. ಒಂದು ಅವಧಿ ಮಾತ್ರ ಅವರು ಅಧ್ಯಕ್ಷರಾಗಿದ್ದರು.

ಕಾರ್ಟರ್ ಅವರಿಗೆ ವಾಷಿಂಗ್ಟನ್‌ನಲ್ಲಿ ಸರ್ಕಾರಿ ಗೌರವದಿಂದ ಅಂತ್ಯಕ್ರಿಯೆ ನಡೆಸುವಂತೆ ಆದೇಶಿಸಿದ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು, ‘ಅಸಾಧಾರಣ ನಾಯಕ, ರಾಜಕಾರಣಿ ಮತ್ತು ಮಾನವತಾ-ವಾದಿಯನ್ನು ನಾವು ಕಳೆದುಕೊಂಡಿದ್ದೇವೆ’ ಎಂದು ಕಂಬನಿ ಮಿಡಿದಿದ್ದಾರೆ.

ಭಾರತದ ಜತೆ ಉತ್ತಮ ಸಂಬಂಧ: ಕಾರ್ಟರ್ ಅವರು ಅಧ್ಯಕ್ಷರಾಗಿದ್ದಾಗ ಭಾರತದ ಜತೆ ಉತ್ತಮ ಸಂಬಂಧ ಹೊಂದಿದ್ದರು. ಅವರನ್ನು ಭಾರತದ ಸ್ನೇಹಿತ ಎಂದೇ ಕರೆಯಲಾಗುತ್ತಿತ್ತು. ಭಾರತಕ್ಕೆ ಭೇಟಿ ನೀಡಿದ ಅಮೆರಿಕದ ಮೂರನೇ ಅಧ್ಯಕ್ಷ ಅವರಾಗಿದ್ದರು. 1978ರಲ್ಲಿ ಅವರು ಭಾರತಕ್ಕೆ ಬಂದಿದ್ದರು.

ತುರ್ತು ಪರಿಸ್ಥಿತಿ ತೆರವುಗೊಳಿಸಿದ ಬಳಿಕ ಹಾಗೂ 1977ರಲ್ಲಿ ಜನತಾ ಪಕ್ಷ ವಿಜಯ ಸಾಧಿಸಿದ ನಂತರ ಭಾರತಕ್ಕೆ ಭೇಟಿ ನೀಡಿದ ಅಮೆರಿಕದ ಮೊದಲ ಅಧ್ಯಕ್ಷ ಅವರಾಗಿದ್ದರು.

ಭಾರತದ ಸಂಸತ್ತಿನಲ್ಲಿ 1978ರ ಜನವರಿ 2ರಂದು ಭಾಷಣ ಮಾಡಿದ್ದ ಅವರು, ನಿರಂಕುಶ ಆಡಳಿತದ ವಿರುದ್ಧ ಮಾತನಾಡಿದ್ದರು. ಅಲ್ಲದೆ ಭಾರತದ ಪ್ರಜಾ-ಪ್ರಭುತ್ವದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದರು.

ಕಾರ್ಟರ್ ಗೌರವಾರ್ಥ ಕಾರ್ಟರ್‌ಪುರಿ

ಕಾರ್ಟರ್ ಅವರು ಅಮೆರಿಕದ ಮೊದಲ ಮಹಿಳೆಯಾದ ರೊಸಾಲಿನ್ ಕಾರ್ಟರ್ ಜತೆ 1978ರ ಜನವರಿ 3ರಂದು ದೆಹಲಿಯ ನೈರುತ್ಯದಲ್ಲಿರುವ ದೌಲತಪುರ ನಾಸಿರಾಬಾದ್ ಗ್ರಾಮಕ್ಕೆ ಭೇಟಿ ನೀಡಿದ್ದರು. 1960ರ ದಶಕದಲ್ಲಿ ಈ ಗ್ರಾಮದಲ್ಲಿ ‘ಪೀಸ್ ಕೋರ್’ ಜತೆಗೆ ಆರೋಗ್ಯ ಸ್ವಯಂ ಸೇವಕರಾಗಿ ಕಾರ್ಟರ್ ಅವರ ತಾಯಿ ಲಿಲಿಯನ್ ಸೇವೆ ಸಲ್ಲಿಸಿದ್ದರು. ಅಲ್ಲಿಗೆ ಭೇಟಿ ನೀಡಿದ್ದ ಕಾರ್ಟರ್ ಅವರು ತನ್ನ ತಾಯಿ ಸೇವೆ ಸಲ್ಲಿಸಿದ ಗ್ರಾಮದ ಜನರ ಜತೆ ಒಡನಾಟ ಬೆಳೆಸಿಕೊಂಡಿದ್ದರು.

ಅಮೆರಿಕ ಅಧ್ಯಕ್ಷರು ಭೇಟಿ ನೀಡಿದ್ದರ ಗೌರವಾರ್ಥ, ಗ್ರಾಮದ ನಿವಾಸಿಗಳು ಈ ಪ್ರದೇಶವನ್ನು ಕಾರ್ಟರ್‌ಪುರಿ ಎಂದು ಮರು ನಾಮಕರಣ ಮಾಡಿದರು. ಅಲ್ಲದೆ ಕಾರ್ಟರ್ ಅವರ ಅಧಿಕಾರಾವಧಿಯಲ್ಲಿ ಗ್ರಾಮಸ್ಥರು ಶ್ವೇತಭವನದ ಜತೆಗೂ ಸಂಪರ್ಕ ಹೊಂದಿದ್ದರು ಎಂದು ಕಾರ್ಟರ್ ಸೆಂಟರ್ ಮಾಹಿತಿ ನೀಡಿದೆ.

ಕಾರ್ಟರ್ ಅವರಿಗೆ 2002ರಲ್ಲಿ ನೊಬೆಲ್ ಶಾಂತಿ ಪುರಸ್ಕಾರದ ಗೌರವ ಸಂದಾಗ, ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಅಲ್ಲದೆ ಕಾರ್ಟರ್ ಭೇಟಿ ನೀಡಿದ್ದ ಜನವರಿ 3 ಕಾರ್ಟರ್‌ಪುರಿಯಲ್ಲಿ ರಜಾದಿನವಾಗಿ ಉಳಿದಿದೆ ಎಂದೂ ಅದು ಹೇಳಿದೆ.

ಲೋನಾವಾಳದಲ್ಲಿ ಕಾರ್ಟರ್ ಶ್ರಮದಾನ

ಮುಂಬೈ (ಪಿಟಿಐ): ಮುಂಬೈನಿಂದ ಸುಮಾರು 80 ಕಿ.ಮೀ ದೂರದಲ್ಲಿರುವ ಲೋನಾವಾಳ ಬಳಿ ಕಡಿಮೆ ಆದಾಯ ಹೊಂದಿದ 100 ಕುಟುಂಬಗಳಿಗೆ ಮನೆ ನಿರ್ಮಿಸಲು ಜಿಮ್ಮಿ ಕಾರ್ಟರ್ 2006ರಲ್ಲಿ ಸಹಾಯ ಮಾಡಿದ್ದರು.

ಸ್ಥಳೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದ ಸ್ವಯಂ ಸೇವಕರೂ ಲೋನಾವಾಳ ಬಳಿಯ ಪಟಾನ್ ಗ್ರಾಮದಲ್ಲಿ ಮನೆ ಕಟ್ಟಿಕೊಡುವ ಕೆಲಸದಲ್ಲಿ ನಿರತರಾಗಿದ್ದರು. ಸ್ವಯಂ ಸೇವಕರಲ್ಲಿ ಹಾಲಿವುಡ್ ನಟ ಬ್ರಾಟ್ ಪಿಟ್, ಬಾಲಿವುಡ್ ನಟ ಜಾನ್ ಅಬ್ರಹಾಂ ಅವರೂ ಸೇರಿದ್ದರು.

ಎನ್‌ಜಿಒ ‘ಹ್ಯಾಬಿಟೇಟ್ ಫಾರ್ ಹ್ಯುಮಾನಿಟಿ’ ಅಡಿಯಲ್ಲಿ ಈ ಮನೆಗಳನ್ನು ನಿರ್ಮಿಸಲಾಯಿತು. ಕಾರ್ಟರ್ ಅವರು ಸ್ವಯಂ ಸೇವಕರಾಗಿ ತಮ್ಮ ಮರಗೆಲಸದ ಕೌಶಲವನ್ನು ಇಲ್ಲಿ ಪ್ರಸ್ತುತಪಡಿಸುವ ಮೂಲಕ ಶ್ರಮದಾನ ಮಾಡಿದರು.

ಸಚಿವ ನಿತೇಶ್ ರಾಣೆ ಹೇಳಿಕೆಗೆ ವಿಪಕ್ಷಗಳಿಂದ ಟೀಕೆ • ರಾಜೀನಾಮೆಗೆ ಆಗ್ರಹ

‘ಕೇರಳ ಮಿನಿ ಪಾಕಿಸ್ತಾನ’: ನುಡಿ ಕಿಡಿ

ಪ್ರಜಾವಾಣಿ ವಾರ್ತೆ



ನಿತೇಶ್ ರಾಣೆ

ಮುಂಬೈ: ‘ಕೇರಳ ಒಂದು ಮಿನಿ ಪಾಕಿಸ್ತಾನ. ಅದಕ್ಕೇ ಅಲ್ಲಿ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ಚುನಾವಣೆಯಲ್ಲಿ ಗೆದ್ದಿದ್ದಾರೆ. ಅವರಿಗೆ ಮತ ಹಾಕಿದವರು ಭಯೋತ್ಪಾದಕರು’ ಎಂದು ಮಹಾರಾಷ್ಟ್ರದ ಮೀನುಗಾರಿಕೆ ಹಾಗೂ ಬಂದರು ಅಭಿವೃದ್ಧಿ ಸಚಿವರೂ ಆಗಿರುವ ಬಿಜೆಪಿ ಮುಖಂಡ ನಿತೇಶ್ ರಾಣೆ ಹೇಳಿದ್ದಾಗಿ ಮಾಧ್ಯಮವೊಂದು ಮಾಡಿರುವ ವರದಿಯು ಕಿಡಿ ಹೊತ್ತಿಸಿದೆ.

ಅವರ ಹೇಳಿಕೆಯನ್ನು ವಿಪಕ್ಷಗಳಾದ ಕಾಂಗ್ರೆಸ್ ಹಾಗೂ ಮಹಾ ವಿಕಾಸ್ ಆಘಾಡಿ (ಎಂವಿಎ) ಟೀಕಿಸಿದ್ದು, ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಇಂತಹ ಅತಿರೇಕದ ಮಾತನ್ನು ಗಮನಿಸಬೇಕು ಎಂದು ಆಗ್ರಹಿಸಿವೆ.

ಬಿಜಾಪುರದ ಜನರಲ್ ಅಫಜಲ್ ಖಾನ್‌ನನ್ನು ಛತ್ರಪತಿ ಶಿವಾಜಿ ಹತ್ಯೆ ಮಾಡಿದ ದಿನದ ಸ್ಮರಣಾರ್ಥ ಪುಣೆಯ ಪುರಂದರಲ್ಲಿ ನಡೆದ ‘ಶಿವ ಪ್ರತಾಪ್ ದಿವಸ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಈ ರೀತಿ ಟೀಕಿಸಿದರು.

ತಮ್ಮ ಹೇಳಿಕೆಗೆ ಟೀಕೆಗಳು ವ್ಯಕ್ತವಾದ ನಂತರ ಅವರು ತಾವು ಆಡಿದ ಮಾತನ್ನು ಈ ರೀತಿ ಸಮರ್ಥಿಸಿಕೊಂಡರು: ‘ಕೇರಳ ಕೂಡ ನಮ್ಮ ದೇಶದ ಭಾಗವೇ ಹೌದು. ಅಲ್ಲಿ ಹಿಂದೂಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿರುವುದಕ್ಕೆ ಎಲ್ಲರೂ ಆತಂಕಪಡಬೇಕು. ಕ್ರೈಸ್ತ ಹಾಗೂ ಮುಸ್ಲಿಂ ಧರ್ಮಗಳಿಗೆ ಅಲ್ಲಿ ನಿತ್ಯ ಮತಾಂತರ ಮಾಡಲಾಗುತ್ತಿದೆ. ಲವ್ ಜಿಹಾದ್ ಪ್ರಕರಣಗಳೂ ಹೆಚ್ಚಾಗುತ್ತಿವೆ. ಪಾಕಿಸ್ತಾನದಲ್ಲಿ ಹಿಂದೂಗಳ ವಿಷಯದಲ್ಲಿ ಹೇಗೆ ವರ್ತಿಸುತ್ತಿದ್ದಾರೆಯೋ ಅದೇ ಪರಿಸ್ಥಿತಿ ಮುಂದೆ ಕೇರಳದಲ್ಲಿ ಉದ್ಭವಿಸಲಿದೆ ಎಂಬ ಅರ್ಥದಲ್ಲಿ ನಾನು ಮಾತನಾಡಿದ್ದೆ. ನಾನು ಹೇಳಿರುವುದನ್ನು ಸುಳ್ಳು ಎಂದು ಕಾಂಗ್ರೆಸ್ ಸೇರಿದಂತೆ ವಿಪಕ್ಷಗಳು ಸಾಬೀತುಪಡಿಸಲಿ’ ಎಂದರು.

ಕೇರಳದಲ್ಲಿ ಮುಂದಿನ ಚುನಾವಣೆಯಲ್ಲಿ ಅವರ ಪಕ್ಷ ಸ್ಪರ್ಧಿಸುವುದಿಲ್ಲವೇ ಎಂದು ಜೆ.ಪಿ. ನಡ್ಡಾ ಅವರನ್ನು ಕೇಳಬೇಕು. ಸಂವಿಧಾನ ವಿರೋಧಿ ಹೇಳಿಕೆಗಳನ್ನು ಪದೇ ಪದೇ ನೀಡಲಾಗುತ್ತಿದೆ
ಪವನ್ ಖೇರಾ, ಕಾಂಗ್ರೆಸ್ ವಕ್ತಾರ

ದೇಶದ ದೊಡ್ಡ ಸಾಕ್ಷರ ರಾಜ್ಯದ ಹೆಸರಿಗೆ ನಿರಕ್ಷರ ಕುಕ್ಷಿ ನಿತೇಶ್ ರಾಣಾ ನಿರ್ಲಜ್ಜೆಯಿಂದ ಕಳಂಕ ತರುವ ಮಾತನಾಡಿದ್ದಾರೆ
ಕ್ಲಾಯ್ಡ್ ಕ್ರಾಸ್ಟೊ, ಎಸ್‌ಪಿ ವಕ್ತಾರ

ನಮ್ಮದೇ ದೇಶದ ರಾಜ್ಯವನ್ನು ‘ಮಿನಿ ಪಾಕಿಸ್ತಾನ’ ಎಂದು ಕರೆದವರನ್ನು ಸಚಿವ ಸಂಪುಟದಲ್ಲಿ ಇಟ್ಟುಕೊಳ್ಳಲು ಹೇಗೆ ಸಾಧ್ಯ ಎಂದು ಮುಖ್ಯಮಂತ್ರಿ, ಪ್ರಧಾನಿ ಹೇಳಬೇಕು
ಅತುಲ್ ಲೋಂಢೆ, ಕಾಂಗ್ರೆಸ್ ವಕ್ತಾರ

‘ಸಾವಿನಲ್ಲಿ ರಾಜಕೀಯ ಮಾಡಿ, ವಿಯೆಟ್ನಾಂಗೆ ರಾಹುಲ್’



ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): ‘ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ನಿಧನದ ವಿಚಾರದಲ್ಲೂ ಅನುಕೂಲಸಿಂಧು ರಾಜಕೀಯ ಮಾಡಿದ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ, ಶೋಕಾಚರಣೆಯ ಮಧ್ಯದಲ್ಲೇ ಹೊಸ ವರ್ಷಾಚರಿಸಲು ವಿಯೆಟ್ನಾಂಗೆ ಹಾರಿದ್ದಾರೆ’ ಎಂದು ಬಿಜೆಪಿ ಟೀಕೆ ಮಾಡಿದೆ.

ಇದಕ್ಕೆ ತಿರುಗೇಟು ನೀಡಿರುವ ಕಾಂಗ್ರೆಸ್, ‘ಸಂಘಿಗಳು, ವಿಷಯಾಂತರ ರಾಜಕೀಯ ಮಾಡುವುದನ್ನು ಕೊನೆಗೊಳಿಸಲಿ’ ಎಂದು ಪ್ರತಿಕ್ರಿಯಿಸಿದೆ.

‘ಸಿಂಗ್ ಅವರ ನಿಧನಕ್ಕೆ ಇಡೀ ದೇಶವೇ ಶೋಕ ವ್ಯಕ್ತಪಡಿಸುತ್ತಿರುವ ವೇಳೆ ರಾಹುಲ್ ಗಾಂಧಿ ಅವರು ಹೊಸ ವರ್ಷಾಚರಣೆಗಾಗಿ ವಿಯೆಟ್ನಾಂಗೆ ಹಾರಿದ್ದಾರೆ’ ಎಂದು ಬಿಜೆಪಿಯ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

‘ಗಾಂಧಿ’ ಕುಟುಂಬಸ್ಥರು ಹಾಗೂ ಕಾಂಗ್ರೆಸ್ ಪಕ್ಷದವರು ಸಿಖ್ ಸಮುದಾಯದವರನ್ನು ದ್ವೇಷಿಸುತ್ತಾರೆ. ಇಂದಿರಾ ಗಾಂಧಿ ಅವರು ದರ್ಬಾರ್ ಸಾಹಿಬ್‌ಗೆ ಅವಮಾನ ಮಾಡಿದ್ದನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ’ ಎಂದು ಹೇಳಿದ್ದಾರೆ.

ಇದಕ್ಕೆ ತಿರುಗೇಟು ನೀಡಿರುವ ಕಾಂಗ್ರೆಸ್ ಸಂಸದ ಮಣಿಕಮ್ ಟ್ಯಾಗೋರ್, ‘ವಿಷಯಾಂತರ ಮಾಡುವ ರಾಜಕೀಯವನ್ನು ಸಂಘಿಗಳು ಯಾವಾಗ ಕೊನೆಗೊಳಿಸುತ್ತಾರೆ? ಯಮುನಾ ನದಿ ದಂಡೆಯಲ್ಲಿ ಸಿಂಗ್ ಅವರ ಅಂತ್ಯಸಂಸ್ಕಾರಕ್ಕೆ ಅವಕಾಶ ನಿರಾಕರಿಸಿದ ಪ್ರಧಾನಿ ನರೇಂದ್ರ ಮೋದಿ ಹಾಗೂ ಸಚಿವರು, ಅವರ ಕುಟುಂಬವನ್ನು ಮೂಲೆಗುಂಪು ಮಾಡಿದ್ದು ನಾಚಿಕೆಗೇಡಿನ ವಿಚಾರ’ ಎಂದು ತಿಳಿಸಿದರು.

‘ರಾಹುಲ್ ಗಾಂಧಿ ಖಾಸಗಿಯಾಗಿ ಪ್ರಯಾಣ ಬೆಳೆಸಿದರೆ, ನಿಮಗೆ ಯಾಕೆ ಚಿಂತೆ? ಹೊಸ ವರ್ಷದಲ್ಲಿ ಒಳಿತಾಗಲಿ’ ಎಂದು ಮಾಳವೀಯಗೆ ತಿಳಿಸಿದ್ದಾರೆ.

‘ಖಾಸಗಿತನ ಗೌರವಿಸಿ ಅಸ್ಥಿ ವಿಸರ್ಜನೆಯಲ್ಲಿ ಭಾಗಿಯಾಗಿಲ್ಲ’

ನವದೆಹಲಿ: ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ಕುಟುಂಬದ ಖಾಸಗಿತನವನ್ನು ಗೌರವಿಸುವ ಸಲುವಾಗಿ, ಸಿಂಗ್ ಅವರ ಚಿತಾಭಸ್ಮ ವಿಸರ್ಜನೆ ಪ್ರಕ್ರಿಯೆಯಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರು ಭಾಗಿಯಾಗಿರಲಿಲ್ಲ ಎಂದು ಪಕ್ಷವು ಸೋಮವಾರ ತಿಳಿಸಿದೆ.

ಕಾಂಗ್ರೆಸ್ ವಿರುದ್ಧ ಅದರಲ್ಲೂ ಮುಖ್ಯವಾಗಿ ರಾಹುಲ್ ಗಾಂಧಿ ವಿರುದ್ಧ ಬಿಜೆಪಿಯು ಟೀಕೆ ಮಾಡಿದ ಬೆನ್ನಲ್ಲೇ ಈ ಸ್ಪಷ್ಟನೆ ನೀಡಿದೆ.

‘ಸಿಂಗ್ ಅವರ ಅಂತ್ಯಕ್ರಿಯೆಯ ಬಳಿಕ ಪಕ್ಷದ ಹಿರಿಯ ನಾಯಕಿ ಸೋನಿಯಾ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಮೃತರ ನಿವಾಸಕ್ಕೆ ತೆರಳಿ ಕುಟುಂಬದ ಸದಸ್ಯರನ್ನು ಭೇಟಿಯಾಗಿದ್ದರು’ ಎಂದು ಪಕ್ಷದ ನಾಯಕ ಪವನ್ ಖೇರಾ ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಅಂತ್ಯಸಂಸ್ಕಾರದ ಸಮಯದಲ್ಲಿ ಕುಟುಂಬಕ್ಕೆ ಖಾಸಗಿತನ ಸಿಗಲಿಲ್ಲ. ಕುಟುಂಬದ ಕೆಲವು ಸದಸ್ಯರು ಚಿತಾಗಾರವನ್ನು ತಲುಪಲು ಸಾಧ್ಯವಾಗದ ಕಾರಣ ಅಸ್ಥಿ ವಿಸರ್ಜನೆ ಸಂದರ್ಭದಲ್ಲಾದರೂ ಕುಟುಂಬದ ಖಾಸಗಿತನವನ್ನು ಕಾಪಾಡಬೇಕೆಂದು ಈ ನಿರ್ಧಾರವನ್ನು ತೆಗೆದುಕೊಳ್ಳಲಾಯಿತು' ಎಂದು ತಿಳಿಸಿದ್ದಾರೆ.

ಸ್ಪೇಡೆಕ್ಸ್ ಯೋಜನೆ: ಯಶಸ್ವಿ ಉಡ್ಡಯನ



ಎರಡು ಉಪಗ್ರಹಗಳನ್ನು ಹೊತ್ತ ಪಿಎಸ್‌ಎಲ್‌ವಿ ರಾಕೆಟ್ ಅನ್ನು ಸೋಮವಾರ ರಾತ್ರಿ 10 ಗಂಟೆಗೆ ಆಂಧ್ರ ಪ್ರದೇಶದ ಶ್ರೀಹರಿಕೋಟಾದಿಂದ ಯಶಸ್ವಿಯಾಗಿ ಉಡ್ಡಯನ ಮಾಡಲಾಯಿತು —ಪಿಟಿಐ ಚಿತ್ರ

ಶ್ರೀಹರಿಕೋಟಾ (ಪಿಟಿಐ): ಬಾಹ್ಯಾಕಾಶದಲ್ಲಿ ಎರಡು ಉಪಗ್ರಹಗಳನ್ನು ಜೋಡಿಸುವಂಥ (ಡಾಕಿಂಗ್) ಸ್ಪೇಡೆಕ್ಸ್ ಯೋಜನೆಗಾಗಿ ಎರಡು ಉಪಗ್ರಹಗಳನ್ನು ಹೊತ್ತ ಪಿಎಸ್‌ಎಲ್‌ವಿ ರಾಕೆಟ್ ಅನ್ನು ಸೋಮವಾರ ರಾತ್ರಿ 10 ಗಂಟೆಗೆ ಆಂಧ್ರ ಪ್ರದೇಶದ ಶ್ರೀಹರಿಕೋಟಾದಿಂದ ಯಶಸ್ವಿಯಾಗಿ ಉಡ್ಡಯನ ಮಾಡಲಾಗಿದೆ.

ಕಕ್ಷೆಯಲ್ಲಿ ಬಾಹ್ಯಾಕಾಶ ನೌಕೆಗಳ ‘ಡಾಕಿಂಗ್’ ಮತ್ತು ‘ಅನ್‌ಡಾಕಿಂಗ್’ ನಡೆಸುವ ಸಾಮರ್ಥ್ಯವನ್ನು ಪ್ರದರ್ಶಿಸುವ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಮಹತ್ತರ ಯೋಜನೆ ಇದಾಗಿದೆ.

ನೌಕೆಯು ‘ಸ್ಪೇಡೆಕ್ಸ್-ಎ’ ಹಾಗೂ ‘ಸ್ಪೇಡೆಕ್ಸ್-ಬಿ’ ಎರಡು ಉಪಗ್ರಹವನ್ನು ಹೊತ್ತೊಯ್ದಿದೆ. ಇವೇ ಎರಡು ಉಪಗ್ರಹಗಳನ್ನು ಜೋಡಿಸಲಾಗುತ್ತದೆ. ಈ ಮೊದಲು ಸೋಮವಾರ ರಾತ್ರಿ 9.58ಕ್ಕೆ ಉಡ್ಡಯನ ಮಾಡಲು ನಿರ್ಧರಿಸಲಾಗಿತ್ತು. ಯಾಕಾಗಿ ಎರಡು ನಿಮಿಷ ತಡವಾಗಿ ಉಡ್ಡಯನ ಮಾಡಲಾಗಿದೆ ಎಂಬುದನ್ನು ಇಸ್ರೊ ಬಹಿರಂಗಪಡಿಸಿಲ್ಲ.

‘ಈ ಕಾರ್ಯಕ್ರಮವು ಬಾಹ್ಯಾಕಾಶ ನೌಕೆಗಳ ‘ಡಾಕಿಂಗ್’ ತಂತ್ರಜ್ಞಾನವನ್ನು ಹೊಂದಿರುವ ಕೆಲವೇ ದೇಶಗಳ ಪಟ್ಟಿಗೆ ಭಾರತವನ್ನು ಸೇರಿಸಲಿದೆ’ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಜಿತೇಂದ್ರ ಸಿಂಗ್ ಹೇಳಿದ್ದಾರೆ. ಅಮೆರಿಕ, ರಷ್ಯಾ ಮತ್ತು ಚೀನಾ ಮಾತ್ರ ಬಾಹ್ಯಾಕಾಶ ನೌಕೆಗಳ ‘ಡಾಕಿಂಗ್’ ತಂತ್ರಜ್ಞಾನವನ್ನು ಹೊಂದಿರುವ ದೇಶಗಳಾಗಿವೆ.

ಪರದಾಡಿದ ಪ್ರಯಾಣಿಕರು

ಪಂಜಾಬ್ ಬಂದ್: ಹೆದ್ದಾರಿ ತಡೆ, ರೈಲು ಸಂಚಾರಕ್ಕೆ ಅಡ್ಡಿ

ಚಂಡೀಗಢ (ಪಿಟಿಐ): ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿ ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗಾಗಿ ಪಂಜಾಬ್‌ನಲ್ಲಿ ರೈತರು ಸೋಮವಾರ ಬಂದ್ ನಡೆಸಿದರು.

ಪ್ರತಿಭಟನಕಾರರು ಹಲವೆಡೆ ರಸ್ತೆ ಮತ್ತು ರೈಲು ತಡೆ ನಡೆಸಿದ ಕಾರಣ ಪ್ರಯಾಣಿಕರು ಪರದಾಡಿದರು. ಹಲವು ಕಡೆಗಳಲ್ಲಿ ವಾಣಿಜ್ಯ ಕಟ್ಟಡಗಳ ಬಾಗಿಲು ಮುಚ್ಚಲಾಗಿತ್ತು.

ಪಟಿಯಾಲಾ, ಜಲಂಧರ್, ಅಮೃತಸರ, ಫಿರೋಜ್‌ಪುರ, ಪಠಾಣ್‌ಕೋಟ್ ಸೇರಿದಂತೆ ಹಲವು ಕಡೆಗಳ ರಸ್ತೆ ಮತ್ತು ಹೆದ್ದಾರಿಗಳಲ್ಲಿ ಬೆಳಿಗ್ಗೆ 7ರಿಂದ ಸಂಜೆ 4 ಗಂಟೆವರೆಗೆ ರೈತರು ಧರಣಿ ನಡೆಸಿದರು. ಧಾರೇರಿ ಜಟ್ಟನ್ ಟೋಲ್ ಪ್ಲಾಜಾ ಬಳಿಯಲ್ಲಿ ರೈತರು ಧರಣಿ ಕುಳಿತ ಕಾರಣ ಪಟಿಯಾಲಾ–ಚಂಡೀಗಢ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳ ಓಡಾಟಕ್ಕೆ ಅಡಚಣೆ ಉಂಟಾಗಿತ್ತು.

ಕೆಲವು ಕಡೆಗಳಲ್ಲಿ ಪ್ರಯಾಣಿಕರು ಮತ್ತು ಪ್ರತಿಭಟನಕಾರರ ಮಧ್ಯೆ ಮಾತಿನ ಚಕಮಕಿ ನಡೆಯಿತು.

ಕೆಲವು ಕಡೆಗಳಲ್ಲಿ ರೈತರು ಬಲವಂತವಾಗಿ ರೈಲುಗಳ ಸಂಚಾರವನ್ನು ರದ್ದುಪಡಿಸಿದರು. ಹೀಗಾಗಿ ಫಿರೋಜ್‌ಪುರ, ಜಲಂಧರ್, ಲೂಧಿಯಾನಾ ರೈಲು ನಿಲ್ದಾಣಗಳಲ್ಲಿ ಸಾವಿರಾರು ಪ್ರಯಾಣಿಕರು ಅತಂತ್ರರಾಗಿ ಪರದಾಡಿದರು.

ಅರ್ಚಕರಿಗೆ ಮಾಸಿಕ ₹18 ಸಾವಿರ: ಭರವಸೆ



ಅರವಿಂದ್ ಕೇಜ್ರಿವಾಲ್

ನವದೆಹಲಿ: ‘ದೆಹಲಿಯಲ್ಲಿ ಪಕ್ಷ ಮತ್ತೆ ಅಧಿಕಾರಕ್ಕೆ ಬಂದರೆ, ರಾಜ್ಯದ ಹಿಂದೂ ದೇವಾಲಯಗಳ ಅರ್ಚಕರು, ಗುರುದ್ವಾರದ ಗ್ರಂಥಿಗಳಿಗೆ ಮಾಸಿಕ ₹18 ಸಾವಿರ ಭತ್ಯೆ ನೀಡುವ ‘ಪೂಜಾರಿ– ಗ್ರಂಥಿ ಸಮ್ಮಾನ್ ಯೋಜನೆ’ ಜಾರಿಗೊಳಿಸಲಾಗುವುದು’ ಎಂದು ಆಮ್ ಆದ್ಮಿ ಪಕ್ಷದ ಸಂಚಾಲಕ ಅರವಿಂದ ಕೇಜ್ರಿವಾಲ್ ಘೋಷಿಸಿದ್ದಾರೆ.

ವಿಧಾನಸಭಾ ಚುನಾವಣೆಗೆ ದಿನಾಂಕ ಪ್ರಕಟವಾಗಲು ಕೆಲವು ದಿನಗಳು ಬಾಕಿ ಇರುವಂತೆಯೇ ಪಕ್ಷವು ಈ ಘೋಷಣೆ ಮಾಡಿದೆ.

ವೇತನ ವಿಳಂಬ–ಪ್ರತಿಭಟನೆ: ಗೌರವಧನ ವಿಳಂಬ ಖಂಡಿಸಿ ಮಸೀದಿಯ ಇಮಾಮ್‌ಗಳು ಸೋಮವಾರ ದೆಹಲಿ ವಕ್ಫ್ ಬೋರ್ಡ್ ಹಾಗೂ ಕೇಜ್ರಿವಾಲ್ ನಿವಾಸದ ಮುಂದೆ ಪ್ರತಿಭಟನೆ ನಡೆಸಿದರು.

ದೆಹಲಿ ಸರ್ಕಾರವು ಮಸೀದಿಯ ಇಮಾಮ್‌ಗಳಿಗೆ ಮಾಸಿಕ ₹18 ಸಾವಿರ, ಮುಅಝ್ಝಿನ್ (ಆಝಾನ್ ಕರೆ ಕೊಡುವವರು)ಗಳಿಗೆ ₹16 ಸಾವಿರ ಗೌರವಧನ ನೀಡುವುದಾಗಿ ಘೋಷಿಸಿತ್ತು. ಕಳೆದ ಒಂದೂವರೆ ವರ್ಷದಿಂದ ಈ ಹಣ ಬಿಡುಗಡೆಯಾಗಿಲ್ಲ ಎಂದು ಪ್ರತಿಭಟನಕಾರರು ತಿಳಿಸಿದರು.

ಹೊಸ ವರ್ಷ ಆಚರಣೆಗೆ ‘ಕಾಂಡೋಮ್’ ಆಹ್ವಾನ

ಪುಣೆ (ಪಿಟಿಐ): ಕಾಂಡೋಮ್ ನೀಡುವ ಮೂಲಕ ಹೊಸ ವರ್ಷದ ಸಂಭ್ರಮಾಚರಣೆಗೆ ಆಹ್ವಾನ ನೀಡುತ್ತಿರುವ ಪುಣೆಯ ಪಬ್‌ವೊಂದರ ವಿರುದ್ಧ ಅಸಮಾಧಾನ ಸ್ಫೋಟಗೊಂಡಿದೆ.

ಯುವ ಸಮೂಹಕ್ಕೆ ಕಾಂಡೋಮ್ ಹಾಗೂ ಒಆರ್‌ಎಸ್‌ನೊಂದಿಗೆ ಆಹ್ವಾನ ನೀಡುತ್ತಿರುವ ದೃಶ್ಯಗಳು ಹರಿದಾಡುತ್ತಿದ್ದಂತೆ, ಪಬ್‌ನ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಮಹಾರಾಷ್ಟ್ರ ಪ್ರದೇಶ ಯುವ ಕಾಂಗ್ರೆಸ್ ಘಟಕವು ಪುಣೆ ಪೊಲೀಸ್ ಆಯುಕ್ತ ಅಮಿತೇಶ್ ಕುಮಾರ್‌ಗೆ ದೂರು ನೀಡಿದೆ.

‘ನಾವು ಪಬ್ ಹಾಗೂ ರಾತ್ರಿ ಜೀವನದ ವಿರುದ್ಧವಾಗಿಲ್ಲ. ಆದರೆ, ಪಬ್ ಅನುಸರಿಸಿದ ಮಾರುಕಟ್ಟೆ ತಂತ್ರವು ಸಂಪ್ರದಾಯಕ್ಕೆ ವಿರುದ್ಧವಾಗಿದೆ’ ಎಂದು ಯುವ ಕಾಂಗ್ರೆಸ್‌ನ ಅಕ್ಷಯ್ ಜೈನ್ ತಿಳಿಸಿದ್ದಾರೆ.

ಅಲ್ಲು ಅರ್ಜುನ್ ಜಾಮೀನು ಅರ್ಜಿ ಆದೇಶ ಕಾಯ್ದಿರಿಸಿದ ಕೋರ್ಟ್

ಹೈದರಾಬಾದ್ (ಪಿಟಿಐ): ‘ಪುಷ್ಪ–2’ ಚಿತ್ರದ ಪ್ರದರ್ಶನದ ವೇಳೆ ಚಿತ್ರಮಂದಿರದಲ್ಲಿ ಉಂಟಾದ ಕಾಲ್ತುಳಿತದಿಂದ ಮಹಿಳೆಯೊಬ್ಬರು ಮೃತಪಟ್ಟ ಪ್ರಕರಣದ ಆರೋಪಿ, ತೆಲುಗು ನಟ ಅಲ್ಲು ಅರ್ಜುನ್ ಅವರ ಜಾಮೀನು ಅರ್ಜಿ ಕುರಿತ ಆದೇಶವನ್ನು ಇಲ್ಲಿನ ನ್ಯಾಯಾಲಯ ಸೋಮವಾರ ಕಾಯ್ದಿರಿಸಿದೆ.

ಎರಡನೇ ಹೆಚ್ಚುವರಿ ಮೆಟ್ರೊಪಾಲಿಟನ್ ಸೆಷನ್ಸ್ ನ್ಯಾಯಾಧೀಶರು, ಜಾಮೀನು ಪ್ರಶ್ನಿಸಿ ಸಲ್ಲಿರುವ ಪೊಲೀಸರ ವಾದ ಮತ್ತು ನಟನ ಪರ ವಕೀಲರ ವಾದಗಳನ್ನು ಆಲಿಸಿದ ನಂತರ, ತಮ್ಮ ತೀರ್ಪನ್ನು 2025ರ ಜನವರಿ 3ಕ್ಕೆ ಕಾಯ್ದಿರಿಸಿದರು.

ಪ್ರಕರಣದ 11ನೇ ಆರೋಪಿಯಾಗಿರುವ ಅಲ್ಲು ಅರ್ಜುನ್ ಈ ಹಿಂದೆ ಜಾಮೀನು ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ಡಿ. 27ರಂದು ವಿಡಿಯೊ ಕಾನ್ಫರೆನ್ಸ್ ಮೂಲಕ ಕೋರ್ಟ್ ವಿಚಾರಣೆಗೂ ಹಾಜರಾಗಿದ್ದರು.

ಬಾಲಕ ಸ್ವಲ್ಪ ಚೇತರಿಕೆ: ಕಾಲ್ತುಳಿತದ ವೇಳೆ ಗಾಯಗೊಂಡಿದ್ದ 8 ವರ್ಷದ ಬಾಲಕ ಶ್ರೀತೇಜ್ ಆರೋಗ್ಯದಲ್ಲಿ ಸ್ವಲ್ಪ ಚೇತರಿಕೆ ಕಾಣಿಸುತ್ತಿದೆ ಚಿಕಿತ್ಸೆ ನೀಡುತ್ತಿರುವ ಇಲ್ಲಿನ ಆಸ್ಪತ್ರೆ ತಿಳಿಸಿದೆ.

ಕಾಲ್ತುಳಿತಕ್ಕೆ ಸಿಲುಕಿ ಮೃತಪಟ್ಟ ಮಹಿಳೆಯ ಕುಟುಂಬವನ್ನು ‘ಪುಷ್ಪ–2’ ಸಿನಿಮಾ ತಂಡ ಶೀಘ್ರವೇ ಭೇಟಿ ಮಾಡಿ, ನೋವಿನಲ್ಲಿ ಭಾಗಿಯಾಗುವ ಭರವಸೆ ನೀಡಿದ್ದರೆ ವಿಷಯ ಇಷ್ಟೊಂದು ದೊಡ್ಡದಾಗುತ್ತಿರಲಿಲ್ಲ
ಪವನ್ ಕಲ್ಯಾಣ್, ಡಿಸಿಎಂ ಆಂಧ್ರಪ್ರದೇಶ



ಗಾಜಿನ ಸೇತುವೆ.... ಕನ್ಯಾಕುಮಾರಿಯಲ್ಲಿರುವ ವಿವೇಕಾನಂದ ಕಲ್ಲಿನ ಸ್ಮಾರಕ ಹಾಗೂ ತಿರುವಳ್ಳುವರ್ ಪ್ರತಿಮೆ ನಡುವೆ ಸಂಪರ್ಕ ಕಲ್ಪಿಸುವ ಗಾಜಿನ ಸೇತುವೆಯನ್ನು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಸೋಮವಾರ ಉದ್ಘಾಟಿಸಿದರು –ಪಿಟಿಐ ಚಿತ್ರ

ಪ್ರಿಯಾಂಕ್ ಪರ–ವಿರೋಧ ವಾಗ್ವಾದ

ಒಂದನೇ ಪುಟದಿಂದ...

‘ನಮ್ಮದು ಸ್ವಚ್ಛ ಸರ್ಕಾರ. ಗುತ್ತಿಗೆದಾರನ ಸಾವಿಗೂ, ಸಚಿವ ಪ್ರಿಯಾಂಕ್ ಖರ್ಗೆಗೂ ಸಂಬಂಧವಿಲ್ಲ. ಆತ್ಮಹತ್ಯೆ ಪತ್ರದಲ್ಲಿ ಅವರ ವಿರುದ್ಧ ನೇರ ಆರೋಪವಿಲ್ಲ. ಬೇರೆಯವರ ಮೇಲೆ ಆರೋಪ ಮಾಡಿದಾಕ್ಷಣ ಸಚಿವರು ರಾಜೀನಾಮೆ ನೀಡಲು ಆಗದು. ಪ್ರಿಯಾಂಕ್ ಖರ್ಗೆ ಪ್ರಾಮಾಣಿಕ ರಾಜಕಾರಣಿ, ಕಾಂಗ್ರೆಸ್ ಪಕ್ಷದ ಧ್ವನಿ. ದಲಿತ ಸಮುದಾಯದ ನಾಯಕ ದೊಡ್ಡಮಟ್ಟಕ್ಕೆ ಬೆಳೆಯುತ್ತಿದ್ದಾರೆ ಎಂದು ವಿರೋಧ ಪಕ್ಷಗಳಿಗೆ ಅಸೂಯೆ. ಸಹಿಸಲು ಅವರಿಗೆ ಸಾಧ್ಯವಾಗುತ್ತಿಲ್ಲ’ ಎಂದು ಅವರು ಟೀಕಿಸಿದರು.

ಸಿಬಿಐ ತನಿಖೆಗೆ ಅನಗತ್ಯ: ‘ಬಿಜೆಪಿ ಸರ್ಕಾರ ಇದ್ದಾಗ ನನ್ನ ಪ್ರಕರಣವನ್ನು ಮಾತ್ರ ಸಿಬಿಐಗೆ ನೀಡಿದ್ದರು. ಬಿಜೆಪಿ ಸರ್ಕಾರದ ಸಚಿವರ ಪ್ರಕರಣಗಳನ್ನು ಸಿಬಿಐಗೆ ಅಂದು ಏಕೆ ನೀಡಲಿಲ್ಲ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಡಿ.ಕೆ. ರವಿ, ಸೌಜನ್ಯ ಸಾವು, ಪರೇಶ್ ಮೆಸ್ತಾ ಪ್ರಕರಣ ಸೇರಿದಂತೆ ಸುಮಾರು 12 ಪ್ರಕರಣಗಳನ್ನು ಸಿಬಿಐ ತನಿಖೆಗೆ ನೀಡಿದ್ದೆವು’ ಎಂದು ತಿಳಿಸಿದರು.

ಸಿಐಡಿಗೆ ವಹಿಸಲಾಗಿದೆ: ಗೃಹ ಸಚಿವ ಪರಮೇಶ್ವರ

‘ಸಚಿವ ಪ್ರಿಯಾಂಕ್ ಖರ್ಗೆ ಅವರ ಮೇಲೆ ಬಿಜೆಪಿ ಮಾಡಿರುವ ಆರೋಪ ಆಧಾರರಹಿತ. ಪ್ರಕರಣವನ್ನು ಈಗಾಗಲೇ ಸಿಐಡಿಗೆ ವಹಿಸಲಾಗಿದೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಮರಣಪತ್ರದಲ್ಲಿ ಅವರ ಹೆಸರು ಕೂಡ ಇಲ್ಲ ಎಂದು ಇಲಾಖೆಯ ಅಧಿಕಾರಿಗಳು ಹೇಳಿದ್ದಾರೆ. ಸಚಿವರ ಹೆಸರನ್ನು ತಂದು, ಸರ್ಕಾರಕ್ಕೆ ಮಸಿ ಬಳಿಯುವ ಕೆಲಸ ಬಿಜೆಪಿ ಮಾಡುತ್ತಿದೆ. ಸತ್ಯಾಸತ್ಯತೆ ಹೊರಬರಲಿ ಎಂಬ ದೃಷ್ಟಿಯಿಂದ ಮುಖ್ಯಮಂತ್ರಿ ಜತೆ ಚರ್ಚಿಸಿ ಸಿಐಡಿಗೆ ವಹಿಸಲಾಗಿದೆ’ ಎಂದು ಹೇಳಿದರು.

‘ಸಿಬಿಐಗೆ ವಹಿಸುವಂತೆ ಬಿಜೆಪಿ ಒತ್ತಾಯಿಸುತ್ತಿರುವ ಕುರಿತು ಪ್ರತಿಕ್ರಿಯಿಸಿದ ಅವರು, ಎಲ್ಲ ಪ್ರಕರಣಗಳನ್ನೂ ಸಿಬಿಐಗೆ ವಹಿಸಲು ಆಗುವುದಿಲ್ಲ. ಸಿಐಡಿ ಸಮರ್ಥವಾಗಿದೆ. ಹಲವು ಪ್ರಕರಣಗಳಲ್ಲಿ ಸಿಐಡಿ ತನಿಖೆಯ ವರದಿ ಬಂದಿವೆ. ಬಿಜೆಪಿ ಸಕಾರಾತ್ಮಕ ಸಲಹೆ, ಸೂಚನೆ ನೀಡಿದರೆ ಕೇಳುತ್ತೇವೆ. ರಾಜಕೀಯ ಮಾಡಲು ಹೋದರೆ ತಕ್ಕ ಉತ್ತರ ನೀಡಲು ಸರ್ಕಾರ ಸಮರ್ಥವಾಗಿದೆ’ ಎಂದು ಹೇಳಿದರು.

ಸಿಐಡಿ ತನಿಖೆ: ಸಿ.ಎಂ.ಗೆ ಪ್ರಿಯಾಂಕ್ ಪತ್ರ

ಸಚಿನ್ ಪಾಂಚಾಳ ಆತ್ಮಹತ್ಯೆ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

ಈ ಪ್ರಕರಣ ಅತ್ಯಂತ ದುರದೃಷ್ಟಕರ ಮತ್ತು ಖೇದದ ಸಂಗತಿಯಾಗಿದ್ದು, ಇದರ ಬಗ್ಗೆ ಸಂಶಯ ಮೂಡಿಸುವ ಹಲವು ವಿಚಾರಗಳು ಸಾರ್ವಜನಿಕ ವಲಯದಲ್ಲಿ ಚರ್ಚೆ ಆಗುತ್ತಿದೆ. ಈ ಕುರಿತು ಸತ್ಯಾಂಶ ತಿಳಿಯಲು ಸಿಐಡಿಗೆ ವಹಿಸಬೇಕು ಎಂದು ಪತ್ರದಲ್ಲಿ ಹೇಳಿದ್ದಾರೆ.

ಈ ಕುರಿತು ಸುದ್ದಿಗಾರರ ಜತೆ ಮಾತನಾಡಿದ ಪ್ರಿಯಾಂಕ್ ಖರ್ಗೆ, ‘ಸ್ವತಂತ್ರ ತನಿಖೆ ನಡೆಸುವಂತೆ ಮುಖ್ಯಮಂತ್ರಿ, ಗೃಹ ಸಚಿವರನ್ನು ನಾನೇ ಕೋರಿದ್ದೇನೆ. ರಾಜೀನಾಮೆಗೆ ಆಗ್ರಹಿಸಿ ನಮ್ಮ ಮನೆಗೆ ಮುತ್ತಿಗೆ ಹಾಕಲು ಬಿಜೆಪಿಗೆ ಬೇಡ ಅನ್ನುವುದಿಲ್ಲ. ರಾಜ್ಯದ ಜನರು ಅವರನ್ನು ನೋಡಿ ನಗುತ್ತಿದ್ದಾರೆ’ ಎಂದರು.

‘ಅತ್ಯಾಚಾರ ಆರೋಪ ಹೊತ್ತಿರುವ ಶಾಸಕ ಮುನಿರತ್ನ ಅವರಿಗೆ ಬಿಜೆಪಿ ನೋಟಿಸ್ ನೀಡಿದೆಯಾ? ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರಿಗೇ ಚುಚ್ಚುಮದ್ದು ನೀಡಲು ಹೋದವರ ವಿರುದ್ಧ ಏಕೆ ಕ್ರಮ ಕೈಗೊಳ್ಳಲಿಲ್ಲ. ಅಂತಹ ಪಕ್ಷಕ್ಕೆ ನನ್ನ ಮನೆಗೆ ಮುತ್ತಿಗೆ ಹಾಕಲು ಯಾವ ನೈತಿಕತೆ ಇದೆ’ ಎಂದು ಪ್ರಶ್ನಿಸಿದರು.

‘ಸಚಿನ್ ಆತ್ಮಹತ್ಯೆ ಸರ್ಕಾರಿ ಪ್ರಾಯೋಜಿತ’

ಒಂದನೇ ಪುಟದಿಂದ...

ಬದಲಿಗೆ ಅವರಿಗೆ ಅವಮಾನ ಮಾಡಿಕಳಿಸಿದ್ದರು. ಪೊಲೀಸರು ಸಕಾಲದಲ್ಲಿ ಕ್ರಮ ತೆಗೆದುಕೊಂಡಿದ್ದರೆ ಜೀವ ಉಳಿಸಬಹುದಾದ ಸಾಧ್ಯತೆ ಇತ್ತು ಎಂದು ಹೇಳಿದರು.

ಕಲಬುರಗಿಯಲ್ಲಿನ ಪೊಲೀಸ್ ಠಾಣೆಗಳು ಕಾಂಗ್ರೆಸ್ ಕಚೇರಿಗಳ ಮಾದರಿಯಲ್ಲಿ ಕೆಲಸ ಮಾಡುತ್ತಿವೆ. ‘ರಿಪಬ್ಲಿಕ್ ಆಫ್ ಗುಲ್ಬರ್ಗ’ ಯಾರ ಕಪಿಮುಷ್ಠಿಯಲ್ಲಿದೆ ಎಂದು ಅಲ್ಲಿನ ಬಸ್ ನಿಲ್ದಾಣದಲ್ಲಿ ಯಾರು ಕೇಳಿದರೂ ಹೇಳುತ್ತಾರೆ. ಕಲಬುರಗಿ ಜಿಲ್ಲೆಯಲ್ಲಿ ಅನೇಕ ಆತ್ಮಹತ್ಯೆ, ಕೊಲೆ ಪ್ರಕರಣಗಳು ನಡೆದಿವೆ. ಅವುಗಳನ್ನು ಮುಚ್ಚಿ ಹಾಕಿದ್ದಾರೆ. ಕಾಂಗ್ರೆಸ್‌ನವರು ಹಗಲು ವೇಳೆಯಲ್ಲಿ ಬಾಧಿತ ಕುಟುಂಬದವರನ್ನು ಭೇಟಿ ಮಾಡುವುದಿಲ್ಲ. ಬೆಳಗಿನ ಜಾವ 3 ಗಂಟೆಗೆ ಭೇಟಿ ಕೊಟ್ಟಿದ್ದಾರೆ. ಕುಟುಂಬಕ್ಕೆ ಸಮಾಧಾನ ಹೇಳಿ, ಅವರು ಸಮಾಧಾನಿತರಾಗದೇ ಇದ್ದರೆ ಬೆದರಿಕೆ ಹಾಕುತ್ತಾರೆ. ಜಿಲ್ಲೆಯ ಪೊಲೀಸ್ ಇಲಾಖೆಯು ಖರ್ಗೆ ಕುಟುಂಬದ ಕಪಿಮುಷ್ಟಿಯೊಳಗಿದೆ ಎಂದು ಆರೋಪಿಸಿದರು.

ಖರ್ಗೆ ಮನೆಗೆ ಮುತ್ತಿಗೆ:

ಬಿಜೆಪಿ ಮುಖಂಡರು ಮತ್ತು ಆಂದೋಲಾ ಸ್ವಾಮೀಜಿಯವರನ್ನು ಕೊಲೆ ಮಾಡಲು ಸೊಲ್ಲಾಪುರದ ಬಾಡಿಗೆ ಹಂತಕರಿಗೆ ಸುಪಾರಿ ನೀಡಿರುವ ವಿಚಾರ ಸಚಿನ್ ಮರಣಪತ್ರದಲ್ಲಿದೆ. ಇದು ಅತ್ಯಂತ ಗಂಭೀರ ವಿಚಾರ.



ಸಚಿವ ಪ್ರಿಯಾಂಕ್ ಖರ್ಗೆ ಮತ್ತು ರಾಜು ಕಪನೂರು ಜತೆಗಿರುವ ಚಿತ್ರಗಳನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಬಿಡುಗಡೆ ಮಾಡಿದರು. ಜಗದೀಶ್ ಹಿರೇಮನಿ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್ ಇದ್ದರು

ಈ ಪ್ರಕರಣವನ್ನು 2025ರ ಜನವರಿ 3ರೊಳಗೆ ಸಿಬಿಐಗೆ ಒಪ್ಪಿಸಬೇಕು. ಇಲ್ಲವಾದರೆ, ಜ.4ರಂದು ಕಲಬುರಗಿಯಲ್ಲಿ ಬೃಹತ್ ಪ್ರತಿಭಟನೆ ನಡೆಸುವುದರ ಜತೆಗೆ, ಖರ್ಗೆಯವರ ಮನೆಗೆ ಮುತ್ತಿಗೆ ಹಾಕಲಾಗುತ್ತದೆ ಎಂದು ವಿಜಯೇಂದ್ರ ಎಚ್ಚರಿಕೆ ನೀಡಿದರು.

ರಾಜ್ಯ ಸರ್ಕಾರ ಸಚಿನ್ ಕುಟುಂಬಕ್ಕೆ ಭದ್ರತೆ ನೀಡುವುದರ ಜತೆಗೆ ಕುಟುಂಬಕ್ಕೆ ₹1 ಕೋಟಿ ಪರಿಹಾರ ನೀಡಬೇಕು, ಕುಟುಂಬದ ಸದಸ್ಯರೊಬ್ಬರಿಗೆ ಸರ್ಕಾರಿ ನೌಕರಿ ನೀಡಬೇಕು ಎಂದೂ ಅವರು ಆಗ್ರಹಿಸಿದರು.

‘ಪ್ರಿಯಾಂಕ್ ಖರ್ಗೆ ಅವರನ್ನು ಮುಟ್ಟಿದರೆ ದೆಹಲಿಯಿಂದ ಕರೆ ಬಂದು ನಿಮ್ಮ ಸ್ಥಾನಕ್ಕೆ ಕುತ್ತು ಬರಬಹುದು ಎಂಬ ಭಯಪಡುವ ಅಗತ್ಯವಿಲ್ಲ. ಪ್ರಿಯಾಂಕ್ ವಿರುದ್ಧ ಕಠಿಣ ಕ್ರಮ ತೆಗೆದುಕೊಂಡರೆ ಆಗ ನೀವು ಬಲಿಷ್ಠ ಮುಖ್ಯಮಂತ್ರಿ ಮತ್ತು ಅಹಿಂದ ನಾಯಕ ಎನ್ನುವುದನ್ನು ಒಪ್ಪಿಕೊಳ್ಳಬಹುದು’ ಎಂದು ಸಿದ್ದರಾಮಯ್ಯ ಅವರನ್ನು ಉದ್ದೇಶಿಸಿ ಹೇಳಿದರು.

‘ಪ್ರಿಯಾಂಕ್ ಅವರ ಇಲಾಖೆ ಗ್ರಾಮೀಣಾಭಿವೃದ್ಧಿ ಮತ್ತು ಐಟಿ, ಬಿಟಿ, ಅಲ್ಲದೇ, ಅವರು ಸರ್ವ ಇಲಾಖೆಗೂ ಸಚಿವರು. ಸದನದಲ್ಲಿ ಗೃಹ ಸಚಿವರು, ಮುಖ್ಯಮಂತ್ರಿಯವರ ಪ್ರಶ್ನೆಗಳಿಗೂ ಎದ್ದು ನಿಂತು ಉತ್ತರಿಸುತ್ತಾರೆ. ಗಲಾಟೆ ಮಾಡುತ್ತಾರೆ. ಇವರು ಜ್ಞಾನಿ, ಮೇಧಾವಿ, ಬುದ್ಧಿವಂತರು, ಅಷ್ಟೇ ಪ್ರಭಾವಿ, ಶಕ್ತಿಶಾಲಿ ಮುಖಂಡ’ ಎಂದು ವಿಜಯೇಂದ್ರ ವ್ಯಂಗ್ಯವಾಡಿದರು.

ಬಿಪಿಎಸ್‌ಸಿ– ಭ್ರಷ್ಟಾಚಾರ: ಪ್ರಶಾಂತ್

ಪಟ್ನಾ (ಪಿಟಿಐ): ಬಿಹಾರ ಲೋಕಸೇವಾ ಆಯೋಗದ (ಬಿಪಿಎಸ್‌ಸಿ) ಪರೀಕ್ಷೆಯ ಮೂಲಕ ಭರ್ತಿ ಮಾಡುವ ಹುದ್ದೆಗಳಿಗಾಗಿ ‘ಸಾವಿರಾರು ಕೋಟಿ ರೂಪಾಯಿ ಕೈಬದಲಾಗಿದೆ’ ಎಂಬ ಮಾಹಿತಿ ತಮಗೆ ದೊರೆತಿದೆ ಎಂದು ಜನ ಸುರಾಜ್ ಪಕ್ಷದ ಸಂಸ್ಥಾಪಕ ಪ್ರಶಾಂತ್ ಕಿಶೋರ್ ಸೋಮವಾರ ಹೇಳಿದ್ದಾರೆ. ಪರೀಕ್ಷೆಯನ್ನು ರದ್ದುಮಾಡಬೇಕು ಎಂದು ಹಲವಾರು ಅಭ್ಯರ್ಥಿಗಳು ಆಗ್ರಹಿಸುತ್ತಿದ್ದಾರೆ.

ಪ್ರಶಾಂತ್ ಕಿಶೋರ್ ಅವರು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ನಿಕಟವರ್ತಿ ಆಗಿದ್ದರು. ಸರಿಸುಮಾರು ಎರಡು ವಾರಗಳಿಂದ ನಡೆಯುತ್ತಿರುವ ಧರಣಿಯ ವಿಚಾರವಾಗಿ ನಿತೀಶ್ ಅವರು ಒಂದು ಮಾತು ಕೂಡ ಆಡದಿರುವ ಬಗ್ಗೆ ಪ್ರಶಾಂತ್ ನಿರಾಶೆ ವ್ಯಕ್ತಪಡಿಸಿದ್ದಾರೆ.

‘ಕೊರೆಯುವ ಚಳಿಯಲ್ಲಿ ಪೊಲೀಸರು ನಡೆಸಿದ ಲಾಠಿ ಚಾರ್ಜ್, ಜಲ ಫಿರಂಗಿ ಪ್ರಯೋಗವನ್ನು ಎದುರಿಸಿ ಅಭ್ಯರ್ಥಿಗಳು ಪ್ರತಿಭಟನೆ ನಡೆಸುತ್ತಿದ್ದಾರೆ. ಮುಖ್ಯಮಂತ್ರಿ ದೂರದ ದೆಹಲಿಯಲ್ಲಿ ಆರಾಮವಾಗಿ ಕಾಲ ಕಳೆಯುತ್ತಿದ್ದಾರೆ. ಪ್ರತಿಭಟನೆಯ ಬಗ್ಗೆ ಸುದ್ದಿಗಾರರು ಪ್ರಶ್ನಿಸಿದಾಗ, ನಿತೀಶ್ ಅವರು ಒಂದು ಮಾತೂ ಆಡಲಿಲ್ಲ’ ಎಂದು ಪ್ರಶಾಂತ್ ಸುದ್ದಿಗಾರರ ಬಳಿ ಹೇಳಿದ್ದಾರೆ.

ಪಹಣಿಯಲ್ಲಿ ‘ಕೆಐಎಡಿಬಿ’ ಹೆಸರು!

ಒಂದನೇ ಪುಟದಿಂದ...



ಅಶ್ವತ್ಥಪ್ಪ


‘ಅಧಿಕಾರಿಗಳಿಗೆ ತಿಳಿಯದೇ ಪಹಣಿಯಲ್ಲಿ ಕೆಐಎಡಿಬಿ ಎಂದು ಹೆಸರು ಸೇರಿಸಲು ಸಾಧ್ಯವೇ ಇಲ್ಲ. ರೈತರು ಪ್ರತಿಭಟನೆ ನಡೆಸುವ ಮುನ್ನವೇ ಜಿಲ್ಲಾಧಿಕಾರಿ ಗಮನ ಹರಿಸಬೇಕು’ ಎಂದು ರೈತ ಮುಖಂಡ ಪಿ.ಮಂಜುನಾಥರೆಡ್ಡಿ ಆಗ್ರಹಿಸಿದರು.

‘ರಾಷ್ಟ್ರೀಯ ಹೆದ್ದಾರಿ ರಸ್ತೆ 44ರಲ್ಲಿ 1,200 ಎಕರೆ ಕರಾಬು, ಗೋಮಾಳ, ಸರ್ಕಾರಿ ಜಾಗ ಇದೆ. ಸರ್ಕಾರಿ ಜಾಗದಲ್ಲಿ ಕೈಗಾರಿಕೆ ಆರಂಭಿಸಲು ನಮ್ಮ ತಕರಾರು ಇಲ್ಲ. ಆದರೆ ರೈತರ ಜಮೀನು ಸ್ವಾಧೀನ ಎಷ್ಟರ ಮಟ್ಟಿಗೆ ಸರಿ’ ಎಂದು ಕಾಶಾಪುರದ ರೈತ ಅಶ್ವತ್ಥಪ್ಪ ಪ್ರಶ್ನಿಸಿದರು.

17 ವರ್ಷ ಹಿಂದಿನ ಅಧಿಸೂಚನೆಗೆ ಮರುಜೀವ: ಆಂಧ್ರಪ್ರದೇಶದ ಗಡಿಯಲ್ಲಿರುವ ತಾಲ್ಲೂಕಿನ ಹೊಸಹುಡ್ಯ, ಕೊಂಡರೆಡ್ಡಿಪಲ್ಲಿ ಗ್ರಾಮದ ರೈತರ ನೂರಾರು ಎಕರೆ ಜಮೀನುಗಳು ಇವೆ. ರಾಜ್ಯ ಕೈಗಾರಿಕಾ ಪ್ರದೇಶ ಅಭಿವೃದ್ಧಿ ನಿಗಮ ಈ ಎರಡೂ ಗ್ರಾಮಗಳ ರೈತರ ಜಮೀನು ಸೇರಿದಂತೆ ಸರ್ಕಾರಿ ಜಮೀನು, ಗೋಮಾಳ ಜಾಗ ಸ್ವಾಧೀನಪಡಿಸಿಕೊಳ್ಳಲು ಮುಂದಾಗಿದೆ.

ಮೊದಲ ಹಂತದಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿಗೆ 192 ಎಕರೆ ಜಮೀನು ಸ್ವಾಧೀನಕ್ಕೆ 2007ರಲ್ಲಿ ಕೆಐಎಡಿಬಿ ಅಂತಿಮ ಅಧಿಸೂಚನೆ ಹೊರಡಿಸಿತ್ತು. ಎಕರೆಗೆ ₹15 ಲಕ್ಷ ಪರಿಹಾರ ನಿಗದಿಪಡಿಸಿತ್ತು. ಆದರೆ, ರೈತರ ವಿರೋಧದ ನಂತರ ಭೂಸ್ವಾಧೀನ ಪ್ರಕ್ರಿಯೆ ಸ್ಥಗಿತಗೊಂಡಿದ್ದವು.

ಈಗ ಮತ್ತೆ ಕೆಐಎಡಿಬಿ ಭೂಸ್ವಾಧೀನಕ್ಕೆ ಮುಂದಾಗಿದೆ. ರೈತರಿಗೆ ನೋಟಿಸ್ ಜಾರಿಗೊಳಿಸಿದೆ. ತಮ್ಮ ಬೇಡಿಕೆಯಂತೆ ಬೆಲೆ ನಿಗದಿಗೊಳಿಸಿದರೆ ಮಾತ್ರ ಜಮೀನು ನೀಡುತ್ತೇವೆ ಎಂದು ರೈತರು ಪಟ್ಟು ಹಿಡಿದಿದ್ದಾರೆ. ಈ ನಡುವೆ ಏಕಾಏಕಿ ರೈತರ ಜಮೀನು ಪಹಣಿಗಳಲ್ಲಿ ಕೆಐಎಡಿಬಿ ಹೆಸರು ಪ್ರತ್ಯಕ್ಷವಾಗಿದೆ.



ಡಿಸೆಂಬರ್ 16ರ ನಂತರ ರೈತರ ಹೆಸರಿನ ಜಾಗದಲ್ಲಿ ಕೆಐಎಡಿಬಿ ಎಂದು ನಮೂದು ಆಗಿದೆ

ಮೇಲ್ಮನವಿ ವಾದಕ್ಕೆ ವಕೀಲರ ನೇಮಕ

ಒಂದನೇ ಪುಟದಿಂದ...

ನಂತರ, ದರ್ಶನ್‌ಗೆ ನಿಯಮಿತ ಜಾಮೀನು ಲಭಿಸಿತ್ತು. ಮೈಸೂರಿಗೆ ತೆರಳಲು ಹೈಕೋರ್ಟ್‌ನಿಂದ ಕೆಲವು ದಿನಗಳ ಹಿಂದೆ ಅನುಮತಿ ಪಡೆದಿದ್ದ ದರ್ಶನ್, ಸದ್ಯ ಮೈಸೂರಿನ ಫಾರ್ಮ್ ಹೌಸ್‌ನಲ್ಲಿ ವಾಸ್ತವ್ಯ ಮಾಡಿದ್ದಾರೆ.

‘ಮೇಲ್ಮನವಿ ಸಲ್ಲಿಸಲು ಅನುಮತಿ ನೀಡಿರುವ ಕಡತಗಳನ್ನು ಗೃಹ ಇಲಾಖೆಯಿಂದ ಪೊಲೀಸರಿಗೆ ರವಾನಿಸಲಾಗಿದೆ. ಕನ್ನಡದಿಂದ ಇಂಗ್ಲಿಷ್‌ಗೆ ದೋಷಾರೋಪ ಪಟ್ಟಿ ಭಾಷಾಂತರ ಕೆಲಸವು ಪೂರ್ಣವಾಗಿದೆ. ಎರಡು ದಿನಗಳ ಒಳಗಾಗಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲಾಗುವುದು’ ಎಂದು ಮೂಲಗಳು ತಿಳಿಸಿವೆ.

ನಗರದ ಮಾಗಡಿ ರಸ್ತೆಯ ಸುಮನಹಳ್ಳಿ ಬಳಿಯ ಚರಂಡಿ ಬಳಿ ರೇಣುಕಸ್ವಾಮಿ (33) ಶವ ಪತ್ತೆಯಾಗಿತ್ತು. ಪ್ರಕರಣದ ತನಿಖೆ ಆರಂಭಿಸಿದ್ದ ಪೊಲೀಸರಿಗೆ ಇದು ಕೊಲೆ ಎಂಬುದು ದೃಢಪಟ್ಟಿತ್ತು. ಕೊಲೆ ಮಾಡಿದ್ದ ಆರೋಪದ ಅಡಿ ಪಶ್ಚಿಮ ವಿಭಾಗದ ಪೊಲೀಸರು ಮೈಸೂರಿನಲ್ಲಿ ನಟ ದರ್ಶನ್ ಅವರನ್ನು ಜೂನ್ 11ರಂದು ಬಂಧಿಸಿದ್ದರು. ಪವಿತ್ರಾಗೌಡ ಅವರಿಗೆ ಅಶ್ಲೀಲ ಸಂದೇಶಗಳನ್ನು ಕಳುಹಿಸಿದ್ದಕ್ಕಾಗಿ ದರ್ಶನ್ ಮತ್ತು ಅವರ ಸಹಚರರು ರೇಣುಕಸ್ವಾಮಿ ಅವರನ್ನು ಕೊಲೆ ಮಾಡಿದ್ದ ಆರೋಪದ ಅಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ 17 ಮಂದಿ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ದೇಗುಲ ವಿವಾದ; ಯಥಾಸ್ಥಿತಿಗೆ ನಿರ್ಧಾರ

ಒಂದನೇ ಪುಟದಿಂದ...

ವಿವಿಧ ಕೊಡವ ಸಂಘಟನೆಗಳು ಹಾಗೂ ಕೊಡಗು ಗೌಡ ಸಮಾಜದ ಸಂಘಟನೆಗಳು ಪರಸ್ಪರ ಆರೋಪ ಪ್ರತ್ಯಾರೋಪಗಳನ್ನು ಮಾಡಿ ದೇವಸ್ಥಾನದತ್ತ ಜಾಥಾ ಹೊರಡಲು ನಿರ್ಧರಿಸಿದ್ದವು. ಪರಿಸ್ಥಿತಿ ನಿಭಾಯಿಸಲು ಜಿಲ್ಲಾಡಳಿತ ಕಟ್ಟೆಮಾಡು ಗ್ರಾಮದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ, ಜಾಥಾ ಕೈಬಿಡುವಂತೆ ಮನವಿ ಮಾಡಿತು. ಮನವಿಗೆ ಸ್ಪಂದಿಸಿದ ಗೌಡ ಸಮಾಜದ ಸಂಘಟನೆಗಳು ಜಾಥಾ ಕೈಬಿಟ್ಟವು.

ಆದರೆ, ಇದಕ್ಕೆ ಒಪ್ಪದ ಕೊಡವ ಸಂಘಟನೆಗಳು ಜಾಥಾ ಹೊರಡಲು ಸಿದ್ಧತೆ ನಡೆಸುತ್ತಿದ್ದಾಗ ಮುಖಂಡರನ್ನು ಅವರ ಮನೆಯಿಂದಲೇ ಪೊಲೀಸರು ವಶಕ್ಕೆ ಪಡೆದರು. ಈ ಕ್ರಮ ವಿರೋಧಿಸಿ ನೂರಾರು ಮಂದಿ ಪೊನ್ನಂಪೇಟೆ ಪೊಲೀಸ್ ಠಾಣೆ ಮುಂದೆ ಸೇರಿ ಪ್ರತಿಭಟನೆ ನಡೆಸಿದರು. ಈ ವೇಳೆ 60ಕ್ಕೂ ಹೆಚ್ಚು ಪ್ರತಿಭಟನಕಾರರನ್ನು ವಶಕ್ಕೆ ಪಡೆಯಲಾಯಿತು.

ಇದರಿಂದ ಆಕ್ರೋಶಗೊಂಡ ಇನ್ನಷ್ಟು ಜನರು ಅಂಗಡಿ–ಮುಂಗಟ್ಟುಗಳನ್ನು ಮುಚ್ಚಿದರು. ಹಲವೆಡೆ ರಸ್ತೆ ತಡೆ ನಡೆಸಿದರು, ಪೊಲೀಸ್ ವಾಹನ ತಡೆದು ಪ್ರತಿಭಟನೆ ತೀವ್ರಗೊಳಿಸಿದರು.

ಪೊನ್ನಂಪೇಟೆ, ಕುಟ್ಟ, ಗೋಣಿಕೊಪ್ಪ, ಹುದಿಕೇರಿ, ಮೂರ್ನಾಡು, ತಿತಿಮತಿ, ಬಾಳೆಲೆ, ವಿರಾಜಪೇಟೆ ಭಾಗಗಳಿಗೂ ಪ್ರತಿಭಟನೆಗಳು ಹರಡಿದವು. ವಶಕ್ಕೆ ಪಡೆದಿದ್ದವರನ್ನು ಸಂಜೆ ಹೊತ್ತಿಗೆ ಮರಳಿ ಪೊನ್ನಂಪೇಟೆಗೆ ಕರೆತಂದು ಬಿಡುಗಡೆ ಮಾಡಿದ ಬಳಿಕ ಪರಿಸ್ಥಿತಿ ಶಾಂತವಾಯಿತು.

ಹೋರಾಟಕ್ಕೆ ಸಾವಿರ ದಿನ!

ಒಂದನೇ ಪುಟದಿಂದ...

ಕೃಷಿಯೂ ಒಂದು ಕೈಗಾರಿಕೆಯೇ ಎಂದು ಮರೆಯಬಾರದು. ಕೃಷಿಕರ ಬಲದ ಮುಂದೆ ಯಾವ ಸರ್ಕಾರವೂ ನಿಲ್ಲುವುದಿಲ್ಲ. ಸರ್ಕಾರವೂ ಭೂ ಸ್ವಾಧೀನ ಪ್ರಕ್ರಿಯೆ ನಿಲ್ಲಿಸಬೇಕು ಎಂದು ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಹೇಳಿದರು.

ಇಲ್ಲಿ ಸಾವಿರ ದಿನಗಳಿಂದ ನಡೆಯುತ್ತಿರುವ ಹೋರಾಟ ಇಡೀ ನಾಡಿನ ರೈತರ ಸಂಸ್ಕೃತಿ ಉಳಿಸಲು ನಡೆಸುತ್ತಿರುವ ಸಂಘರ್ಷ. ಇಲ್ಲಿನ ಶೇ. 77 ರಷ್ಟು ಬಹುಸಂಖ್ಯಾತ ರೈತರು ಭೂಮಿ ನೀಡುವುದಿಲ್ಲ ಎಂದಿದ್ದಾರೆ. ಆದರೆ, ಶಾಸಕಾಂಗ ಹಾಗೂ ಕಾರ್ಯಾಂಗಕ್ಕೆ ಅರ್ಥವಾಗುತ್ತಿಲ್ಲ ಎಂದು ರೈತ ಹೋರಾಟಗಾರ್ತಿ ಚುಕ್ಕಿ ನಂಜುಂಡಸ್ವಾಮಿ ಹೇಳಿದರು.

ವಿಧಾನಸೌಧದಲ್ಲಿ ಇರುವ ಬಹುತೇಕ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ರೈತರ ಮಕ್ಕಳು. ಅವರು ತಮ್ಮ ಹಿಂದಿನ ಕಣ್ಣು, ಕಿವಿ ಮತ್ತು ನೆನಪು ಕಳೆದುಕೊಂಡಿದ್ದಾರೆ. ಹಳೆಯ ನೆನಪುಗಳನ್ನು ಜಾಗೃತಗೊಳಿಸಿಕೊಂಡು ರೈತರ ಕಷ್ಟಗಳಿಗೆ ಸ್ಪಂದಿಸಬೇಕು ಎಂದು ಹಿರಿಯ ಸಾಹಿತಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಸಲಹೆ ಮಾಡಿದರು.

‘ಆಳುವ ವರ್ಗ ಆತ್ಮಸಾಕ್ಷಿ ಎಚ್ಚರದಲ್ಲಿಟ್ಟುಕೊಂಡು ಮಾತನಾಡಬೇಕು. ಇತಿಹಾಸ ಹಾಗೂ ಬದುಕಿನ ನಾಶದ ಮೂಲಕ ಮಾಡಲಾಗುವ ಪ್ರಗತಿ ದೇಶಕ್ಕೆ ಅಗತ್ಯವಿಲ್ಲ. ಹಳ್ಳಿಗಳನ್ನು ನಾಶ ಮಾಡಿ, ಪ್ರಗತಿ ಸಾಧಿಸುತ್ತೇವೆ ಎನ್ನುವುದು ಮನುಷ್ಯತ್ವ ಹಾಗೂ ಪ್ರಗತಿಯ ವಿರೋಧಿಯಾಗಿದೆ’ ಎಂದು ತರಾಟೆಗೆ ತೆಗೆದುಕೊಂಡರು.

ಬಾರ್ಡರ್–ಗಾವಸ್ಕರ್ ಟ್ರೋಫಿ ಕ್ರಿಕೆಟ್: ಜೈಸ್ವಾಲ್, ಪಂತ್ ಹೋರಾಟಕ್ಕೆಸಿಗದ ಫಲ; ಆಸ್ಟ್ರೇಲಿಯಾಗೆ ಸರಣಿ ಮುನ್ನಡೆ

ಬ್ಯಾಟಿಂಗ್ ವೈಫಲ್ಯಕ್ಕೆ ದಂಡ ತೆತ್ತ ರೋಹಿತ್ ಪಡೆ

• ಮಧು ಜವಳಿ

ಮೆಲ್ಬರ್ನ್: ಪಂದ್ಯದ ನಿರ್ಣಾಯಕ ಘಟ್ಟದಲ್ಲಿ ಹೊರಹೊಮ್ಮಿದ ವಿವಾದಾತ್ಮಕ ತೀರ್ಪು 'ಶವಪೆಟ್ಟಿಗೆ'ಗೆ ಕೊನೆಯ ಮೊಳೆಯನ್ನು ಹೊಡೆದಂತಾಗಿರಬಹುದು. ಆದರೆ ಸ್ಪಷ್ಟ ಸಾಕ್ಷ್ಯವನ್ನು ದುರ್ಬಲಗೊಳಿಸುವ ಮತ್ತು ಆನ್‌ಫೀಲ್ಡ್ ಅಂಪೈರ್‌ಗಳು ನೀಡಿದ್ದ ನಾಟ್‌ಔಟ್ ತೀರ್ಪನ್ನು ಮೂರನೇ ಅಂಪೈರ್ ರದ್ದುಗೊಳಿಸಿದ್ದು ಕೂಡ ಭಾರತದ ಬ್ಯಾಟಿಂಗ್ ಪಡೆಯ ಸಾಮೂಹಿಕ ವೈಫಲ್ಯವನ್ನು ಮರೆಮಾಚಲು ಸಾಧ್ಯವಾಗಲಿಲ್ಲ.

ಮೆಲ್ಬರ್ನ್ ಕ್ರೀಡಾಂಗಣದಲ್ಲಿ ನಡೆದ ಬಾರ್ಡರ್–ಗಾವಸ್ಕರ್ ಟ್ರೋಫಿಯ ನಾಲ್ಕನೇ ಪಂದ್ಯದಲ್ಲಿ ಭಾರತ ತಂಡವು ಅನುಭವಿಸಿದ ಬೃಹತ್ ಸೋಲಿನಲ್ಲಿ ಇಬ್ಬರು ಅನುಭವಿ ಬ್ಯಾಟರ್‌ಗಳು ತಮಗೆ ಮರಳಿ ಅರಳಲು ಸಿಕ್ಕ ಸಮಯವನ್ನು ಸದುಪಯೋಗಪಡಿಸಿಕೊಳ್ಳಲಿಲ್ಲ. ತಮ್ಮ ಹಿಂದಿನ ತಪ್ಪುಗಳಿಂದ ಕಲಿಯಲಿಲ್ಲ.

ರೋಹಿತ್ ಅವರು ಇನಿಂಗ್ಸ್ ಆರಂಭಿಸುವ 'ಅಪ್ರಿಯ ಆಯ್ಕೆ' ಮಾಡಿಕೊಂಡು ಕೆ.ಎಲ್. ರಾಹುಲ್ ಅವರನ್ನು 3ನೇ ಕ್ರಮಾಂಕಕ್ಕೆ ತಳ್ಳಿದ್ದು ಮತ್ತು ಪರಿಣತ ಬ್ಯಾಟರ್ ಶುಭಮನ್ ಗಿಲ್ ಅವರನ್ನು 11ರ ಬಳಗದಿಂದ ಹೊರಗಿರಿಸಲಾಯಿತು. ರೋಹಿತ್ ಶರ್ಮಾ ಪಂದ್ಯದಲ್ಲಿ ಎರಡನೇ ಬಾರಿಯೂ ವಿಫಲರಾದರು. ಇದರಿಂದಾಗಿ ಗುರಿ ಬೆನ್ನಟ್ಟಿದ್ದ ತಂಡದ ಮೇಲೆ ಒತ್ತಡ ಹೆಚ್ಚಾಯಿತು. ವಿರಾಟ್ ಕೊಹ್ಲಿ ಮತ್ತೊಮ್ಮೆ ಆಫ್‌ಸ್ಟಂಪ್ ಹೊರಗಿದ್ದ ಎಸೆತವನ್ನು ಕೆಣಕಿ ದಂಡ ತೆತ್ತರು. ಊಟಕ್ಕೂ ಮುಂಚಿನ ಓವರ್‌ನಲ್ಲಿ ಪೆವಿಲಿಯನ್ ಸೇರಿಕೊಂಡರು. ತಂಡದ ಮೊತ್ತ 3 ವಿಕೆಟ್‌ಗಳಿಗೆ 33 ಆಗಿತ್ತು. ಆಸ್ಟ್ರೇಲಿಯಾ ಗೆಲುವಿನ ಹಾದಿ ಸುಲಭವೆಂದೂ ಅನಿಸಿತ್ತು.

ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ (84; 208ಎ, 4X8) ಮತ್ತು ರಿಷಭ್ ಪಂತ್ (30; 104ಎ, 4X3) ಆಸ್ಟ್ರೇಲಿಯಾ ದಾಳಿಯನ್ನು ಮೆಟ್ಟಿ ನಿಂತರು. ರಕ್ಷಣಾತ್ಮಕವಾಗಿ ಆಡಿದರು. ಸ್ಟಂಪ್‌ಲೈನ್ ಹೊರಗಿದ್ದ ಎಸೆತಗಳನ್ನು ತಡವದೇ ಬಿಟ್ಟರು ಮತ್ತು ಒಂಟಿ, ಎರಡು ರನ್ ಪಡೆಯುತ್ತ ಸ್ಟ್ರೈಕ್ ರೊಟೇಟ್ ಮಾಡಿದರು. ಚೆಂದದ ಹೊಂದಾಣಿಕೆಯ ಆಟದಿಂದ ಆಸ್ಟ್ರೇಲಿಯಾ ತಂಡದಿಂದ ಗೆಲುವನ್ನು ದೂರ ಒಯ್ಯುವ ಪ್ರಯತ್ನ ಮಾಡಿದರು.

ಇದೇ ಹಗ್ಗಜಗ್ಗಾಟದಲ್ಲಿ ಎರಡನೇ ಅವಧಿ ಮುಗಿದು ಚಹಾ ವಿರಾಮವೂ ಆಯಿತು.

ಎಡಗೈ ಬ್ಯಾಟಿಂಗ್ ಜೋಡಿಯು ಕೊನೆಯ ಅವಧಿಯಲ್ಲಿಯೂ ತಮ್ಮ ಆಟ ಮುಂದುವರಿಸಿ ಕಡೆ ಪಕ್ಷ ಡ್ರಾದತ್ತ ತಂಡವನ್ನು ಮುನ್ನಡೆಸಿ, ಸೋಲು ತಪ್ಪಿಸುತ್ತಾರೆಂಬ ಭರವಸೆ ಮೂಡಿತ್ತು. ಈ ಹೊತ್ತಿನಲ್ಲಿ ಆತಿಥೇಯ ತಂಡದ ನಾಯಕ ಪ್ಯಾಟ್ ಕಮಿನ್ಸ್ ಅವರು ಪಾರ್ಟ್‌ಟೈಂ ಸ್ಪಿನ್ನರ್ ಟ್ರಾವಿಸ್ ಹೆಡ್ ಕೈಗೆ ಚೆಂಡು ಕೊಟ್ಟರು. ಈ ತಂತ್ರಕ್ಕೆ ಪಂತ್ ಬಲಿಯಾದರು. ಆಫ್‌ಸ್ಟಂಪ್ ಹೊರಗಿದ್ದ ಎಸೆತವನ್ನು ಎಡಗೈ ಬ್ಯಾಟರ್ ಪುಲ್ ಮಾಡಿದರು. ಲಾಂಗ್ ಲೆಗ್ ಬಳಿ ಫೀಲ್ಡರ್ ಮಿಚೆಲ್ ಮಾರ್ಷ್ ಓಡಿ ಹೋಗಿ ಕ್ಯಾಚ್ ಪಡೆದರು. ಇದಾದ ಮೇಲೆ 34 ರನ್‌ಗಳ ಅಂತರದಲ್ಲಿ 7 ವಿಕೆಟ್‌ಗಳನ್ನು ಉರುಳಿಸಿದ ಬೌಲರ್‌ಗಳು ಕೇಕೆ ಹಾಕಿದರು. ಎಂಸಿಜಿಯಲ್ಲಿ ಕಳೆದ 10 ವರ್ಷಗಳಲ್ಲಿ ಭಾರತ ಮೊದಲ ಬಾರಿ ಸೋಲಿನ ಕಹಿಯುಂಡಿತು.

340 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಭಾರತ ತಂಡದ ಇನಿಂಗ್ಸ್ 155 (79.1 ಓವರ್‌ಗಳಲ್ಲಿ) ರನ್‌ಗಳ ಮೊತ್ತಕ್ಕೆ ಅಂತ್ಯವಾಯಿತು. ಕೊನೆಯ 13 ಓವರ್‌ಗಳು ಬಾಕಿ ಇದ್ದವು. ಬ್ಯಾಟರ್‌ಗಳು ಇನ್ನಷ್ಟು ಜಿಗುಟುತನದ ಆಟವಾಡಿದ್ದರೆ ಈ ಓವರ್‌ಗಳನ್ನು ದಾಟುವುದು ಸಾಧ್ಯವಿತ್ತು. ಆದರೆ ಆಸ್ಟ್ರೇಲಿಯಾ 184 ರನ್‌ಗಳ ಜಯ ಸಾಧಿಸಿತು. ಸರಣಿಯಲ್ಲಿ 2–1ರ ಮುನ್ನಡೆ ಗಳಿಸಿತು. ಮುಂದಿನ ತಿಂಗಳು ಸಿಡ್ನಿಯಲ್ಲಿ ಸರಣಿಯ ಕೊನೆಯ ಪಂದ್ಯ ನಡೆಯಲಿದೆ.

ಇನಿಂಗ್ಸ್ ಆರಂಭಿಸಿದ ರೋಹಿತ್ ಮತ್ತು ಜೈಸ್ವಾಲ್ ಎಚ್ಚರಿಕೆ ಮತ್ತು ಏಕಾಗ್ರತೆಯಿಂದ ಬ್ಯಾಟಿಂಗ್ ಮಾಡಿದರು. ಮೊದಲ ಅವಧಿಯಲ್ಲಿ ಕಮಿನ್ಸ್ (28ಕ್ಕೆ3) ಮತ್ತು ಮಿಚೆಲ್ ಸ್ಟಾರ್ಕ್ ದಾಳಿ ತೀಕ್ಷ್ಣವಾಗಿತ್ತು. 40 ಎಸೆತಗಳಲ್ಲಿ 9 ರನ್ ಗಳಿಸಿದ್ದ ರೋಹಿತ್ ವಿಕೆಟ್ ಉರುಳಿಸಿದ ಕಮಿನ್ಸ್ ಅವರು ಕೆ.ಎಲ್. ರಾಹುಲ್ ಅವರಿಗೆ ಖಾತೆ ತೆರೆಯಲೂ ಬಿಡಲಿಲ್ಲ.

ಗಾವಸ್ಕರ್ ಶೈಲಿ ಮತ್ತು ದ್ರಾವಿಡ್ ಶೈಲಿಯ ಬ್ಯಾಟಿಂಗ್ ಅಗತ್ಯವಿದ್ದ ಸಂದರ್ಭ ಇದಾಗಿತ್ತು. ಆದರೆ ಸದ್ಯ ಶ್ವೇತವರ್ಣದ ಚೆಂಡಿನ ಕ್ರಿಕೆಟ್ ಮೇಲೆ ಹೆಚ್ಚು ಒಲವು ಇರುವವರಿದ್ದಾರೆ. ಟೆಸ್ಟ್ ಶೈಲಿಯ ಆಟಗಾರರ ಕೊರತೆ ಇರುವುದು ಇಲ್ಲಿ ಬಹಿರಂಗವಾಗಿದೆ.

ಆತಿಥೇಯ ತಂಡದ ನಾಯಕ ಕಮಿನ್ಸ್ ಬೌಲಿಂಗ್‌ನಲ್ಲಿ ಜೊತೆಯಾಟಗಳಿಗೆ ತಡೆಯೊಡ್ಡಿದರು. ಬ್ಯಾಟಿಂಗ್‌ನಲ್ಲಿಯೂ (49 ಮತ್ತು 41 ರನ್) ಕಾಣಿಕೆ ನೀಡಿದರು. ಆಕ್ರಮಣಕಾರಿ ಫೀಲ್ಡಿಂಗ್ ನಿಯೋಜನೆ ಮತ್ತು ಸರಿಯಾದ ಸಂದರ್ಭದಲ್ಲಿ ಬೌಲರ್ ಬದಲಾವಣೆಗಳನ್ನು ನಿರ್ವಹಿಸಿದರು. ಪಂದ್ಯಶ್ರೇಷ್ಠರೂ ಆದರು.


ಯಶಸ್ವಿ ಜೈಸ್ವಾಲ್ –ಎಎಫ್‌ಪಿ ಚಿತ್ರ


ಪ್ಯಾಟ್ ಕಮಿನ್ಸ್

ಜೈಸ್ವಾಲ್ ವಿಕೆಟ್ ವಿವಾದ

ಭಾರತ ತಂಡದ ಎಡಗೈ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರನ್ನು ಔಟ್ ಎಂದು ತೀರ್ಪು ನೀಡಿದ ಮೂರನೇ ಅಂಪೈರ್ ನಿರ್ಧಾರವು ವಿವಾದಕ್ಕೆ ಕಾರಣವಾಗಿದೆ.

208 ಎಸೆತಗಳಲ್ಲಿ 84 ರನ್ ಗಳಿಸಿದ್ದ ಜೈಸ್ವಾಲ್ ಅವರು ಪ್ಯಾಟ್ ಕಮಿನ್ಸ್ ಎಸೆತವನ್ನು ಹೂಕ್ ಮಾಡಲು ಯತ್ನಿಸಿದರು. ಆದರೆ ಚೆಂಡು ವಿಕೆಟ್‌ಕೀಪರ್ ಅಲೆಕ್ಸ್ ಕ್ಯಾರಿ ಕೈಗವಸು ಸೇರಿತು. ಆಸ್ಟ್ರೇಲಿಯಾ ಆಟಗಾರರು ಅಂಪೈರ್‌ಗೆ ಅಪೀಲ್ ಮಾಡಿದರು. ಆನ್‌ಫೀಲ್ಡ್ ಅಂಪೈರ್ ಜೋಲ್ ವಿಲ್ಸನ್ ಔಟ್ ನೀಡಲಿಲ್ಲ. ಇದರಿಂದಾಗಿ ಆಸ್ಟ್ರೇಲಿಯಾದವರು ಯುಡಿಆರ್‌ಎಸ್ (ಅಂಪೈರ್ ತೀರ್ಪು ಮರುಪರಿಶೀಲನಾ ವ್ಯವಸ್ಥೆ) ಮೊರೆ ಹೋದರು. ಮೂರನೇ ಅಂಪೈರ್ ಶರ್ಫುದ್ದೌಲಾ ಅವರು ಎಲ್ಲ ಆಯಾಮಗಳಲ್ಲಿ ಪರಿಶೀಲಿಸಿದರು. ಸ್ನಿಕೊ ಮೀಟರ್‌ನಲ್ಲಿಯೂ ಅವರ ಚೆಂಡು ಬ್ಯಾಟ್ ಅಂಚು ಸವರಿರುವುದು ದಾಖಲಾಗಿರಲಿಲ್ಲ. ಆದರೆ ದೃಶ್ಯಾವಳಿಗಳ ಆಧಾರದಲ್ಲಿ ಔಟ್ ನೀಡಿದರು.

ಗ್ಯಾಲರಿಯಲ್ಲಿದ್ದ ಭಾರತದ ಅಭಿಮಾನಿಗಳು 'ಚೀಟರ್..ಚೀಟರ್..' ಎಂದು ಅಂಪೈರ್ ವಿರುದ್ಧ ಕೂಗಿ ಅಸಮಾಧಾನ ವ್ಯಕ್ತಪಡಿಸಿದರು. ಜೈಸ್ವಾಲ್ ಕೂಡ ಅಸಮಾಧಾನದಿಂದಲೇ ಪೆವಿಲಿಯನ್ ಸೇರಿಕೊಂಡರು.

ಇದರಿಂದಾಗಿ ಆಸ್ಟ್ರೇಲಿಯಾದ ಗೆಲುವಿನ ಹಾದಿ ಸುಲಭವಾಯಿತು.

'ಅಂಪೈರ್‌ಗಳು ತಂತ್ರಜ್ಞಾನವನ್ನು ಯಾವ ರೀತಿ ಬಳಸುತ್ತಾರೆಂಬುದು ನನಗೆ ಗೊತ್ತಿಲ್ಲ. ತಂತ್ರಜ್ಞಾನದಲ್ಲಿ ಎಲ್ಲ ರೀತಿಯಿಂದ ಪರಿಶೀಲಿಸಿದಾಗಲೂ ಔಟಾಗಿದ್ದು ಕಾಣಲಿಲ್ಲ. ಆದರೆ ಬರಿಗಣ್ಣಲ್ಲಿ ನೋಡಿದಾಗ ಚೆಂಡು ಬ್ಯಾಟ್ ಅಂಚಿಗೆ ಸವರಿ ಸಾಗಿರುವಂತೆ ಕಾಣುತ್ತದೆ. ನಮಗೆಲ್ಲ ಗೊತ್ತಿರುವಂತೆ ತಂತ್ರಜ್ಞಾನವು ಯಾವಾಗಲೇ ಶೇ 100ರಷ್ಟು ನಿಖರವಾಗಿರುವುದಿಲ್ಲ. ಈಗಾಗಲೇ ನಮ್ಮ ತಂಡವು ಬಹಳಷ್ಟು ಇಂತಹ ನಿರ್ಣಯಗಳಿಗೆ ತುತ್ತಾಗಿದೆ' ಎಂದು ನಾಯಕ ರೋಹಿತ್ ಶರ್ಮಾ ಹೇಳಿದರು.

ಸ್ಕೋರ್ ಕಾರ್ಡ್

ಆಸ್ಟ್ರೇಲಿಯಾ 474 (122.4 ಓವರ್‌ಗಳಲ್ಲಿ)
ಭಾರತ 369 (119.3 ಓವರ್‌ಗಳಲ್ಲಿ)
ಎರಡನೇ ಇನ್ನಿಂಗ್ಸ್
ಆಸ್ಟ್ರೇಲಿಯಾ 234 (83.4 ಓವರ್‌ಗಳಲ್ಲಿ)
(ಭಾನುವಾರ 82 ಓವರ್‌ಗಳಲ್ಲಿ 9ಕ್ಕೆ 228)
ಲಯನ್ ಬಿ ಬೂಮ್ರಾ 41 (55ಎ, 4x5)
ಬೋಲ್ಯಾಂಡ್ ಔಟಾಗದೇ 15 (74ಎ, 4x2)
ಇತರೆ: 17 (ಲೆಗ್‌ಬೈ 10, ನೋಬಾಲ್ 6, ವೈಡ್ 1)
ವಿಕೆಟ್ ಪತನ: 10–234 (ನೇಥನ್ ಲಯನ್, 83.4)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 24.4–7–57–5; ಆಕಾಶ್ ದೀಪ್ 17–4–53–0; ಮೊಹಮ್ಮದ್ ಸಿರಾಜ್ 23–4–70–4; ರವೀಂದ್ರ ಜಡೇಜ 14–2–33–1; ನಿತೀಶ್ ಕುಮಾರ್ 1–0–4–0; ವಾಷಿಂಗ್ಟನ್ ಸುಂದರ್ 4–0–7–0.
ಎರಡನೇ ಇನ್ನಿಂಗ್ಸ್
ಭಾರತ 155 (79.1ಓವರ್‌ಗಳಲ್ಲಿ)
ಜೈಸ್ವಾಲ್ ಸಿ ಕ್ಯಾರಿ ಬಿ ಕಮಿನ್ಸ್ 84 (208ಎ, 4x8)
ರೋಹಿತ್ ಸಿ ಮಾರ್ಷ್ ಬಿ ಕಮಿನ್ಸ್ 9 (40ಎ)
ರಾಹುಲ್ ಸಿ ಖ್ವಾಜಾ ಬಿ ಕಮಿನ್ಸ್ 0 (5ಎ)
ಕೊಹ್ಲಿ ಸಿ ಖ್ವಾಜಾ ಬಿ ಸ್ಟಾರ್ಕ್ 5 (29 ಎ)
ಪಂತ್ ಸಿ ಮಾರ್ಷ್ ಬಿ ಹೆಡ್ 30 (104 ಎ, 4x2)
ಜಡೇಜ ಸಿ ಕ್ಯಾರಿ ಬಿ ಬೋಲ್ಯಾಂಡ್ 2 (14 ಎ)
ನಿತೀಶ್ ಸಿ ಸ್ಮಿತ್ ಬಿ ಲಯನ್ 1 (5 ಎ)
ವಾಷಿಂಗ್ಟನ್ ಔಟಾಗದೇ 5 (45ಎ)
ಆಕಾಶ್ ಸಿ ಹೆಡ್ ಬಿ ಬೋಲ್ಯಾಂಡ್ 7 (17ಎ, 4x1)
ಬೂಮ್ರಾ ಸಿ ಸ್ಮಿತ್ ಬಿ ಬೋಲ್ಯಾಂಡ್ 0 (8 ಎ)
ಸಿರಾಜ್ ಎಲ್‌ಬಿಡಬ್ಲ್ಯು ಲಯನ್ 0 (2 ಎ)
ಇತರೆ: 12 (ಬೈ 5, ಲೆಗ್‌ಬೈ 5, ನೋಬಾಲ್ 2)
ವಿಕೆಟ್ ಪತನ: 1–25 (ರೋಹಿತ್ ಶರ್ಮಾ, 16.1), 2–25 (ಕೆ.ಎಲ್.ರಾಹುಲ್, 16.6), 3–33 (ವಿರಾಟ್ ಕೊಹ್ಲಿ, 26.1), 4–121 (ರಿಷಭ್ ಪಂ ತ್, 58.4), 5–127 (ರವೀಂದ್ರ ಜಡೇಜ, 62.2), 6–130 (ನಿತೀಶ್ ಕುಮಾರ್ ರೆಡ್ಡಿ, 63.2), 7–140 (ಯಶಸ್ವಿ ಜೈಸ್ವಾಲ್, 70.5), 8–150 (ಆಕಾಶ್‌ದೀಪ್, 76.1), 9–154 (ಜಸ್‌ಪ್ರೀತ್ ಬೂಮ್ರಾ, 78.3), 10–155 (ಮೊಹಮ್ಮದ್ ಸಿರಾಜ್, 79.1)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 16–8–25–1; ಪ್ಯಾಟ್ ಕಮಿನ್ಸ್ 18–5–28–3; ಸ್ಕಾಟ್ ಬೋಲ್ಯಾಂಡ್ 16–7–39–3; ಮಿಚೆಲ್ ಮಾರ್ಷ್ 3–2–2–0; ನೇಥನ್ ಲಯನ್ 20.1–6–37–2; ಟ್ರಾವಿಸ್ ಹೆಡ್ 5–0–14–1; ಮಾರ್ನಸ್ ಲಾಬುಷೇನ್ 1–1–0–0
ಪಂದ್ಯದ ಆಟಗಾರ: ಪ್ಯಾಟ್ ಕಮಿನ್ಸ್

ಫಲಿತಾಂಶ: ಆಸ್ಟ್ರೇಲಿಯಾಕ್ಕೆ 184 ರನ್ ಜಯ

ಡಬ್ಲ್ಯುಟಿಸಿ ಫೈನಲ್: ಭಾರತ ತಂಡಕ್ಕಿದೆಯೇ ಇನ್ನೂ ಅವಕಾಶ?

ಮೆಲ್ಬರ್ನ್(ಪಿಟಿಐ): ಭಾರತ ತಂಡವು ಬಾಕ್ಸಿಂಗ್ ಡೇ ಟೆಸ್ಟ್ ಪಂದ್ಯದಲ್ಲಿ ಸೋತಿದೆ. ಆದರೂ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಫೈನಲ್ ತಲುಪುವ ಸಾಧ್ಯತೆ ಇನ್ನೂ ಇದೆ. ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಕೊನೆಯ ಪಂದ್ಯವು ಸಿಡ್ನಿಯಲ್ಲಿ ಮುಂದಿನ ವಾರ ನಡೆಯಲಿದೆ. ಅದರಲ್ಲಿ ಭಾರತ ತಂಡವು ಜಯಿಸಬೇಕು. ನಂತರ ಆಸ್ಟ್ರೇಲಿಯಾ ತಂಡವು ಶ್ರೀಲಂಕಾ ಎದುರಿನ ಸರಣಿಯಲ್ಲಿ ಸೋಲಬೇಕು ಅಥವಾ ಎರಡೂ ಪಂದ್ಯಗಳು ಡ್ರಾ ಆಗಬೇಕು.

ಸೋಮವಾರ ಭಾರತ ತಂಡವು ಪಂದ್ಯ ಸೋತ ನಂತರ ಪಾಯಿಂಟ್ ಪರ್ಸಂಟೇಜ್ (ಪಿಸಿಟಿ) 52.78ಕ್ಕೆ ಇಳಿಯಿತು. ಮೊದಲು 55.89 ಇತ್ತು. ಅದೇ ಆಸ್ಟ್ರೇಲಿಯಾ ತಂಡ ಪಿಸಿಟಿಯು 61.46ಕ್ಕೇರಿತು.

ದಕ್ಷಿಣ ಆಫ್ರಿಕಾ ತಂಡವು ಭಾನುವಾರ ಪಾಕಿಸ್ತಾನ ಎದುರಿನ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ಗೆದ್ದ ನಂತರ ಡಬ್ಲುಟಿಸಿ ಫೈನಲ್‌ನಲ್ಲಿ ಸ್ಥಾನ ಖಚಿಪಡಿಸಿಕೊಂಡಿದೆ. ಎರಡನೇ ತಂಡದ ಪೈಪೋಟಿಗಾಗಿ ಭಾರತ ಮತ್ತು ಆಸ್ಟ್ರೇಲಿಯಾ ಜಿದ್ದಾಜಿದ್ದಿ ನಡೆಸಿವೆ. ಆದರೆ, ಭಾರತಕ್ಕೆ ಈ ಆವೃತ್ತಿಯಲ್ಲಿ ಉಳಿದಿರುವುದು ಏಕೈಕ ಟೆಸ್ಟ್ ಮಾತ್ರ. ಆದರೆ ಆಸ್ಟ್ರೇಲಿಯಾಕ್ಕೆ ಮೂರು ಪಂದ್ಯಗಳು ಬಾಕಿ ಇವೆ.


ರೋಹಿತ್ ಶರ್ಮಾ

ಸಿಡ್ನಿ ಟೆಸ್ಟ್‌ನಲ್ಲಿ ಭಾರತ ತಂಡವು ಗೆದ್ದರೆ ಪಿಸಿಟಿಯು 55.26ಕ್ಕೇರುತ್ತದೆ. ಆಸ್ಟ್ರೇಲಿಯಾ 54.26ಕ್ಕೆ ಇಳಿಯುತ್ತದೆ. ಆಗ ಶ್ರೀಲಂಕಾ ದಲ್ಲಿ ನಡೆಯುವ ಎರಡು ಪಂದ್ಯಗಳ ಸರಣಿಯಲ್ಲಿ ಆಸ್ಟ್ರೇಲಿಯಾದ ಸೋಲು ಗೆಲುವಿನ ನಂತರ ಭಾರತದ ಹಣೆಬರಹ ಸ್ಪಷ್ಟವಾಗಲಿದೆ.

ತವರಿನಲ್ಲಿ ನ್ಯೂಜಿಲೆಂಡ್ ವಿರುದ್ಧ ನಡೆದಿದ್ದ ಟೆಸ್ಟ್ ಸರಣಿಯಲ್ಲಿ ಭಾರತ ತಂಡವು ಎಲ್ಲ ಮೂರು ಪಂದ್ಯಗಳಲ್ಲಿಯೂ ಸೋತಿತ್ತು. ಆಗ ಅಂಕಗಳಲ್ಲಿ ಕುಸಿತವಾಗಿತ್ತು. ಪರ್ತ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಮೊದಲ ಟೆಸ್ಟ್ ಗೆಲ್ಲುವಲ್ಲಿ ಹಂಗಾಮಿ ನಾಯಕ ಜಸ್‌ಪ್ರೀತ್ ಬೂಮ್ರಾ ಪಡೆ ಯಶಸ್ವಿಯಾಗಿತ್ತು. ಅದರಿಂದಾಗಿ ಸತತ 3ನೇ ಸಲ ಡಬ್ಲ್ಯುಟಿಸಿ ಫೈನಲ್ ಪ್ರವೇಶದ ಕನಸು ಗರಿಗೆದರಿತ್ತು. ಆದರೆ ಅಡಿಲೇಡ್ ಮತ್ತು ಮೆಲ್ಬರ್ನ್ ಟೆಸ್ಟ್‌ಗಳಲ್ಲಿ ಸೋತಿತು. ಬ್ರಿಸ್ಬೇನ್ ಟೆಸ್ಟ್ ಡ್ರಾ ಆಗಿತ್ತು.

ಐಸಿಸಿ ವರ್ಷದ ಕ್ರಿಕೆಟಿಗ ಪ್ರಶಸ್ತಿ ರೇಸ್‌ನಲ್ಲಿ ಬೂಮ್ರಾ

ದುಬೈ (ಪಿಟಿಐ): ಈ ವರ್ಷ ಅಮೋಘ ಲಯದಲ್ಲಿರುವ ಭಾರತ ತಂಡದ ಅಗ್ರಮಾನ್ಯ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು ಐಸಿಸಿ ಪುರುಷರ ವರ್ಷದ ಕ್ರಿಕೆಟಿಗ ಪ್ರಶಸ್ತಿಗೆ ಸೋಮವಾರ ನಾಮನಿರ್ದೇಶನಗೊಂಡಿದ್ದಾರೆ. ಟೆಸ್ಟ್ ಮಾದರಿಯಲ್ಲಿ ಈ ವರ್ಷ ಉತ್ತಮ ಸಾಧನೆ ತೋರಿದ ಶ್ರೇಷ್ಠ ಆಟಗಾರರ ಅಂತಿಮ ಪಟ್ಟಿಯಲ್ಲೂ ಅವರು ಸ್ಥಾನ ಪಡೆದಿದ್ದಾರೆ.

ಬಾರ್ಡರ್– ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಮೊದಲ ನಾಲ್ಕು ಪಂದ್ಯಗಳಲ್ಲಿ ಬೂಮ್ರಾ, ಆಸ್ಟ್ರೇಲಿಯಾದ ಆಟಗಾರರ ನಿದ್ದೆಗೆಡಿಸಿದ್ದರು. ಇಂಗ್ಲೆಂಡ್‌ನ ಪ್ರಮುಖ ಬ್ಯಾಟರ್‌ಗಳಾದ ಜೋ ರೂಟ್ ಮತ್ತು ಹ್ಯಾರಿ ಬ್ರೂಕ್, ಆಸ್ಟ್ರೇಲಿಯಾದ ಟ್ರಾವಿಸ್ ಹೆಡ್ ಅವರು ಸರ್ ಗ್ಯಾರ್ಫೀಲ್ಡ್ ಸೋಬರ್ಸ್ ಹೆಸರಿನಲ್ಲಿ ನೀಡಲಾಗುತ್ತಿರುವ ಈ ಪ್ರಮುಖ ಪ್ರಶಸ್ತಿಗೆ ಅಂತಿಮಗೊಂಡ ಆಟಗಾರರ ಪಟ್ಟಿಯಲ್ಲಿದ್ದಾರೆ.

ಐಸಿಸಿ ವರ್ಷದ ಟೆಸ್ಟ್ ಕ್ರಿಕೆಟರ್ ಪ್ರಶಸ್ತಿಗೆ ನಾಮನಿರ್ದೇಶನಗೊಂಡ ಆಟಗಾರರ ಪಟ್ಟಿಯಲ್ಲಿ ಬೂಮ್ರಾ ಜೊತೆಗೆ ರೂಟ್, ಬ್ರೂಕ್ ಮತ್ತು ಶ್ರೀಲಂಕಾದ ಕಮಿಂದು ಮೆಂಡಿಸ್ ಅವರು ಸ್ಥಾನ ಪಡೆದಿದ್ದಾರೆ.

ಬೂಮ್ರಾ ಅವರು ಈ ವರ್ಷ ಆಡಿರುವ 13 ಟೆಸ್ಟ್ ಪಂದ್ಯಗಳಲ್ಲಿ 14.92 ಸರಾಸರಿಯಲ್ಲಿ 71 ವಿಕೆಟ್‌ಗಳನ್ನು ಪಡೆ ದಿದ್ದಾರೆ. ಇದು ಈ ವರ್ಷ ಬೌಲರ್ ಒಬ್ಬರ ಅತ್ಯುತ್ತಮ ಸಾಧನೆ. ಆಸ್ಟ್ರೇಲಿಯಾ ವಿರುದ್ಧ ಸರಣಿಯ ಮೊದಲ ನಾಲ್ಕು ಟೆಸ್ಟ್‌ಗಳಲ್ಲಿ ಅವರು 30 ವಿಕೆಟ್‌ಗಳನ್ನು ಕಬಳಿಸಿದ್ದಾರೆ.

ಟಿ20 ವಿಶ್ವಕಪ್‌ನಲ್ಲೂ ಬೂಮ್ರಾ


ಬೂಮ್ರಾ

ಅವರ ಅಮೋಘ ಬೌಲಿಂಗ್ ಭಾರತದ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿತ್ತು. ಆ ವಿಶ್ವಕಪ್‌ನಲ್ಲಿ ಎಂಟು ಪಂದ್ಯಗಳಿಂದ 15 ವಿಕೆಟ್‌ಗಳನ್ನು ಪಡೆದಿದ್ದರು.

ಟ್ರಾವಿಸ್ ಹೆಡ್ ಈ ವರ್ಷದ ಟಿ20 ವಿಶ್ವಕಪ್‌ನಲ್ಲಿ ಗರಿಷ್ಠ ರನ್‌ಗಳಿಕೆದಾರನಾಗಿದ್ದರು. ಟೆಸ್ಟ್‌ಗಳಲ್ಲೂ ಆಸ್ಟ್ರೇಲಿಯಾದ ಪ್ರಮುಖ ಬ್ಯಾಟರ್ ಆಗಿ ಮಿಂಚಿದ್ದರು.

ಇಂಗ್ಲೆಂಡ್‌ನ ಬ್ಯಾಟಿಂಗ್ ಶಕ್ತಿಯಾದ ರೂಟ್ ಈ ವರ್ಷ 17 ಟೆಸ್ಟ್ ಪಂದ್ಯಗಳಿಂದ 55.57 ಸರಾಸರಿಯಲ್ಲಿ 1,556 ರನ್ ಪೇರಿಸಿದ್ದಾರೆ.

ಇಂಗ್ಲೆಂಡ್‌ನ ಇನ್ನೊಬ್ಬ ಆಟಗಾರ ಹ್ಯಾರಿ ಬ್ರೂಕ್ 12 ಟೆಸ್ಟ್‌ಗಳಲ್ಲಿ 55ರ ಸರಾಸರಿಯಲ್ಲಿ 1,100 ರನ್ ಪೇರಿಸಿದ್ದಾರೆ. ಇದರಲ್ಲಿ ನಾಲ್ಕು ಶತಕ, ಮೂರು ಅರ್ಧ ಶತಕಗಳಿವೆ.

ರೂಟ್, ಭಾರತದ ಯಶಸ್ವಿ ಜೈಸ್ವಾಲ್ (54.74 ಸರಾಸರಿಯಲ್ಲಿ 1,478), ಇಂಗ್ಲೆಂಡ್‌ನ ಬೆನ್ ಡಕೆಟ್ (37.06 ಸರಾಸರಿಯಲ್ಲಿ 1,149) ಮೊದಲ ಮೂರು ಸ್ಥಾನಗಳಲ್ಲಿ ಇದ್ದಾರೆ.

ಶ್ರೀಲಂಕಾದ ಮಧ್ಯಮ ಕ್ರಮಾಂಕದ ಬ್ಯಾಟರ್ ಕಮಿಂದು ಮೆಂಡಿಸ್ 74.92ರ ಸರಾಸರಿಯಲ್ಲಿ 1,049 ರನ್ ಗಳಿಸಿದ್ದಾರೆ. ಅವರು 13 ಇನಿಂಗ್ಸ್‌ಗಳಲ್ಲಿ ಸಾವಿರ ರನ್‌ಗಳ ಮೈಲಿಗಲ್ಲು ದಾಟಿ ಬ್ರಾಡ್ಮನ್ ಅವರ ದಾಖಲೆ ಸರಿಗಟ್ಟಿದ್ದಾರೆ.

ರಾಜ್ಯ ಒಲಿಂಪಿಕ್ಸ್ ಕೂಟ 17 ರಿಂದ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ನಾಟಕ ಒಲಿಂಪಿಕ್ ಸಂಸ್ಥೆ (ಕೆಒಎ) ಆಶ್ರಯದಲ್ಲಿ ಜನವರಿ 17ರಿಂದ 23ರವರೆಗೆ ಮಂಗಳೂರು ಹಾಗೂ ಉಡುಪಿ ನಗರಗಳಲ್ಲಿ ರಾಜ್ಯ ಒಲಿಂಪಿಕ್ಸ್ ಕೂಟವನ್ನು ಏರ್ಪಡಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಗರದ ಮಂಗಳ ಕ್ರೀಡಾಂಗಣದಲ್ಲಿ 17ರಂದು ರಾಜ್ಯ ಒಲಿಂಪಿಕ್ ಕ್ರೀಡೆಗಳಿಗೆ ಚಾಲನೆ ನೀಡಲಿದ್ದಾರೆ ಎಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ತಿಳಿಸಿದರು.

ಈ ಕೂಟದಲ್ಲಿ 1,800 ಕ್ರೀಡಾಪಟುಗಳು ಭಾಗವಹಿಸುವ ನಿರೀಕ್ಷೆ ಇದೆ. ಜಿಲ್ಲಾಡಳಿತವು ಕ್ರೀಡಾಪಟುಗಳು, ಕೋಚ್‌ಗಳು, ಪ್ರತಿನಿಧಿಗಳು ಸೇರಿದಂತೆ 2,500ಕ್ಕೂ ಹೆಚ್ಚು ಮಂದಿಗೆ ವಸತಿ ವ್ಯವಸ್ಥೆ ಕಲ್ಪಿಸಲಿದೆ ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

ನಗರದ ನೆಹರೂ ಮೈದಾನದಲ್ಲಿ ಫುಟ್‌ಬಾಲ್, ಕೊಕ್ಕೊ, ಮಂಗಳ ಕ್ರೀಡಾಂಗಣದಲ್ಲಿ ನೆಟ್‌ಬಾಲ್ ಮತ್ತು ವಾಲಿಬಾಲ್, ಎಮ್ಮೆಕೆರೆಯ ಅಂತರರಾಷ್ಟ್ರೀಯ ಈಜುಕೊಳದಲ್ಲಿ ಈಜು ಸ್ಪರ್ಧೆಗಳು, ಯು.ಎಸ್. ಮಲ್ಯ ಒಳಾಂಗಣ ಕ್ರೀಡಾಂಗಣದಲ್ಲಿ ಬ್ಯಾಸ್ಕೆಟ್‌ಬಾಲ್ ಮತ್ತು ಫೆನ್ಸಿಂಗ್, ಹಂಪನಕಟ್ಟೆಯ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸಭಾಂಗಣದಲ್ಲಿ ಟೇಕ್ವಾಂಡೊ ಮತ್ತು ವುಷು, ಅಂಬೇಡ್ಕರ್ ಭವನದಲ್ಲಿ ವೇಟ್ ಲಿಫ್ಟಿಂಗ್ ಸ್ಪರ್ಧೆಗಳು, ಅತ್ತಾವರದ ಕೆಎಂಸಿ ಮರಿನಾ ಒಳಾಂಗಣ ಕ್ರೀಡಾಂಗಣದಲ್ಲಿ ಸ್ಪರ್ಧೆಗಳು ನಡೆಯಲಿವೆ ಎಂದು ಮಾಹಿತಿ ನೀಡಿದರು.

ಪ್ರಶಸ್ತಿ ಡಬಲ್ ಮೇಲೆ ಹಂಪಿ ಕಣ್ಣು

ನ್ಯೂಯಾರ್ಕ್ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಕೋನೇರು ಹಂಪಿ ವಿಶ್ವ ರ್ಯಾಪಿಡ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ಬಾರಿ ಚಿನ್ನ ಗೆದ್ದು ಒಂದು ದಿನ ಕಳೆದಿದೆ. ಈಗ ಅವರು ಮಂಗಳವಾರ ಆರಂಭವಾಗಲಿರುವ ಫಿಡೆ ವಿಶ್ವ ಬ್ಲಿಟ್ಜ್ ಚಾಂಪಿಯನ್‌ಷಿಪ್‌ನಲ್ಲೂ ಚಿನ್ನ ಗೆದ್ದು ಅವಳಿ ಚಾಂಪಿಯನ್ ಆಗುವತ್ತ ಚಿತ್ತ ನೆಟ್ಟಿದ್ದಾರೆ.

2019ರಲ್ಲಿ ಮೊದಲ ಬಾರಿ ವಿಶ್ವ ರ್ಯಾಪಿಡ್ ಚಾಂಪಿಯನ್ ಆಗಿದ್ದ ಹಂಪಿ, ಭಾನುವಾರ ಎರಡನೇ ಬಾರಿ ಚಿನ್ನ ಗೆಲ್ಲುವ ಮೂಲಕ ಈ ಸಾಧನೆ ಮಾಡಿದ ವಿಶ್ವದ ಎರಡನೇ ಆಟಗಾರ್ತಿ ಎನಿಸಿದ್ದಾರೆ. ಚೀನಾದ ಜು ವೆನ್‌ಜುನ್ ಮೊದಲನೆಯವರು.

ಬ್ಲಿಟ್ಜ್‌ನಲ್ಲೂ ಗೆದ್ದರೆ ಹೆಚ್ಚುವರಿಯಾಗಿ ₹50 ಲಕ್ಷ ಬಹುಮಾನ ಮೊತ್ತ ಅವರ ಪಾಲಾಗಲಿದೆ. ಎರಡೂ ಟೂರ್ನಿಗಳ ವಿಜೇತರಿಗೆ ಸಮಾನ ಬಹುಮಾನದ ಹಣ ನಿಗದಿಯಾಗಿದೆ.

ಬ್ಲಿಟ್ಜ್ ಚಾಂಪಿಯನ್‌ಷಿಪ್‌ನ ಓಪನ್ ವಿಭಾಗದಲ್ಲಿ 13 ಸುತ್ತುಗಳಿವೆ. ಮಹಿಳಾ ವಿಭಾಗದಲ್ಲಿ 11 ಸುತ್ತುಗಳು ಇರಲಿವೆ.

ದ್ರೋಣವಲ್ಲಿ ಹಾರಿಕಾ ಕೂಡ ಬ್ಲಿಟ್ಜ್‌ನಲ್ಲಿ ಉತ್ತಮ ಆಟಗಾರ್ತಿ. ಇವರ ಜೊತೆಗೆ ಗ್ರ್ಯಾಂಡ್‌ಮಾಸ್ಟರ್ ಆರ್. ವೈಶಾಲಿ, ಐಎಂ ದಿವ್ಯಾ ದೇಶಮುಖ್ ಕೂಡ ಉತ್ತಮ ಪ್ರದರ್ಶನದ ಹಂಬಲದಲ್ಲಿದ್ದಾರೆ.

ಓಪನ್ ವಿಭಾಗದಲ್ಲಿ ಹಾಲಿ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಮತ್ತೊಮ್ಮೆ ಪ್ರಶಸ್ತಿಗೆ ಫೇವರೀಟ್ ಆಗಿದ್ದಾರೆ. ವಸ್ತ್ರಸಂಹಿತೆ ಉಲ್ಲಂಘನೆಗಾಗಿ ಅವರು ರ್ಯಾಪಿಡ್ ಚಾಂಪಿಯನ್‌ಷಿಪ್‌ನ ಅರ್ಧದಲ್ಲೇ ಅನರ್ಹಗೊಂಡಿದ್ದರು.


ಕೋನೇರು ಹಂಪಿ

ಭಾರತದ ಆಟಗಾರರಲ್ಲಿ ಆರ್. ಪ್ರಜ್ಞಾನಂದ, ಅರ್ಜುನ್ ಇರಿಗೇಶಿ, ಫ್ರಾನ್ಸ್‌ನ ಅಲಿರೇಝಾ ಫಿರೋಝ್ ಮತ್ತು ಉಜ್ಬೇಕಿಸ್ತಾನದ ನಾಡಿರ್ಬೆಕ್ ಅಬ್ದುಸತ್ತಾರೋವ್ ಅವರೂ ಕಾರ್ಲ್‌ಸನ್ ಅವರಿಗೆ ಪೈಪೋಟಿ ನೀಡಬಲ್ಲರು. ರ್ಯಾಪಿಡ್ ವಿಭಾಗದಲ್ಲಿ ಇರಿಗೇಶಿ ಐದನೇ ಸ್ಥಾನ ಗಳಿಸಿದ್ದರು.

ಬ್ಲಿಟ್ಜ್ ವಿಶ್ವ ಚಾಂಪಿಯನ್‌ಷಿಪ್‌ಗೆ ಮರಳಿದ ಕಾರ್ಲ್‌ಸನ್

ನ್ಯೂಯಾರ್ಕ್ (ಪಿಟಿಐ): ಆಟಗಾರರಿಗೆ ಜೀನ್ಸ್ ಪ್ಯಾಂಟ್ ಧರಿಸಿ ಆಡಲು ಫಿಡೆ ಅವಕಾಶ ನೀಡಿರುವ ಕಾರಣ ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರು ಮಂಗಳವಾರ ನಡೆಯುವ ವಿಶ್ವ ಬ್ಲಿಟ್ಜ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಆಡಲಿದ್ದಾರೆ.

ಮೂರು ದಿನಗಳ ಹಿಂದೆ ವಿಶ್ವ ರ್ಯಾಪಿಡ್ ಚೆಸ್ ಚಾಂಪಿಯನ್‌ಷಿಪ್‌ನ ಎರಡನೇ ದಿನ ಜೀನ್ಸ್ ಧರಿಸಿ ಆಡಲು ಬಂದು ವಸ್ತ್ರಸಂಹಿತೆ ಉಲ್ಲಂಘಿಸಿದ್ದಕ್ಕೆ ಅವರಿಗೆ 200 ಡಾಲರ್ ದಂಡ ವಿಧಿಸಲಾಗಿತ್ತು.ಅಂದು ಎಂಟನೇ ಸುತ್ತಿಗೆ ಮೊದಲು, ಅರ್ಬಿಟರ್ ಮನವಿಯ ಹೊರತಾಗಿಯೂ ನಾರ್ವೆಯ ಆಟಗಾರ ಜೀನ್ಸ್ ಪ್ಯಾಂಟ್ ಬದಲಾಯಿಸಲು ನಿರಾಕರಿಸಿದ ಕಾರಣ ಅನರ್ಹಗೊಳಿಸಲಾಗಿತ್ತು.

ಉಡುಗೆಗೆ ಸಂಬಂಧಿಸಿ ಸ್ವಲ್ಪ ಉದಾರತೆ ತರುವ ದೃಷ್ಟಿಯಿಂದ ನಿಯಮದಲ್ಲಿ ಮಾರ್ಪಾಡು ಮಾಡಲಾಗಿದೆ ಎಂದು ಫಿಡೆ ಮುಖ್ಯಸ್ಥ ಅರ್ಕಾಡಿ ದ್ವೊರ್ಕೊವಿಚ್ 'ಎಕ್ಸ್'ನಲ್ಲಿ ತಿಳಿಸಿದ್ದಾರೆ. ಈಗ ಜಾಕೆಟ್‌ಗೆ ಹೊಂದುವಂತಹ ಜೀನ್ಸ್ ಧರಿಸಲು ಅವಕಾಶವಿದೆ.

'ವಿಶ್ವ ಬ್ಲಿಟ್ಜ್ ಚಾಂಪಿಯನ್‌ಷಿಪ್‌ನಲ್ಲಿ ಮ್ಯಾಗ್ನಸ್ ಕಾರ್ಲ್‌ಸನ್ ಭಾಗವಹಿಸಲಿದ್ದಾರೆ ಎಂದು ತಿಳಿಸಲು ಫಿಡೆ ಸಂತಸಪಡುತ್ತಿದೆ' ಎಂದು ಪ್ರಕಟಣೆ ತಿಳಿಸಿದೆ. ಭಾನುವಾರ ಕಾರ್ಲ್‌ಸನ್ ಅವರು ಫಿಡೆ ಅಧ್ಯಕ್ಷರ ಜೊತೆ ಉಪಾಧ್ಯಕ್ಷ ವಿಶ್ವನಾಥನ್ ಆನಂದ್ ಅವರನ್ನು ಭೇಟಿ ಮಾಡಿದ್ದರು.

ಆನಂದ್ ವಿರುದ್ಧ ಕಾರ್ಲ್‌ಸನ್ ಟೀಕೆ

ನ್ಯೂಯಾರ್ಕ್ (ಪಿಟಿಐ): ವಸ್ತ್ರಸಂಹಿತೆ ಉಲ್ಲಂಘನೆ ವಿಷಯವನ್ನು ಸೂಕ್ತವಾಗಿ ನಿಭಾಯಿಸಿಲ್ಲ ಎಂದು ಫಿಡೆ ಉಪಾಧ್ಯಕ್ಷ ವಿಶ್ವನಾಥನ್ ಆನಂದ್ ಸೇರಿದಂತೆ ಉನ್ನತ ಅಧಿಕಾರಿಗಳನ್ನು ವಿಶ್ವದ ಅಗ್ರ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಸೋಮವಾರ ಟೀಕಿಸಿದ್ದಾರೆ. ಅವರು ಇನ್ನೂ 'ಬೆಳೆಯಬೇಕಾಗಿದೆ' ಎಂದು ವ್ಯಂಗ್ಯವಾಡಿದ್ದಾರೆ.

ಸದ್ಗುಣಗಳ ಹೊರತಾಗಿಯೂ ವಿಶ್ವನಾಥನ್ ಆನಂದ್ ಈ (ಉಪಾಧ್ಯಕ್ಷ) ಹುದ್ದೆಯನ್ನು ವಹಿಸಲು 'ಇನ್ನೂ ಸಿದ್ಧರಾಗಿಲ್ಲ' ಎಂದೂ ಹೇಳಿದ್ದಾರೆ. ಕಾರ್ಲ್‌ಸನ್ ಅವರನ್ನು ಅನರ್ಹಗೊಳಿಸಿದ ವಿಷಯ ವಿವಾದವಾದ ನಂತರ, ಫಿಡೆ ವಸ್ತ್ರಸಂಹಿತೆಯಲ್ಲಿ ಮಾರ್ಪಾಡು ಮಾಡಿದೆ.

ತಮ್ಮನ್ನು ಅನರ್ಹಗೊಳಿಸುವ ನಿರ್ಧಾರ 'ಕ್ರೂರವಾದುದು' ಎಂದು ನಾರ್ವೆಯ ಆಟಗಾರ ಹೇಳಿದ್ದಾರೆ. ಅಧಿಕಾರಿಗಳನ್ನು 'ರೋಬೊ'ಗಳು ಎಂದು ಕರೆದ ಅವರು ಸ್ವಂತ ನಿರ್ಧಾರ ಕೈಗೊಳ್ಳಲು ಅಸಮರ್ಥರು ಎಂದು ಕಟುವಾಗಿ ಟೀಕಿಸಿದ್ದಾರೆ.

ಫುಟ್‌ಬಾಲ್: ಭಾರತ ವನಿತೆಯರಿಗೆ ಜಯ

ಬೆಂಗಳೂರು: ಭಾರತ ಮಹಿಳಾ ಫುಟ್‌ಬಾಲ್ ತಂಡವು ಸೋಮವಾರ ನಡೆದ ಸ್ನೇಹಪರ ಪಂದ್ಯದಲ್ಲಿ ಮಾಲ್ದೀವ್ಸ್ ಎದುರು ಜಯಿಸಿತು.

ಪ್ರಕಾಶ್ ಪಡುಕೋಣೆ ಸೆಂಟರ್ ಆಫ್ ಎಕ್ಸಲೆನ್ಸ್ ಮೈದಾನದಲ್ಲಿನಡೆದ ಪಂದ್ಯದಲ್ಲಿ ಭಾರತ ತಂಡವು 14–0ಯಿಂದ ಮಾಲ್ದೀವ್ಸ್ ಎದುರು ಗೆದ್ದಿತು. ತಂಡದ ಪ್ಯಾರಿ ಸಾಸಾ (7ನಿ, 8ನಿ, 15ನಿ), ಲಿಂಡಾ ಕೋಮ್ (12ನಿ, 21ನಿ,29ನಿ, 52ನಿ), ನೇಹಾ (16ನಿ, 45ನಿ), ಸಂಗೀತಾ ಬಸಫೋರ್ (51ನಿ) ಸೊರೊಕೈಬಮ್ ರಂಜನಾ ಚಾನು (54ನಿ), ಕಾಜೋಲ್ ಡಿಸೋಜಾ (59ನಿ, 66ನಿ), ರಿಂಪ್ ಹಲ್ದಾರ್ (62ನಿ) ಗೋಲು ಹೊಡೆದರು.


ಮಹಾರಾಷ್ಟ್ರದ ರಾಯಘಡ ಜಿಲ್ಲೆಯ ಕಾಮೋತೆಯಲ್ಲಿ ಭಾನುವಾರ ಮುಕ್ತಾಯಗೊಂಡ ಮಹಿಳೆಯರ ರಾಷ್ಟ್ರೀಯ 70ನೇ ಬಾಲ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ತಮಿಳುನಾಡು ವಿರುದ್ಧ 35–30, 31–35, 35–26ರಲ್ಲಿ ಜಯಗಳಿಸಿ ಪ್ರಶಸ್ತಿ ಗೆದ್ದುಕೊಂಡ ಕರ್ನಾಟಕದ ಮಹಿಳಾ ತಂಡ. ಎಡದಿಂದ: ಲಕ್ಷ್ಮಿದೇವಿ, ಸಹನಾ ಎಚ್‌.ವೈ, ತನುಶ್ರೀ, ಮೇಘನಾ ಎಚ್‌.ಎಂ, ಗೀತಾ, ಪ್ರವೀಣ್ ಕುಮಾರ್ (ಕೋಚ್), ರಂಜಿತಾ ವಿ (ಮ್ಯಾನೇಜರ್), ಪಲ್ಲವಿ ಬಿ.ಎಸ್, ಸುಹಾನ, ವಿಷ್ಣುಪ್ರಿಯಾ, ರಕ್ಷಿತಾ ಎಚ್‌.ಕೆ ಮತ್ತು ಲಿಖಿತಾ

ವಿಜಯ ಹಜಾರೆ ಟ್ರೋಫಿ: ಕರ್ನಾಟಕ–ಹೈದರಾಬಾದ್ ಹಣಾಹಣಿ ಇಂದು

ಅಹಮದಾಬಾದ್: ವರ್ಷದ ಕೊನೆಯ ದಿನವನ್ನು ಕರ್ನಾಟಕ ತಂಡವು ಗೆಲುವಿನೊಂದಿಗೆ ಸಂಭ್ರಮಿಸುವ ಛಲದಲ್ಲಿದೆ. ಮಂಗಳವಾರ ಇಲ್ಲಿ ನಡೆ ಯಲಿರುವ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಸಿ ಗುಂಪಿನ ಪಂದ್ಯದಲ್ಲಿ ಕರ್ನಾಟಕವು ಹೈದರಾಬಾದ್ ಸವಾಲನ್ನು ಎದುರಿಸಲಿದೆ.

ಮಯಂಕ್ ಅಗರವಾಲ್ ಬಳಗವು ಗುಂಪಿನಲ್ಲಿ ಇದುವರೆಗೆ ಆಡಿರುವ ಎಲ್ಲ ನಾಲ್ಕು ಪಂದ್ಯಗಳನ್ನೂ ಜಯಿಸಿದೆ. 16 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದೆ. ಕಳೆ ದೆರಡೂ ಪಂದ್ಯಗಳಲ್ಲಿ ಮಯಂಕ್ ಶತಕ ಗಳಿಸಿದ್ದರು. ಕೆ.ಎಲ್. ಶ್ರೀಜಿತ್, ಆರ್. ಸ್ಮರಣ್ ಮತ್ತು ಅಭಿನವ್ ಮನೋಹರ್ ಅವರು ಉತ್ತಮ ಲಯದಲ್ಲಿದ್ದಾರೆ. ಬೌಲಿಂಗ್‌ನಲ್ಲಿ ವಿ. ಕೌಶಿಕ್, ವಿದ್ಯಾಧರ ಪಾಟೀಲ ಅವರು ಯಶಸ್ವಿ ಎನಿಸಿದ್ದಾರೆ. ಉಳಿದ ಬೌಲರ್‌ಗಳು ಲಯಕ್ಕೆ ಮರಳಬೇಕಾಗಿದೆ.

ಸ್ಫೋಟಕ ಶೈಲಿಯ ಬ್ಯಾಟರ್ ತಿಲಕ್ ವರ್ಮಾ ನಾಯಕತ್ವದ ಹೈದರಾಬಾದ್ ತಂಡವು 5ನೇ ಸ್ಥಾನದಲ್ಲಿದೆ. 8 ಅಂಕ ಗಳಿಸಿರುವ ತಂಡವು ಉಳಿದಿರುವ ಎಲ್ಲ ಪಂದ್ಯಗಳಲ್ಲಿಯೂ ಜಯಿಸುವ ಒತ್ತಡದಲ್ಲಿದೆ. **ಪಂದ್ಯ ಆರಂಭ: ಬೆಳಿಗ್ಗೆ 9**

ಆಸ್ಪತ್ರೆಯಲ್ಲಿ ಮಾಜಿ ಕ್ರಿಕೆಟಿಗ ವಿನೋದ್ ಕಾಂಬ್ಳಿ ನೃತ್ಯ!

ಠಾಣೆ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ವಿನೋದ್ ಕಾಂಬ್ಳಿ ಅವರು ಇಲ್ಲಿಯ ಖಾಸಗಿ ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ. ಇದೀಗ ಅವರು ಅದೇ ಆಸ್ಪತ್ರೆಯಲ್ಲಿ ಲವಲವಿಕೆಯಿಂದ ನೃತ್ಯ ಮಾಡುತ್ತಿರುವ ವಿಡಿಯೊ ತುಣುಕೊಂದು ಸಾಮಾಜಿಕ ಜಾಲತಾಣದಲ್ಲಿ ಓಡಾಡುತ್ತಿದೆ.

ಕಾಂಬ್ಳಿ ಅವರನ್ನು ಮೊದಲಿಗೆ ಮೂತ್ರನಾಳದ ಸೋಂಕು ಮತ್ತು ಸ್ನಾಯುಸೆಳೆತದ ಚಿಕಿತ್ಸೆಗಾಗಿ ಡಿಸೆಂಬರ್ 21ರಂದು ಭಿವಂಡಿಯ ಆಕೃತಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಎಲ್ಲ ವೈದ್ಯಕೀಯ ತಪಾಸಣೆಗಳನ್ನು ನಡೆಸಿದ ನಂತರ ಅವರ ಮಿದುಳಿನಲ್ಲಿ ರಕ್ತ ಹೆಪ್ಪುಗಟ್ಟಿರುವುದು ಕಂಡುಬಂದಿತ್ತು.

ಇದೀಗ ಅವರು ಜನಪ್ರಿಯ ಗೀತೆಯೊಂದಕ್ಕೆ ನರ್ತಿಸುವ ವಿಡಿಯೊ ಜನರ ಗಮನ ಸೆಳೆಯುತ್ತಿದೆ. ಅವರ ಲವಲವಿಕೆಯಿಂದ ಆಸ್ಪತ್ರೆಯ ಸಿಬ್ಬಂದಿ, ರೋಗಿಗಳೂ ಹೆಜ್ಜೆ ಹಾಕಿದರು.

ಕಿರಿಯರ ಚೆಸ್: ಅಯಾನ್ ಮುನ್ನಡೆ

ಪುಣೆ (ಪಿಟಿಐ): ದೆಹಲಿಯ ಆರಿತ್ ಕಪಿಲ್, ತೆಲಂಗಾಣದ ನಿಧೀಶ್ ಶ್ಯಾಮಲ್ ಮತ್ತು ಕರ್ನಾಟಕದ ಅಯಾನ್ ಅವರು ರಾಷ್ಟ್ರೀಯ 9 ವರ್ಷದೊಳಗಿನವರ ಚೆಸ್ ಚಾಂಪಿಯನ್‌ಷಿಪ್‌ನ ಬಾಲಕರ ವಿಭಾಗದಲ್ಲಿ ಎಂಟನೇ ಸುತ್ತಿನ ನಂತರ ತಲಾ 6.5 ಅಂಕಗಳೊಡನೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ಅಯಾನ್ ಪುತಾಣೆ ಸೋಮವಾರ ಎಂಟನೇ ಸುತ್ತಿನಲ್ಲಿ ಮಹಾರಾಷ್ಟ್ರದ ಅಹಾನ್ ಕಾತರುಕ (5.5) ವಿರುದ್ಧ ಜಯ ಗಳಿಸಿ ದನು. ಆರಿತ್ ಕಪಿಲ್, ಮಹಾರಾಷ್ಟ್ರದ ಅದ್ವಿಕ್ (6) ಜೊತೆ ಡ್ರಾ ಮಾಡಿಕೊಂಡರೆ, ನಿಧೀಶ್ , ಮಹಾರಾಷ್ಟ್ರದ ಅರ್ಜುನ್ ಸಿಂಗ್ (5.5) ವಿರುದ್ಧ ಜಯಗಳಿಸಿದರು.